ಗುರುವಾರ, ಜುಲೈ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 203 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹49,260 (ಬೆಂಗಳೂರು)	₹68,800 (ಬೆಂಗಳೂರು)

ಸಿದ್ಧಗಂಗಾ, ರಂಭಾಪುರಿ, ಸಾಣೇಹಳ್ಳಿ, ನಿಡುಮಾಮಿಡಿ ಮಠಾಧೀಶರ ಬೆಂಬಲ

ಯಡಿಯೂರಪ್ಪ ಪರ 'ಶ್ರೀ' ಶಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಮಾಡಬಾರದು, ಯಡಿಯೂರಪ್ಪ ಅವರನ್ನೇ ಮುಖ್ಯ-ಮಂತ್ರಿಯಾಗಿ ಮುಂದುವರಿಸಬೇಕು' ಎಂದು ನಾಡಿನ ಪ್ರಭಾವಿ ಮಠಾಧೀಶರು ಬಿಜೆಪಿ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ನಾಯಕತ್ವ ಬದಲಾವಣೆಯ ವದಂತಿ ಬಿರುಸುಗೊಂಡ ಬೆನ್ನಲ್ಲೇ, ಯಡಿಯೂರಪ್ಪ ಪರ 'ಒಗ್ಗೂಡು-ತ್ತಿರುವ' ವಿವಿಧ ಸಮುದಾಯಗಳ ಮಠಾಧೀಶರು, ಬಿಜೆಪಿ ವರಿಷ್ಠರ ಮೇಲೆ ಒತ್ತಡ ಹೇರುವ ತಂತ್ರವನ್ನು ಆರಂಭಿಸಿದ್ದಾರೆ. ಸತತ ಮೂರನೇ ದಿನವೂ ಮಠಾಧೀಶರ ಸಮೂಹ ಯಡಿಯೂರಪ್ಪ ಅವರನ್ನು ಬುಧವಾರ ಭೇಟಿ ಮಾಡಿ, ಬೆಂಬಲಿಸುವ ಮಾತಗಳನ್ನಾಡಿದೆ.

'ಮುಖ್ಯಮಂತ್ರಿ ಸ್ಥಾನದಿಂದ ಅವರನ್ನು ಬದಲಿಸಿದರೆ ಬಿಜೆಪಿ ನಾಮಾವಶೇಷ ಆಗುತ್ತದೆ' ಎಂದೂ ಹಲವು ಮಠಾಧೀಶರು ಬಿಜೆಪಿ ವರಿಷ್ಠರಿಗೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಇಷ್ಟೆಲ್ಲ ಗೊಂದಲಗಳ ಮಧ್ಯೆಯೂ ನಾಯಕತ್ವ ಬದಲಾವಣೆ ಸಂಬಂಧ ಇದೇ 25 ರಂದು ವರಿಷ್ಠರಿಂದ ಸಂದೇಶ ಬರಬಹುದು ಎಂಬ ಅಂದಾಜು ಯಡಿಯೂರಪ್ಪ ಅವರದ್ದಾಗಿದೆ ಎಂಬ ಚರ್ಚೆಗಳೂ ನಡೆದಿವೆ.

ತುಮಕೂರು ಸಿದ್ದಗಂಗಾ ಮಠಾಧೀಶ ಸಿದ್ಧಲಿಂಗ ಸ್ವಾಮೀಜಿ ಅವರ ನೇತೃತ್ವದಲ್ಲಿ 50 ಕ್ಕೂ ಹೆಚ್ಚು ಮಠಾಧೀಶರು ಮುಖ್ಯಮಂತ್ರಿಯವರ-ನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ ಬೆಂಬಲ ವ್ಯಕ್ತಪಡಿಸಿದರು.

ಆ ವೇಳೆ ಮಠಾಧೀಶರನ್ನು ಉದ್ದೇಶಿಸಿ ಮಾತನಾಡಿದ ಯಡಿಯೂರಪ್ಪ, 'ಪ್ರಧಾನಿಯವರಿಗೆ ನನ್ನ ಬಗ್ಗೆ ವಿಶೇಷ ಕಾಳಜಿ ಇದೆ. 75 ವರ್ಷ ವಯಸ್ಸಿನ ಬಳಿಕವೂ ನನಗೆ ಮಾತ್ರ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡಿದ್ದಾರೆ. ಇದೇ 25 ರಂದು ವರಿಷ್ಠರಿಂದ ಸಂದೇಶ ಬರುವ ಸಾಧ್ಯತೆ ಇದೆ' ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿದ್ಧಲಿಂಗ ಸ್ವಾಮೀಜಿ, 'ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಎಲ್ಲ ಮಠಾಧೀಶರ ಅಭಿಪ್ರಾಯ ಒಂದೇ ಆಗಿದೆ. ಇಂತಹ ಸಂದಿಗ್ಧ ಕಾಲದಲ್ಲಿ ಯಡಿಯೂರಪ್ಪ ಅವರನ್ನು ಕೈಬಿಡಬಾರದು. ಅವರಿಗೆ ಅವಧಿ ಪೂರ್ಣಗೊಳಿಸಲು ಅವಕಾಶ ನೀಡಬೇಕು' ಎಂದು ಹೇಳಿದರು.

9ನೇ ಪುಟ ನೋಡಿ



ತುಮಕೂರಿನ ಸಿದ್ಧಗಂಗಾಮಠದ ಸಿದ್ಧಲಿಂಗಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಮಠಾಧೀಶರ ನಿಯೋಗವು ಮುಖ್ಯಮಂತ್ರಿ ಬಿ.ಎಸ್‌ಯಡಿಯೂರಪ್ಪ ಅವರನ್ನು ಬೆಂಗಳೂರಿನಲ್ಲಿ ಬುಧವಾರ ಭೇಟಿ ಮಾಡಿತು

ಬಾಂಬೆ ಟೀಂಗೆ ಸಚಿವ ಸ್ಥಾನ ಸಲ್ಲದು: ವಿಶ್ವನಾಥ್

ಮೈಸೂರು: 'ಹೊಸ ಮುಖ್ಯಮಂತ್ರಿ ನೇತೃತ್ವದ ಸರ್ಕಾರದಲ್ಲಿ 'ಬಾಂಬೆ ಟೀಂ'ನ ಯಾರನ್ನೂ ಮಂತ್ರಿ ಮಾಡಬಾರದು. ಅಧಿಕಾರ ನೀಡದಿದ್ದರೂ 17 ಮಂದಿ ಎಲ್ಲಿಗೂ ಹೋಗುವುದಿಲ್ಲ. ಹೋದರೆ ಮತ್ತೆ ಚುನಾವಣೆ ನಡೆಯಲಿ' ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಪ್ರತಿಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಜೆಡಿಎಸ್, ಕಾಂಗ್ರೆಸ್ ತ್ಯಜಿಸಿ ಬಂದ 17 ಮಂದಿಯಲ್ಲಿ ಇಬ್ಬರು ಮಾತ್ರ ಲಿಂಗಾಯತರು, ಉಳಿದವರು ಬೇರೆ ಜಾತಿಯವರು. ಅವತ್ತು ಯಾರೂ ಜಾತಿ ನೋಡಲಿಲ್ಲ. ಬೆಂಬಲ ನೀಡಿ ಅಧಿಕಾರ ಪಡೆದವರ ಸಾಧನೆ ಏನೂ ಇಲ್ಲ. ಅವರಿಗೆ ಯಡಿಯೂರಪ್ಪನವರ ಪುತ್ರ ವಿಜಯೇಂದ್ರ ಅವರೇ ಮುಖ್ಯಮಂತ್ರಿಯಾಗಿದ್ದರು' ಎಂದರು.

'ಯಡಿಯೂರಪ್ಪ ಪರ ನಿಂತಿರುವ ಸ್ವಾಮೀಜಿಗಳು ಬೀದಿಗೆ ಬಂದು ಭ್ರಷ್ಟಾಚಾರವನ್ನು ಬೆಂಬಲಿಸುತ್ತಿದ್ದಾರೆ. ಬಸವಶ್ರೀ ಪ್ರಶಸ್ತಿ ಕೊಡುವ ಮುರುಘಾಶ್ರೀಗಳು ಬೀದಿಗೆ ಬಂದು ರಾಜಕಾರಣದ ಬಗ್ಗೆ ಮಾತನಾಡಿದ್ದಾರೆ. ಹಾಗಾದರೆ ಪ್ರಶಸ್ತಿಗೆ ಏನು ಬೆಲೆ' ಎಂದು ಪ್ರಶ್ನಿಸಿದರು.

'ಭ್ರಷ್ಟ ಸರ್ಕಾರ ತೊಲಗಬೇಕು ಎಂದು ಸಿದ್ದರಾಮಯ್ಯ ಹೇಳುತ್ತಿದ್ದರೆ, ಅವರದ್ದೇ ಪಕ್ಷದ ಶಾಮನೂರು ಶಿವಶಂಕರಪ್ಪ, ಎಂ.ಬಿ.ಪಾಟೀಲ ಅವರು ಯಡಿಯೂರಪ್ಪ ಮುಂದುವರಿಯಬೇಕು ಎನ್ನುತ್ತಿದ್ದಾರೆ. ಶಿಕ್ಷಣದ ವ್ಯಾಪಾರಿಗಳಾದ ಅವರಿಬ್ಬರು ಬಡ ಲಿಂಗಾಯತನಿಗೆ ಏನು ಸಹಾಯ ಮಾಡಿದ್ದಾರೆ' ಎಂದು ಟೀಕಿಸಿದರು.

> **ರಾಜಕೀಯ ಬೆಳವಣಿಗೆಗಳನ್ನು ಆಧರಿಸಿ ನನ್ನ ಪರವಾಗಿ ಹೇಳಿಕೆ, ಪ್ರತಿಭಟನೆಗಳಿಗೆ ಯಾರೂ ಮುಂದಾಗಬಾರದು. ಪಕ್ಷ ನನಗೆ ಮಾತೃ ಸಮಾನ, ಅದರ ಗೌರವಕ್ಕೆ ಚ್ಯುತಿ ತರುವ ಘಟನೆಗಳು ನನಗೆ ಅತೀವ ನೋವು ತರುತ್ತದೆ.**
> **ಬಿ.ಎಸ್. ಯಡಿಯೂರಪ್ಪ,** ಮುಖ್ಯಮಂತ್ರಿ

ಶಾಸಕರ ಔತಣಕೂಟ ರದ್ದು

ಬೆಂಗಳೂರು: ಬಿಜೆಪಿ ಸರ್ಕಾರಕ್ಕೆ ಎರಡು ವರ್ಷ ತುಂಬಿದ್ದರಿಂದ ಇದೇ 25 ರಂದು ಶಾಸಕರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಏರ್ಪಡಿಸಿದ್ದ ಭೋಜನ ಕೂಟವನ್ನು ರದ್ದುಪಡಿಸಲಾಗಿದೆ.

ಮಂಗಳವಾರ ರಾತ್ರಿ ಎಲ್ಲ ಶಾಸಕರಿಗೂ ವಾಟ್ಸ್‌ಆ್ಯಪ್ ಸಂದೇಶದ ಮೂಲಕ ಆಹ್ವಾನ ಕಳು-ಹಿಸಲಾಗಿತ್ತು. ಆದರೆ, ಬುಧವಾರ ಬೆಳಿಗ್ಗೆ ಸ್ವತಃ ಮುಖ್ಯಮಂತ್ರಿಯವ-ರಿಂದಲೇ ಸೂಚನೆ ಬಂದ ಕಾರಣ ಭೋಜನ ಕೂಟ ರದ್ದುಪಡಿಸಲಾ-ಯಿತು ಎಂದು ಮೂಲಗಳು ಹೇಳಿವೆ.

ದೆಹಲಿಯಲ್ಲಿ ಪ್ರಧಾನಿ-ಯವರನ್ನು ಭೇಟಿ ಮಾಡಿ ಬಂದ ಯಡಿಯೂರಪ್ಪ, ಇದೇ 26ಕ್ಕೆ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದ್ದರು. ಅದು ಶಾಸಕಾಂಗ ಪಕ್ಷದ ಸಭೆಯಲ್ಲ, ಶಾಸಕರಿಗೆ ಔತಣ ಕೂಟ ಅಷ್ಟೇ ಎಂದು ಮುಖ್ಯಮಂತ್ರಿ ಕಚೇರಿ, ಅದೇ ದಿನ ರಾತ್ರಿ ಸ್ಪಷ್ಟನೆ ನೀಡಿತ್ತು.

ಔತಣ ಕೂಟಕ್ಕೆ ಶಾಸಕರನ್ನು ಆಹ್ವಾನಿಸುವಂತೆ ಮುಖ್ಯ ಸಚೇತಕ ವಿ.ಸುನಿಲ್ ಕುಮಾರ್ ಅವರಿಗೆ ಯಡಿಯೂರಪ್ಪ ಮಂಗಳವಾರ ಸೂಚಿಸಿದ್ದರು. ಎರಡೆರಡು ಬಾರಿ ಖಚಿತ ಪಡಿಸಿಕೊಂಡ ಬಳಿಕವೇ ಸುನಿಲ್ ಕುಮಾರ್ ಆಮಂತ್ರಣ ಕಳುಹಿಸಿದ್ದರು. ಆದರೆ, ಬುಧವಾರ ರದ್ದುಪಡಿಸುವಂತೆ ಸೂಚನೆ ಬಂದಿತು ಎಂದು ಮೂಲಗಳು ಹೇಳಿವೆ.

ಪೆಗಾಸಸ್: ವಿಚಾರಣೆ ಸಾಧ್ಯತೆ

ಗೂಢಚರ್ಯೆ: ಚರ್ಚಿಸಲಿರುವ ಸಂಸದೀಯ ಸ್ಥಾಯಿ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಮಾಹಿತಿ ತಂತ್ರಜ್ಞಾನ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯು ಇದೇ 28ರಂದು ಸಭೆ ನಡೆಸಲಿದೆ. ಪೆಗಾಸಸ್ ಗೂಢಚರ್ಯೆಗೆ ಸಂಬಂಧಿಸಿದಂತೆ ಗೃಹ ಸಚಿವಾಲಯ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಧಿಕಾರಿಗಳನ್ನು ಸಭೆಯಲ್ಲಿ ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ.

ನಾಗರಿಕರ ದತ್ತಾಂಶ ಭದ್ರತೆ ಮತ್ತು ಸೈಬರ್ ಭದ್ರತೆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಗುತ್ತದೆ. ಅದೇ ಸಭೆಯಲ್ಲಿ ಪೆಗಾಸಸ್ ಗೂಢಚರ್ಯೆ ವಿಚಾರವನ್ನೂ ಚರ್ಚೆಗೆ ಎತ್ತಿಕೊಳ್ಳಲು ವಿರೋಧ ಪಕ್ಷಗಳ ಸದಸ್ಯರು ನಿರ್ಧರಿಸಿದ್ದಾರೆ. ನಾಗರಿಕರ ದತ್ತಾಂಶ ಮತ್ತು ಖಾಸಗಿತನದ ಭದ್ರತೆಗೆ ಸಂಬಂಧಿಸಿದಂತೆ ಗೃಹ ಸಚಿವಾಲಯ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಧಿಕಾರಿಗಳಿಂದ ವಿವರಣೆ ಕೇಳಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ಸಮಿತಿಯ ಅಧ್ಯಕ್ಷ ಮತ್ತು ಕಾಂಗ್ರೆಸ್ ಸಂಸದ ಶಶಿ ತರೂರ್ ಅವರೂ ಮಾಹಿತಿ ನೀಡಿದ್ದಾರೆ.

'ದೇಶದ ನಾಗರಿಕರ ವಿರುದ್ಧ ಗೂಢಚರ್ಯೆ ನಡೆಸಿರುವುದು ಸರ್ಕಾರವೇ ಎಂಬುದು ಸಾಬೀತಾದರೆ, ಸರ್ಕಾರವು ಆ ಬಗ್ಗೆ ವಿವರಣೆ ನೀಡಬೇ-ಕಾಗುತ್ತದೆ' ಎಂದು ತರೂರ್ ಹೇಳಿದರು.

8ನೇ ಪುಟ ನೋಡಿ

ಬಿಜೆಪಿ ವಿರೋಧಿ ರಂಗಕ್ಕೆ ಮಮತಾ ಕರೆ

ಕೋಲ್ಕತ್ತ: 'ಬಿಜೆಪಿ ವಿರೋಧಿ ಪಕ್ಷಗಳು ಆಡಳಿತದಲ್ಲಿರುವ ಎಲ್ಲಾ ರಾಜ್ಯಗಳು ಒಂದಾಗಬೇಕು ಮತ್ತು ಬಿಜೆಪಿ ವಿರೋಧಿ ರಂಗವನ್ನು ರಚಿಸಬೇಕು. ಯುದ್ಧಕ್ಕಾಗಿ ಸಿದ್ಧತೆ ನಡೆಸಲು ಇದು ಸಕಾಲ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಸಚಿವರು, ವಿರೋಧ ಪಕ್ಷಗಳ ನಾಯಕರು, ನ್ಯಾಯಮೂರ್ತಿಗಳು ಮತ್ತು ಅಧಿಕಾರಿಗಳ ಫೋನ್‌ಗಳನ್ನು ಕದ್ದಾಲಿಸಲಾಗುತ್ತಿದೆ. ಬಿಜೆಪಿಯು ಪ್ರಜಾಪ್ರ-ಭುತ್ವವನ್ನು ಪ್ರೀತಿಸುವುದಾದರೆ, ಆ ಪಕ್ಷವು ದೇಶದ ಒಕ್ಕೂಟ ವ್ಯವಸ್ಥೆಯನ್ನು ಧ್ವಂಸ ಮಾಡಬಾರದು. ಬಿಜೆಪಿ ಹೀಗೆ ಮಾಡುತ್ತಿರುವ ಸಂದರ್ಭವು, ವಿರೋಧ ಪಕ್ಷಗಳೆಲ್ಲವೂ ಒಟ್ಟಾಗಲು ಸರಿಯಾದ ಸಮಯ. ಎನ್‌ಸಿಪಿಯ ಶರದ್ ಪವಾರ್ ಅಥವಾ ಕಾಂಗ್ರೆಸ್‌ನ ಪಿ.ಚಿದಂಬರಂ ಅವರು ದೆಹಲಿಯಲ್ಲಿ ವಿರೋಧ ಪಕ್ಷಗಳ ಸಭೆಯನ್ನು ಕರೆದರೆ, ನಾನು ಆ ಸಭೆಯಲ್ಲಿ ಭಾಗವಹಿಸುತ್ತೇನೆ' ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಟಿಎಂಸಿ ಹುತಾತ್ಮರ ದಿನಾಚರಣೆ ಅಂಗವಾಗಿ ಮಾಡಿದ ಭಾಷಣದಲ್ಲಿ ಅವರು ಈ ಪ್ರಸ್ತಾವ ಮಾಡಿದ್ದಾರೆ. ಶರದ್ ಪವಾರ್, ಪಿ.ಚಿದಂಬರಂ, ಅಕಾಲಿ ದಳ, ಡಿಎಂಕೆ ಮತ್ತು ಸಮಾಜವಾದಿ ಪಕ್ಷದ ನಾಯಕರು ಈ ವರ್ಚುವಲ್ ಭಾಷಣವನ್ನು ಕೇಳಿದರು.

ಆಮ್ಲಜನಕ ಕೊರತೆಯಿಂದಲೇ ಸಾವು: ಕೇಂದ್ರಕ್ಕೆ ದೆಹಲಿ ತಿರುಗೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಆಮ್ಲಜನಕ ಕೊರತೆಯಿಂದ ಯಾರೂ ಸತ್ತಿದ್ದು ವರದಿಯಾಗಿಲ್ಲ ಎಂಬ ಕೇಂದ್ರ ಸರ್ಕಾರದ ಹೇಳಿಕೆಯನ್ನು ದೆಹಲಿ ಸರ್ಕಾರವು ಖಂಡಿಸಿದೆ.

ಕೇಂದ್ರವು ತನ್ನ ತಪ್ಪನ್ನು ಮರೆಮಾಚಲು ಪ್ರಯತ್ನಿಸುತ್ತಿದೆ ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಬುಧವಾರ ಹೇಳಿದ್ದಾರೆ. ನಿರ್ವಹಣೆ ವೈಫಲ್ಯ ಹಾಗೂ ಏಪ್ರಿಲ್ 13ರ ನಂತರ ತರಲಾದ 'ಆಮ್ಲಜನಕ ವಿತರಣಾ ನೀತಿ'ಯಲ್ಲಿನ ಬದಲಾವಣೆಯಿಂದ ದೇಶದಾದ್ಯಂತ ಆಮ್ಲಜನಕ ಕೊರತೆ ಉಂಟಾಗಿ, ಸಾವುಗಳು ಸಂಭವಿಸಿದವು ಎಂದು ಅವರು ಆರೋಪಿಸಿದ್ದಾರೆ.

ಕೋವಿಡ್ ಎರಡನೇ ಅಲೆಯಲ್ಲಿ ಆಮ್ಲಜನಕದ ಕೊರತೆಯಿಂದಾಗಿ ಸಂಭವಿಸಿದ ಎಲ್ಲಾ ಸಾವುಗಳ ಬಗ್ಗೆ ದೆಹಲಿ ಸರ್ಕಾರ ತನಿಖೆ ನಡೆಸಲು ಸಿದ್ಧವಿದ್ದು, ಸಮಿತಿ ರಚನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ. ತನಿಖೆ ನಡೆಸಲು ಕೇಂದ್ರ ಸರ್ಕಾರ ಅವಕಾಶ ನೀಡುತ್ತಿಲ್ಲ ಎಂದು ಅವರು ಆರೋಪಿಸಿದ್ದಾರೆ.

'ಸರ್ಕಾರವು ನಾಚಿಕೆಯಿಲ್ಲದೆ ಸಂಸತ್ತಿನಲ್ಲಿ ಹಸಿ ಸುಳ್ಳು ಹೇಳಿದೆ. ಏಪ್ರಿಲ್ 15ರಿಂದ ಮೇ 5ರವರೆಗೆ ಆಮ್ಲಜನಕದ ಕೊರತೆಯಿಂದಾಗಿ ಸಂಪೂರ್ಣ ಅವ್ಯವಸ್ಥೆ ಉಂಟಾಗಿತ್ತು. ಹೀಗಾಗಿ ರೋಗಿಗಳು ಮೃತಪಡುವಂತಾಯಿತು' ಎಂದು ಅವರು ಹೇಳಿದ್ದಾರೆ.

ಆಮ್ಲಜನಕ ಕೊರತೆಯಿಂದ ಯಾರೂ ಮೃತಪಟ್ಟಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿರುವುದು ಸಂಪೂರ್ಣ ಸುಳ್ಳು ಎಂಬುದಕ್ಕೆ ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಅವರೂ ದನಿ-ಗೂಡಿಸಿದ್ದಾರೆ. 'ಆಮ್ಲಜನಕದ ಕೊರತೆ ಇಲ್ಲದಿರುತ್ತಿದ್ದರೆ, ಆಸ್ಪತ್ರೆಗಳು ಏಕೆ ಕೋರ್ಟ್ ಮೆಟ್ಟಿಲು ಹತ್ತಬೇಕಿತ್ತು' ಎಂದು ಪ್ರಶ್ನಿಸಿದ್ದಾರೆ.

8ನೇ ಪುಟ ನೋಡಿ

ಪ್ರತಿಪಕ್ಷಗಳ ದ್ವಂದ್ವ ನಿಲುವಿಗೆ ಬಿಜೆಪಿ ತರಾಟೆ

ಆಮ್ಲಜನಕ ಕೊರತೆಯಿಂದ ಸಾವು ಸಂಭವಿಸಿವೆ ಎಂಬ ವಿಚಾರದಲ್ಲಿ ಕಾಂಗ್ರೆಸ್ ಹಾಗೂ ಎಎಪಿ ದ್ವಂದ್ವ ನಿಲುವು ಪ್ರದರ್ಶಿಸುತ್ತಿವೆ ಎಂದು ಬಿಜೆಪಿ ಆರೋಪಿಸಿದೆ. ಕೋವಿಡ್ ಎರಡನೇ ಅಲೆಯಲ್ಲಿ ಆಮ್ಲಜನಕದ ಕೊರತೆಯಿಂದಾಗಿ ರೋಗಿಗಳು ಮೃತಪಟ್ಟಿದ್ದಾರೆ ಎಂದು ಎಎಪಿ ಮತ್ತು ಕಾಂಗ್ರೆಸ್ ಮುಖಂಡರು ಹೇಳಿದ್ದಾರೆಯೇ ಹೊರತು, ಅದನ್ನು ಕೇಂದ್ರ ಸರ್ಕಾರಕ್ಕೆ ವರದಿ ಮಾಡಿಲ್ಲ ಎಂದು ಬಿಜೆಪಿ ತಿಳಿಸಿದೆ.

8ನೇ ಪುಟ ನೋಡಿ

> **ಕೇಂದ್ರ ಸತ್ಯ ಮರೆಮಾಚುತ್ತಿದೆ. ಆಮ್ಲಜನಕ ಕೊರತೆಯಿಂದ ಮೃತರಾದ ರೋಗಿಗಳ ಸಂಬಂಧಿಕರು ಕೇಂದ್ರದ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬೇಕು**
> **ಸಂಜಯ್ ರಾವುತ್,** ಶಿವಸೇನಾ ವಕ್ತಾರ

> **ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಜನರು ತೊಂದರೆ ಎದುರಿಸಿದ್ದರೂ, ಪ್ರತಿಪಕ್ಷಗಳ ಆಡಳಿತ ಇರುವ ರಾಜ್ಯ ಸರ್ಕಾರಗಳ ರೀತಿ ಕೋರ್ಟ್‌ಗೆ ಹೋಗಿರಲಿಲ್ಲ**
> **ಸಂಬಿತ್ ಪಾತ್ರಾ,** ಬಿಜೆಪಿ ವಕ್ತಾರ

ವೈದ್ಯರ ಗ್ರಾಮೀಣ ಸೇವೆ: ವಿನಾಯಿತಿಗೆ ಹೈಕೋರ್ಟ್ ನಕಾರ

ಬೆಂಗಳೂರು: ಗ್ರಾಮೀಣ ಸೇವೆ ಕಡ್ಡಾಯ ನಿಯಮ ಪ್ರಶ್ನಿಸಿ ವೈದ್ಯಕೀಯ ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿ ಸಂಬಂಧ ಪರಿಹಾರಾತ್ಮಕ ಮಧ್ಯಂತರ ಆದೇಶ ಹೊರಡಿಸಲು ಹೈಕೋರ್ಟ್ ನಿರಾಕರಿಸಿದೆ. 9

ಏರಿಕೆಯತ್ತ ಕೋವಿಡ್ ಹೊಸ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ದೃಢಪ್ರಮಾಣ ಶೇ 1ರ ಆಸುಪಾಸಿನಲ್ಲಿಯೇ ಇದ್ದರೂ, ಸಾವಿನ ಸಂಖ್ಯೆ ಏರಿಕೆಯಾಗಿದೆ. ಹೊಸದಾಗಿ 1,639 ಮಂದಿಗೆ ಸೋಂಕು ತಗುಲಿರುವುದು ಬುಧವಾರ ದೃಢಪಟ್ಟಿದ್ದು, 36 ಸೋಂಕಿತರು ಸಾವಿಗೀಡಾಗಿದ್ದಾರೆ. 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ದೆಹಲಿ ಗಡಿಯಲ್ಲಿ ರೈತ ಹುತಾತ್ಮ ದಿನಾಚರಣೆ

ಪ್ರತಿಭಟನೆಗೆ ರಾಜ್ಯ ರೈತರ ಟೆಂಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ನೂತನ ಕೃಷಿ ಕಾಯ್ದೆ ವಿರೋಧಿಸಿ ಎಂಟು ತಿಂಗಳಿಂದ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಕರ್ನಾಟಕದ ರೈತರೂ ಕೈಜೋಡಿಸಿದ್ದಾರೆ. ಇಲ್ಲಿನ ಗಾಜಿಪುರ ಗಡಿಯಲ್ಲಿ ಕರ್ನಾಟಕದ ರೈತರಿಗಾಗಿ ಪ್ರತ್ಯೇಕ ಟೆಂಟ್ ಹಾಕಲಾಗಿದೆ.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆಯು ಸಂಯುಕ್ತ ಕಿಸಾನ್ ಮೋರ್ಚಾ ಸಹಯೋಗದಲ್ಲಿ ಬುಧವಾರ ನರಗುಂದ, ನವಲಗುಂದ ರೈತ ಬಂಡಾಯದ ಸ್ಮರಣೆ ಮತ್ತು 41ನೇ ರೈತ ಹುತಾತ್ಮ ದಿನವನ್ನು ಹಮ್ಮಿಕೊಂಡಿತ್ತು. ನಿರಂತರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ರಾಜ್ಯದ ರೈತರಿಗಾಗಿ ಇದೇ ವೇಳೆ ಟೆಂಟ್ ಉದ್ಘಾಟಿಸಲಾಯಿತು.

ರೈತರು ಬೆಳೆದ ಉತ್ಪನ್ನಗಳಿಗೆ ಘೋಷಿಸಲಾದ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನಿನ ಚೌಕಟ್ಟಿನಡಿ ತರಬೇಕು ಎಂದು ಕರ್ನಾಟಕ ರಾಜ್ಯ ರೈತಸಂಘದ ಪ್ರಮುಖರಾದ ಚುಕ್ಕಿ ನಂಜುಂಡಸ್ವಾಮಿ ಆಗ್ರಹಿಸಿದರು.

ರೈತರ ಉತ್ಪನ್ನಗಳಿಗೆ ಮುಕ್ತ ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಅಥವಾ ಅದಕ್ಕಿಂತ ಅಧಿಕ ಬೆಲೆ ಸಿಗುವಂತಾಗಬೇಕು ಎಂದ ಅವರು, 4 ದಶಕಗಳಿಂದ ದೇಶದಾದ್ಯಂತ 3 ಲಕ್ಷಕ್ಕೂ ಅಧಿಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೂ ಸರ್ಕಾರಗಳು ಸೂಕ್ತ ಪರಿಹಾರ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ರೈತರು ಬಳಸುವ ವಿದ್ಯುತ್, ಗೊಬ್ಬರ, ಬಿತ್ತನೆ ಬೀಜಗಳಿಗೆ ಮೊದಲೇ ದರ ನಿಗದಿಪಡಿಸುವಂತೆ ಕೃಷಿ ಉತ್ಪನ್ನಗಳಿಗೆ ಮುಂಗಡವಾಗಿಯೇ ಸೂಕ್ತ ಬೆಲೆಯನ್ನು ನಿಗದಿ ಮಾಡಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾದ ರಾಕೇಶ್ ಟಿಕಾಯತ್ ಹಾಗೂ ಯುದ್ಧವೀರ ಸಿಂಗ್ ಹೇಳಿದರು.

ರೈತಮುಖಂಡ ಕೆ.ಟಿ. ಗಂಗಾಧರ್, ವಿದ್ಯಾಸಾಗರ್, ಮಂಜು ಕಿರಣ್, ರೂಪೇಶ್ ರೈ, ಲೋಕೇಶ ಗೌಡ, ಯಲ್ಲಪ್ಪ, ನಳಿನಿ ಸುರೇಶ್, ಮತ್ತಿತರರು ಪಾಲ್ಗೊಂಡಿದ್ದರು.



ಕೃಷಿ ಕಾಯ್ದೆ ವಿರೋಧಿಸಿ ದೆಹಲಿ ಬಳಿಯ ಗಾಜಿಪುರ ಗಡಿಯಲ್ಲಿ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳದಲ್ಲಿ ಬುಧವಾರ ರೈತ ಹುತಾತ್ಮ ದಿನಾಚರಣೆ ಹಮ್ಮಿಕೊಳ್ಳಲಾಯಿತು. ಈ ಸಂದರ್ಭ ವಿದ್ಯುತ್ ಖಾಸಗೀಕರಣ ಮಸೂದೆ ವಿರೋಧಿಸುವ ಭಿತ್ತಿಪತ್ರ ಪ್ರದರ್ಶಿಸಲಾಯಿತು

ಸಿಬಿಎಸ್‌ಇ: 10, 12ನೇ ತರಗತಿ ಖಾಸಗಿ ಅಭ್ಯರ್ಥಿಗಳಿಗೆ ಆ.16ರಿಂದ ಪರೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಖಾಸಗಿ ಅಭ್ಯರ್ಥಿಗಳಿಗೆ ಆಗಸ್ಟ್ 16ರಿಂದ ಸೆಪ್ಟೆಂಬರ್ 15ರೊಳಗೆ ಪರೀಕ್ಷೆಗಳನ್ನು ನಡೆಸುವುದಾಗಿ ಬುಧವಾರ ಪ್ರಕಟಿಸಿದೆ.

ಈ ಪರೀಕ್ಷಾರ್ಥಿಗಳ ಹಿಂದಿನ ಮೌಲ್ಯಮಾಪನ ದಾಖಲೆಗಳು ಮಂಡಳಿ ಬಳಿ ಇಲ್ಲದ ಕಾರಣ, ಅವರಿಗೆ ಪರ್ಯಾಯ ಮೌಲ್ಯಮಾಪನ ನೀತಿಯ ಆಧಾರದ ಮೇಲೆ ಫಲಿತಾಂಶ ಪ್ರಕಟಿಸಲು ಆಗದು ಎಂದು ಮಂಡಳಿ ಸ್ಪಷ್ಟಪಡಿಸಿದೆ.

ಈ ಅಭ್ಯರ್ಥಿಗಳ ಪರೀಕ್ಷೆ ಮುಗಿದ ಕೆಲವೇ ದಿನಗಳಲ್ಲಿ ಫಲಿತಾಂಶ ಪ್ರಕಟಿ-ಸಲಾಗುವುದು. ಈ ಮೂಲಕ ಅವರಿಗೆ ಉನ್ನತ ಶಿಕ್ಷಣ ಪ್ರವೇಶಕ್ಕೆ ತೊಂದರೆ ಆಗದಂತೆ ಎಚ್ಚರವಹಿಸಲಾಗುವುದು ಎಂದು ಮಂಡಳಿಯ ಪರೀಕ್ಷಾ ಮೇಲ್ವಿಚಾರಕರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪತ್ರ ಬರೆದ ರುಪ್ಸ

ಶಾಲಾ–ಕಾಲೇಜು ಆರಂಭಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಕೂಡಲೇ ಶಾಲೆ–ಪಿಯು ಕಾಲೇಜುಗಳನ್ನು ಭೌತಿಕವಾಗಿ ಆರಂಭಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸ) ಆಗ್ರಹಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಈ ಕುರಿತು ಪತ್ರ ಬರೆದಿರುವ ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಗ್ರಾಮೀಣ ಭಾಗದ ಬಹಳಷ್ಟು ಕಡೆ ಸೋಂಕಿನ ಪ್ರಮಾಣ ಶೂನ್ಯಕ್ಕೆ ಇಳಿದಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಕೂಡ ಶಾಲೆಗಳನ್ನು ಆರಂಭಿಸಿದರೆ ಮಕ್ಕಳಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಹೇಳಿದೆ. ಈಗಲಾದರೂ 1ರಿಂದ 12ನೇ ತರಗತಿವರೆಗಿನ ಎಲ್ಲ ತರಗತಿಗಳನ್ನೂ ಭೌತಿಕವಾಗಿ ಆರಂಭಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದಾರೆ.

'ತಡ ಮಾಡದೆ ಶಾಲೆ ಆರಂಭಿಸಬೇಕು ಎಂದು ಡಾ.ದೇವಿಶೆಟ್ಟಿ ನೇತೃತ್ವದ ಸಮಿತಿ ಕೂಡ ಶಿಫಾರಸು ಮಾಡಿತ್ತು. ರಾಜ್ಯದ ಬಹುತೇಕ ಶಿಕ್ಷಣ ತಜ್ಞರು ಶಾಲೆ ಆರಂಭಿಸದಿದ್ದರೆ ಬಾಲಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ ಮತ್ತಿತರ ಸಾಮಾಜಿಕ ಪಿಡುಗುಗಳು ಹೆಚ್ಚುತ್ತವೆ. ಮಕ್ಕಳು ನಿರಂತರ ಕಲಿಕೆಯಿಂದ ದೂರು ಉಳಿಯುತ್ತಾರೆ ಎಂದು ಎಚ್ಚರಿಸಿದ್ದಾಯಿತು. ಆದರೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರು ಶಾಲಾರಂಭದ ಬಗ್ಗೆ ಕಾರ್ಯಪಡೆ ರಚಿಸಿ ಅನಗತ್ಯವಾಗಿ ಕಾಲಹರಣ ಮಾಡುತ್ತಿದ್ದಾರೆ' ಎಂದೂ ದೂರಿದ್ದಾರೆ.

ಎಸ್ಸೆಸ್ಸೆಲ್ಸಿ: ಭಾಷಾ ಪರೀಕ್ಷೆ ಇಂದು

ಎಸ್ಸೆಸ್ಸೆಲ್ಸಿಯ ಭಾಷಾ ವಿಷಯಗಳ ಪರೀಕ್ಷೆ ಗುರುವಾರ ರಾಜ್ಯದಾದ್ಯಂತ 4,885 ಕೇಂದ್ರಗಳಲ್ಲಿ ನಡೆಯಲಿದೆ. ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷಾ ವಿಷಯಗಳ ಪರೀಕ್ಷೆಯು ಒಂದೇ ದಿನ ನಡೆಯಲಿದೆ.

ಪ್ರಥಮ ಭಾಷಾ ವಿಷಯಕ್ಕೆ 8.19 ಲಕ್ಷ, ದ್ವಿತೀಯ ಭಾಷೆಗೆ 8.27 ಲಕ್ಷ, ತೃತೀಯ ಭಾಷಾ ವಿಷಯ ಪರೀಕ್ಷೆಗೆ 8.17 ಲಕ್ಷ ವಿದ್ಯಾರ್ಥಿಗಳು ನೋಂದಾ-ಯಿಸಿಕೊಂಡಿದ್ದಾರೆ. ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಪರೀಕ್ಷೆ ನಡೆಯಲಿದೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ತಿಳಿಸಿದೆ.

ಮುಖ್ಯ ವಿಷಯಗಳಿಗೆ ಸೋಮವಾರ ನಡೆದ ಪರೀಕ್ಷೆಯಂತೆಯೇ ಭಾಷಾ ವಿಷಯದ ಪರೀಕ್ಷೆಗಳಿಗೂ ಒಂದೇ ಪ್ರಶ್ನೆಪತ್ರಿಕೆ ಇರಲಿದೆ. ಅದರಲ್ಲಿ 1ರಿಂದ 40ರವರೆಗೆ ಪ್ರಥಮ, 41ರಿಂದ 80ರವರೆಗೆ ದ್ವಿತೀಯ ಮತ್ತು 81ರಿಂದ 120ರವರೆಗೆ ತೃತೀಯ ಭಾಷಾ ಪ್ರಶ್ನೆಗಳಿರುತ್ತವೆ.

ಪ್ರತಿ ವಿಷಯದ ಪ್ರಶ್ನೆಗಳಿಗೂ ಉತ್ತರಿಸಲು ಪ್ರತ್ಯೇಕ ಬಣ್ಣದ ಒಎಂಆರ್ ಶೀಟ್ ನೀಡಲಾಗಿರುತ್ತದೆ. ಯಾವ ವಿಷಯಕ್ಕೆ ಯಾವ ಒಎಂಆರ್ ಎಂಬುದನ್ನು ಪರಿಶೀಲಿಸಿಕೊಂಡು ಬಹು ಆಯ್ಕೆ ಪ್ರಶ್ನೆಗಳ ಮುಂದೆ ನೀಡಿರುವ ಸರಿಯಾದ ಉತ್ತರದ ಸಂಖ್ಯೆಯ ಮೇಲೆ ಒಎಂಆರ್ ಶೀಟ್‌ನಲ್ಲಿ ನಿಗದಿತ ರೀತಿಯಲ್ಲಿ ನೀಲಿ ಅಥವಾ ಕಪ್ಪು ಬಾಲ್‌ಪಾಯಿಂಟ್ ಪೆನ್‌ನಲ್ಲಿ ಗುರುತಿಸಬೇಕು ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಪದವಿ ಕಾಲೇಜುಗಳ ಶೇ 75 ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ'

'ರಾಜ್ಯದಲ್ಲಿ ಇದೇ 26ರಿಂದ ಪದವಿ ಕಾಲೇಜುಗಳ ಭೌತಿಕ ತರಗತಿಗಳು ಆರಂಭವಾಗುತ್ತಿದ್ದು, ಶೇ 75ರಷ್ಟು ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗಿದೆ' ಎಂದು ಉನ್ನತ ಶಿಕ್ಷಣ ಖಾತೆ ಸಚಿವರೂ ಆದ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

'ಸರ್ಕಾರಿ, ಅನುದಾನಿತ ಕಾಲೇಜುಗಳಲ್ಲಿನ 18 ವರ್ಷಕ್ಕೂ ಮೇಲ್ಪಟ್ಟ ಎಲ್ಲ ವಿದ್ಯಾರ್ಥಿಗಳಿಗೆ ಲಸಿಕೆ ಕೊಡಲಾಗುತ್ತಿದೆ. ಜತೆಗೆ, ಬೋಧಕರು, ಬೋಧಕೇತರ ಸಿಬ್ಬಂದಿಗೂ ಲಸಿಕೆ ಹಾಕಿಸಲಾಗು-ತ್ತಿದೆ' ಎಂದು ಹೇಳಿದರು.

ಮನೆಗಳಿಗೆ ನುಗ್ಗುವ ರಾಜಕಾಲುವೆ ನೀರು: ಕೃಷಿ ಭೂಮಿಗಳಿಗೂ ಹಾನಿ; ದುರ್ನಾತದ ನಡುವೆಯೇ ದಿನ ದೂಡುತ್ತಿರುವ ಜನ

ಮಳೆಯಾದರೆ ಹೆಮ್ಮಿಗೆಪುರ ವಾರ್ಡ್‌ ಜನರಿಗೆ ಭೀತಿ!

• ಜಿ.ಶಿವಕುಮಾರ

ಬೆಂಗಳೂರು: ಮಹಾನಗರಿಯಲ್ಲಿ ಮಳೆ ಸುರಿದರೆ ನಗರದಿಂದ 18 ಕಿ.ಮೀ.ದೂರದಲ್ಲಿರುವ ಈ ಬಡಾವಣೆ ಜನರಲ್ಲಿ ಭೀತಿ ಶುರುವಾಗುತ್ತದೆ. ಉಕ್ಕಿ ಹರಿವ ವೃಷಭಾವತಿ ರಾಜಕಾಲುವೆ ಇವರ ನೆಮ್ಮದಿ ಕಸಿದುಕೊಳ್ಳುತ್ತದೆ. ಮನೆಯಿಂದ ಅನತಿ ದೂರದಲ್ಲೇ ಇರುವ ಕಾಲುವೆಯಲ್ಲಿ ಒಮ್ಮೊಮ್ಮೆ ಹೆಣಗಳೂ ತೇಲಿ ಹೋಗುತ್ತವೆ. ವಿಷ ಜಂತುಗಳು ಮನೆಯಂಗಳದಲ್ಲೇ ಬೀಡು ಬಿಡುತ್ತವೆ. ಕೆಲವೊಮ್ಮೆ ಮನೆಯೊಳಗೂ ಬರುವುದುಂಟು...



ಗುಟ್ಟೆ ಆಂಜನೇಯಸ್ವಾಮಿ ದೇವಸ್ಥಾನ ರಸ್ತೆ ಸನಿಹದ ಕೃಷಿ ಭೂಮಿಯ ಪಕ್ಕದಲ್ಲಿ ಹಾದು ಹೋಗಿರುವ ರಾಜಕಾಲುವೆ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ ಟಿ.

ಇದು ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್‌ 198ರ ನಿವಾಸಿಗಳ ವ್ಯಥೆ.

ಕೆಂಗೇರಿಯಿಂದ ಉತ್ತರಹಳ್ಳಿಗೆ ಸಾಗುವ ಮಾರ್ಗ ಮಧ್ಯದಲ್ಲಿ ರಾಜಕಾಲುವೆ ಹಾದುಹೋಗುತ್ತದೆ. ಇದಕ್ಕೆ ಅಡ್ಡಲಾಗಿ ಸೇತುವೆ ನಿರ್ಮಿಸಲಾಗಿದ್ದು ಈ ಸೇತುವೆ ತಟದಲ್ಲಿ ಬರುವ ಗುಟ್ಟೆ ಆಂಜನೇಯಸ್ವಾಮಿ ದೇವಸ್ಥಾನ ರಸ್ತೆ, ವಿದ್ಯಾಪೀಠ ರಸ್ತೆ ಹಾಗೂ ವಿನಾಯಕನಗರ ನಿವಾಸಿಗಳು ಈಗಲೂ ಆತಂಕದಲ್ಲೇ ದಿನ ದೂಡುತ್ತಿದ್ದಾರೆ. ಭಯದಲ್ಲೇ ರಾತ್ರಿಗಳನ್ನು ಕಳೆಯುತ್ತಿದ್ದಾರೆ.

ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಕೆಲವೆಡೆ ಸೇತುವೆ ನಿರ್ಮಿಸಲಾಗಿದೆ. ಅಂತಹ ಜಾಗದಲ್ಲಿ ಕಾಲುವೆಯ ಎರಡು ಬದಿಯಲ್ಲೂ ಸುಸಜ್ಜಿತ ತಡೆಗೋಡೆಗಳಿವೆ. ಕೆಲವೆಡೆ ಸ್ಥಳೀಯರ ಒತ್ತಡಕ್ಕೆ ಮಣಿದು ಒಂದು ಬದಿಯಲ್ಲಷ್ಟೇ ತಡೆಗೋಡೆ ಕಟ್ಟಲಾಗಿದೆ. ಅದರಿಂದ ಯಾವುದೇ ಪ್ರಯೋಜನವಾಗಿಲ್ಲ. ಕಾಲುವೆಯಲ್ಲಿ ವಿಪರೀತ ಹೂಳು ತುಂಬಿಕೊಂಡಿರುವುದರಿಂದ ನೀರು ತಡೆಗೋಡೆಯ ಮೇಲಿಂದ ಉಕ್ಕಿ ಹರಿದು ಜನವಸತಿ ಪ್ರದೇಶಕ್ಕೆ ನುಗ್ಗುತ್ತದೆ. ಗೋಡೆ ಎತ್ತರಿಸುವಂತೆ ಸ್ಥಳೀಯರು ಅನೇಕ ಬಾರಿ ಮನವಿ ಮಾಡಿದ್ದರೂ ಯಾರೂ ಸ್ಪಂದಿಸಿಲ್ಲ. ತ್ಯಾಜ್ಯ ಮಿಶ್ರಿತ ನೀರು ಮನೆಯ ಮುಂದೆ ನಿಲ್ಲುವುದರಿಂದ ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಸಾಂಕ್ರಾಮಿಕ ರೋಗಕ್ಕೆ ಆಹ್ವಾನ ನೀಡಿದಂತಾಗಿದೆ.

ಕೊಚ್ಚಿ ಹೋಗದಿರಲಿ ಬದುಕು 4

‘ವರ್ಷವಿಡೀ ಒಂದಿಲ್ಲೊಂದು ಸಮಸ್ಯೆ ಎದುರಿಸುತ್ತಿದ್ದೇವೆ. ರಾಜಕಾಲುವೆ ತುಂಬಿ ಹರಿಯುವಾಗ ಶೌಚಾಲಯದಲ್ಲಿ ನೀರು ಕಟ್ಟಿಕೊಳ್ಳುತ್ತದೆ. ಸುತ್ತಮುತ್ತಲ ಪ್ರದೇಶದಲ್ಲಿ ಸರಿಯಾಗಿ ಒಳಚರಂಡಿ ವ್ಯವಸ್ಥೆ ಮಾಡಿಲ್ಲ. ಹೀಗಾಗಿ ಮಳೆ ನೀರು ಮನೆಯೊಳಗೆ ನುಗ್ಗುತ್ತದೆ. ಕೊಳಚೆ ನೀರು ಸಂಪ್‌ಗೂ ಸೇರುವುದರಿಂದ ಕೆಲವೊಮ್ಮೆ ಕುಡಿಯುವ ನೀರಿಗೂ ಪರದಾಡಬೇಕಾಗುತ್ತದೆ. ಇವೆಲ್ಲವನ್ನೂ ಸಹಿಸಿಕೊಂಡು ಬದುಕುವುದು ಅನಿವಾರ್ಯವಾಗಿದೆ’ ಎಂದು ಕೆಂಗೇರಿ ಕೋಟೆ ಬೀದಿಯ ಲಲಿತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಜೋರು ಮಳೆಯಾದರೆ ತಗ್ಗು ಪ್ರದೇಶದಲ್ಲಿ ವಾಸಿಸುತ್ತಿರುವವರು ನಿದ್ದೆಗೆಡಬೇಕಾಗುತ್ತದೆ. ಕೆಲವೆಡೆ ರಸ್ತೆಗಳೂ ಕೆಸರುಗದ್ದೆಯಂತಾಗುತ್ತವೆ. ರಾತ್ರಿ ಹೊತ್ತಿನಲ್ಲಿ ಕಾರ್ಖಾನೆಗಳ ತ್ಯಾಜ್ಯವನ್ನು ರಾಜಕಾಲುವೆಗೆ ಬಿಡಲಾಗುತ್ತದೆ. ಆ ದುರ್ನಾತ ಸಹಿಸಿಕೊಳ್ಳುವುದು ಅಸಾಧ್ಯ. ಗಬ್ಬು ವಾಸನೆಯಿಂದಾಗಿ ಊಟ ಮಾಡುವುದಕ್ಕೂ ಆಗುವುದಿಲ್ಲ. ಉಸಿರಾಡುವಾಗ ಗಂಟಲು ಕಟ್ಟಿಕೊಂಡಂತಾಗುತ್ತದೆ. ಎಳೆಯ ಮಕ್ಕಳ ಮೇಲೆ ಇದರಿಂದ ದುಷ್ಪರಿಣಾಮ ಉಂಟಾಗುತ್ತಿದೆ. ಅವರು ವಿವಿಧ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ ಎಂದು ಸ್ಥಳೀಯರು ದೂರುತ್ತಾರೆ.

ಕೃಷಿ ಭೂಮಿಗೂ ಹಾನಿ:

ರಾಜಕಾಲುವೆ ಉಕ್ಕಿ ಹರಿವ ರಭಸಕ್ಕೆ ಕೃಷಿ ಭೂಮಿಯೊಳಗೆ ತ್ಯಾಜ್ಯ ಶೇಖರಣೆಯಾಗುತ್ತದೆ. ಕೆಲವು ಕಡೆ ತಡೆಗೋಡೆ ಇಲ್ಲದಿರುವುದರಿಂದ ಭೂ ಕುಸಿತವೂ ಆಗುತ್ತಿದೆ. ಇರುವ ಅಲ್ಪ ಸ್ವಲ್ಪ ಜಮೀನು ಕೊಚ್ಚಿ ಹೋಗುತ್ತಿರುವುದರಿಂದ ಸಣ್ಣ ಹಿಡುವಳಿದಾರ ರೈತರು ಕಂಗಾಲಾಗಿದ್ದಾರೆ.

‘ಇರುವ ಸ್ವಲ್ಪ ಜಮೀನಿನಲ್ಲಿ ಮಿಶ್ರ ಬೇಸಾಯ ಮಾಡುತ್ತಿದ್ದೇವೆ. ಸಪೋಟ, ಬಾಳೆ, ಸೊಪ್ಪು ಹಾಗೂ ತರಕಾರಿಗಳನ್ನು ಬೆಳೆದು ಜೀವನ ಸಾಗಿಸುತ್ತಿದ್ದೇವೆ. ಮಳೆಗಾಲದಲ್ಲಿ ಕಾಲುವೆಯ ನೀರು ಜಮೀನಿನ ಮೇಲೆ ಹರಿಯುತ್ತದೆ. ನೀರು ತಗ್ಗಿದ ಬಳಿಕ ರಾಶಿ ರಾಶಿ ಕಸ ಉಳಿದುಕೊಂಡಿರುತ್ತದೆ. ಅದನ್ನೆಲ್ಲಾ ತೆಗೆಸುವುದಕ್ಕೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಅದಕ್ಕಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ಇದೆ’ ಎಂದು ಯಜಮಾನಪ್ಪ ತೋಟದ ಮುನಿರಾಜು ಅಳಲು ತೋಡಿಕೊಂಡರು.

‘ಇನ್ನೂ ಕೆಲವೆಡೆ ತಡೆಗೋಡೆ ಕಟ್ಟಬೇಕಿದೆ’

‘ಕೆಲವೊಂದು ವಾರ್ಡ್‌ಗಳು ಹೊಸದಾಗಿ ಬಿಬಿಎಂಪಿಗೆ ಸೇರ್ಪಡೆಯಾಗಿವೆ. ಅನುದಾನದ ಲಭ್ಯತೆ ಆಧಾರದಲ್ಲಿ ನಗರದ ಹೊರವಲಯದ ಕೆಲವು ಪ್ರದೇಶಗಳಲ್ಲಿ ತಡೆಗೋಡೆ ನಿರ್ಮಿಸಲಾಗಿದೆ. ಇನ್ನೂ ಹಲವು ಕಡೆ ತಡೆಗೋಡೆ ಹಾಗೂ ರಸ್ತೆ ನಿರ್ಮಾಣವಾಗಬೇಕಿದೆ. ಅದಕ್ಕೆ ಅಂದಾಜು ₹2 ಸಾವಿರ ಕೋಟಿ ವೆಚ್ಚವಾಗುತ್ತದೆ. ಕೋವಿಡ್ ಕಾರಣ ಆರ್ಥಿಕತೆಗೆ ಪೆಟ್ಟು ಬಿದ್ದಿದ್ದು, ಅಭಿವೃದ್ಧಿ ಕಾರ್ಯಗಳೂ ಕುಂಠಿತವಾಗಿವೆ’ ಎಂದು ಬಿಬಿಎಂಪಿಯ ರಸ್ತೆ ಮೂಲಸೌಕರ್ಯ ಹಾಗೂ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ತಿಳಿಸಿದರು.

‘ಐದು ವರ್ಷಗಳಿಂದ ಹೂಳೆತ್ತಿಲ್ಲ ಎಂಬುದು ತಪ್ಪು ಅಭಿಪ್ರಾಯ. ಅಂತಹ ಸಮಸ್ಯೆ ಇದ್ದರೆ ಸಾರ್ವಜನಿಕರು ಗಮನಕ್ಕೆ ತರಬೇಕು. ನಾವು ಕೂಡಲೇ ಕಾರ್ಯಪ್ರವೃತ್ತರಾಗಿ ಅದನ್ನು ಸರಿಪಡಿಸುತ್ತೇವೆ. ಮಳೆಗಾಲದಲ್ಲಿ ನೆರೆ ಸಂಭವಿಸದಂತೆ ತಡೆಯಲು ಈಗಾಗಲೇ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ’ ಎಂದರು.




15 ವರ್ಷಗಳಿಂದ ನಮ್ಮ ಗೋಳು ತಪ್ಪಿಲ್ಲ. ಬಿಬಿಎಂಪಿಯವರು ಕಾಲಕಾಲಕ್ಕೆ ಸರಿಯಾಗಿ ತೆರಿಗೆ ಕಟ್ಟಿಸಿಕೊಳ್ಳುತ್ತಾರೆ. ಸಮಸ್ಯೆಗಳಿಗೆ ಮಾತ್ರ ಸ್ಪಂದಿಸುವುದಿಲ್ಲ.

ಲಲಿತಮ್ಮ, ಕೆಂಗೇರಿಯ ಕೋಟೆ ಬೀದಿ ನಿವಾಸಿ



ಕಾಲುವೆಯಿಂದ 50 ಅಡಿ ದೂರದಲ್ಲೇ ಮನೆ ಇದೆ. 20 ವರ್ಷಗಳಿಂದ ಇಲ್ಲಿ ವಾಸವಿದ್ದೇವೆ. ಬೇಸಿಗೆ ಸಮಯದಲ್ಲಿ ಗಬ್ಬು ವಾಸನೆ ಬರುತ್ತದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಬೇಕಿದೆ

ಯಲ್ಲಮ್ಮ, ವಿದ್ಯಾಪೀಠ ರಸ್ತೆ ನಿವಾಸಿ



ಮಳೆಗಾಲದಲ್ಲಿ ವಿಷ ಜಂತುಗಳ ಕಾಟ ಹೆಚ್ಚಾಗುತ್ತದೆ. ಅವುಗಳನ್ನು ಹಿಡಿಯಲು ಸಾವಿರಾರು ರೂಪಾಯಿ ಕೇಳುತ್ತಾರೆ. ಬೀದಿ ದೀಪ ಹಾಕಿಸಿಕೊಡುವಂತೆ ಶಾಸಕರಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ.

ಚನ್ನಪ್ಪ, ಗುಟ್ಟೆ ಆಂಜನೇಯಸ್ವಾಮಿ ದೇವಸ್ಥಾನ ರಸ್ತೆಯ ಎರಡನೇ ತಿರುವಿನ ನಿವಾಸಿ.



ಮನೆಯ ಹಿಂಬದಿಯಲ್ಲೇ ಕಾಲುವೆ ಇದೆ. ಅದಕ್ಕೆ ಈವರೆಗೂ ತಡೆಗೋಡೆ ನಿರ್ಮಿಸಿಲ್ಲ. ಮಳೆಗಾಲದಲ್ಲಿ ಸಾಕಷ್ಟು ಹಾನಿ ಸಂಭವಿಸುತ್ತದೆ. ಇದನ್ನು ಅಧಿಕಾರಿ, ಜನಪ್ರತಿನಿಧಿಗಳ ಗಮನಕ್ಕೂ ತಂದಿದ್ದೇವೆ.

ಮುನಿರಾಜು, ಯಜಮಾನಪ್ಪ ತೋಟದ ನಿವಾಸಿ

ಮೋದಿ, ಅಮಿತ್ ಶಾ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೆಗಾಸಸ್’ ಎಂಬ ಕುತಂತ್ರಾಂಶ ಬಳಸಿ, ವಿರೋಧ ಪಕ್ಷದ ನಾಯಕರ ಗೋಪ್ಯತೆ ಪತ್ತೆ ಹಚ್ಚುವ ಮೂಲಕ ವಾಕ್ ಸ್ವಾತಂತ್ರ್ಯದ ಹಕ್ಕನ್ನು ಕಗ್ಗೊಲೆ ಮಾಡಿರುವ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಕೂಡಲೇ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿ ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿಯ ಮುಖಂಡರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.



ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿಯ ಮುಖಂಡರು ಪ್ರತಿಭಟನೆ ನಡೆಸಿದರು.

‘ನರೇಂದ್ರ ಮೋದಿ ದುರಾಡಳಿತದಲ್ಲಿ ದೇಶ ಇಂದು ಆರ್ಥಿಕತೆಯಲ್ಲಿ ಕುಸಿಯುತ್ತಿದೆ. ಕೋವಿಡ್ ಅಲೆ ತಡೆಯುವಲ್ಲಿ ವಿಫಲವಾಗಿದೆ. ನಿರುದ್ಯೋಗ ಹೆಚ್ಚುತ್ತಿದೆ, ಜಿಡಿಪಿ ಪಾತಾಳಕ್ಕೆ ಕುಸಿದಿದೆ. ಇವುಗಳ ವಿರುದ್ಧ ವಿರೋಧ ಪಕ್ಷಗಳು ನಡೆಸುತ್ತಿರುವ ದಿಟ್ಟ ಹೋರಾಟಗಳನ್ನು ಹತ್ತಿಕ್ಕಲು ವಾಮಮಾರ್ಗದಲ್ಲಿ ‘ಪೆಗಾಸಸ್’ ಕುತಂತ್ರಾಂಶ ಬಳಸುತ್ತಿದೆ’ ಎಂದು ಸಮಿತಿಯ ಮುಖಂಡ ಎಸ್.ಮನೋಹರ್ ಖಂಡಿಸಿದರು.

ಕಾಂಗ್ರೆಸ್ ಮುಖಂಡ ಜಿ.ಜನಾರ್ದನ್, ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿಯ ಎ.ಆನಂದ್, ಶೇಖರ್, ಜಯಸಿಂಹ, ಪ್ರಕಾಶ್, ಆದಿತ್ಯ, ಉಮೇಶ್, ಚಂದ್ರಶೇಖರ್, ಪುಟ್ಟರಾಜು ಹಾಗೂ ಇತರರು ಇದ್ದರು.

ನೂತನ ಶಿಲಾವಿಗ್ರಹ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ರಾಮಚಂದ್ರಪುರದ ರಘುರಾಂ ಬಡಾವಣೆಯಲ್ಲಿ ಜೀರ್ಣೋದ್ಧಾರಗೊಳಿಸಿರುವ ಕಲ್ಯಾಣರಾಮ ದೇವಸ್ಥಾನದಲ್ಲಿ ಶ್ರೀರಾಮಚಂದ್ರ, ಸೀತಾ, ಲಕ್ಷ್ಮಣ ಸಮೇತ ಆಂಜನೇಯ ಸ್ವಾಮಿಯ ನೂತನ ಶಿಲಾವಿಗ್ರಹದ ಪ್ರತಿಷ್ಠಾಪನೆ ನಡೆಯಿತು.

ದೇವರಿಗೆ ಬೆಳಿಗ್ಗೆಯಿಂದಲೇ ವಿವಿಧ ರೀತಿಯ ಅಭಿಷೇಕ, ಹೋಮ ಹಾಗೂ ಪೂಜಾ ಕೈಂಕರ್ಯಗಳು ನಡೆದವು. ಪ್ರತಿಷ್ಠಾಪನೆ ಅಂಗವಾಗಿ ಮಹಿಳೆಯರು ಕಳಶಗಳನ್ನು ಹೊತ್ತು ಗ್ರಾಮದಲ್ಲಿ ಮೆರವಣಿಗೆ ನಡೆಸಿದರು. ನಂತರ ದೇವಸ್ಥಾನದ ಗೋಪುರದಲ್ಲಿರುವ ಕಳಶಕ್ಕೆ ಕ್ರೇನ್ ಮೂಲಕ ಕ್ಷೀರಾಭಿಷೇಕ ಮಾಡಲಾಯಿತು.

‘ಆಟದ ಮೈದಾನ ಮತ್ತು ಉದ್ಯಾನಕ್ಕೆ ಹೊಂದಿಕೊಂಡಿರುವ ಈ ದೇವಾಲಯದ ಜೀರ್ಣೋದ್ಧಾರ ನಡೆದಿರುವುದರಿಂದ ವಾಯುವಿಹಾರಕ್ಕೆ ಬರುವವರು ಹಾಗೂ ಸಾರ್ವಜನಿಕರು ದೇವಸ್ಥಾನದ ಆವರಣದಲ್ಲಿ ಕುಳಿತು ವಿಶ್ರಾಂತಿ ಪಡೆಯಲು ಅನುಕೂಲವಾಗಲಿದೆ’ ಎಂದು ಶಾಸಕ ಕೃಷ್ಣಬೈರೇಗೌಡ ತಿಳಿಸಿದರು.



ದೇವಸ್ಥಾನದ ಗೋಪುರದಲ್ಲಿರುವ ಕಳಶಕ್ಕೆ ಕ್ರೇನ್ ಮೂಲಕ ಕ್ಷೀರಾಭಿಷೇಕ ನೆರವೇರಿಸಲಾಯಿತು.

ಮುಖಂಡರಾದ ಆರ್.ಎಂ.ಶ್ರೀನಿವಾಸ್, ಎನ್.ಎನ್.ಶ್ರೀನಿವಾಸಯ್ಯ, ಬಿ.ಎಸ್.ಗೋಪಾಲಕೃಷ್ಣ, ಸುಧಾಕರ್, ಪಟೇಲ್ ಪಿಳ್ಳೇಗೌಡ, ಪಟೇಲ್ ಮಂಜಣ್ಣ, ಮುನಿಯಪ್ಪ, ಅಶ್ವತ್ಥನಾರಾಯಣ ಇದ್ದರು.

ಪಯೋನೀರ್ ಡಿಸ್ಟಿಲರೀಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: ‘ಯುಬಿ ಟವರ್’, ಲೆವೆಲ್ 10, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಕರ್ನಾಟಕ, ಭಾರತ. ಫೋನ್: 080 - 4544 8000, ಫ್ಯಾಕ್ಸ್: 080 - 3985 6862
ಇಮೇಲ್: pdlinvestor.india@diageo.com, ವೆಬ್‌ಸೈಟ್: www.pioneerdistilleries.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L24116KA1992PLC125992

ಜೂನ್ 30, 2021ಕ್ಕೆ ಅಂತ್ಯವಾದ ತ್ರೈಮಾಸಿಕ ಪ್ರತ್ಯೇಕಿತ ಪರಿಶೋಧಿಸದ ಆರ್ಥಿಕ ಫಲಿತಾಂಶಗಳ ವಿವರಣೆ

ರೂ. ಲಕ್ಷಗಳಲ್ಲಿ

ಕ್ರ. ಸಂಖ್ಯೆ	ವಿವರಗಳು	ಜೂನ್ 30, 2021 ಕೊನೆಗೊಂಡ ತ್ರೈಮಾಸಿಕಕ್ಕೆ	ಮಾರ್ಚ್ 31, 2021 ಕೊನೆಗೊಂಡ ತ್ರೈಮಾಸಿಕಕ್ಕೆ	ಜೂನ್ 30, 2020 ಕೊನೆಗೊಂಡ ತ್ರೈಮಾಸಿಕಕ್ಕೆ	ಮಾರ್ಚ್ 31, 2021 ವರ್ಷಕ್ಕೆ ಕೊನೆಗೊಂಡ
		ಪರಿಶೋಧಿಸದ	ಪರಿಶೋಧಿತ	ಪರಿಶೋಧಿಸದ	ಪರಿಶೋಧಿತ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	3,770.00	5,210.00	3,369.00	17,041.00
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ #) ನಿವ್ವಳ ಲಾಭ/(ನಷ್ಟ)	(2,064.00)	(2,137.00)	(2,013.00)	(8,657.00)
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,064.00)	(2,137.00)	(2,013.00)	(8,657.00)
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,064.00)	(2,137.00)	(2,013.00)	(8,657.00)
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ [ಅವಧಿಯ ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	(2,064.00)	(2,217.00)	(2,013.00)	(8,737.00)
6.	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ ಪ್ರತಿ ಈಕ್ವಿಟಿ ಷೇರಿಗೆ ರೂ.10/–	1,339.00	1,339.00	1,339.00	1,339.00
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ	-	-	-	(29,127)
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ.2/-) (ಕಾರ್ಯಾಚರಣೆಗಳನ್ನು ಮುಂದಿವರಿಸಲು ಮತ್ತು ನಿಲ್ಲಿಸಲು)				
	1. ಮೂಲ :	(15.42)	(15.96)	(15.04)	(64.66)
	2. ದುರ್ಬಲೀಕೃತ :	(15.42)	(15.96)	(15.04)	(64.66)

ಸೂಚನೆಗಳು:

ಎ) ಮೇಲಿನದು 2015ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.pioneerdistilleries.com ನಲ್ಲಿ ಲಭ್ಯವಿರುತ್ತದೆ.

ಬಿ) # – ಐಎನ್‌ಡಿ–ಎಎಸ್ ನಿ೦ಯಮಗಳು/ಎಎಸ್ ನಿ೦ಯಮಗಳಿಗೆ ಅನುಗುಣವಾಗಿ ಲಾಭ ಮತ್ತು ನಷ್ಟದ ಹೇಳಿಕೆ೦ಯಲ್ಲಿ ಅಸಾಧಾರಣ ಮತ್ತು ಅಥವಾ ಅಸಾಧಾರಣ ವಸ್ತುಗಳು ೦ಯಾವುದು ಅನ್ವ೦ಯವಾಗುತ್ತದೆ೦ಯೋ ಅದಕ್ಕೆ ಸರಿಹೊಂದಿಸಲಾಗಿದೆ.

ನಿರ್ದೇಶಕರ ಮಂಡಳಿಯ ನಿಮಿತ್ಯ ಮತ್ತು ಅವರ ಪರವಾಗಿ

ಸಹಿ/–
ಅಲೋಕೇಶ್ ಬಿಸ್ವಾಸ್
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 20, 2021

ಆಮೆಗತಿ ಕಾಮಗಾರಿ: ಸಂಚಾರ ದುಸ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಹೊಸಕೆರೆಹಳ್ಳಿ ವಾರ್ಡ್ ಸಂಖ್ಯೆ 161ರ ವ್ಯಾಪ್ತಿಯಲ್ಲಿ ಬರುವ ಗುರುದತ್ತ ಬಡಾವಣೆ ಹಾಗೂ ದತ್ತಾತ್ರೇಯ ಬಡಾವಣೆ ವ್ಯಾಪ್ತಿಯಲ್ಲಿ ಕಳೆದ ಏಳು ತಿಂಗಳಿನಿಂದ ಮಳೆನೀರುಗಾಲುವೆ ಮತ್ತು ದೊಡ್ಡ ಚರಂಡಿ ಕಾಮಗಾರಿ ಹಲವು ಸಮಸ್ಯೆಯನ್ನು ಸೃಷ್ಟಿಸುತ್ತಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಜೋರು ಮಳೆ ಸುರಿದಾಗ ನೀರು ಮನೆಗೆ ನುಗ್ಗುತ್ತಿತ್ತು. ಈ ಸಮಸ್ಯೆ ಪರಿಹಾರಕ್ಕಾಗಿ ಮಳೆನೀರುಗಾಲುವೆ ಮತ್ತು ದೊಡ್ಡಚರಂಡಿ ನಿರ್ಮಾಣ ಕಾರ್ಯವನ್ನು ಬಿಬಿಎಂಪಿಯಿಂದ ಕೈಗೆತ್ತಿಕೊಳ್ಳಲಾಗಿದೆ. ಆದರೆ, ಸುಮಾರು ಏಳು ತಿಂಗಳು ಕಳೆದರೂ ಕಾಮಗಾರಿ ಮುಗಿಯುತ್ತಿಲ್ಲ. ರಸ್ತೆಯಲ್ಲಿ ಓಡಾಡುವುದೇ ದುಸ್ತರವಾಗಿದೆ’ ಎಂದು ಗುರುದತ್ತ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಜೈಸಿಂಗ್ ಹೇಳಿದರು.



ಹೊಸಕೆರೆಹಳ್ಳಿ ವಾರ್ಡ್ ಸಂಖ್ಯೆ 161ರಲ್ಲಿನ ಗುರುದತ್ತ ಬಡಾವಣೆಯಲ್ಲಿನ ದತ್ತಾತ್ರೇಯ ದೇಗುಲದ ಮುಂದಿನ ಮುಖ್ಯರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿಯ ನೋಟ – ಪ್ರಜಾವಾಣಿ ಚಿತ್ರ ಅನೂಪ್ ರಾಘ ಟಿ.

‘ಚೆನ್ನಾಗಿಯೇ ಇದ್ದ ಮೋರಿ, ರಸ್ತೆಯೆಲ್ಲ ಕಿತ್ತು ಹಾಕಿದ್ದಾರೆ. ಕೈಗೆತ್ತಿಕೊಂಡಿರುವ ಕಾಮಗಾರಿಯನ್ನೂ ಮುಗಿಸುತ್ತಿಲ್ಲ. ದತ್ತಾತ್ರೇಯ ದೇವಸ್ಥಾನ ಮುಖ್ಯರಸ್ತೆಯಲ್ಲಿ ಈ ಕಾಮಗಾರಿ ನಡೆಯುತ್ತಿದೆ. ಇಟ್ಟಮಡು, ಗುರುದತ್ತ ಬಡಾವಣೆ, ಕೃಷ್ಣಪ್ಪ ಬಡಾವಣೆಗೆ ಇದೇ ರಸ್ತೆಯ ಮೂಲಕ ಹೋಗಬೇಕು. ಕಾಮಗಾರಿ ನಡೆಯುತ್ತಿರುವುದರಿಂದ ಸುಮಾರು 3ರಿಂದ 4 ಕಿ.ಮೀ. ಸುತ್ತಿ ಬಳಸಿ ಸಾಗಬೇಕಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಮಳೆ ನೀರು ಮನೆಯೊಳಗೆ ನುಗ್ಗದಂತೆ ತಡೆಯುವ ಉದ್ದೇಶದಿಂದ ನಡೆಯುತ್ತಿರುವ ಈ ಕಾಮಗಾರಿ ಸ್ವಾಗತಾರ್ಹವೇ. ಆದರೆ, ಅನಗತ್ಯ ವಿಳಂಬ ಮಾಡುತ್ತಿರುವುದರಿಂದ ಸ್ಥಳೀಯರಿಗೆ ಅನನುಕೂಲವಾಗುತ್ತಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು’ ಎಂದು ಸ್ಥಳೀಯರೊಬ್ಬರು ಒತ್ತಾಯಿಸಿದರು.

ಕೋವಿಡ್ ಕಾರಣದಿಂದ ವಿಳಂಬ: ‘ಕಾಮಗಾರಿ ಚುರುಕಿನಿಂದ ನಡೆಯುತ್ತಿದ್ದು ಸದ್ಯ, ಕ್ರೇಟಿಂಗ್ ಅಳವಡಿಸಲಾಗುತ್ತಿದೆ. ಕೋವಿಡ್ ಇದ್ದುದರಿಂದ ಕಾರ್ಮಿಕರು ಸಿಗದೆ ಕಾಮಗಾರಿ ವಿಳಂಬವಾಗಿದೆ’ ಎಂದು ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸತೀಶ್ ಹೇಳಿದರು.

‘ಅಂದಾಜು ₹3 ಕೋಟಿ ಅನುದಾನ ಒದಗಿಸಲಾಗಿದೆ. ಆದಷ್ಟು ಬೇಗ ಕಾಮಗಾರಿ ಮುಗಿಸಲು ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲಾಗುತ್ತಿದೆ’ ಎಂದು ತಿಳಿಸಿದರು.

‘ಕೋವಿಡ್ 2ನೇ ಅಲೆ: 50 ಲಕ್ಷ ಭಾರತೀಯರು ಮೃತಪಟ್ಟಿದ್ದಾರೆ’

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ತಪ್ಪು ನಿರ್ಧಾರಗಳಿಂದ ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಸುಮಾರು 50 ಲಕ್ಷ ಭಾರತೀಯರು ಮೃತಪಟ್ಟಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಬುಧವಾರ ಆರೋಪಿಸಿದ್ದಾರೆ.

ಸಾಂಕ್ರಾಮಿಕ ರೋಗ ಪ್ರಾರಂಭದಿಂದ 2021ರ ಜೂನ್‌ವರೆಗೆ ಮೂರು ವಿಭಿನ್ನ ದತ್ತಾಂಶ ಮೂಲಗಳಿಂದ ಹೆಚ್ಚುವರಿ ಮರಣ ಪ್ರಮಾಣವನ್ನು ಅಂದಾಜು ಮಾಡಿರುವ ಜಾಗತಿಕ ಅಭಿವೃದ್ಧಿ ಕೇಂದ್ರದ ಹೊಸ ಅಧ್ಯಯನವನ್ನು ರಾಹುಲ್ ಗಾಂಧಿ ತಮ್ಮ ಟ್ವಿಟ್ಟರ್‌ನಲ್ಲಿ ಹಂಚಿಕೊಂಡಿದ್ದಾರೆ. ‘ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಕೇಂದ್ರದ ತಪ್ಪು ನಿರ್ಧಾರಗಳಿಂದಾಗಿ ನಮ್ಮ ಸಹೋದರ, ಸಹೋದರಿಯರು, ತಂದೆ, ತಾಯಿಯರು ಸೇರಿದಂತೆ 50 ಲಕ್ಷ ಜನರನ್ನು ಕಳೆದುಕೊಂಡಿದ್ದೇವೆ’ ಎಂದು ಅವರು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಆದರೆ, ದೇಶದಲ್ಲಿ ಇಲ್ಲಿಯವರೆಗೆ ಸುಮಾರು 4.18 ಲಕ್ಷ ಜನರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂದು ಅಧಿಕೃತ ಅಂಕಿ ಅಂಶಗಳು ಹೇಳುತ್ತವೆ.





ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಬುಧವಾರ ಸುರಿದ ತುಂತುರು ಮಳೆಯಲ್ಲಿ ಕೊಡೆ ಹಿಡಿದು ಸಾಗಿದ ಜನರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

‘ಚನ್ನಕೇಶವ-ನೆನಪು ಮತ್ತು ನಮನ’:ಅಧ್ಯಕ್ಷತೆ–ಕೆ.ವೈ. ನಾರಾಯಣಸ್ವಾಮಿ, ನುಡಿನಮನ–ಶಶಿಧರ ಅಡಪ, ಅಚ್ಯುತ ಕುಮಾರ್, ಜೋಸೆಫ್, ದಾಕ್ಷಾಯಿಣಿ ಭಟ್, ಸಮೂಹ ಸುರೇಶ್, ಆಯೋಜನೆ–ರಂಗಚಂದಿರ ಟ್ರಸ್ಟ್, ಬೆಂಗಳೂರು ಆರ್ಟ್ ಫೌಂಡೇಷನ್, ಸ್ಥಳ–ಕನ್ನಡ ಭವನ, ಸಂಜೆ 5

ಉತ್ತರೋತ್ಸವ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ:ಅತಿಥಿಗಳು–ಎಂ.ಎನ್. ಸುರೇಶ, ವಿ.ವೆಂಕಟೇಶಮೂರ್ತಿ, ಬ್ರದರ್ ವಿಕ್ಟರ್ ರಾಜ್, ಅಧ್ಯಕ್ಷತೆ–ಟಿ.ಡಿ. ಕೆಂಪರಾಜು, ಸ್ಥಳ–ಸಂಪೂರ್ಣ ಮೌಂಟ್ ಫೋರ್ಟ್ ಕಾಲೇಜು, ಬೆಳಿಗ್ಗೆ 11





ವಿಧಾನಸೌಧಕ್ಕೆ ಮುತ್ತಿಗೆ: ಎಚ್ಚರಿಕೆ

ಯರಗಟ್ಟಿ (ಬೆಳಗಾವಿ ಜಿಲ್ಲೆ): ‘ಕೇಂದ್ರ ಮತ್ತು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಭೂ ಸ್ವಾಧೀನ ಹಾಗೂ ಕೃಷಿ ಕಾಯ್ದೆಗಳನ್ನು ಹಿಂಪಡೆಯದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದು ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಎಚ್ಚರಿಕೆ ನೀಡಿದರು.

ಪಟ್ಟಣದ ರತ್ನ ಸಂಗಮ ಸಭಾಭವನದಲ್ಲಿ ಬುಧವಾರ ನಡೆದ ರೈತ ಹುತಾತ್ಮರ ದಿನಾಚರಣೆ ಹಾಗೂ ರಾಜ್ಯ ರೈತ ಸಮಾವೇಶದಲ್ಲಿ ಮಾತನಾಡಿದ ಅವರು, ‘ರೈತರ ಹೆಸರಿನಲ್ಲಿ ಪ್ರಮಾಣವಚನ ಮಾಡುವ ಆಡಳಿತ ಪಕ್ಷಗಳು ರೈತರ ಮೇಲೆಯೇ ಗೂಂಡಾಗಿರಿ ಮಾಡುವುದನ್ನು ಸಹಿಸುವುದಿಲ್ಲ’ ಎಂದರು.

ರಾಜಭವನಕ್ಕೆ ಕಾಂಗ್ರೆಸ್ ಮುತ್ತಿಗೆ ಇಂದು

ಬೆಂಗಳೂರು: ‘ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಿರುವ ಆರೋಪ ಎದುರಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯದ ಕಾಂಗ್ರೆಸ್ ಶಾಸಕರು ಮತ್ತು ಸಂಸದರು ಗುರುವಾರ ಬೆಳಿಗ್ಗೆ ರಾಜಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದಾರೆ.

‘ಕೇಂದ್ರ ಸರ್ಕಾರವು ರಾಷ್ಟ್ರೀಯ ನಾಯಕರು, ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳು ಮತ್ತು ಕಾಂಗ್ರೆಸ್‌ನ ಹಿರಿಯ ನಾಯಕರ ದೂರವಾಣಿಗಳ ಮೇಲೆ ಕಣ್ಗಾವಲು ಇರಿಸಿ ಗೂಢಚರ್ಯೆ ನಡೆಸಿರುವುದು ಜಗಜ್ಜಾಹೀರಾಗಿದೆ. ಕೇಂದ್ರ ಸರ್ಕಾರ ಗೂಢಚರ್ಯೆ ನಡೆಸಿರುವುದನ್ನು ವಿರೋಧಿಸಿ ಗುರುವಾರ ರಾಜಭವನದ ಎದುರು ಪ್ರತಿಭಟನೆ ನಡೆಸಲಾಗುವುದು’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಈ. ತುಕಾರಾಂ ತಿಳಿಸಿದ್ದಾರೆ.

ಪಕ್ಷದ ಎಲ್ಲ ಶಾಸಕರು ಮತ್ತು ಸಂಸದರು ವಿಧಾನಸೌಧದಲ್ಲಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಚೇರಿಗೆ ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ಬರಬೇಕು ಎಂದು ಅವರು ಪತ್ರದ ಮೂಲಕ ಬುಧವಾರ ತುರ್ತು ಸಂದೇಶ ರವಾನಿಸಿದ್ದಾರೆ.

‘ಕೇಂದ್ರ ಸರ್ಕಾರದಿಂದ ಜನರ ಸ್ವಾತಂತ್ರ್ಯಹರಣ’

ಬೆಂಗಳೂರು: ‘ಪೆಗಾಸಸ್ ಕುತಂತ್ರಾಂಶವನ್ನು ಬಳಸಿಕೊಂಡು ಗೂಢಚರ್ಯೆ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದ ಜನರ ಸ್ವಾತಂತ್ರ್ಯಹರಣ ಮಾಡಿದೆ’ ಎಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆರೋಪಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ, ಸಿಬಿಐ ಮತ್ತಿತರ ತನಿಖಾ ಸಂಸ್ಥೆಗಳ ಮೂಲಕ ವಿರೋಧ ಪಕ್ಷದ ನಾಯಕರ ಮೇಲೆ ನಿಗಾ ಇಡುತ್ತಿದ್ದ ಕೇಂದ್ರ ಸರ್ಕಾರ, ನೇರವಾಗಿ ಅವರ ಮೊಬೈಲ್ ಫೋನ್‌ಗಳ ಒಳಗೆ ಪ್ರವೇಶಿಸಿದೆ. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಮೇಲೂ ಗೂಢಚರ್ಯೆ ನಡೆಸಲಾಗಿದೆ. ಇದರ ಹೊಣೆ ಹೊತ್ತು ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕು’ ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಜೆಡಿಎಸ್–ಸಮ್ಮಿಶ್ರ ಸರ್ಕಾರ ಪತನಕ್ಕೂ ಪೆಗಾಸಸ್ ತಂತ್ರಾಂಶ ಬಳಿ ಗೂಢಚರ್ಯೆ ನಡೆಸಿರುವುದು ಬಹಿರಂಗವಾಗಿದೆ. ಕೇಂದ್ರ ಸರ್ಕಾರ ಗೂಢಚರ್ಯೆ ನಡೆಸುತ್ತಿರುವುದನ್ನು ಬಿಜೆಪಿ ಸಂಸದ ಸುಬ್ರಮಣಿಯನ್ ಸ್ವಾಮಿ ಅವರೇ ಒಪ್ಪಿಕೊಂಡಿದ್ದಾರೆ. ಗೂಢಚರ್ಯೆಯಿಂದ ದೇಶದ ರಕ್ಷಣೆಗೆ ಸಂಬಂಧಿಸಿದ ಮಾಹಿತಿಗಳೂ ಸೋರಿಕೆಯಾಗಿರುವ ಸಾಧ್ಯತೆ ಇದೆ ಎಂದು ಹೇಳಿದರು.

ಮಾಜಿ ಸಚಿವ ಎಚ್.ಎಂ. ರೇವಣ್ಣ ಮಾತನಾಡಿ, ‘ಪೆಗಾಸಸ್ ಪ್ರಕರಣ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರ ತಕ್ಷಣವೇ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು’ ಎಂದು ಆಗ್ರಹಿಸಿದರು.

ಚಿತ್ರಾವಳಿ



ಯುವಬಲ ಜಾಗೃತಿ ಪರಿಷತ್ ವತಿಯಿಂದ ಆಟೊ ಚಾಲಕರಿಗೆ ದಿನಸಿ ಕಿಟ್‌ಗಳನ್ನು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ವಿತರಿಸಿದರು. ಯುವಬಲ ಜಾಗೃತಿ ಪರಿಷತ್ ಅಧ್ಯಕ್ಷೆ ಪ್ರಾಚಿ ಗೌಡ, ಕರ್ನಾಟಕ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ರೋಶನಿ ಹಾಗೂ ಇತರರು ಇದ್ದರು



ನಗರದ ಚುಂಚಘಟ್ಟ ಮುಖ್ಯರಸ್ತೆಯ ಪಕ್ಕ ಜನರು ಕಸ ಹಾಕುವುದನ್ನು ತಪ್ಪಿಸಲು ಪೌರಕಾರ್ಮಿಕರು ರಂಗೋಲಿ ಬಿಡಿಸಿದರು

‘ಪ್ರಶಸ್ತಿ ನೀಡುವುದು ಗಡಿ ಅಭಿವೃದ್ಧಿ ಪ್ರಾಧಿಕಾರದ ಕೆಲಸವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಡಿ ನಾಡಿನ ಹೋರಾಟಗಾರರಾದ ಕಯ್ಯಾರ ಕಿಞ್ಞಣ್ಣ ರೈ ಹಾಗೂ ಜಯದೇವಿತಾಯಿ ಲಿಗಾಡೆ ಅವರ ಹೆಸರಿನಲ್ಲಿ ರಾಜ್ಯ ಪ್ರಶಸ್ತಿ ನೀಡಲು ಮುಂದಾಗಿರುವ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ನಡೆಯನ್ನು ಕನ್ನಡ ಗೆಳೆಯರ ಬಳಗ ವಿರೋಧಿಸಿದ್ದು, ‘ಪ್ರಶಸ್ತಿ ನೀಡುವುದು ಪ್ರಾಧಿಕಾರದ ಕೆಲಸವಲ್ಲ’ ಎಂದು ಹೇಳಿದೆ.

ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಗಡಿ ನಾಡಿನ ಹೋರಾಟಗಾರರ ಹೆಸರಿನಲ್ಲಿ ಪ್ರಶಸ್ತಿ ನೀಡಲು ತೀರ್ಮಾನ ಕೈಗೊಳ್ಳಲಾಗಿತ್ತು.

‘ಕಯ್ಯಾರ ಕಿಞ್ಞಣ್ಣ ರೈ ಹಾಗೂ ಜಯದೇವಿತಾಯಿ ಲಿಗಾಡೆ ಅವರು ಕನ್ನಡಿಗರಿಗೆ ಆದರಣೀಯರೇ ಆಗಿದ್ದಾರೆ. ಆದರೆ, ಪ್ರಶಸ್ತಿ ನೀಡುವುದು ಪ್ರಾಧಿಕಾರದ ಕೆಲಸವಲ್ಲ. ಈ ಬಗ್ಗೆ ‘ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ-2010’ರಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ಪ್ರಶಸ್ತಿ ನೀಡುವುದನ್ನು ಕೈಬಿಟ್ಟು, ಗಡಿಭಾಗದ ಕನ್ನಡಿಗರನ್ನು ಕಾಡುತ್ತಿರುವ ಅಭದ್ರತೆ ಹೋಗಲಾಡಿಸಲು ನೆರೆ ರಾಜ್ಯದಲ್ಲಿನ ಕನ್ನಡ-ಕನ್ನಡಿಗರ ಸ್ಥಿತಿಗತಿಯ ಬಗ್ಗೆ ಅಧ್ಯಯನ ನಡೆಸಬೇಕು. ಅಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ಕ್ರಿಯಾ ಯೋಜನೆ ರೂಪಿಸಬೇಕು’ ಎಂದು ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ ಆಗ್ರಹಿಸಿದ್ದಾರೆ.

ಬಿಬಿಎಂಪಿ ಪಿ.ಯು ಕಾಲೇಜು: 82 ವಿದ್ಯಾರ್ಥಿಗಳಿಗೆ ಅತ್ಯುನ್ನತ ಶ್ರೇಣಿ

ನಿರಂತರ ಕಳಪೆ ಸಾಧನೆ ಉಪನ್ಯಾಸಕರಿಗೆ ಕೌನ್ಸೆಲಿಂಗ್

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿ ಆಡಳಿತಕ್ಕೊಳಪಟ್ಟ ಪದವಿಪೂರ್ವ ಕಾಲೇಜುಗಳಲ್ಲಿ 2020–21ನೇ ಸಾಲಿನಲ್ಲಿ ವ್ಯಾಸಂಗ ಮಾಡಿದವರ ಪೈಕಿ 82 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 973 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲೂ ಉತ್ತೀರ್ಣರಾಗಿದ್ದಾರೆ. ಆದರೆ, ಕೆಲವು ಕಾಲೇಜುಗಳು ಫಲಿತಾಂಶದ ಗುಣಮಟ್ಟ ಬಿಬಿಎಂಪಿಗೆ ತೃಪ್ತಿ ತಂದಿಲ್ಲ.

ಖಾಸಗಿ ಕಾಲೇಜುಗಳಿಗೆ ಪೈಪೋಟಿ ನೀಡುವಂತಹ ಫಲಿತಾಂಶದ ನಿರೀಕ್ಷೆಯಲ್ಲಿರುವ ಬಿಬಿಎಂಪಿ, ನಿರಂತರವಾಗಿ ತೃಪ್ತಿಕರ ಸಾಧನೆ ತೋರಿಸದ ಕಾಲೇಜುಗಳ ಉಪನ್ಯಾಸಕರಿಗೆ ವಿಶೇಷ ತರಬೇತಿ ಏರ್ಪಡಿಸಲು ಮುಂದಾಗಿದೆ.

‘ಕ್ಲೀವ್‌ಲ್ಯಾಂಡ್ ಕಾಲೇಜು ಪ್ರತಿವರ್ಷವೂ ಉತ್ತಮ ಸಾಧನೆ ತೋರಿಸುತ್ತದೆ. ಅದೇ ರೀತಿ ಕೆಲವು ಕಾಲೇಜುಗಳು ನಿರಂತರವಾಗಿ ಕಳಪೆ ನಿರ್ವಹಣೆ ತೋರಿಸುತ್ತಿವೆ. ಈ ವರ್ಷವೂ ಒಂದೆರಡು ಕಾಲೇಜುಗಳಲ್ಲಿ ಒಬ್ಬ ವಿದ್ಯಾರ್ಥಿಯೂ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿಲ್ಲ. ಅನೇಕ ಕಾಲೇಜುಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರ ಪ್ರಮಾಣವೂ ತೀರಾ ಕಡಿಮೆ ಇದೆ. ಕೆಲವು ಕಾಲೇಜುಗಳಲ್ಲಿ ಇಂತಹ ಫಲಿತಾಂಶ ಪ್ರತಿ ವರ್ಷವೂ ಮರುಕಳಿಸುತ್ತಿದೆ ಎಂದಾದರೆ ಅಲ್ಲಿನ ಪ್ರಾಂಶುಪಾಲರು ಹಾಗೂ ಉಪನ್ಯಾಸಕರೇ ಇದಕ್ಕೆ ಹೊಣೆ’ ಎನ್ನುತ್ತಾರೆ ಬಿಬಿಎಂಪಿ ವಿಶೇಷ ಆಯುಕ್ತ (ಶಿಕ್ಷಣ) ರೆಡ್ಡಿ ಶಂಕರ ಬಾಬು.

‘ಈ ಬಾರಿ ಶೇಕಡಾ ನೂರು ಫಲಿತಾಂಶ ಬಂದಿದೆ. ಎಲ್ಲವೂ ಚೆನ್ನಾಗಿದೆ ಎಂದು ಪರಿಭಾವಿಸಿದರೆ ನಮ್ಮ ಪಿ.ಯು. ಕಾಲೇಜುಗಳ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಆಸ್ಪದವೇ ಇರುವುದಿಲ್ಲ. ಕೆಲವು ಕಾಲೇಜುಗಳಲ್ಲಿ ನಿರಂತರವಾಗಿ ಕಳಪೆ ಫಲಿತಾಂಶ ಬರುವುದಕ್ಕೆ ಏನು ಕಾರಣ ಎಂದು ನಾವು ಪತ್ತೆ ಹಚ್ಚುತ್ತೇವೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಿದ್ದೇವೆ. ಏಕೆಂದರೆ ಇದು ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ’ ಎಂದು ಅವರು ತಿಳಿಸಿದರು.

‘ನಿರಂತರ ಕಳಪೆ ಸಾಧನೆಗೆ ಖಂಡಿತಾ ವಿದ್ಯಾರ್ಥಿಗಳು ಕಾರಣರಲ್ಲ. ಏಕೆಂದರೆ ವಿದ್ಯಾರ್ಥಿಗಳ ತಂಡ ಪ್ರತಿವರ್ಷವೂ ಬದಲಾಗುತ್ತಿರುತ್ತದೆ. ಅಂತಹ ಕಾಲೇಜುಗಳಲ್ಲಿ ಕಲಿಕಾ ವಿಧಾನದಲ್ಲೇ ಸುಧಾರಣೆ ತರಬೇಕಾದ ಅಗತ್ಯವಿದೆ. ಅಂತಹ ಕಾಲೇಜುಗಳ ಉಪನ್ಯಾಸಕರಿಗೆ ಕೌನ್ಸೆಲಿಂಗ್ ನಡೆಸುವ ಅಗತ್ಯವಿದೆ. ಸುಧಾರಣೆಯ ಅಗತ್ಯ ಇರುವವರಿಗೆ ಪರಿಣಿತರಿಂದ ವಿಶೇಷ ತರಬೇತಿಯನ್ನೂ ಒದಗಿಸಲಿದ್ದೇವೆ’ ಎಂದರು.

‘ಬಿಬಿಎಂಪಿಯ ಯಾವುದೇ ಪದವಿ ಪೂರ್ವ ಕಾಲೇಜುಗಳಲ್ಲೂ ಉಪನ್ಯಾಸಕರ ಕೊರತೆ ಇಲ್ಲ. ಯಾವುದಾದರೂ ವಿಷಯದ ಉಪನ್ಯಾಸಕರು ಲಭ್ಯ ಇಲ್ಲದಿದ್ದರೆ, ಪ್ರಾಂಶುಪಾಲರು ಕೋರಿಕೆ ಸಲ್ಲಿಸಿದ 48 ಗಂಟೆಗಳ ಒಳಗೆ ಅತಿಥಿ ಉಪನ್ಯಾಸಕರನ್ನು ನೇಮಿಸಲು ಕ್ರಮಕೈಗೊಳ್ಳುತ್ತೇವೆ’ ಎಂದು ತಿಳಿಸಿದರು.

ಕ್ಲೀವ್ ಲ್ಯಾಂಡ್: ಶೇ 50ರಷ್ಟು ವಿದ್ಯಾರ್ಥಿಗಳಿಗೆ ಪ್ರಥಮ ಶ್ರೇಣಿ

ಬಿಬಿಎಂಪಿಯ ಪಿ.ಯು. ಕಾಲೇಜುಗಳಲ್ಲಿ ಕ್ಲೀವ್‌ಲ್ಯಾಂಡ್ ಕಾಲೇಜು ಈ ಬಾರಿಯೂ ದ್ವಿತೀಯ ಪಿ.ಯು. ಫಲಿತಾಂಶದಲ್ಲಿ ಮುಂಚೂಣಿಯಲ್ಲಿದೆ. ಈ ಕಾಲೇಜಿನ 459 ವಿದ್ಯಾರ್ಥಿಗಳಲ್ಲಿ 20 ಮಂದಿ ಅತ್ಯುನ್ನತ ದರ್ಜೆಯಲ್ಲೂ, 260 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲೂ ಉತ್ತೀರ್ಣರಾಗಿದ್ದಾರೆ.

ಶ್ರೀರಾಂಪುರದ ಕಾಲೇಜಿನಲ್ಲಿ 223 ವಿದ್ಯಾರ್ಥಿಗಳಲ್ಲಿ 15 ಮಂದಿ ಅತ್ಯುನ್ನತ ದರ್ಜೆಯಲ್ಲಿ ಹಾಗೂ 66 ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಟಸ್ಕರ್ ಟೌನ್ ಹಾಗೂ ಆಸ್ಟಿನ್ ಟೌನ್ ಕಾಲೇಜುಗಳಲ್ಲಿ ಒಬ್ಬ ವಿದ್ಯಾರ್ಥಿಯೂ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿಲ್ಲ.

ಬಿಬಿಎಂಪಿ ಪಿ.ಯು ಕಾಲೇಜುಗಳಲ್ಲಿ ಸೌಕರ್ಯಗಳಿಗೆ ಕೊರತೆ ಇಲ್ಲ. ಖಾಸಗಿ ಕಾಲೇಜುಗಳಿಗೆ ಪೈಪೋಟಿ ನೀಡುವ ಮಟ್ಟದಲ್ಲಿ ಫಲಿತಾಂಶ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ

ರೆಡ್ಡಿ ಶಂಕರ ಬಾಬು, ಬಿಬಿಎಂಪಿ ವಿಶೇಷ ಆಯುಕ್ತ (ಶಿಕ್ಷಣ)

ಅಂಕಿ–ಅಂಶ

15 ಬಿಬಿಎಂಪಿ ಆಡಳಿತಕ್ಕೆ ಒಳಪಟ್ಟ ಪಿ.ಯು. ಕಾಲೇಜುಗಳು

2,058 ಬಿಬಿಎಂಪಿ ಕಾಲೇಜುಗಳಲ್ಲಿ ದ್ವಿತೀಯ ಪಿ.ಯು. ವಿದ್ಯಾರ್ಥಿಗಳ ಸಂಖ್ಯೆ

973 ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು

861 ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು

ಇರುವಕ್ಕಿ: 24ಕ್ಕೆ ನೂತನ ಕೃಷಿ ವಿಶ್ವವಿದ್ಯಾಲಯ ಲೋಕಾರ್ಪಣೆ

ರೈತರ ಬದುಕು ಹಸನಾಗಿಸುವ ಭರವಸೆ

• ಮಲ್ಲಿಕಾರ್ಜುನ ಆನಂದಪುರ

ಆನಂದಪುರ: ಮಲೆನಾಡು ರೈತರು ಬಹುದಿನಗಳಿಂದ ಕಾಯುತ್ತಿರುವ, ಇರುವಕ್ಕಿಯಲ್ಲಿ ಸ್ಥಾಪನೆಗೊಂಡ ನೂತನ ಕೃಷಿ ವಿಶ್ವವಿದ್ಯಾಲಯ ಜುಲೈ 24ರಂದು ಲೋಕಾರ್ಪಣೆಗೊಳ್ಳಲಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ.

777.7 ಎಕರೆ ಪ್ರದೇಶದಲ್ಲಿ ₹ 155 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ವಿಶ್ವವಿದ್ಯಾಲಯ ಕರಾವಳಿ ಹಾಗೂ ಮಲೆನಾಡು ಭಾಗದ ರೈತರಿಗೆ ಹೆಚ್ಚಿನ ಆದ್ಯತೆ ಸಿಗುವ ಭರವಸೆ ಮೂಡಿಸಿದೆ.

ಈಗ ಇರುವ ವಿಶ್ವವಿದ್ಯಾಲಯಗಳು ಕೇವಲ ಒಂದೆರಡು ವಿಭಾಗಕ್ಕೆ ಸೀಮಿತವಾಗಿವೆ. ಇರುವಕ್ಕಿ ವಿಶ್ವವಿದ್ಯಾಲಯದಲ್ಲಿ ಕೃಷಿ, ಅರಣ್ಯ, ತೋಟಗಾರಿಕೆ ಘಟಕಗಳು ಇರುವುದರಿಂದ ರೈತರು ಯಾವುದೇ ಬೆಳೆ ಬೆಳೆದರೂ ನಿಖರವಾದ ಪೂರ್ಣ ಮಾಹಿತಿ ಹಾಗೂ ತರಬೇತಿ ಪಡೆಯಬಹುದು.

ಏಳು ಜಿಲ್ಲೆಗಳನ್ನು ಗುರಿಯಾಗಿಸಿಕೊಂಡು ಈ ವಿಶ್ವವಿದ್ಯಾಲಯ ಪ್ರಾರಂಭಗೊಳ್ಳುತ್ತಿದೆ. ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಕರಾವಳಿಯ ಮಂಗಳೂರು, ದಕ್ಷಿಣ ಕನ್ನಡ ಹಾಗೂ ಬಯಲುಸೀಮೆ ಪ್ರದೇಶಗಳಾದ ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳ ಬೆಳೆ ಹಾಗೂ ಹವಾಮಾನವನ್ನು ಅಧ್ಯಯನ ಮಾಡಿ ನಿಖರ ಮಾಹಿತಿಯನ್ನು ತಿಳಿದು ಪ್ರಚುರಪಡಿಸುವ ಕಾರ್ಯವನ್ನು ವಿಶ್ವವಿದ್ಯಾಲಯ ನಿರ್ವಹಿಸಲಿದೆ.

ರೈತರಿಗೆ ಗುಣಮಟ್ಟದ ಸಸಿಗಳ ವಿತರಣೆ: ರೈತರಿಗೆ ಈಗಾಗಲೇ ಉತ್ತಮ ಗುಣಮಟ್ಟದ ಹಾಗೂ ಸಂಸ್ಕರಿಸಿದ ಅಡಿಕೆ, ತೆಂಗು, ಗೇರು, ಕಾಳುಮೆಣಸು, ಆಲಂಕಾರಕ ಸಸಿಗಳು, ಔಷಧೀಯ ಸಸ್ಯಗಳು ಹಾಗೂ ಏಲಕ್ಕಿ ಸಸಿಗಳನ್ನು ಅತ್ಯಂತ ಕಡಿಮೆ ದರದಲ್ಲಿ 25 ಸಾವಿರಕ್ಕೂ ಅಧಿಕ ಗಿಡಗಳನ್ನು ವಿತರಣೆ ಮಾಡಲಾಗಿದೆ.

ವಿಶೇಷ ಜಾತಿ ಮರಗಳ ಸಂರಕ್ಷಣೆ, ಸಂಶೋಧನೆ: ಭಾರತೀಯ ಮರ ವಿಜ್ಞಾನ ಸಂಶೋಧನಾ ಸಂಸ್ಥೆಯಿಂದ 3 ಎಕರೆ ಪ್ರದೇಶದಲ್ಲಿ 14 ಬಗೆಯ ಅಗರ್‌ವುಡ್ ಪ್ರಬೇಧಗಳನ್ನು ಅಸ್ಸಾಂ, ತ್ರಿಪುರ, ಅರುಣಾಚಲ ಪ್ರದೇಶಗಳಿಂದ ತಂದು ಸಂರಕ್ಷಣೆ ಹಾಗೂ ಸಂಶೋಧನೆ ಮಾಡಲಾಗುತ್ತಿದೆ. ಜತೆಗೆ 2 ಎಕರೆಯಲ್ಲಿ 9 ವಿವಿಧ ಬಿದಿರು ಪ್ರಬೇಧಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕೊಡಗಿನ ಕಿತ್ತಳೆಯನ್ನು ಈಗಾಗಲೇ ನೆಡಲಾಗಿದ್ದು, ಉತ್ತಮ ಫಸಲನ್ನು ನಿರೀಕ್ಷೆ ಮಾಡಲಾಗುತ್ತಿದೆ.

ಕಿತ್ತಳೆ, ಮ್ಯಾಂಗೋಸ್ಟನ್, ಬಟರ್‌ಫ್ರೂಟ್, ಡ್ರ್ಯಾಗನ್ ಫ್ರೂಟ್, ರಾಮ್ ಬೊಟಾನ್ ಇನ್ನಿತರ ಮರಗಳನ್ನು ಇಲ್ಲಿ ಬೆಳೆಸಲು ಸಂಶೋಧನೆ ಕೈಗೊಳ್ಳಲಾಗುತ್ತಿದೆ. ಔಷಧೀಯ ಸಸ್ಯಗಳನ್ನು ಬೆಳೆಸಲಾಗುತ್ತಿದೆ. ಈ ಭಾಗದ ಬೆಳೆಗಳ ಕೀಟ ಹಾಗೂ ರೋಗಗಳ ಸಂಶೋಧನೆಗೆ ಘಟಕ ಪ್ರಾರಂಭ ಮಾಡುತ್ತಿರುವುದು ಸಂತಸದ ವಿಷಯವಾಗಿದೆ.

ಅವನತಿ ಹೊಂದುತ್ತಿರುವ ಮರಗಳ ಸಂರಕ್ಷಣೆ: ಮಲೆನಾಡಿನ ಹಾಗೂ ಪಶ್ಚಿಮ ಘಟ್ಟಗಳ ಅವನತಿ ಹೊಂದುತ್ತಿರುವ 20 ವಿವಿಧ ತಳಿಯ ಅಪರೂಪದ ಗಿಡಗಳ ಸಂರಕ್ಷಣೆಗೆ ಒಂದು ಎಕರೆ ಮೀಸಲಿಡಲಾಗಿದೆ. ಹೆಬ್ಬೇವಿನ ವಿವಿಧ 10 ಪ್ರಬೇಧಗಳನ್ನು ಕೊಯಮತ್ತೂರಿನಿಂದ ತಂದು ಸಂರಕ್ಷಣೆ ಮಾಡಲಾಗುತ್ತಿದೆ. ಅಲ್ಲದೇ ಗೋಡಂಬಿ ಹಾಗೂ ನಿಂಬೆ ಗಿಡಗಳನ್ನು ಸಂಶೋಧನೆ ಮಾಡಿ ನೂರಾರು ಗಿಡಗಳನ್ನು ನಾಟಿ ಮಾಡಲಾಗಿದೆ. ನೆರೆಹಾವಳಿ ಸಂದರ್ಭದಲ್ಲೂ ತೊಂದರೆಯಾಗದ ಹಾಗೆ ಕುಚಲಕ್ಕಿ (ರೆಡ್ ರೈಸ್) ಭತ್ತದ ಬೆಳೆಯ ಸಂಶೋಧನೆಗೆ ಒತ್ತು ನೀಡಲಾಗಿದೆ. ನಶಿಸುವ ಹಂತದಲ್ಲಿರುವ ಅಪ್ಪೆಮಿಡಿ ಸಂರಕ್ಷಣೆ ಹಾಗೂ ಸಂಶೋಧನೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಈಗಾಗಲೇ 117 ಜಾತಿಯ ಅಪ್ಪೆಮಿಡಿ ಸಸಿಗಳನ್ನು ಸಂರಕ್ಷಣೆ ಮಾಡಲಾಗಿದೆ.



ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಾಣದವಾದ ಆಡಳಿತ ಭವನ

ಹಲವು ಕಾಮಾಗಾರಿ ಬಾಕಿ ನಡುವೆ ವಿಶ್ವವಿದ್ಯಾಲಯ ಉದ್ಘಾಟನೆ

‘ಮೊದಲ ಹಂತವಾಗಿ ಆಡಳಿತ ಭವನ, 4 ಶೈಕ್ಷಣಿಕ ಘಟಕಗಳು, 2 ವಿದ್ಯಾರ್ಥಿ ನಿಲಯ ಹಾಗೂ ಒಂದು ಗ್ರಂಥಾಲಯದ ಕಟ್ಟಡದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಆದರೆ, ತರಗತಿಗಳು ಆರಂಭವಾಗಬೇಕಾದರೆ ಪೀಠೋಪಕರಣ ವ್ಯವಸ್ಥೆ, ಕ್ಯಾಂಟಿನ್, ಸಭಾಭವನ, ಆಟದ ಮೈದಾನ, ಕ್ಲಿನಿಕ್, ಹೊರರಾಜ್ಯ ಹಾಗೂ ಹೊರದೇಶಗಳಿಂದ ಬರುವ ವಿಜ್ಞಾನಿಗಳಿಗೆ ವಸತಿ ಗೃಹ ವ್ಯವಸ್ಥೆ ಆಗಬೇಕಾಗಿದೆ. 777 ಎಕರೆಯ ಸುತ್ತ ಪೆನ್ಸಿಂಗ್ ವ್ಯವಸ್ಥೆ ಆಗಬೇಕಾಗಿದೆ. ಇವುಗಳು ಪೂರ್ಣವಾಗಬೇಕಾದರೆ ಇನ್ನೂ ₹ 100 ಕೋಟಿ ಹಣ ಬೇಕಾಗುತ್ತದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ.ನಾಯ್ಕ್ ಹೇಳಿದರು.

ನವ ಉದ್ಯಮ ಸ್ಥಾಪನೆಗೆ ತರಬೇತಿ

ಎರಡು ವರ್ಷಗಳಿಂದ ಕೊರೊನಾ ಕಾರಣ ಸಾಗರ ಹಾಗೂ ವಿವಿಧ ಭಾಗಗಳಲ್ಲಿ ಅನಾನಸ್ ಬೆಳೆದ ರೈತರು ಉತ್ತಮ ಮಾರುಕಟ್ಟೆ ಸಿಗದೆ ಕಂಗಾಲಾಗಿದ್ದಾರೆ. ಕೆಲವರು ಕೇವಲ ಕೆ.ಜಿ.ಗೆ ₹ 2ರಂತೆ ದೆಹಲಿ ಹಾಗೂ ವಿವಿಧ ಕಡೆ ಮಾರಾಟ ಮಾಡಿದ್ದಾರೆ. ಅದನ್ನು ತಪ್ಪಿಸುವ ಉದ್ದೇಶದಿಂದ ಉತ್ಸಾಹಿ ಯುವಕರಿಗೆ ಅನಾನಸ್ ಪಾನೀಯದ ನವ ಉದ್ಯಮ ಸ್ಥಾಪನೆ ಮಾಡಲು ತರಬೇತಿ ನೀಡಲಾಗುವುದು ಎಂದು ಕುಲಪತಿ ಮಾಹಿತಿ ನೀಡಿದರು.

ಪದವಿ ಕೋರ್ಸ್‌ಗಳಿಗೆ ಹೆಚ್ಚಿದ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶ ಪ್ರಕಟವಾಗುತ್ತಿದ್ದಂತೆ, ರಾಜ್ಯದ ಕಾಲೇಜುಗಳು ವಿವಿಧ ಹೊಸ ಪದವಿ ಕೋರ್ಸ್‌ಗಳನ್ನು ಆರಂಭಿಸಿದ್ದು, ಬೇಡಿಕೆಯೂ ಹೆಚ್ಚಾಗಿದೆ.

ಈ ಬಾರಿ ದ್ವಿತೀಯ ಪಿಯುಸಿಯ ಎಲ್ಲ ವಿದ್ಯಾರ್ಥಿಗಳನ್ನೂ ಉತ್ತೀರ್ಣಗೊಳಿಸಿರುವುದರಿಂದ ಪದವಿ ಕಾಲೇಜುಗಳಲ್ಲಿ ಪ್ರವೇಶ ಪ್ರಕ್ರಿಯೆ ಚುರುಕಿನಿಂದ ನಡೆಯುತ್ತಿದೆ. ಕಾಲೇಜುಗಳಿಗೆ ಕರೆ ಮಾಡುತ್ತಿರುವ ವಿದ್ಯಾರ್ಥಿಗಳು ಮತ್ತು ಪೋಷಕರು ವಿವಿಧ ಕೋರ್ಸ್‌ಗಳ ಕುರಿತು, ಅರ್ಜಿ ಶುಲ್ಕ, ಪ್ರವೇಶ ಶುಲ್ಕ ಸೇರಿದಂತೆ ಹಲವು ಮಾಹಿತಿ ಕೇಳುತ್ತಿದ್ದಾರೆ.

ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಆಧಾರಿತ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿದ್ದು ಬೆಂಗಳೂರು, ಮೈಸೂರು ಮತ್ತು ಮಂಗಳೂರಿನ ಹಲವು ಕಾಲೇಜುಗಳು ಅರ್ಜಿ ಶುಲ್ಕವನ್ನು ಏರಿಕೆ ಮಾಡಿವೆ.

ಅರ್ಹತೆಯ ಅಂಕ ನಿಗದಿಯೇ ಸವಾಲು:

ರಾಜ್ಯದಲ್ಲಿ 2,239 ವಿದ್ಯಾರ್ಥಿಗಳು 600ಕ್ಕೆ 600 ಅಂಕಗಳನ್ನು ಗಳಿಸಿದ್ದಾರೆ. ವಿದ್ಯಾರ್ಥಿಗಳ ಪ್ರವೇಶಕ್ಕೆ ಅರ್ಹತಾ ಅಂಕ (ಕಟ್ ಆಫ್ ಮಾರ್ಕ್ಸ್) ನಿಗದಿ ಪಡಿಸುವುದೇ ದೊಡ್ಡ ಸವಾಲಾಗಿದೆ ಎಂದು ಖಾಸಗಿ ಕಾಲೇಜಿನ ಪ್ರಾಚಾರ್ಯರೊಬ್ಬರು ಹೇಳಿದರು.

ರಾಜ್ಯದಲ್ಲಿ 430 ಸರ್ಕಾರ ಪದವಿ ಕಾಲೇಜುಗಳು, 375 ಖಾಸಗಿ ಪದವಿ ಕಾಲೇಜುಗಳು ಇವೆ. ಕಳೆದ ವರ್ಷ ಕಾಲೇಜು ಶಿಕ್ಷಣ ಇಲಾಖೆಯು ಅರ್ಜಿ ಶುಲ್ಕ ₹21 ಎಂದು ನಿಗದಿ ಪಡಿಸಿತ್ತು. ಈ ವರ್ಷ ಬಹುತೇಕ ಕಾಲೇಜುಗಳು ₹50ರಿಂದ ₹100ರವರೆಗೆ ಅರ್ಜಿ ಶುಲ್ಕವನ್ನು ತೆಗೆದುಕೊಳ್ಳುತ್ತಿವೆ.

ಮೊದಲ ಬಾರಿಗೆ ವರ್ಚುವಲ್ ರೂಪದಲ್ಲಿ ಸಮಾವೇಶ

ನಾವಿಕ ವಿಶ್ವಕನ್ನಡ ಸಮ್ಮೇಳನ ಆ.27ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುತ್ತಿದ್ದ ನಾವಿಕ ವಿಶ್ವ ಕನ್ನಡ ಸಮಾವೇಶ ಇದೇ ಮೊದಲ ಬಾರಿಗೆ ವರ್ಚುವಲ್ ರೂಪದಲ್ಲಿ ನಡೆಯಲಿದೆ. ಇದು 6ನೇ ಸಮಾವೇಶವಾಗಿದ್ದು ಆ.27ರಿಂದ 29ರವರೆಗೆ ನಡೆಯಲಿದೆ.



ವಲ್ಲೀಶ ಶಾಸ್ತ್ರಿ

‘ಕೋವಿಡ್ ಕಾರಣದಿಂದ ಈ ಬಾರಿ ಆನ್‌ಲೈನ್‌ನಲ್ಲಿಯೇ ಸಮಾವೇಶ ನಡೆಯಲಿದೆ. ವಿಶ್ವದ 80 ಕನ್ನಡ ಸಂಘಗಳು ಭಾಗವಹಿಸುತ್ತಿದ್ದು, 175ಕ್ಕೂ ಹೆಚ್ಚು ಕಲಾವಿದರು–ತಂತ್ರಜ್ಞರು ಪಾಲ್ಗೊಳ್ಳಲಿದ್ದಾರೆ’ ಎಂದು ಅಮೆರಿಕದ ನಾವಿಕ ಸಂಸ್ಥೆಯ ಅಧ್ಯಕ್ಷ ವಲ್ಲೀಶ ಶಾಸ್ತ್ರಿ ‘ಪ್ರಜಾವಾಣಿ’ಗೆ ತಿಳಿಸಿದರು.



‘ವಿಶ್ವದ ಬೇರೆ ಬೇರೆ ಕಡೆ ಇರುವ ಕನ್ನಡಿಗರು ಹಾಗೂ ಕರ್ನಾಟಕದಲ್ಲಿರುವ ಕಲಾವಿದರಿಗೆ ತಮ್ಮ ಕಾರ್ಯಕ್ರಮವನ್ನು ಚಿತ್ರೀಕರಿಸಿ ವಿಡಿಯೊ ಕಳುಹಿಸಲು ಕೋರಲಾಗಿದೆ. ಸಂಸ್ಥೆಯ ವೆಬ್‌ಸೈಟ್‌ನಲ್ಲಿ ತೆರೆಯಲಾದ ಐದು ವಾಹಿನಿಗಳ ಮೂಲಕ ಮೂರು ದಿನಗಳಲ್ಲಿ ಸುಮಾರು 120 ತಾಸುಗಳ ಕಾರ್ಯಕ್ರಮಗಳು ಪ್ರಸಾರವಾಗಲಿವೆ’ ಎಂದು ಅವರು ಹೇಳಿದರು.

‘ಕಲಾವಿದರಿಗೆ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಸಮಾವೇಶ ಹಮ್ಮಿಕೊಳ್ಳಲಾಗಿದೆ. ನೇರವಾಗಿ ನೆರವು ನೀಡಿದರೆ ಕಲಾವಿದರು ಮುಜುಗರ ಪಟ್ಟುಕೊಳ್ಳುತ್ತಾರೆ. ಅದಕ್ಕಾಗಿ, ಅವರ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸುವುದರ ಮೂಲಕ, ಅವರ ಕಲೆಯನ್ನು ಗೌರವಿಸಿ ನೆರವು ನೀಡಲು ನಿರ್ಧರಿಸಲಾಗಿದೆ’ ಎಂದೂ ಅವರು ಹೇಳಿದರು.

‘ನಾಟಕ, ನೃತ್ಯ, ಸಂಗೀತ, ಕನ್ನಡ ಕಲಿಕೆ ಮತ್ತು ವಾಣಿಜ್ಯ–ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವಾಹಿನಿಗಳನ್ನು ರೂಪಿಸಲಾಗಿದೆ. 3ಡಿ ತಂತ್ರಜ್ಞಾನವನ್ನು ಬಳಸಿಕೊಂಡು ಈ ಕಾರ್ಯಕ್ರಮಗಳು ಪ್ರಸಾರವಾಗಲಿದ್ದು, ನೋಡುಗರಿಗೆ ವಿಶಿಷ್ಟ ಅನುಭವ ನೀಡಲಿವೆ’ ಎಂದು ಮಾಹಿತಿ ನೀಡಿದರು.

‘ಕಾರ್ಯಕ್ರಮ ನೋಂದಣಿಗೆ ವಿದೇಶಿ ಕುಟುಂಬವೊಂದಕ್ಕೆ 25 ಅಮೆರಿಕನ್ ಡಾಲರ್ (₹2,000) ಶುಲ್ಕ ನಿಗದಿ ಮಾಡಲಾಗಿದೆ. ಭಾರತೀಯರು ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ನೋಂದಣಿ ಶುಲ್ಕದಿಂದ ಸಂಗ್ರಹವಾದ ಮತ್ತು ಪ್ರಾಯೋಜಕತ್ವದಿಂದ ಬಂದ ಹಣವನ್ನು ಕಲಾವಿದರಿಗೆ ಹಾಗೂ ‘‘ಕರುಣಾ ಅಮೆರಿಕ’’ ಸಂಸ್ಥೆಗೆ ನೀಡಲಾಗುತ್ತದೆ. ಬಿಳಿಗಿರಿ ರಂಗನ ಬೆಟ್ಟದ ಸುತ್ತ–ಮುತ್ತ ವಾಸಿಸುತ್ತಿರುವ ಸೋಲಿಗ ಸಮುದಾಯದವರಿಗೆ ಕೋವಿಡ್ ಸಂದರ್ಭದಲ್ಲಿ ವೈದ್ಯಕೀಯ ಸೇವೆ ಒದಗಿಸುವ ಕೆಲಸವನ್ನು ಕರುಣಾ ಅಮೆರಿಕ ಮಾಡಿದೆ’ ಎಂದು ಹೇಳಿದರು.

www.nvks21.com ವೆಬ್‌ಸೈಟ್‌ಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.





ನಗರದ ಬೆನ್ಸನ್ ಟೌನ್‌ನ ಮಸೀದಿಯಲ್ಲಿ ಬುಧವಾರ ಬಕ್ರೀದ್ ಹಬ್ಬದ ನಿಮಿತ್ತ ಮುಸ್ಲಿಮರು ವಿಶೇಷ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು (ಎಡಚಿತ್ರ), ಕೆ.ಆರ್. ಮಾರುಕಟ್ಟೆಯ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಹೊರಬಂದ ಮುಸ್ಲಿಮರು ಬಡವರಿಗೆ ಆಹಾರ, ಬಟ್ಟೆ, ಹಣ ದಾನ ಮಾಡಿದರು —ಪ್ರಜಾವಾಣಿ ಚಿತ್ರಗಳು

ಈದ್ಗಾ ಮೈದಾನಗಳ ಬದಲು ಮಸೀದಿಗಳಲ್ಲಿ ಮಾತ್ರ ಪ್ರಾರ್ಥನೆ • ಬಡವರಿಗೆ ಆಹಾರ, ಬಟ್ಟೆ, ಹಣ ವಿತರಣೆ

ಬಕ್ರೀದ್: ನಗರದಲ್ಲಿ ಸರಳವಾಗಿ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಗ, ಬಲಿದಾನಗಳ ಸಂಕೇತದ ಬಕ್ರೀದ್ ಅನ್ನು ಕೋವಿಡ್ ಕಾರಣ ಬುಧವಾರ ಸರಳವಾಗಿ ಆಚರಿಸಲಾಯಿತು.

ಈದ್ಗಾ ಮೈದಾನಗಳಲ್ಲಿ ಸಾಮೂಹಿಕ ಅವಕಾಶ ಇರಲಿಲ್ಲವಾದ್ದರಿಂದ ಮಸೀದಿಗಳಲ್ಲಿಯೇ ಪ್ರಾರ್ಥನೆಯ ಮೂಲಕ ಮುಸ್ಲಿಮರು ಅಲ್ಲಾಹುವನ್ನು ಸ್ಮರಿಸಿದರು.

ಮಸೀದಿಗಳಲ್ಲಿಯೇ ವಿಶೇಷ ನಮಾಜ್ ಸಲ್ಲಿಸುವಂತೆ ಸಿಟಿ ಮಾರುಕಟ್ಟೆಯ ಜಾಮಿಯಾ ಮಸೀದಿ ಮೌಲಾನಾ ಮಖ್ಸೂದ್ ಇಮ್ರಾನ್ ರಶಾದಿಯವರು ಈ ಹಿಂದೆಯೇ ಕರೆ ನೀಡಿದ್ದರು. ಅವರ ಕರೆಗೆ ಓಗೊಟ್ಟು ಮಸೀದಿಗಳಲ್ಲಿ ನಮಾಜ್ ಮಾಡಿದರು.

ಕಲಾಸಿಪಾಳ್ಯ, ಚಾಮರಾಜಪೇಟೆ, ಶಿವಾಜಿನಗರ, ಬಿಟಿಎಂ ಲೇಔಟ್, ಪಾದರಾಯನಪುರ, ಹೆಬ್ಬಾಳ, ಆರ್.ಟಿ.ನಗರ, ಶಾಂತಿನಗರ, ಮೈಸೂರು ರಸ್ತೆ, ಜಯನಗರ, ಲಾಲ್‌ಬಾಗ್ ರಸ್ತೆ, ಮಾಗಡಿ ರಸ್ತೆ ಸೇರಿದಂತೆ ಪ್ರಮುಖ ಮಸೀದಿಗಳಲ್ಲಿ ಪ್ರಾರ್ಥನೆ ನಡೆಯಿತು. ಒಂದು ಮಸೀದಿಯಲ್ಲಿ ಒಮ್ಮೆಗೆ 50 ಜನರಿಗೆ ಮಾತ್ರ ಅವಕಾಶವಿತ್ತು. ಬೆಳಿಗ್ಗೆ 6.30 ಹಾಗೂ 8.30ಕ್ಕೆ ತಲಾ 50 ಜನರಂತೆ ಪ್ರಾರ್ಥನೆ ಸಲ್ಲಿಸಲು ಅನುವು ಮಾಡಿಕೊಡಲಾಯಿತು.

ದೇಹದ ಉಷ್ಣಾಂಶ ಪರೀಕ್ಷೆ ನಡೆಸಿದ ನಂತರವೇ ಮಸೀದಿಗಳ ಒಳಗೆ ಬಿಡಲಾಗುತ್ತಿತ್ತು. ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಮಾಸ್ಕ್ ಧರಿಸದೆ ಬಂದವರಿಗೆ ಮಸೀದಿಯಲ್ಲೇ ಮಾಸ್ಕ್‌ಗಳನ್ನು ಕೂಡ ವಿತರಿಸಲಾಯಿತು.

ಕೈ ಕುಲುಕುವುದು ಹಾಗೂ ಆಲಿಂಗನ ಮಾಡಲು ಅವಕಾಶವಿರಲಿಲ್ಲ. ನಮಾಜ್ ವೇಳೆ ಅಂತರ ಕಾಯ್ದುಕೊಳ್ಳಲಾಯಿತು. ಮಕ್ಕಳು ಹಾಗೂ ಹಿರಿಯ ನಾಗರಿಕರು ತಮ್ಮ ತಮ್ಮ ಮನೆಗಳಲ್ಲೇ ಪ್ರಾರ್ಥನೆ ಸಲ್ಲಿಸಿದರು. ಮಸೀದಿಗಳ ಮುಂಭಾಗದಲ್ಲಿ ಗುಲಾಬಿ ಹೂವಿನ ದಳಗಳ ಮಾರಾಟ ವ್ಯವಸ್ಥೆಯೂ ಇತ್ತು.

ಮಕ್ಕಳಾದಿಯಾಗಿ ಎಲ್ಲರೂ ಹೊಸ ಬಟ್ಟೆ ತೊಟ್ಟು, ಟೋಪಿಯೊಂದಿಗೆ ಕಂಗೊಳಿಸಿದರೆ, ಹೆಂಗಳೆಯರು, ಮಹಿಳೆಯರು ಕೂಡ ಹೊಸ ಬಟ್ಟೆ, ಕೈಗಳಲ್ಲಿ ಮೆಹಂದಿ ರಂಗಿನೊಂದಿಗೆ ಕಂಗೊಳಿಸಿದರು. ರಾತ್ರಿಯ ವೇಳೆಗೆ ಬಂಧುಗಳು, ಆತ್ಮೀಯರನ್ನು ಊಟಕ್ಕೆ ಆಹ್ವಾನಿಸಿ ಹಬ್ಬ ಮಾಡಿದರು.

ಗೋಹತ್ಯೆ ನಿಷೇಧದ ನಂತರದ ಮೊದಲ ಬಕ್ರೀದ್: ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದ ನಂತರ ನಡೆದ ಮೊದಲ ಬಕ್ರೀದ್ ಇದು. ಗೋಮಾಂಸ ಸೇವನೆಯೂ ಸಾಮಾನ್ಯವಾಗಿರುತ್ತಿದ್ದ ಈ ಹಬ್ಬವು, ಬುಧವಾರ ಕುರಿ–ಕೋಳಿ ಮಾಂಸ ಸೇವನೆಗೆ ಸೀಮಿತವಾಗಿತ್ತು.



ನಗರದ ಜೆ.ಸಿ. ನಗರದಲ್ಲಿ ಬುಧವಾರ ಬಕ್ರೀದ್ ಸಂಭ್ರಮದಲ್ಲಿ ತೊಡಗಿದ್ದ ಚಿಣ್ಣರು —ಪ್ರಜಾವಾಣಿ ಚಿತ್ರ

‘ಹಂಚುವುದೇ ಹಬ್ಬ’

‘ಪ್ರವಾದಿ ಇಬ್ರಾಹಿಂ ಅವರ ತ್ಯಾಗ, ಬಲಿದಾನದ ಸಂಕೇತವಾಗಿ ಆಚರಿಸುವ ಈ ಹಬ್ಬದಲ್ಲಿ ಪ್ರಾಣಿ ಬಲಿ ಕೊಡುವುದು ವಾಡಿಕೆ. ಬಲಿ ಅರ್ಪಿಸಿದ ಮಾಂಸವನ್ನು ಸಮನಾಗಿ ಮೂರು ಭಾಗ ಮಾಡಿ ಒಂದು ಭಾಗ ಸ್ವತಃ ಬಳಸಿಕೊಳ್ಳುವುದು, ಇನ್ನೆರಡು ಭಾಗವನ್ನು ಸಂಬಂಧಿಕರು ಹಾಗೂ ಬಡವರಿಗೆ ಹಂಚುವುದು ಸಂಪ್ರದಾಯವಾಗಿ ನಡೆದುಕೊಂಡು ಬಂದಿದೆ. ಬಡವರೂ ಸೇರಿದಂತೆ ಹಬ್ಬದ ಊಟದಿಂದ ಯಾರು ವಂಚಿತರಾಗಬಾರದು ಎನ್ನುವುದು ಇದರ ಉದ್ದೇಶ’ ಎಂದು ಮುಸ್ಲಿಂ ಮುಖಂಡರೊಬ್ಬರು ಹೇಳಿದರು.

ಅದರಂತೆ, ಬಡವರಿಗೆ ಆಹಾರ–ಹೊಸ ಬಟ್ಟೆ ಹಂಚುವ ಕಾರ್ಯವೂ ನಗರದಲ್ಲಿ ಕಂಡು ಬಂತು.

‘ವಿಶೇಷ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬುದ್ಧಿಮಾಂದ್ಯ ಮಕ್ಕಳಲ್ಲಿ ಅಗಾಧ ಪ್ರತಿಭೆ ಮನೆ ಮಾಡಿರುತ್ತದೆ. ಅವುಗಳ ಅನಾವರಣಕ್ಕೆ ಸೂಕ್ತ ವೇದಿಕೆ ಕಲ್ಪಿಸಿಕೊಡಬೇಕು’ ಎಂದು ನಗರದ ಅಮರ ಸೌಂದರ್ಯ ಪ್ರತಿಷ್ಠಾನದ ಸಂಸ್ಥಾಪಕಿ ನಿರ್ಮಲಾ ಅಮರನಾಥ್ ತಿಳಿಸಿದರು.

ಪ್ರತಿಷ್ಠಾನವು ಚಿತ್ರನಟಿ ಸೌಂದರ್ಯ ಅವರ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಕೋವಿಡ್ ಜಾಗೃತಿಗಾಗಿ ಫ್ಯಾನ್ಸಿ ಡ್ರೆಸ್ ಸ್ಪರ್ಧೆಯ ಆನ್‌ಲೈನ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪ್ರತಿಷ್ಠಾನವು ಸಂಗೀತ, ಯೋಗ, ಧ್ಯಾನ ಮತ್ತು ವ್ಯಾಯಾಮಗಳ ಮೂಲಕ ಚಿಕಿತ್ಸೆಯನ್ನು ನೀಡಿ ಬುದ್ಧಿಮಾಂದ್ಯ ಚಿಣ್ಣರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡುತ್ತಿದೆ. ಸಂಸ್ಥೆಯು ಬುದ್ಧಿಮಾಂದ್ಯ ಮಕ್ಕಳಿಗೆ ಸಾಸುವೆಘಟ್ಟದಲ್ಲಿ ಶಾಲೆಯೊಂದನ್ನು ತೆರೆಯಲಿದ್ದು, ಹೊಸ ವಿಧಾನಗಳ ಮೂಲಕ ಶಿಕ್ಷಣ ನೀಡಲಾಗುವುದು’ ಎಂದು ತಿಳಿಸಿದರು.

ಬೇರೆ ಬೇರೆ ರಾಜ್ಯಗಳಿಂದ ಹಲವಾರು ಮಕ್ಕಳು ಫ್ಯಾನ್ಸಿ ಡ್ರೆಸ್ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರತಿಭೆ ಪ್ರದರ್ಶಿಸಿದರು.

ಸ್ಪರ್ಧೆಯಲ್ಲಿ ಬೆಂಗಳೂರಿನ ದಿವಾಕರ್ (ಪ್ರಥಮ), ಅಮಿತ್ ನವೀನ್ (ದ್ವಿತೀಯ) ಹಾಗೂ ಕೀರ್ತನ (ತೃತೀಯ) ಬಹುಮಾನ ಪಡೆದುಕೊಂಡರು.

ಚಿತ್ರನಟಿ ಸುಧಾರಾಣಿ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಲೈಂಗಿಕ ಕಿರುಕುಳ ಆರೋಪ: ನೋಟಿಸ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಅಮಾನತುಗೊಂಡಿರುವ ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರಿಗೆ ನೀಡಿದ್ದ ಎರಡನೇ ನೋಟಿಸ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ. ಸೇವಾ ನಿಯಮಗಳ ಅಡಿಯಲ್ಲಿನ ವಿಧಾನಗಳನ್ನು ಅನುಸರಿಸದೆ ಎರಡನೇ ನೋಟಿಸ್ ನೀಡಲಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಅರ್ಥಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಅರ್ಜಿದಾರರ ವಿರುದ್ಧ 2018ರಲ್ಲಿ ಬಂದಿದ್ದ ದೂರನ್ನು ಕೆಲಸದ ಸ್ಥಳದಲ್ಲಿ ಮಹಿಳೆಯ ಮೇಲಿನ ಲೈಂಗಿಕ ಕಿರುಕುಳ (ನಿಷೇಧ) ಕಾಯ್ದೆ–2013 ಅಡಿಯಲ್ಲಿ ವಿಚಾರಣೆ ನಡೆಸಲಾಗುತ್ತಿದೆ.

ಈ ಸಂಬಂಧ ತನಿಖೆ ನಡೆಸಲು ವಿಶ್ವವಿದ್ಯಾಲಯವು ಸಮಿತಿಯನ್ನು ನೇಮಕ ಮಾಡಿತ್ತು.

ಸಮಿತಿ ನೀಡಿದ ವರದಿ ಆಧರಿಸಿ ಸಿಂಡಿಕೇಟ್ ಸಮಿತಿಯು ಎರಡನೇ ನೋಟಿಸ್ ನೀಡುವ ಮುನ್ನವೇ ಅಮಾನತುಗೊಳಿಸಿತು.

‘ಎರಡನೇ ನೋಟಿಸ್‌ನಲ್ಲಿ ಸೇವೆಯಿಂದ ವಜಾಗೊಳಿಸುವ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಪ್ರಾಧ್ಯಾಪಕರನ್ನು ವಜಾಗೊಳಿಸಲು ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿಲ್ಲ’ ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠ ಹೇಳಿದೆ.

ಆಂತರಿಕ ದೂರುಗಳ ಸಮಿತಿಯ ವರದಿ ಆಧರಿಸಿ ವಿಚಾರಣೆ ಮುಕ್ತಾಯಗೊಳಿಸುವುದು ಕಾನೂನು ಬಾಹಿರ ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಪೀಠ ಉಲ್ಲೇಖಿಸಿತು.

ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ರಾಜ್ಯ ಮಹಿಳಾ ಆಯೋಗಕ್ಕೆ ವಿದ್ಯಾರ್ಥಿನಿಯೊಬ್ಬರು ನೀಡಿದ್ದ ದೂರನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಆಯೋಗವು ಸೂಚಿಸಿ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿತ್ತು.



ಕಾನ್‌ಸ್ಟೆಬಲ್ ಶಿವಕುಮಾರ್ ಅವರನ್ನು ಸನ್ಮಾನಿಸಿದ ಕಮಲ್ ಪಂತ್

ಕಾನ್‌ಸ್ಟೆಬಲ್‌ಗೆ ಕಮಲ್ ಪಂತ್ ಸನ್ಮಾನ

ಬೆಂಗಳೂರು: ಬಕ್ರೀದ್‌ಗಾಗಿ ನಗರದಲ್ಲಿ ಬಂದೋಬಸ್ತ್ ಪರಿಶೀಲಿಸಲು ತೆರಳಿದ್ದ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ಕೆ.ಜಿ.ಹಳ್ಳಿ ಠಾಣೆಯ ಕಾನ್‌ಸ್ಟೆಬಲ್‌ವೊಬ್ಬರ ಕಾರ್ಯವೈಖರಿ ಮೆಚ್ಚಿ ಸನ್ಮಾನಿಸಿದರು.

ಕೆ.ಜಿ.ಹಳ್ಳಿ ಠಾಣೆಯ ಗುಪ್ತಚರ ವಿಭಾಗದ ಕಾನ್‌ಸ್ಟೆಬಲ್ ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಬಕ್ರೀದ್ ಪೂರ್ವಭಾವಿಯಾಗಿ ಮಂಗಳವಾರ ರಾತ್ರಿ ಕೋರಮಂಗಲ, ಬಾಣಸವಾಡಿ, ಚಾಮರಾಜಪೇಟೆ, ಜಯ ನಗರ, ಹೆಣ್ಣೂರು, ಪಾದರಾಯನಪುರ, ಗೋವಿಂದನಗರ, ಶಿವಾಜಿನಗರ ಸೇರಿದಂತೆ ಹಲವು ಠಾಣೆಗಳಿಗೆ ಬಂದೋಬಸ್ತ್ ಪರಿಶೀಲನೆಗೆ ಕಮಲ್ ಪಂತ್ ತೆರಳಿದ್ದರು.

ಈ ವೇಳೆ ಕೆ.ಜಿ.ಹಳ್ಳಿ ಠಾಣೆಯ ಬಳಿ ಮುಸ್ಲಿಂ ಸಮುದಾಯದ ಮುಖಂಡರು ಶಾಲು, ಹಾರದೊಂದಿಗೆ ಪಂತ್ ಅವರನ್ನು ಸನ್ಮಾನಿಸಲು ಮುಂದಾದರು.

‘ಸನ್ಮಾನ ಮಾಡಬೇಕಿರುವುದು ನನಗೆ ಅಲ್ಲ. ಸದಾ ಕರ್ತವ್ಯದಲ್ಲಿರುವ ಪೊಲೀಸ್ ಸಿಬ್ಬಂದಿಗೆ’ ಎಂದು ಪ್ರತಿಕ್ರಿಯಿಸಿದ ಅವರು, ಠಾಣೆಯಲ್ಲಿ ಉತ್ತಮವಾಗಿ ಕೆಲಸ ಮಾಡುವ ಸಿಬ್ಬಂದಿ ಯಾರೆಂದು ಹಿರಿಯ ಅಧಿಕಾರಿಗಳನ್ನು ಕೇಳಿದರು.

ಈ ವೇಳೆ ಕಾನ್‌ಸ್ಟೆಬಲ್ ಶಿವಕುಮಾರ್ ಹೆಸರನ್ನು ಅಧಿಕಾರಿಗಳು ಸೂಚಿಸಿದ್ದರು. ಆಗ ಮುಖಂಡರು ತಂದಿದ್ದ ಶಾಲು ಹೊದಿಸಿ, ಹಾರ ಹಾಕಿ ಶಿವಕುಮಾರ್ ಅವರನ್ನು ಸನ್ಮಾನಿಸಿದರು.

‘ಕಮಲ್ ಪಂತ್ ಅವರಿಂದ ಅನಿರೀಕ್ಷಿತವಾಗಿ ಸನ್ಮಾನ ಮಾಡಿಸಿಕೊಂಡಿದ್ದು ಸಂತಸ ತಂದಿದೆ. ಕರ್ತವ್ಯದಲ್ಲಿ ಇನ್ನಷ್ಟು ಜವಾಬ್ದಾರಿ ಹೆಚ್ಚಾಗಿದೆ’ ಎಂದು ಶಿವಕುಮಾರ್ ಪ್ರತಿಕ್ರಿಯಿಸಿದರು.

ಬೆಲೆ ಏರಿಕೆ ವಿರುದ್ಧ ಸೈಕಲ್ ಜಾಥಾ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿ ಹಾಗೂ ಪೆಟ್ರೋಲ್ ಬೆಲೆ ಏರಿಸಿರುವುದನ್ನು ಖಂಡಿಸಿ ಭಾರತೀಯ ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಯುವಘಟಕದ ವತಿಯಿಂದ ರಾಜಾನುಕುಂಟೆ ಗ್ರಾಮದಲ್ಲಿ ಸೈಕಲ್ ಜಾಥಾವನ್ನು ಬುಧವಾರ ಹಮ್ಮಿಕೊಳ್ಳಲಾಗಿತ್ತು.

ಸೈಕಲ್ ಜಾಥಾಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ’ಬಿಜೆಪಿ ಸರ್ಕಾರವು ಲಕ್ಷಾಂತರ ಜನರನ್ನು ಆರ್ಥಿಕವಾಗಿ ದಿವಾಳಿ ಮಾಡಿದೆ. ಜನರು ಹಸಿವಿನಿಂದ ನರಳುತ್ತಿದ್ದಾರೆ. ಮಾನವೀಯತೆಯನ್ನು ಈ ಸರ್ಕಾರ ಕಳೆದುಕೊಂಡಿದೆ’ ಎಂದರು.



ಸೈಕಲ್ ಜಾಥಾದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ಕಾಂಗ್ರೆಸ್ ಮುಖಂಡ ಚೊಕ್ಕನಹಳ್ಳಿ ವೆಂಕಟೇಶ್, ಕೇಶವರಾಜಣ್ಣ, ಗ್ರಾಮ ಪಂಚಾಯಿತಿ ಸದಸ್ಯ ಮೂರ್ತಿ ಭಾಗವಹಿಸಿದರು.

ಹಿರಿಯ ಮುಖಂಡ ಎಚ್.ಎಂ. ರೇವಣ್ಣ, ಕಾಂಗ್ರೆಸ್ ಮುಖಂಡ ಕೇಶವ ರಾಜಣ್ಣ, ಚೊಕ್ಕನಹಳ್ಳಿ ವೆಂಕಟೇಶ್, ಪಂಚಾಯಿತಿ ಸದಸ್ಯರಾದ ಮೂರ್ತಿ, ಇಂಟೆಕ್ ಘಟಕದ ಪ್ರಕಾಶ್ ಭಾಗವಹಿಸಿದ್ದರು.

ಟೆಂಡರ್ ಹೆಸರಲ್ಲಿ ₹ 50 ಲಕ್ಷ ವಂಚನೆ

ಬೆಂಗಳೂರು: ಕೆರೆ ಸ್ವಚ್ಛಗೊಳಿಸುವ ಟೆಂಡರ್ ಕೊಡಿಸುವುದಾಗಿ ಮಧ್ಯವರ್ತಿಯೊಬ್ಬರು ₹50 ಲಕ್ಷ ಹಣ ವಂಚಿಸಿದ್ದಾರೆ ಎಂದು ಆರೋಪಿಸಿ ನೊಂದ ವ್ಯಕ್ತಿ ಹನುಮಂತನಗರ ಠಾಣೆಗೆ ದೂರು ನೀಡಿದ್ದಾರೆ.

ಖಾಸಗಿ ಸಂಸ್ಥೆಯೊಂದರಲ್ಲಿ ನಿರ್ದೇಶಕರಾಗಿರುವ ಎಂ.ರಮೇಶ್ ನಾಯಕ್ ವಂಚನೆಗೆ ಒಳಗಾದವರು. ಲೋಕೇಶ್ ಹಾಗೂ ನಮನಾ ಲೋಕೇಶ್ ಎಂಬ ದಂಪತಿ ವಂಚಿಸಿದ್ದಾರೆ ಎಂದು ದೂರಿನಲ್ಲಿ ರಮೇಶ್ ತಿಳಿಸಿದ್ದಾರೆ.

ಲೋಕೇಶ್ ಎಂಬುವರು ತಾನು ಎಚ್.ಡಿ.ಕುಮಾರಸ್ವಾಮಿ ಅವರ ಆಪ್ತನೆಂದು 2018ರಲ್ಲಿ ರಮೇಶ್ ಅವರನ್ನು ಪರಿಚಯಿಸಿಕೊಂಡಿದ್ದರು. ಬೆಳ್ಳಂದೂರು ಕೆರೆ ಸ್ವಚ್ಛಗೊಳಿಸುವ ಟೆಂಡರ್ ಕೊಡಿಸುವುದಾಗಿ ತಿಳಿಸಿ, ₹50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ. ಈ ಸಂಬಂಧ ರಮೇಶ್ ಅವರನ್ನು ನಂಬಿಸಲು ಪಾಲಿಕೆ ಆಯುಕ್ತರಿಗೆ ಕುಮಾರಸ್ವಾಮಿ ಅವರು ಟೆಂಡರ್ ನೀಡಲು ನಿರ್ದೇಶಿಸಿರುವ ಪತ್ರವೊಂದನ್ನು ತೋರಿಸಿದ್ದ. ಹಣಕ್ಕೆ ಖಾತರಿ ಎಂಬಂತೆ ಖಾಲಿ ಚೆಕ್ ನೀಡಿದ್ದ. ಇದನ್ನು ನಂಬಿದ್ದ ರಮೇಶ್, ವಿವಿಧ ಹಂತಗಳಲ್ಲಿ ಹಣ ನೀಡಿದ್ದರು. ಆದರೆ, ಆ ಪತ್ರ ನಕಲಿ ಎಂದು ತಿಳಿದು ಬಂದಿತ್ತು.

‘ರಮೇಶ್‌ಗೆ ಯಾವುದೇ ಟೆಂಡರ್ ಸಿಗಲಿಲ್ಲ. ಹಣ ಹಿಂದಿರುಗಿಸುವಂತೆ ಕೇಳಿದಾಗ ಸಮಯ ಕೇಳಿದ್ದ ಲೋಕೇಶ್ ಇಲ್ಲಿಯವರೆಗೆ ಹಣ ನೀಡಿಲ್ಲ’ ಎಂದು ರಮೇಶ್ ಆರೋಪಿಸಿದ್ದಾರೆ.

ರೌಡಿ ಹತ್ಯೆ: ಆರೋಪಿಗಳ ಕಾಲಿಗೆ ಗುಂಡೇಟು

ಬೆಂಗಳೂರು: ಕೋರಮಂಗಲದ ಬ್ಯಾಂಕ್‌ವೊಂದರಲ್ಲಿ ನಡೆದಿದ್ದ ರೌಡಿ ಜೋಸೆಫ್ ಅಲಿಯಾಸ್ ಬಬ್ಲಿ ಕೊಲೆ ಪ್ರಕರಣದ ಆರೋಪಿಗಳನ್ನು ಕಾಲಿಗೆ ಗುಂಡು ಹಾರಿಸಿ, ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಪ್ರದೀಪ್ ಅಲಿಯಾಸ್ ಚೋಟೆ ಹಾಗೂ ರವಿ ಗುಂಡೇಟಿಗೆ ಒಳಗಾದ ಆರೋಪಿಗಳು. ಆಡುಗೋಡಿ ಠಾಣೆಯ ರೌಡಿಶೀಟರ್ ಆಗಿದ್ದ ಬಬ್ಲಿ, ಪತ್ನಿಯೊಂದಿಗೆ ಕಳೆದ ಸೋಮವಾರ ಬ್ಯಾಂಕಿಗೆ ಬಂದಿದ್ದ. ಈ ವೇಳೆ ಹಲ್ಲೆಗೆ ಮುಂದಾಗಿದ್ದ ದುಷ್ಕರ್ಮಿಗಳು ಬಬ್ಲಿಯನ್ನು ಬೆನ್ನಟ್ಟಿದ್ದರು. ಬ್ಯಾಂಕಿಗೆ ನುಗ್ಗಿ ಬಬ್ಲಿಯನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಈ ವೇಳೆ ಪತ್ನಿಯ ಮೇಲೂ ದಾಳಿ ನಡೆದಿತ್ತು.

ತಲೆಮರೆಸಿಕೊಂಡಿದ್ದ ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದರು. ಆರೋಪಿಗಳಾದ ಪ್ರದೀಪ್ ಹಾಗೂ ರವಿ ಬುಧವಾರ ಬೇಗೂರು ಕೆರೆ ಬಳಿ ಕಾಣಿಸಿಕೊಂಡಿದ್ದರು. ಈ ಮಾಹಿತಿ ಆಧರಿಸಿ ಸ್ಥಳಕ್ಕೆ ತೆರಳಿದ್ದ ಕೋರಮಂಗಲ ಠಾಣೆಯ ಪೊಲೀಸರ ತಂಡ, ಆರೋಪಿಗಳನ್ನು ಬಂಧಿಸಲು ಮುಂದಾಗಿತ್ತು. ‘ಪೊಲೀಸ್ ಮೇಲೆ ಆರೋಪಿಗಳು ಹಲ್ಲೆಗೆ ಮುಂದಾಗಿದ್ದರು. ಈ ವೇಳೆ ಆತ್ಮರಕ್ಷಣೆಗಾಗಿ ಆರೋಪಿಗಳ ಕಾಲಿಗೆ ಗುಂಡು ಹಾರಿಸಿ, ಬಂಧಿಸಲಾಯಿತು’ ಎಂದು ಪೊಲೀಸರು ತಿಳಿಸಿದರು. ‘ಆರೋಪಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚೇತರಿಸಿಕೊಂಡ ನಂತರ ವಿಚಾರಣೆ ನಡೆಸಲಾಗುವುದು’ ಎಂದರು.

ಗೌರಿ ಲಂಕೇಶ್ ಹತ್ಯೆ: ಆರೋಪಿ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿ ನವೀನ್‌ನನ್ನು ಮೂತ್ರಪಿಂಡ ಸಮಸ್ಯೆಯಿಂದಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಗೌರಿ ಅವರ ಕೊಲೆ ಪ್ರಕರಣದಲ್ಲಿ ನವೀನ್‌ನನ್ನು ಪೊಲೀಸರು ಬಂಧಿಸಿದ್ದರು. ಜೈಲಿನಲ್ಲಿದ್ದ ನವೀನ್ ಅನಾರೋಗ್ಯದಿಂದ ಬಳಲುತ್ತಿದ್ದ. ವೈದ್ಯಕೀಯ ತಪಾಸಣೆ ನಡೆಸಿದಾಗ ಮೂತ್ರಪಿಂಡದಲ್ಲಿ ಸಮಸ್ಯೆ ಕಾಣಿಸಿಕೊಂಡಿತ್ತು. ಹಾಗಾಗಿ, ಪೊಲೀಸ್ ಭದ್ರತೆಯಲ್ಲಿ ನವೀನ್‌ಗೆ 5 ದಿನಗಳಿಂದ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಮುಂದುವರಿಸ ಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

2017ರಲ್ಲಿ ರಾಜರಾಜೇಶ್ವರಿ ನಗರದ ಮನೆಯ ಬಳಿ ಗೌರಿ ಅವರನ್ನು ದುಷ್ಕರ್ಮಿಗಳ ತಂಡ ಗುಂಡಿಟ್ಟು ಹತ್ಯೆ ಮಾಡಿತ್ತು.

ಇಬ್ಬರು ಬೈಕ್ ಕಳ್ಳರ ಬಂಧನ, ವಾಹನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಬೀಗ ಬಳಸಿ ಹಾಗೂ ಲಾಕರ್‌ಗಳನ್ನು ಮುರಿದು ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ಇಬ್ಬರು ಆರೋಪಿಗಳನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

‘ಚಂದನ್ ಮತ್ತು ಉದಯ್ ಬಂಧಿತ ಆರೋಪಿಗಳು. ಇವರು ಮೋಜಿನ ಜೀವನ ನಡೆಸಲು ಬೈಕ್‌ಗಳನ್ನು ಕದ್ದು, ಅವುಗಳನ್ನು ಮಾರಿ ಹಣ ಸಂಪಾದಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕೆಂಗೇರಿ ಠಾಣಾ ವ್ಯಾಪ್ತಿಯ ಮನೆಯೊಂದರ ಬಳಿ ನಿಲ್ಲಿಸಿದ್ದ ವಾಹನವನ್ನು ಆರೋಪಿಗಳು ಜೂನ್ 25ರಂದು ಕಳ್ಳತನ ಮಾಡಿದ್ದರು. ಈ ಸಂಬಂಧ ಮಾಲೀಕರು ಪೊಲೀಸರಿಗೆ ದೂರು ನೀಡಿದ್ದರು’.

‘ಬಂಧಿತರಿಂದ ₹7 ಲಕ್ಷ ಬೆಲೆ ಬಾಳುವ ಒಂಬತ್ತು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳ ಬಂಧನದಿಂದ ಗಿರಿನಗರ, ಮಡಿವಾಳ ಹಾಗೂ ಕೆಂಗೇರಿ ಠಾಣೆಗಳಲ್ಲಿ ಬೈಕ್ ಕಳವು ಪ್ರಕರಣಗಳು ಪತ್ತೆಯಾಗಿವೆ’ ಎಂದೂ ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳು.

ಬಸ್ ಹರಿದು ಬಾಲಕಿ ಸಾವು

ರಾಮನಗರ: ಬಸ್ ಹರಿದು ಬಾಲಕಿಯೊಬ್ಬಳು ಮೃತಪಟ್ಟ ಘಟನೆ ಮಾಗಡಿ ತಾಲ್ಲೂಕಿನ ಹೊನ್ನಾಪುರದ ಬಳಿ ಬುಧವಾರ ಬೆಳಿಗ್ಗೆ ನಡೆದಿದೆ.

ಜೀವಿತಾ (6) ಮೃತ ಬಾಲಕಿ. ಆಕೆ ಬೆಂಗಳೂರಿನಿಂದ ತನ್ನ ಅಜ್ಜಿ ಜತೆ ಉಜ್ಜಿನಿಗೆ ಖಾಸಗಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಳು. ಈ ವೇಳೆ ಬಸ್ ಟೈರ್ ಸ್ಫೋಟಗೊಂಡಿದ್ದು, ಚಾಲಕ ಏಕಾಏಕಿ ಬ್ರೇಕ್ ಹಾಕಿದ್ದಾನೆ. ಈ ಸಂದರ್ಭ ಬಸ್‌ನ ಮುಂಭಾಗದ ಗಾಜಿನ ಬಳಿಯೇ ಕುಳಿತಿದ್ದ ಬಾಲಕಿ, ನಿಯಂತ್ರಣ ತಪ್ಪಿ ಗಾಜು ಒಡೆದುಕೊಂಡು ಬಸ್ ಮುಂದೆಯೇ ಬಿದ್ದಿದ್ದಾಳೆ. ನಂತರ ಅದೇ ಬಸ್‌ನ ಮುಂಭಾಗದ ಚಕ್ರ ಬಾಲಕಿ ಮೇಲೆ ಹರಿದಿದೆ. ಇದರಿಂದ ಸ್ಥಳದಲ್ಲೇ ಬಾಲಕಿ ಮೃತಪಟ್ಟಿದ್ದಾಳೆ.

ಕುಮಾರ್ ಹಾಗೂ ಜ್ಯೋತಿ ದಂಪತಿಗೆ ಈಕೆ ಏಕೈಕ ಪುತ್ರಿ.

ಕೇಂದ್ರ ಸರ್ಕಾರದ ವಿರುದ್ಧ ಹರ್ನೇಕ್ ಸಿಂಗ್, ದೀಪಕ್ ಲಂಬಾ ಗುಡುಗು

‘ರೈತರ ಹೋರಾಟ ಜ್ವಾಲೆಯಾಗಲಿ’

ಪ್ರಜಾವಾಣಿ ವಾರ್ತೆ

ನರಗುಂದ: ಕೃಷಿ ಕಾಯ್ದೆಗಳ ತಿದ್ದುಪಡಿ ವಿರೋಧಿಸಿ ದೆಹಲಿಯಲ್ಲಿ ಹೋರಾಟದ ಬೆಂಕಿ ಹೊತ್ತಿಕೊಂಡಿದೆ. ಕರ್ನಾಟಕದ ಬಂಡಾಯದ ನೆಲದಲ್ಲಿಯೂ ಈ ಬೆಂಕಿಯು ಜ್ವಾಲೆಯಾಗಬೇಕು. ಕೇಂದ್ರ ಸರ್ಕಾರವನ್ನು ಕಿತ್ತೊಗೆಯಲು ಎಲ್ಲ ರೈತರು ಒಂದಾಗಬೇಕು ಎಂದು ರಾಷ್ಟ್ರೀಯ ರೈತ ಕಿಸಾನ್ ಮೋರ್ಚಾದ ಮುಖಂಡ ಹರ್ನೇಕ್ ಸಿಂಗ್ ಹೇಳಿದರು.

ಪಟ್ಟಣದ ಹೊಸ ಎಪಿಎಂಸಿ ಆವರಣದಲ್ಲಿನ ಬಾಬಾಗೌಡ ಪಾಟೀಲ ವೇದಿಕೆಯಲ್ಲಿ 41ನೇ ರೈತ ಹುತಾತ್ಮ ದಿನಾಚರಣೆ ಅಂಗವಾಗಿ ಬುಧವಾರ ನಡೆದ ರೈತ ಸಮಾವೇಶದಲ್ಲಿ ಮಾತನಾಡಿದರು.

ಕೇಂದ್ರ ಸರ್ಕಾರ ರೈತ ಹಾಗೂ ಜನ ವಿರೋಧಿ ನೀತಿ ಮೂಲಕ ಶೋಷಣೆಗೆ ಮುಂದಾಗುತ್ತಿದೆ. ಇದನ್ನು ರೈತರು ಅರಿಯಬೇಕು ಎಂದರು.

ರೈತರ ಎದೆಗಳಲ್ಲಿ ಹೋರಾಟದ ಬೆಂಕಿ ಹೊತ್ತಿಸಲು ನಾವು ದೆಹಲಿಯಿಂದ ಬಂದಿದ್ದೇವೆ. ಸ್ವರ್ಗದಂತಿರುವ ಹುತಾತ್ಮರ ನೆಲದಲ್ಲಿ ರೈತರು ಶಕ್ತಿ ಪ್ರದರ್ಶಿಸಬೇಕಿದೆ. ಕಾರ್ಪೊರೇಟ್ ಸರ್ಕಾರ ನಡೆಸುತ್ತಿರುವ ಪ್ರಧಾನಿ ಮೋದಿ ಅಂಬಾನಿ, ಅದಾನಿ ಅವರ ಕುಕೃತ್ಯಗಳನ್ನು ಸುಡಲು ದೆಹಲಿ ಹೋರಾಟದ ಬೆಂಕಿ ಇನ್ನಷ್ಟು ತೀವ್ರಗೊಳ್ಳಬೇಕು. ರೈತರು ಒಂದಾಗಿ ಕೇಂದ್ರದ ವಿರುದ್ಧ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು

500 ವರ್ಷಗಳ ಹಿಂದೆಯೇ ಪಂಜಾಬಿನಲ್ಲಿ ಹೋರಾಟ ನಡೆಯುತ್ತಿದೆ. ಗುರುನಾನಕ್‌ರು ಎಲ್ಲ ಶ್ರಮಿಕರು, ಶೋಷಿತರು ಮಾಲೆಯ ರೀತಿಯಲ್ಲಿ ಒಂದಾಗಬೇಕು ಎಂದು ಹೇಳಿದ್ದರು. ಅದೇ ರೀತಿ ಈಗ ಪ್ರಭುತ್ವದ ವಿರುದ್ಧ ಹೋರಾಟ ನಡೆಸಬೇಕು ಎಂದರು.

ವಿದ್ಯುತ್ ಖಾಸಗೀಕರಣ 2020 ಕೈಬಿಡಬೇಕು. ಕನಿಷ್ಠ ಬೆಂಬಲ ಬೆಲೆ ಕೇಂದ್ರ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಹರಿಯಾಣಾದ ರೈತ ಮುಖಂಡ ದೀಪಕ್ ಲಂಬಾ ಮಾತನಾಡಿ, ದುರಹಂಕಾರಿ ಮನೋಭಾವದ, ರೈತರನ್ನು ದೇಶದ್ರೋಹಿಗಳಂತೆ ಕಾಣುವ ಕೇಂದ್ರ ಸರ್ಕಾರಕ್ಕೆ ತಕ್ಕಪಾಠ ಕಲಿಸಬೇಕಿದೆ. ಆದ್ದರಿಂದ ಜುಲೈ 22ರಿಂದ ಅಗಸ್ಟ್ 13ರವರೆಗೆ ದೆಹಲಿ ಸಂಸತ್ ಮುಂದೆ ಧರಣಿ ನಡೆಸಲಾಗುವುದು. ಅಧಿವೇಶನದಲ್ಲಿ ಬಿಜೆಪಿ ಹಾಗೂ ಇತರ ಸಂಸದರು ದೆಹಲಿ ಹೋರಾಟ ಪ್ರಸ್ತಾಪಿಸಿ ಕೃಷಿ ಕಾನೂನುಗಳನ್ನು ರದ್ದು ಮಾಡಿಸಬೇಕು. ಇಲ್ಲವಾದರೆ ಸಂಸತ್ ಒಳಗೆ ಪ್ರವೇಶ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.



ನರಗುಂದದಲ್ಲಿ 41ನೇ ರೈತ ಹುತಾತ್ಮ ದಿನಾಚರಣೆ ಅಂಗವಾಗಿ ಬುಧವಾರ ನಡೆದ ರೈತ ಸಮಾವೇಶವನ್ನು ಪಂಜಾಬ್‌ನ ಹರ್ನೇಕ್ ಸಿಂಗ್ ಹಾಗೂ ಹರಿಯಾಣಾದ ದೀಪಕ ಲಂಬಾ ಕೇಂದ್ರ ಸರ್ಕಾರ ಜಾರಿಗೆ ತಂದ ಕೃಷಿ ಕಾನೂನುಗಳ ಪ್ರತಿಗಳನ್ನು ಸುಡುವುದರ ಮೂಲಕ ಉದ್ಘಾಟಿಸಿದರು

ಸಮಾವೇಶದಲ್ಲಿ 24 ನಿರ್ಣಯ

ಕೃಷಿ ಕಾನೂನು ರದ್ದತಿ, ವಿದ್ಯುತ್ ಖಾಸಗೀಕರಣ ಕೈಬಿಡುವುದು, ರೈತರ ಮೇಲಿನ ಮೊಕದ್ದಮೆ ವಾಪಸ್, ಮಹದಾಯಿ ಕಾಮಗಾರಿ ಆರಂಭ, ಕಬ್ಬು ಬೆಳೆಗಾರರ ಬಾಕಿ ಸಮಸ್ಯೆ ಬಗೆಹರಿಸುವ ವಿಷಯ ಸೇರಿದಂತೆ 24 ನಿರ್ಣಯಗಳನ್ನು ಈ ಸಮಾವೇಶ ಕೈಗೊಳ್ಳಲಾಯಿತು.

ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ

‘ಬಾಬಾ ಸಾಹೇಬರೆಡೆಗೆ’ ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಆಧಾರಿತ ‘ಬಾಬಾ ಸಾಹೇಬರೆಡೆಗೆ’ (ಲೇಖಕ ಪ್ರೊ.ಎಚ್.ಟಿ. ಪೋತೆ) ಕೃತಿಯನ್ನು ಗಾಂಧಿ ಭವನದಲ್ಲಿ ಗುರುವಾರ ಬಿಡುಗಡೆ ಮಾಡಲಾಯಿತು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಕಲಬುರ್ಗಿಯ ಕುಟುಂಬ ಪ್ರಕಾಶನದ ಸಹಯೋಗದಲ್ಲಿ ಕಾರ್ಯಕ್ರಮ ಅಯೋಜಿಸಲಾಗಿತ್ತು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ‘ಇದು ಮಲ್ಲಿಕಾರ್ಜುನ ಖರ್ಗೆ ಅವರ ಜೀವನ ಚರಿತ್ರೆ ಮಾತ್ರವಲ್ಲದೇ, ಅವರ ಬದುಕಿನ ಸಮಗ್ರ ಮಾಹಿತಿ ಒಳಗೊಂಡ ಪುಸ್ತಕವಾಗಿದೆ’ ಎಂದು ಅಭಿಪ್ರಾಯಪಟ್ಟರು.



ಕೃತಿಯನ್ನು ಹಂಪ ನಾಗರಾಜಯ್ಯ ಬಿಡುಗಡೆ ಮಾಡಿದರು. ಮಲ್ಲೇಪುರಂ ಜಿ. ವೆಂಕಟೇಶ್, ರಾಹುಲ್ ಖರ್ಗೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಇದ್ದರು —ಪ್ರಜಾವಾಣಿ ಚಿತ್ರ

ಸಾಹಿತಿ ಪ್ರೊ.ಹಂಪ ನಾಗರಾಜಯ್ಯ ಅಧ್ಯಕ್ಷತೆ ವಹಿಸಿದ್ದರು. ಗಾಂಧಿ ಶಾಂತಿ ಪ್ರತಿಷ್ಠಾನದ ಉಪಾಧ್ಯಕ್ಷ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಭಾಗವಹಿಸಿದ್ದರು.

ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಅವರು ‘ಪ್ರಸ್ತುತ ಭಾರತ: ಗಾಂಧೀ ಮತ್ತು ಬಿ.ಆರ್.ಅಂಬೇಡ್ಕರ್’ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಬ್ಯಾಡಗಿಯಲ್ಲಿ ನಟ ದರ್ಶನ್: ಅಭಿಮಾನಿಗಳಿಗೆ ಲಾಠಿ ರುಚಿ

ಪ್ರಜಾವಾಣಿ ವಾರ್ತೆ

ಬ್ಯಾಡಗಿ: ಇಲ್ಲಿಯ ಮೆಣಸಿನಕಾಯಿ ಉದ್ಯಮಿ ಹಾಗೂ ಮಾಜಿ ಶಾಸಕ ಸುರೇಶಗೌಡ್ರ ಪಾಟೀಲ ಅವರ ಅತಿಥಿಗೃಹದಲ್ಲಿ ಕಳೆದ ಎರಡು ದಿನಗಳಿಂದ ತಂಗಿದ್ದ ಚಿತ್ರನಟ ದರ್ಶನ್ ಅವರನ್ನು ನೋಡಲು ಬುಧವಾರ ಜಮಾಯಿಸಿದ್ದ ಅಭಿಮಾನಿಗಳನ್ನು ಚದುರಿಸಲು ಪೊಲೀಸರು ಹರಸಾಹಸ ಪಟ್ಟರು.

ದರ್ಶನ ಅವರೊಂದಿಗೆ ಫೋಟೊ ತೆಗೆಸಿಕೊಳ್ಳಲು ಜನರು ಮುಗಿಬಿದ್ದಿದ್ದರಿಂದ ಪೊಲೀಸರು ಅವರತ್ತ ಲಾಠಿ ಬೀಸಿದರು. ಬೆಳಿಗ್ಗೆ ಉಪಾಹಾರಕ್ಕಾಗಿ ಮಾಜಿ ಶಾಸಕರ ಪುತ್ರ ಹಾಗೂ ಪುರಸಭೆ ಸ್ಥಾಯಿ ಸಮಿತಿಯ ಅಧ್ಯಕ್ಷ ಬಾಲಚಂದ್ರ ಪಾಟೀಲ ಅವರ ನಿವಾಸಕ್ಕೆ ತೆರಳುವಾಗ ನೂಕು ನುಗ್ಗಲು ಉಂಟಾಯಿತು.

ಈ ಸಂದರ್ಭದಲ್ಲಿ ಚಿತ್ರ ನಟ ದರ್ಶನ್ ಮಾಧ್ಯಮ ಪ್ರತಿನಿಧಿಗಳಿಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ನಿಧನ ವಾರ್ತೆ

ಎಚ್.ಎಸ್.ಸಾಹುಕಯ್ಯ



ಬೆಂಗಳೂರು: ಕೋರಮಂಗಲದ ಕೆಎಚ್‌ಬಿ ಕಾಲೊನಿಯಲ್ಲಿ ವಾಸವಿದ್ದ ನಿವೃತ್ತ ಉಪ ತಹಶೀಲ್ದಾರ್ ಎಚ್.ಎಸ್.ಸಾಹುಕಯ್ಯ (68) ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಸ್ವಗ್ರಾಮ ಹಾಡ್ಲಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರು ಕಂದಾಯ ಇಲಾಖೆಯಲ್ಲಿ 33 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ದೊಡ್ಡಬಳ್ಳಾಪುರ ಉಪವಿಭಾಗದಲ್ಲಿ ಉಪ ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದರು.

ಮಠಾಧೀಶರ ವರ್ತನೆಗೆ ಶಾಸಕ ರವೀಂದ್ರನಾಥ್ ಬೇಸರ • ಜನ ವಿರೋಧಿ ಸರ್ಕಾರಕ್ಕೆ ಚಾಟಿ ಬೀಸಬೇಕಿತ್ತು: ಮಹದೇವಪ್ಪ

‘ಒಬ್ಬರ ಪರ ಮಠಾಧೀಶರ ಮಾತು ಸರಿಯಲ್ಲ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಮಠಾಧೀಶರು ರಾಜಕೀಯ ಮಾಡಬಾರದು. ಒಬ್ಬರ ಪರ ಮಾತನಾಡುವುದು ಸರಿಯಲ್ಲ’ ಎಂದು ಬಿಜೆಪಿ ಶಾಸಕ ಎಸ್.ಎ. ರವೀಂದ್ರನಾಥ್, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬೆನ್ನಿಗೆ ನಿಂತಿರುವ ಮಠಾಧೀಶರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.


ರವೀಂದ್ರನಾಥ್


ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾನೂ ವೀರಶೈವ ಲಿಂಗಾಯತನೇ. ಜಗದೀಶ ಶೆಟ್ಟರ್, ಮುರುಗೇಶ ನಿರಾಣಿ, ಉಮೇಶ್ ಕತ್ತಿ ಎಲ್ಲರೂ ಲಿಂಗಾಯತ ನಾಯಕರೇ. ಎಲ್ಲರೂ ಮಠಗಳ ಭಕ್ತರೇ. ಹೀಗಿರುವಾಗ ಒಬ್ಬರ ಪರ ಮಾತನಾಡುವುದು ಸರಿಯಲ್ಲ’ ಎಂದು ಅಭಿಪ್ರಾಯಪಟ್ಟರು.

ಬಿಜೆಪಿಗೆ ಬಂದು ಮಾತನಾಡಲಿ: ‘ಯಡಿಯೂರಪ್ಪ ಅವರ ಬಗ್ಗೆ ಕಾಳಜಿ ವಹಿಸುತ್ತಿರುವ ಶಾಸಕರಾದ ಶಾಮನೂರು ಶಿವಶಂಕರಪ್ಪ, ಎಂ.ಬಿ.ಪಾಟೀಲ ಅವರು ಕಾಂಗ್ರೆಸ್‌ನಲ್ಲಿದ್ದುಕೊಂಡು ಬೆಂಬಲ ಕೊಡ್ತೇವೆ ಎನ್ನುವುದು ನ್ಯಾಯವಲ್ಲ. ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ ಬಿಜೆಪಿಗೆ ಬಂದು ಮಾತನಾಡಲಿ’ ಎಂದು ಸಲಹೆ ನೀಡಿದರು.

‘ಮುಖ್ಯಮಂತ್ರಿಯಾಗಿ ಯಾರು ಇರಬೇಕು ಎಂಬುದನ್ನು ಪಕ್ಷದ ಹೈಕಮಾಂಡ್ ಹೇಳುತ್ತದೆ. ಅದನ್ನೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೂ ಹೇಳಿದ್ದಾರೆ. ನಾನು ಕೂಡಾ ಅದನ್ನೇ ಹೇಳುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಮಠಾಧೀಶರ ವರ್ತನೆ ತಲೆ ತಗ್ಗಿಸುವಂತಿದೆ’

ಬೆಂಗಳೂರು: ‘ರಾಜ್ಯದ ಹಲವು ಮಠಾಧೀಶರು ಜಾತಿ ರಾಜಕಾರಣದೊಳಕ್ಕೆ ಸಕ್ರಿಯವಾಗಿ ಧುಮುಕಿ, ಈ ಕಾರಣಕ್ಕಾಗಿಯೇ ಜನವಿರೋಧಿ ಸರ್ಕಾರವೊಂದರ ಬೆಂಬಲಕ್ಕೆ ನಿಂತಿರುವ ಪರಿಯು ತಲೆ ತಗ್ಗಿಸುವಂತಿದೆ’ ಎಂದು ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಟೀಕಿಸಿದ್ದಾರೆ.


ಮಹದೇವಪ್ಪ

ಮಠಾಧೀಶರ ವರ್ತನೆ ಕುರಿತು ಬುಧವಾರ ಹೇಳಿಕೆ ನೀಡಿರುವ ಅವರು, ‘ಮಠಾಧೀಶರು ತಮ್ಮ ಕರ್ತವ್ಯವನ್ನು ಮರೆತು ಜನವಿರೋಧಿ ಸರ್ಕಾರವನ್ನು ಬೆಂಬಲಿಸುತ್ತಿರುವುದು ಜಾತಿವಾದಿ ಸಮಾಜವನ್ನು ಮುಂದುವರಿಸುವ ಅಪಾಯದ ಸೂಚನೆ ನೀಡುತ್ತಿದೆ’ ಎಂದು ಹೇಳಿದ್ದಾರೆ.

ಬೆಲೆ ಏರಿಕೆ, ಕಳಪೆ ಆಡಳಿತದ ಮೂಲಕ ಸಾಮಾನ್ಯ ಜನರ ಬದುಕು ದುಸ್ಥಿತಿಗೆ ತಲುಪುವಂತೆ ಮಾಡಿರುವ ಸರ್ಕಾರಕ್ಕೆ ಮಠಾಧೀಶರು ಚಾಟಿ ಬೀಸಬೇಕಿತ್ತು. ಆದರೆ, ಜವಾಬ್ದಾರಿ ಮರೆತ ಅವರು ಜನವಿರೋಧಿಗಳ ಬೆಂಬಲಕ್ಕೆ ನಿಂತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ತೈಲ ಬೆಲೆ ಏರಿಕೆ ಮತ್ತು ಕೋಮುವಾದಿಗಳ ವಿರುದ್ಧ ಮಠಾಧೀಶರು ಒಗ್ಗೂಡಿ ಧ್ವನಿ ಎತ್ತಿದ್ದರೆ ನೆಮ್ಮದಿ ಅನಿಸುತ್ತಿತ್ತು. ಆದರೆ, ಜನರ ಬದುಕಿಗೆ ಅನನುಕೂಲ ಮಾಡಿರುವ ನಾಯಕನ ರಕ್ಷಣೆಗೆ ಜಾತಿ ಕಾರಣಕ್ಕೇ ಕಾಯಲು ಒಗ್ಗಟ್ಟಾಗಿರುವುದು ಬೇಸರದ ಸಂಗತಿ’ ಎಂದಿದ್ದಾರೆ.

ಮುಖ್ಯಮಂತ್ರಿ ಪರ ವೀರಶೈವ ಮಠಾಧೀಶರ ವಕಾಲತ್ತು

ಶಿವಮೊಗ್ಗ: ಬಿ.ಎಸ್.ಯಡಿಯೂರಪ್ಪ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು. ಇಲ್ಲದಿದ್ದರೆ ಸಾಮೂಹಿಕ ಹೋರಾಟ ಅನಿವಾರ್ಯ ಎಂದು ಮಲೆನಾಡು ವೀರಶೈವ ಮಠಾಧೀಶರ ಪರಿಷತ್ ಎಚ್ಚರಿಸಿತು.

‘ಮಠಗಳು ಸಮಾಜದ ಕೇಂದ್ರಗಳು. ಸಮಾಜಸೇವೆ ಮುಖ್ಯ ಉದ್ದೇಶ. ಸೇವೆ ಮಾಡುವ ಜನರನ್ನು ಗೌರವಿಸುವುದು ಮಠಗಳ ಕೆಲಸ. ನಿಜವಾದ ಸೇವಾ ಧುರೀಣ ಬಿ.ಎಸ್.ಯಡಿಯೂರಪ್ಪ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು ಎಂದು ಒತ್ತಾಯಿಸಿದೆ. ‘ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಬಾರದು’ ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಠಾಧೀಶರ ಪರಿಷತ್ ಅಧ್ಯಕ್ಷ ಬೆಕ್ಕಿನ ಕಲ್ಮಠದ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮೀಜಿ ಆಗ್ರಹಿಸಿದರು. ಗೋಷ್ಠಿಯಲ್ಲಿ 21 ಮಠಾಧೀಶರು ಭಾಗವಹಿಸಿದ್ದರು.

‘ಬಿಜೆಪಿ ಅಸ್ತಿತ್ವ ಕಳೆದುಕೊಳ್ಳಲಿದೆ’

ಕೂಡಲಸಂಗಮ (ಬಾಗಲಕೋಟೆ): ‘ಆರ್‌ಎಸ್‌ಎಸ್‌ನವರ ಪ್ರಭಾವದಿಂದ ಬಿಜೆಪಿ ವರಿಷ್ಠರು ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಿಸಿದರೆ ಬಿಜೆಪಿ ಅಸ್ತಿತ್ವ ಕಳೆದುಕೊಳ್ಳಲಿದೆ’ ಎಂದು ಕೂಡಲಸಂಗಮ ಬಸವಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಎಚ್ಚರಿಸಿದ್ದಾರೆ.


ಮಾತೆ ಗಂಗಾದೇವಿ


‘ಲಿಂಗಾಯತರು ಯಡಿಯೂರಪ್ಪ ಅವರನ್ನು ನೋಡಿ ಬಿಜೆಪಿಗೆ ಮತ ಹಾಕಿದ್ದಾರೆ. ಕೇಂದ್ರ ಸರ್ಕಾರ ಅನಗತ್ಯವಾಗಿ ಮೂಗು ತೂರಿಸುವುದು ಸರಿಯಲ್ಲ. ಧರ್ಮದ ವಿಷಯದಲ್ಲಿ ಭಿನ್ನಾಭಿಪ್ರಾಯ ಇದ್ದರೂ, ಯಡಿಯೂರಪ್ಪ ಅವರಿಗೇ ನಮ್ಮ ಬೆಂಬಲ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಬಸವನಬಾಗೇವಾಡಿ (ವಿಜಯಪುರ) ವರದಿ: ‘ಯಡಿಯೂರಪ್ಪ ಅವರನ್ನು ಸಿ.ಎಂ ಸ್ಥಾನದಿಂದ ಇಳಿಸಿದರೆ ರಾಜ್ಯದಲ್ಲಿ ಬಿಜೆಪಿ ಸರ್ವನಾಶ ನಿಶ್ಚಿತ. ಲಿಂಗಾಯತರು ಬಿಜೆಪಿಯಿಂದ ದೂರವಾಗುತ್ತಾರೆ’ ಎಂದು ಇಂಗಳೇಶ್ವರದ ವಚನ ಶಿಲಾಮಂಟಪದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಸಿ.ಎಂ ಬದಲಾವಣೆ ಕುರಿತ ಮಾಹಿತಿಯೂ ನಮ್ಮಲ್ಲಿಲ್ಲ. ವಿವಿಧ ಮಠಾಧೀಶರು ಯಡಿಯೂರಪ್ಪ ಅವರನ್ನೇ ಮುಂದುವರಿಸಲು ಒತ್ತಾಯಿಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅನಿಸಿಕೆ ವ್ಯಕ್ತಪಡಿಸಲು ಅವಕಾಶವಿದೆ
ಕೋಟ ಶ್ರೀನಿವಾಸ ಪೂಜಾರಿ, ಮುಜರಾಯಿ ಸಚಿವ

ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿ ಎಲ್ಲರೂ ಬಾಯಿಮುಚ್ಚಿಕೊಂಡು ಇರಬೇಕು. ಅನಗತ್ಯವಾಗಿ ಮಾತನಾಡಿದರೆ ಪಕ್ಷ, ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರಲಿದೆ. ಏನು ಮಾಡಬೇಕು ಎಂದು ಹೈಕಮಾಂಡ್ ನಿರ್ಧರಿಸುತ್ತದೆ
ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಸಚಿವ

ಸಿ.ಎಂ ಬದಲಾವಣೆ ಇಲ್ಲ: ಬೊಮ್ಮಾಯಿ, ಡಿವಿಎಸ್


ಬೊಮ್ಮಾಯಿ


ಸದಾನಂದಗೌಡ

ಬೆಂಗಳೂರು: ಮುಖ್ಯಮಂತ್ರಿಯಾಗಿ ಯಡಿಯೂರಪ್ಪ ಅವರೇ ಮುಂದುವರಿಯಲಿದ್ದಾರೆ ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಸಿ.ಎಂ ಆಗಿ ಮುಂದುವರಿಯುವುದಾಗಿ ಯಡಿಯೂರಪ್ಪ ಅವರೇ ಸ್ಪಷ್ಟಪಡಿಸಿದ್ದಾರೆ. ಪಕ್ಷದ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರೂ ನಾಯಕತ್ವ ಬದಲಾವಣೆ ಪ್ರಶ್ನೆ ಇಲ್ಲ ಎಂದು ಈಗಾಗಲೇ ಹೇಳಿದ್ದಾರೆ’ ಎಂದರು.

‘ರಾಜಕೀಯ ಅಸ್ಥಿರತೆ ಸೃಷ್ಟಿಸಲು ಗೊಂದಲ ಹುಟ್ಟು ಹಾಕಲಾಗಿದೆ. ಯಡಿಯೂರಪ್ಪ ಪ್ರಬಲ ನಾಯಕ ಮಾತ್ರವಲ್ಲ, ನಮ್ಮ ನಾಯಕರೂ ಹೌದು. ನಿಸ್ಸಂಶಯವಾಗಿಯೂ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ’ ಎಂದು ಹೇಳಿದರು.

ಬದಲಾವಣೆ ಇಲ್ಲ– ಡಿವಿಎಸ್: ‘ರಾಜಕೀಯವೇ ಅನಿರೀಕ್ಷಿತ. ಏನು ಬೇಕಾದರೂ ಆಗಬಹುದು. ಆದರೆ, ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ. ಉಳಿದದ್ದು ರಾಷ್ಟ್ರೀಯ ನಾಯಕರಿಗೆ ಬಿಟ್ಟದ್ದು’ ಎಂದು ಬೆಂಗಳೂರು ಉತ್ತರ ಕ್ಷೇತ್ರದ ಸಂಸದ ಡಿ.ವಿ.ಸದಾನಂದಗೌಡ ತಿಳಿಸಿದರು.

‘ಯಡಿಯೂರಪ್ಪ ಇತ್ತೀಚೆಗೆ ಪ್ರಧಾನಿ ಮೋದಿಯವರನ್ನು ಭೇಟಿ ಮಾಡಿದ್ದರು. ಆಗ, ರಾಜ್ಯದಲ್ಲಿ ಕೋವಿಡ್ ನಿರ್ವಹಣೆ ಮತ್ತು ಅಭಿವೃದ್ಧಿ ಕೆಲಸಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಅವರನ್ನು ಬದಲಿಸಲಾಗುತ್ತದೆ ಎಂಬ ವಿಚಾರದಲ್ಲಿ ಸತ್ಯಾಂಶ ಇಲ್ಲ’ ಎಂದರು.

‘ಯಡಿಯೂರಪ್ಪ ಒಳ್ಳೆ ಕೆಲಸ ಮಾಡಿದ್ದರಿಂದಲೇ ಮಠಾಧೀಶರು ಅವರ ನೆರವಿಗೆ ಧಾವಿಸಿದ್ದಾರೆ. ಶಾಸಕ ಯತ್ನಾಳ ಅವರ ಬಗ್ಗೆ ಮಾತನಾಡುವುದಿಲ್ಲ. ನಾನು ಪಕ್ಷದ ಅಧ್ಯಕ್ಷನಾಗಿದ್ದಾಗಲೇ ಅವರನ್ನು 6 ವರ್ಷಗಳ ಕಾಲ ಉಚ್ಚಾಟಿಸಿದ್ದೆ’ ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ನಿಲುವಿನಲ್ಲಿ ಬದಲಾವಣೆ ಇಲ್ಲ: ಶಾಮನೂರು ಪ್ರತಿಪಾದನೆ

ಬೆಂಗಳೂರು: ‘ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಅವರನ್ನು ಬದಲಿಸಬಾರದು ಎಂಬ ನಿಲುವಿನಲ್ಲಿ ಯಾವ ಬದಲಾವಣೆ ಇಲ್ಲ’ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿದರು.



ಲಿಂಗಾಯತರನ್ನು ಸೆಳೆಯಲು ಶಾಮನೂರು ಶಿವಶಂಕರಪ್ಪ ಪ್ರಯತ್ನಿಸುತ್ತಿದ್ದಾರೆ ಎಂಬ ಬಿಜೆಪಿಯ ಕೆಲವು ಮುಖಂಡರ ಆರೋಪಕ್ಕೆ ಬುಧವಾರ ಪ್ರತಿಕ್ರಿಯಿಸಿದ ಅವರು, ‘ಯಡಿಯೂರಪ್ಪ ರಾಜ್ಯದಲ್ಲಿ ಬಿಜೆಪಿ ಕಟ್ಟಿ, ಬೆಳೆಸಿದವರು, ಈಗ ಬದಲಾವಣೆ ಮಾಡಿದರೆ ಕಷ್ಟ. ಅವರ ದುರಾದೃಷ್ಟವನ್ನು ಅವರೇ ಅನುಭವಿಸುತ್ತಾರೆ. ನಮಗೆ ಲಿಂಗಾಯತ ಸಮುದಾಯವನ್ನು ಸೆಳೆಯುವ ಉದ್ದೇಶವಿಲ್ಲ’ ಎಂದರು.

‘ನನ್ನ ಬಳಿ ಎರಡು ಹೆಲಿಕಾಪ್ಟರ್ ಇದ್ದಾವೆ, ಬೆಂಜ್ ಕಾರು ಇವೆ. ನನಗೆ ಇನ್ನೇನು ಬೇಕು? ಸಾಕಲ್ಲವೆ’ ಎಂದು ಅವರು ಮರುಪ್ರಶ್ನೆ ಹಾಕಿದರು.

ನಾಯಕತ್ವ ಬದಲಾವಣೆಗೆ ವೀರಶೈವ ಮಹಾಸಭಾ ವಿರೋಧ

ಬೆಂಗಳೂರು: ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವುದನ್ನು ತೀವ್ರವಾಗಿ ವಿರೋಧಿಸಿರುವ ಅಖಿಲ ಭಾರತ ವೀರಶೈವ ಮಹಾಸಭಾ, ಈ ಕುರಿತು ಉಂಟಾಗಿರುವ ಗೊಂದಲಕ್ಕೆ ಬಿಜೆಪಿ ಹೈಕಮಾಂಡ್ ತಕ್ಷಣ ತೆರೆ ಎಳೆಯಬೇಕು ಎಂದು ಆಗ್ರಹಿಸಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಷ್ಟ್ರೀಯ ಘಟಕದ ಅಧ್ಯಕ್ಷ ಮಹಾಂತೇಶ್ ಪಾಟೀಲ್, ‘ಯಡಿಯೂರಪ್ಪ ಶ್ರಮದಿಂದಾಗಿಯೇ ಬಿಜೆಪಿ ಅಧಿಕಾರಕ್ಕೆ ಬಂದಿದೆ. ರಾಜ್ಯದಲ್ಲಿ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ನಾಯಕತ್ವ ಬದಲಾವಣೆಯ ವಿಷಯ ಪ್ರಸ್ತಾಪಿಸಿ ಗೊಂದಲ ಸೃಷ್ಟಿಸುವ ಮೂಲಕ ಜನರನ್ನು ದಿಕ್ಕು ತಪ್ಪಿಸುತ್ತಿರುವುದು ಸರಿಯಲ್ಲ’ ಎಂದರು.

ಮಹಾಸಭಾದ ಯುವ ಘಟಕದ ಅಧ್ಯಕ್ಷ ಜಿ.ಮನೋಹರ್ ಅಬ್ಬಿಗೆರೆ ಮಾತನಾಡಿ, ‘ಕೊರೊನಾ ಸಂಕಷ್ಟದ ಸಂದರ್ಭದಲ್ಲಿ ಯಡಿಯೂರಪ್ಪ ನೇತೃತ್ವದ ಸರ್ಕಾರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಈಗ ಗೊಂದಲ ಸೃಷ್ಟಿಸಿ ಅಡ್ಡಿಪಡಿಸುತ್ತಿರುವುದು ಸರಿಯಲ್ಲ’ ಎಂದರಿ/

ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷ ಗೋಪಾಲ ಗೌಡ ಪಾಟೀಲ ಸೇರಿದಂತೆ ಹಲವು ಪದಾಧಿಕಾರಿಗಳು ಪತ್ರಿಕಾಗೋಷ್ಠಿಯಲ್ಲಿದ್ದರು.


ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಟೌಟ್‌ಗೆ ಹಾಲಿನ ಅಭಿಷೇಕ ಮಾಡುತ್ತಿರುವುದು

ಸಿ.ಎಂ ಕಟೌಟ್‌ಗೆ ಹಾಲು ಸುರಿದು ಅಭಿಮಾನ ಪ್ರದರ್ಶನ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ಸಚಿವ ಕೆ.ಸಿ.ನಾರಾಯಣಗೌಡರ 59ನೇ ಜನ್ಮದಿನದ ಅಂಗವಾಗಿ ಅಭಿಮಾನಿಗಳು ಪಟ್ಟಣದ ಎಂ.ಕೆ.ಬೊಮ್ಮೇಗೌಡ ವೃತ್ತದಲ್ಲಿ ಬುಧವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅವರ ಪುತ್ರ ಬಿ.ವೈ. ವಿಜಯೇಂದ್ರ ಹಾಗೂ ಗೌಡರ 20 ಅಡಿ ಎತ್ತರದ ಕಟೌಟ್‌ಗಳಿಗೆ ಕ್ರೇನ್ ಮೂಲಕ ಹಾಲು ಸುರಿದು ಅಭಿಮಾನ ಪ್ರದರ್ಶಿಸಿದರು.

ಹುಟ್ಟೂರು ಕೈಗೋನಹಳ್ಳಿಯಲ್ಲಿ ನಾರಾಯಣಗೌಡ ದಂಪತಿ, ಮಗಳು, ಅಳಿಯನನ್ನು ಅಭಿಮಾನಿಗಳು ಎತ್ತಿನಗಾಡಿಯ ಮೂಲಕ ಮೆರವಣಿಗೆ ನಡೆಸಿದರು. ಪಟ್ಟಣದ ಅವರ ನಿವಾಸದಲ್ಲಿ 59 ಕೆ.ಜಿ ತೂಕದ ಕೇಕ್ ಕತ್ತರಿಸಿದರು. ಮನೆಯಲ್ಲಿ ವಿವಿಧ ಧಾರ್ಮಿಕ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದ ಸಚಿವರು ರಾಷ್ಟ್ರೀಯ ಸ್ವಯಂ ಸೇವಾ ಸಂಘಕ್ಕೆ ₹ 51 ಸಾವಿರ ಮಂಗಳನಿಧಿ ಸಮರ್ಪಿಸಿದರು.

ಸ್ವಾಮೀಜಿಗಳಿಗೆ ‘ಕವರ್’: ವಿಡಿಯೊ

ಬೆಂಗಳೂರು: ಬಿ.ಎಸ್.ಯಡಿಯೂರಪ್ಪ ಅವರನ್ನು ಬೆಂಬಲಿಸಲು ಸಿ.ಎಂ ನಿವಾಸಕ್ಕೆ ವಿವಿಧ ಸ್ವಾಮೀಜಿಗಳು ಭೇಟಿ ಕೊಟ್ಟಿದ್ದ ವೇಳೆ, ‘ಕವರ್’ (ಲಕೋಟೆ) ಹಂಚಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಸಿ.ಎಂ ಆಗಿ ಯಡಿಯೂರಪ್ಪ ಅವರನ್ನೇ ಮುಂದುವರಿಸಬೇಕು; ಅವರನ್ನು ಪದಚ್ಯುತಿಗೊಳಿಸಿದರೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ’ ಎಂದು ಮಠಾಧೀಶರು ಎಚ್ಚರಿಸಿದ್ದಾರೆ.

ಸಿ.ಎಂ ನಿವಾಸ ‘ಕಾವೇರಿ’ಯಲ್ಲಿ ಎರಡು ದಿನದಿಂದ ಮಠಾಧೀಶರ ಸಮಾವೇಶವೇ ನಡೆದಿದೆ. ಅಲ್ಲಿ ಕೆಲ ಸ್ವಾಮೀಜಿಗಳಿಗೆ ಬಿಎಸ್‌ವೈ ಸಮ್ಮುಖದಲ್ಲೇ ಕವರ್ ಹಂಚಿದ ವಿಡಿಯೊ ಹರಿದಾಡುತ್ತಿದೆ. ಅದರಲ್ಲಿ ಏನಿದೆ ಎಂಬ ಚರ್ಚೆಯೂ ನಡೆಯುತ್ತಿದೆ.

ಪಾವಿನಕುರ್ವಾದಲ್ಲಿ ವಾಣಿಜ್ಯ ಬಂದರು ನಿರ್ಮಾಣಕ್ಕೆ ವಿರೋಧ

ಶರಾವತಿ ದಂಡೆಯಲ್ಲಿ ಬಂದರು ‘ಗುಮ್ಮ’

ಸದಾಶಿವ ಎಂ.ಎಸ್

ಕಾರವಾರ: ಹೊನ್ನಾವರ ತಾಲ್ಲೂಕಿನ ಪಾವಿನಕುರ್ವಾದಲ್ಲಿ ಖಾಸಗಿ ಬಂದರು ನಿರ್ಮಾಣಕ್ಕೆ ನಡೆಯುತ್ತಿರುವ ಸಿದ್ಧತೆಗಳು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ. ಇಲ್ಲಿ ಬಂದರು ನಿರ್ಮಾಣದಿಂದ ಮೀನುಗಾರರಿಗೆ ಮತ್ತು ಕಡಲಾಮೆಗಳ ಸಂತತಿಗೆ ಧಕ್ಕೆಯಾಗಲಿದೆ ಎಂಬ ಆತಂಕ ವ್ಯಕ್ತವಾಗಿದೆ.

ಶರಾವತಿ ನದಿ ಅರಬ್ಬಿ ಸಮುದ್ರ ಸೇರುವ ಅಳಿವೆಯ ಬಳಿ ಬಂದರು ನಿರ್ಮಿಸಲು ಉದ್ದೇಶಿಸಲಾಗಿದೆ. ಸುಮಾರು ₹ 600 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರವು 93 ಎಕರೆ ಜಮೀನು ಮಂಜೂರು ಮಾಡಲು ಮುಂದಾಗಿದೆ ಎಂಬುದೂ ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

ಕಾಸರಕೋಡಿನಿಂದ ಟೊಂಕಾ ಮೂಲಕ ವಿಶಾಲವಾದ ರಸ್ತೆ ನಿರ್ಮಾಣಕ್ಕೆ ಜೂನ್ 26ರಂದು ಚಾಲನೆ ನೀಡಲು ಹೊನ್ನಾವರ ಪೋರ್ಟ್ ಕಂಪನಿ ಮುಂದಾಗಿತ್ತು. ಜೆ.ಸಿ.ಬಿ ಯಂತ್ರಗಳು ಕಡಲತೀರದಲ್ಲಿದ್ದ ಮೀನುಗಾರರ ಶೆಡ್‌ಗಳನ್ನು ತೆರವು ಮಾಡಲು ಶುರು ಮಾಡಿದ್ದಕ್ಕೆ ಸ್ಥಳೀಯರಿಂದ ತೀವ್ರ ಪ್ರತಿರೋಧ ವ್ಯಕ್ತವಾಗಿತ್ತು. ಬಳಿಕ ಕಾಮಗಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ಇದಕ್ಕೂ ಮೊದಲೇ ಬಂದರು ಯೋಜನೆಯನ್ನು ವಿರೋಧಿಸಿ ಒಂದು ತಿಂಗಳಿಗೂ ಅಧಿಕ ಕಾಲ ನಿರಂತರವಾಗಿ ಧರಣಿಗಳು ನಡೆದಿದ್ದವು.


ಹೊನ್ನಾವರ ತಾಲ್ಲೂಕಿನ ಪಾವಿನಕುರ್ವಾದಲ್ಲಿ ಉದ್ದೇಶಿತ ವಾಣಿಜ್ಯ ಬಂದರು ನಿರ್ಮಾಣಕ್ಕೆ ಗುರುತಿಸಲಾಗಿರುವ ಪ್ರದೇಶ

ಸರ್ವೆ ನಂಬರ್ ಬದಲು?

ಯೋಜನೆ ಜಾರಿಯಾಗುವ ಸ್ಥಳದ ಸರ್ವೆ ನಂಬರ್ ಬದಲಾಗಿದೆ ಎಂಬ ಆರೋಪವಿದೆ. ಈ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿಗೆ ಹೈಕೋರ್ಟ್ ಪೀಠ ಸೂಚಿಸಿತ್ತು. ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ‘ನ್ಯಾಯಾಲಯದ ಆದೇಶದ ಮೂಲ ಪ್ರತಿ ಕೈಸೇರಿದ ಕೂಡಲೇ ಸ್ಥಳಕ್ಕೆ ತೆರಳಿ ಪರಿಶೀಲಿಸಿ ವರದಿ ಸಲ್ಲಿಸಲಾಗುವುದು’ ಎಂದು ಹೇಳಿದ್ದಾರೆ.

ಈ ನಡುವೆ, ಉದ್ದೇಶಿತ ಯೋಜನಾ ಪ್ರದೇಶದಲ್ಲಿ ‘ಆಲಿವ್ ರಿಡ್ಲೆ’ ಆಮೆಗಳು ಮೊಟ್ಟೆಯಿಡುತ್ತವೆ. ಕಾಮಗಾರಿಯಿಂದ ಅವುಗಳಿಗೆ ತೊಂದರೆಯಾಗಲಿದೆ ಎಂದು ಹೊನ್ನಾವರದ ಹಸಿಮೀನು ವ್ಯಾಪಾರಿಗಳ ಸಂಘವು ಹೈಕೋರ್ಟ್ ಮೊರೆ ಹೋಗಿತ್ತು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು, ಯೋಜನೆ ಜಾರಿಯಾಗುವ ಯಾವುದೇ ಭಾಗ ಆಮೆಗಳ ವಾಸಸ್ಥಾನವೇ ಎಂಬುದನ್ನು ಗುರುತಿಸಬೇಕು. ಈ ಬಗ್ಗೆ ರಾಷ್ಟ್ರೀಯ ಕಡಲತೀರದ ಸುಸ್ಥಿರ ನಿರ್ವಹಣೆ ಕೇಂದ್ರದ (ಎನ್.ಸಿ.ಎಸ್.ಸಿ.ಎಂ) ಮೂಲಕ ಸಮೀಕ್ಷೆ ಮಾಡಿಸಲು ಸೂಚಿಸಿತ್ತು. ಈ ಕಾರ್ಯವು ಶೀಘ್ರವೇ ಆರಂಭವಾಗುವ ನಿರೀಕ್ಷೆಯಿದ್ದು, ಅಗತ್ಯ ಸಹಕಾರ ನೀಡಲಾಗುವುದು ಎನ್ನುತ್ತಾರೆ ಸಂಘದ ಪ್ರಮುಖರಾದ ಗಣಪತಿ ಈಶ್ವರ ತಾಂಡೇಲ್.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/2V0i7MC

ಈ ಭಾಗದ ಕಡಲಜೀವ ವಿಜ್ಞಾನಿ ಡಾ.ಪ್ರಕಾಶ ಮೇಸ್ತ ಅವರೂ ಇಲ್ಲಿ ಆಮೆಗಳಿರುವುದನ್ನು ಪ್ರತಿಪಾದಿಸುತ್ತಾರೆ. ‘ಅವುಗಳು ದಡಕ್ಕೆ ತಡರಾತ್ರಿ ಬರುತ್ತವೆ. ಅತ್ಯಂತ ಸೂಕ್ಷ್ಮವಾಗಿ ಮರಳಿನಲ್ಲಿ ಮೊಟ್ಟೆಯಿಟ್ಟು ಪುನಃ ಸಮುದ್ರಕ್ಕೆ ಮರಳುತ್ತವೆ. ಸ್ಥಳೀಯ ಮೀನುಗಾರರು, ವಿವಿಧ ಸಂಘಟನೆಯವರು ಈ ಹಿಂದೆ ಗಮನಿಸಿದ್ದಾರೆ. ಇಲ್ಲಿ ಮಾನವ ಸಂಚಾರ ಕಡಿಮೆ ಇರುವ ಕಾರಣ ಅವುಗಳಿಗೆ ಮೊಟ್ಟೆಯಿಡಲು ಅತ್ಯಂತ ಸೂಕ್ತ ಪ್ರದೇಶವಾಗಿದೆ’ ಎಂದು ಅವರು ಹೇಳುತ್ತಾರೆ.

ಸದ್ಯಕ್ಕೆ ಕಾಮಗಾರಿ ಸ್ಥಗಿತವಾಗಿದ್ದು, ಸ್ಥಳೀಯರು ಪ್ರತಿಭಟನೆ, ಧರಣಿಗಳನ್ನು ಹಿಂಪಡೆದಿದ್ದಾರೆ. ಸರ್ಕಾರದ ಮುಂದಿನ ನಡೆಯನ್ನು ಆಧರಿಸಿ ಹೋರಾಟದ ರೂಪರೇಷೆ ಹಮ್ಮಿಕೊಳ್ಳುವುದಾಗಿ ಹೋರಾಟಗಾರರು ತಿಳಿಸಿದ್ದಾರೆ.

ಆಳ್ವಾಸ್: 190 ವಿದ್ಯಾರ್ಥಿಗಳಿಗೆ ಶೇ 100 ಅಂಕ

ಮೂಡುಬಿದಿರೆ: ದ್ವಿತೀಯ ಪಿಯುಸಿಯಲ್ಲಿ ಇಲ್ಲಿನ ಆಳ್ವಾಸ್ ಕಾಲೇಜಿನ 2,510 ವಿದ್ಯಾರ್ಥಿಗಳ ಪೈಕಿ 190 ವಿದ್ಯಾರ್ಥಿಗಳು 600 ಅಂಕ ಪಡೆಯುವ ಮೂಲಕ ಹೊಸ ದಾಖಲೆ ಮಾಡಿದ್ದಾರೆ.

‘ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕಾಲೇಜುಗಳ 445 ವಿದ್ಯಾರ್ಥಿಗಳು 600 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಪೈಕಿ ಆಳ್ವಾಸ್ ಕಾಲೇಜು ಒಂದರಿಂದಲೇ 190 ವಿದ್ಯಾರ್ಥಿಗಳು ಇದ್ದಾರೆ ಎನ್ನುವುದು ಗಮನಾರ್ಹ’ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಹೇಳಿದರು.

‘40 ವಿದ್ಯಾರ್ಥಿಗಳು 599 ಅಂಕ, 385 ವಿದ್ಯಾರ್ಥಿಗಳು 590ಕ್ಕಿಂತ ಹೆಚ್ಚಿನ ಅಂಕ ಪಡೆದಿದ್ದಾರೆ. 1,637 ವಿದ್ಯಾಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಿಕ್ಷಣ ಸಚಿವ ಸುರೇಶ್ ಕುಮಾರ್ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ’ ಎಂದರು.

ಆಸ್ಕರ್ ಫರ್ನಾಂಡಿಸ್‌ಗೆ ಚಿಕಿತ್ಸೆ ಮುಂದುವರಿಕೆ

ಮಂಗಳೂರು: ಹಿರಿಯ ಕಾಂಗ್ರೆಸ್ ಮುಖಂಡ ಆಸ್ಕರ್ ಫರ್ನಾಂಡಿಸ್ ಅವರಿಗೆ ಇಲ್ಲಿನ ಯೇನೆಪೋಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ. ಮಿದುಳಿನಲ್ಲಿ ರಕ್ತಸ್ರಾವವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ವೆಂಟಿಲೇಟರ್ ಅಳವಡಿಸಿ ಚಿಕಿತ್ಸೆ ನೀಡಲಾಗುತ್ತಿದೆ.

‘ಆಸ್ಕರ್ ಫರ್ನಾಂಡಿಸ್ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ಮಣಿಪಾಲ ಕೆಎಂಸಿ ವೈದ್ಯರು ಸೇರಿದಂತೆ ತಜ್ಞರಿಂದ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಕೇಂದ್ರದ ಮಾಜಿ ಸಚಿವ ಜನಾರ್ದನ ಪೂಜಾರಿ, ಮಾಜಿ ಸಚಿವ ಎಂ.ಬಿ. ಪಾಟೀಲ ಅವರು ಬುಧವಾರ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯರ ಜೊತೆಗೆ ಚರ್ಚಿಸಿದರು.

‘ಆಸ್ಕರ್ ಫರ್ನಾಂಡಿಸ್ ಅವರ ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದೆ. ಅಗತ್ಯ ಬಿದ್ದರೆ, ಟೆಲಿಮೆಡಿಸಿನ್ ಮೂಲಕ ಅತ್ಯುತ್ತಮ ಚಿಕಿತ್ಸೆ ಕೊಡಿಸಲು ಪ್ರಯತ್ನಿಸಲಾಗುವುದು. ಈ ಬಗ್ಗೆ ತಜ್ಞ ವೈದ್ಯರ ಜೊತೆಗೆ ಮಾತುಕತೆ ನಡೆಯುತ್ತಿದೆ’ ಎಂದು ಎಂ.ಬಿ.ಪಾಟೀಲ ತಿಳಿಸಿದರು.

‘ಸೋನಿಯಾ ಗಾಂಧಿ, ರಾಹುಲ್, ಪ್ರಿಯಾಂಕಾ ಅವರೂ ಆಸ್ಕರ್ ಕುಟುಂಬ ಸದಸ್ಯರ ಜೊತೆ ಚರ್ಚಿಸಿದ್ದಾರೆ. ಪೇಜಾವರ ಸ್ವಾಮೀಜಿ ಕೂಡ ಆರೋಗ್ಯ ವಿಚಾರಿಸಿದ್ದಾರೆ. ಆಸ್ಕರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ನನ್ನ ತಂದೆ ಉಪಾಧ್ಯಕ್ಷರಾಗಿದ್ದರು. ನನ್ನ ಮೇಲೂ ಆಸ್ಕರ್ ಅವರಿಗೆ ವಿಶೇಷ ಪ್ರೀತಿ ಇದೆ’ ಎಂದು ಹೇಳಿದರು.

ಅನಾರೋಗ್ಯದ ಮಧ್ಯೆಯೂ ಆಸ್ಕರ್ ಅವರ ಆರೋಗ್ಯ ವಿಚಾರಿಸಲು ಬಂದಿದ್ದ ಜನಾರ್ದನ ಪೂಜಾರಿ ಮಾತನಾಡಿ, ‘ಆಸ್ಕರ್ ಆರೋಗ್ಯವಾಗಿ ಬರುತ್ತಾರೆ. ದೇವರು ಅವರಿಗೆ ಸಹಾಯ ಮಾಡುತ್ತಾರೆ’ ಎಂದು ಗದ್ಗದಿತರಾದರು.

ಆಸ್ಕರ್ ಫರ್ನಾಂಡಿಸ್ ಅವರ ಆರೋಗ್ಯ ಚೇತರಿಕೆಗಾಗಿ ಯುವ ಕಾಂಗ್ರೆಸ್ ರಾಜ್ಯ ಘಟಕದ ಕಾರ್ಯದರ್ಶಿ ಆಶಿತ್ ಪಿರೇರಾ ನೇತೃತ್ವದಲ್ಲಿ ಚರ್ಚ್, ದರ್ಗಾ ಹಾಗೂ ದೇವಸ್ಥಾನದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಕೇರಳ: ಮತ್ತೆ ಮೂವರಲ್ಲಿ ‘ಝಿಕಾ’ ವೈರಸ್

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಮತ್ತೆ ಮೂವರಿಗೆ ಝಿಕಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದೆ. ಇದರಿಂದ ರಾಜ್ಯದಲ್ಲಿ ಈ ಸೋಂಕಿಗೆ ಒಳಪಟ್ಟವರ ಸಂಖ್ಯೆ 41ಕ್ಕೆ ಏರಿಕೆಯಾಗಿದೆ ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ಬುಧವಾರ ತಿಳಿಸಿದ್ದಾರೆ.

ಅನಾಯಾರಾ ಪ್ರದೇಶದ ಇಬ್ಬರು ನಿವಾಸಿಗಳು ಮತ್ತು ಪೆಟ್ಟಾ ವ್ಯಾಪ್ತಿಯ ಒಬ್ಬರಲ್ಲಿ ಹೊಸದಾಗಿ ಈ ಸೋಂಕು ಕಾಣಿಸಿಕೊಂಡಿದೆ ಎಂದು ಸಚಿವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ರಾಜ್ಯದ ವಿವಿಧೆಡೆ ಉತ್ತಮ ಮಳೆ

ಬೀದರ್‌ನಲ್ಲಿ ಮನೆ ಗೋಡೆ ಕುಸಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕದ ಕೆಲವೆಡೆ, ಕರಾವಳಿ, ಮಲೆನಾಡು ಭಾಗದಲ್ಲಿ ಬುಧವಾರ ಉತ್ತಮ ಮಳೆಯಾಗಿದೆ.

ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಕುಮಾರಚಿಂಚೋಳಿ ಗ್ರಾಮದಲ್ಲಿ ಮನೆಗೋಡೆ ಕುಸಿದು ಪಾರ್ವತಿ ವೈಜಿನಾಥ (33) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಹಿಳೆಯ ಪತಿ ಮತ್ತು ಇಬ್ಬರು ಮಕ್ಕಳು ಗಂಭೀರ ಗಾಯಗೊಂಡಿದ್ದಾರೆ.

ಚಿಟಗುಪ್ಪದಲ್ಲಿ ಕವಿತಾ ನೂರೊಂದಪ್ಪ ಅವರ ಮನೆ ಗೋಡೆ ಕುಸಿದಿದೆ. ಬೀದರ್ ಓಲ್ಡ್‌ಸಿಟಿಯ ಶಹಾಗಂಜ್ ಕಮಾನ್ ಸಮೀಪ ಕೋಟೆ ಗೋಡೆಯ ಮಣ್ಣು ಕುಸಿದು ಎರಡು ಮನೆಗಳಿಗೆ ಹಾನಿಯಾಗಿದೆ.

ಕಲಬುರ್ಗಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಆಳಂದ ತಾಲ್ಲೂಕಿನ ಅಮರ್ಜಾ ನದಿಗೆ ಸೇರುವ ಮಂಟಗಿ ಹಳ್ಳ ತುಂಬಿ ಹರಿದಿದೆ.

ಬೀಳುತ್ತಿರುವ ಮಣ್ಣಿನ ಮನೆಗಳು: ಬಾಗಲಕೋಟೆಯ ಹುನಗುಂದ ತಾಲ್ಲೂಕಿನಾದ್ಯಂತ ನಿರಂತರವಾಗಿ ಜಿಟಿಜಿಟಿ ಮಳೆ ಸುರಿಯುತ್ತಿದೆ. ಕೂಡಲಸಂಗಮ ಹಾಗೂ ಸುತ್ತಮುತ್ತಲ್ಲಿನ ಗ್ರಾಮಗಳಲ್ಲಿ ಮಣ್ಣಿನ ಮನೆಗಳು ಸೋರುತ್ತಿದ್ದು, ಕೆಲವೆಡೆ ಬೀಳಲಾರಂಭಿಸಿವೆ.

ಬೆಳಗಾವಿಯ ಜಿಲ್ಲೆಯ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲ್ಲೂಕುಗಳಲ್ಲಿ ಕೃಷ್ಣಾ ಮತ್ತು ಉಪನದಿಗಳ ನೀರಿನ ಒಳಹರಿವು ಏರಿಕೆಯಾಗುತ್ತಿದೆ. ವೇದಗಂಗಾ ಮತ್ತು ದೂಧಗಂಗಾ ನದಿಗಳ ಒಳಹರಿವು ಹೆಚ್ಚುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಜನರು ನದಿಗೆ ಇಳಿಯದಂತೆ ತಾಲ್ಲೂಕು ಆಡಳಿತ ಸೂಚನೆ ನೀಡಿವೆ.

ಪಶ್ಚಿಮ ಘಟ್ಟ ಪ್ರದೇಶದ ಕಣಕುಂಬಿ ಮತ್ತು ಭೀಮಗಡ ಅರಣ್ಯದಲ್ಲಿ ಮಳೆಯ ಆರ್ಭಟ ಮುಂದುವರೆದಿದೆ. ಮಲಪ್ರಭಾ, ಪಾಂಡರಿ ಮತ್ತು ಮಹದಾಯಿ ನದಿಗಳು ಮತ್ತು ಅವುಗಳ ಜಲಮೂಲಗಳು ಉಕ್ಕಿ ಹರಿಯಲಾರಂಭಿಸಿದ್ದು ಕಣಕುಂಬಿ ಮತ್ತು ಭೀಮಗಡ ಅರಣ್ಯ ವಲಯದ ಬಹುತೇಕ ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

ಮನೆಯ ಗೋಡೆ ಕುಸಿದು ಮೂವರಿಗೆ ಗಾಯ: ವಿಜಯನಗರ ಜಿಲ್ಲೆಯ ಅರಸೀಕೆರೆ ಹೋಬಳಿ ವ್ಯಾಪ್ತಿಯಲ್ಲಿ ಎಡೆಬಿಡದೆ ಸುರಿದಿದೆ. ಇಲ್ಲಿನ ನಾಗತಿಕಟ್ಟೆ ತಾಂಡಾದಲ್ಲಿ ಮಂಗಳವಾರ ರಾತ್ರಿ ಮನೆಯ ಗೋಡೆ ಕುಸಿದು ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಗ್ರಾಮದ ಶೇಖರನಾಯ್ಕ, ಅವರ ಪತ್ನಿ ಲಕ್ಷ್ಮೀಬಾಯಿ, ಪುತ್ರಿ ತೇಜಸ್ವಿನಿ ಗಾಯಗೊಂಡವರು.

ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ.

ನಾಲ್ಕು ಮನೆಗಳಿಗೆ ಹಾನಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ನಾಲ್ಕು ಮನೆಗಳಿಗೆ ಹಾನಿಯಾಗಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದ್ದು, ಹೇಮಾವತಿ, ಭದ್ರಾ, ತುಂಗಾ ಹೊಳೆಗಳು ಮೈದುಂಬಿಕೊಂಡಿವೆ.

ಉಡುಪಿ ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದ್ದು, ಹೆಬ್ರಿ ತಾಲ್ಲೂಕಿನ ಮಡಾಮಕ್ಕಿ ಗ್ರಾಮದಲ್ಲಿ ಮನೆಗೆ ಹಾನಿಯಾಗಿದೆ. ಜುಲೈ 26ರವರೆಗೆ ಬಿರುಸಿನ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಭಾಗಮಂಡಲ, ತಲಕಾವೇರಿ, ಸೂರ್ಲಬ್ಬಿ, ಗರ್ವಾಲೆ, ಮಾದಾಪುರ, ಹಟ್ಟಿಹೊಳೆ ಹಾಗೂ ಮುಕ್ಕೊಡ್ಲು ಭಾಗದಲ್ಲಿ ಉತ್ತಮ ಮಳೆಯಾಗಿದ್ದರೆ, ಹಾಸನ ಜಿಲ್ಲೆಯ ವಿವಿಧೆಡೆ ಜಿಟಿಜಿಟಿ ಮಳೆಯಾಗಿದೆ.


ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	101.25	13,458	2,291
ಹಾರಂಗಿ	2,859	2,855.63	6,218	5,390
ಕಬಿನಿ	2284.00	2,280	6,000	6,000
ಹೇಮಾವತಿ	2,922	2,907.07	8,193	275
ಲಿಂಗನಮಕ್ಕಿ	1,819	1,795	31,480	-
ಸೂಪಾ (ಮೀ)	564	542.60	14,719	2,195
ಮಾಣಿ	594	577.64	3267	-
ತುಂಗಭದ್ರಾ	1,633	1,620.29	60,781	4,064
ಮಲಪ್ರಭಾ	2079.5	2,066.00	2,370	194
ಘಟಪ್ರಭಾ	2175	2,149.00	10,239	131
ಭದ್ರಾ	186	166.8	13,502	794
ಆಲಮಟ್ಟಿ (ಮೀ)	519.6	517.80	52,518	36,477
ನಾರಾಯಣಪುರ (ಮೀ)	492.25	491.34	45,000	51,130

*ನೆಲಮಟ್ಟದಿಂದ

ಗರಿಷ್ಠ ಮಳೆ

- ಚಿಕ್ಕಮಗಳೂರು– ಬೇಗಾರ; 10.5 ಸೆಂ.ಮೀ.
- ಉಡುಪಿ– ಉಳ್ಳೂರು; 7.5 ಸೆಂ.ಮೀ.
- ದಕ್ಷಿಣ ಕನ್ನಡ– ಶಿರ್ಲಾಲು; 6 ಸೆಂ.ಮೀ.



60 ದಿನಗಳಲ್ಲಿ ಐಎಎಸ್ ಪ್ರಿಲಿಮ್ಸ್ ತಯಾರಿ

ಆರ್.ಬಿ. ಗುರುಬಸವರಾಜ

ಪದವಿ ನಂತರ ಬಹುತೇಕ ಯುವ ಜನರು ಐಎಎಸ್ ಪರೀಕ್ಷೆ ಬರೆಯಲು ಹಾತೊರೆಯುತ್ತಾರೆ. ಅದಕ್ಕಾಗಿ ಸಿದ್ಧತೆಯನ್ನೂ ಮಾಡಿಕೊಂಡಿರುತ್ತಾರೆ. ಪ್ರಿಲಿಮ್ಸ್ ಪರೀಕ್ಷೆಯು ಐಎಎಸ್ ಕನಸಿನ ಕೋಟೆಯ ಮುಖ್ಯದ್ವಾರವಾಗಿದೆ. ಇದೊಂದು ಸ್ಕ್ರೀನಿಂಗ್ ಪರೀಕ್ಷೆಯಾಗಿದ್ದು, ಹೆಚ್ಚಿನ ಅಭ್ಯರ್ಥಿಗಳು ಇಲ್ಲಿಂದ ಮುಂದೆ ಹೋಗುವುದೇ ಇಲ್ಲ. ಏಕೆಂದರೆ ಇದು ಕಠಿಣ ಪರೀಕ್ಷೆ ಎಂಬುದೇ ಬಹುತೇಕರ ಅಭಿಪ್ರಾಯ. ನಿಜ ಅರ್ಥದಲ್ಲಿ ಹೇಳುವುದಾದರೆ ಯಾವ ಪರೀಕ್ಷೆಯೂ ಕಠಿಣವಲ್ಲ. ಆಯಾ ಪರೀಕ್ಷೆಗೆ ಅನುಗುಣವಾದ ಅಭ್ಯಾಸದ ಕೊರತೆಯಿಂದ ಅದು ಕಠಿಣ ಎನಿಸುತ್ತದೆ. ಈ ಬಾರಿ ಪ್ರಿಲಿಮ್ಸ್ ಪರೀಕ್ಷಾರ್ಥಿಗಳಿಗೆ ಒಂದು ಸುವರ್ಣಾವಕಾಶ ದೊರೆತಿದೆ. ಜೂನ್ 2021ರಲ್ಲಿ ನಡೆಯಬೇಕಾಗಿದ್ದ ಪ್ರಿಲಿಮ್ಸ್ ಪರೀಕ್ಷೆಗಳನ್ನು ಕೋವಿಡ್ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ. ಪರೀಕ್ಷೆ ಮುಂದೂಡಿರುವುದು ಕೆಲವು ಪರೀಕ್ಷಾರ್ಥಿಗಳಿಗೆ ಕಿರಿಕಿರಿಯುಂಟು ಮಾಡಿದರೆ ಬಹುತೇಕ ಪರೀಕ್ಷಾರ್ಥಿಗಳಿಗೆ ವರದಾನವಾಗಿದೆ. ಪರೀಕ್ಷೆಗೆ ಸಿದ್ಧತೆ ನಡೆಸಲು ಇನ್ನಷ್ಟು ದಿನಗಳ ಸಮಯಾವಕಾಶ ದೊರೆತಿದೆ. ಇದನ್ನು ಸರಿಯಾಗಿ ನಿಭಾಯಿಸುವ ಯೋಜನೆ ಮತ್ತು ತಂತ್ರಗಾರಿಕೆಯನ್ನು ಅರಿತು ಸಿದ್ಧತೆ ಮಾಡಿಕೊಂಡರೆ ಖಂಡಿತವಾಗಿಯೂ ಉತ್ತಮ ಯಶಸ್ಸು ಲಭಿಸುತ್ತದೆ.

> ಐಎಎಸ್ ಪ್ರಿಲಿಮ್ಸ್ ಎಂದರೆ ಒಂದು ರೀತಿಯ ಸ್ಕ್ರೀನಿಂಗ್ ಇದ್ದಂತೆ. ಇದಕ್ಕಾಗಿ ಕಠಿಣ ತಯಾರಿ ಇರಲೇಬೇಕು. ಈ ತಯಾರಿಯನ್ನು 60 ದಿನಗಳಲ್ಲಿ ಮಾಡುವುದು ಹೇಗೆ?

60 ದಿನಗಳ ಯೋಜನೆ

ಐಎಎಸ್ ಪ್ರಿಲಿಮ್ಸ್ ಪರೀಕ್ಷೆಗೆ ಸುಮಾರು 60 ದಿನಗಳು (ಇದೇ ವರ್ಷದ ಅಕ್ಟೋಬರ್ 10 ಎಂದು ಯುಪಿಎಸ್‌ಸಿ ಪ್ರಕಟಿಸಿದೆ) ಉಳಿದಿವೆ. ಇದಕ್ಕೆ ನಿಖರವಾದ ಯೋಜನೆ ರೂಪಿಸಿಕೊಳ್ಳುವುದು ಅಗತ್ಯ. ಯೋಜನೆಯು ಸಾಧ್ಯವಾದಷ್ಟೂ ಅನುಷ್ಠಾನಕ್ಕೆ ಸಮೀಪವಾಗಿರಲಿ. ಪ್ರಸ್ತುತ ದೊರೆತ ಸಮಯವನ್ನು ಯಾರು ಸದುಪಯೋಗ ಪಡಿಸಿಕೊಳ್ಳುವರೋ ಯಶಸ್ಸು ಅವರಿಗೆ ಲಭಿಸುತ್ತದೆ. ಅದಕ್ಕಾಗಿ ದಿನಕ್ಕೆ ಕನಿಷ್ಠ 10 ಗಂಟೆಗಳ ಪರಿಣಾಮಕಾರಿ ಅಧ್ಯಯನ ಅಗತ್ಯ ಎಂಬುದು ನೆನಪಿರಲಿ. ಪರಿಣಾಮಕಾರಿ ಅಧ್ಯಯನ ಎಂದರೆ ಪೂರ್ಣ ಏಕಾಗ್ರತೆಯಿಂದ ವಿಷಯ ಗ್ರಹಿಸುವುದಾಗಿದೆ. ಹೊರಗಿನ ಅನಪೇಕ್ಷಿತ ಸಂಪರ್ಕಗಳಿಗೆ ತಡೆಯೊಡ್ಡುವುದು ಅಗತ್ಯ. ಅಂದರೆ ಫೋನ್ ಕರೆಗಳು, ಸಾಮಾಜಿಕ ಜಾಲತಾಣಗಳಿಂದ ಸಂಪೂರ್ಣವಾಗಿ ದೂರವಿರಬೇಕು. ಸಾರ್ವಜನಿಕ ಸಂಪರ್ಕವನ್ನು ಕೆಲವು ದಿನಗಳ ಮಟ್ಟಿಗಾದರೂ ಮುಂದೂಡುವುದು ಅಗತ್ಯ. ಅದಕ್ಕಾಗಿ ಕೆಳಗಿನ ಒಂದಿಷ್ಟು ಚಟುವಟಿಕೆಗಳನ್ನು ಅನುಸರಿಸುವುದು ಅಗತ್ಯ. ಇರುವ 60 ದಿನಗಳನ್ನು ಅಧ್ಯಯನದ ಮಹತ್ವಕ್ಕೆ ಅನುಗುಣವಾಗಿ ವಿಭಾಗಿಸಿಕೊಳ್ಳಬೇಕು. ಮೊದಲ 45 ದಿನಗಳು ವಿಷಯಗಳ ಪರಿಣಾಮಕಾರಿ ಅಧ್ಯಯನಕ್ಕೆ ಮೀಸಲಿಡಿ. ನಂತರ 10 ದಿನಗಳನ್ನು ಪುನರಾವರ್ತನೆಗೆ ಹಾಗೂ ಉಳಿದ 5 ದಿನಗಳು ಸಂಪೂರ್ಣವಾಗಿ ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಿಡಿಸುವುದಕ್ಕೆ ಮೀಸಲಿಡಿ.

ನಿಗದಿತ ದಿನಚರಿ

ಸ್ಥಿರವಾದ ದಿನಚರಿ ಐಎಎಸ್ ಪರೀಕ್ಷಾ ಯಶಸ್ಸಿನ ಮೊದಲ ಮೆಟ್ಟಿಲು. ಹತ್ತು ಗಂಟೆಗಳ ಅಧ್ಯಯನದ ವೇಳಾಪಟ್ಟಿ ಸಿದ್ಧ ಮಾಡಿಕೊಂಡು ಅದನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಅಭ್ಯಾಸ ಮಾಡಬೇಕಾದ ಅಂಶಗಳನ್ನು ಮೂರುಭಾಗಗಳಾಗಿ ಮಾಡಿಕೊಂಡು ವೇಳಾಪಟ್ಟಿ ಸಿದ್ಧಪಡಿಸಿಕೊಂಡರೆ ಉತ್ತಮ– ಮುಖ್ಯ ವಿಷಯಗಳು, ಪ್ರಚಲಿತ ಘಟನೆಗಳು ಮತ್ತು ಸ್ವಯಂ ಪರೀಕ್ಷೆ. 6 ಗಂಟೆಗಳು ಮುಖ್ಯ ವಿಷಯಗಳ ಅಧ್ಯಯನ, 3 ಗಂಟೆಗಳು ಪ್ರಚಲಿತ ಘಟನೆಗಳ ಅಧ್ಯಯನ ಹಾಗೂ ಒಂದು ಗಂಟೆ ಸ್ವಯಂ ಪರೀಕ್ಷೆಗೆ ಮೀಸಲಿಟ್ಟರೆ ಉತ್ತಮ.

ಪ್ರಚಲಿತ ವಿದ್ಯಮಾನಗಳು

ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿಯಲು ಇರುವ ಮುಖ್ಯ ಆಕರವೆಂದರೆ ವೃತ್ತಪತ್ರಿಕೆಗಳು. ಅದರಲ್ಲಿನ ಘಟನೆಗಳನ್ನು ವಿಷಯವಾರು ವಿಂಗಡಣೆ ಮಾಡಿಕೊಂಡು ಅಧ್ಯಯನಕ್ಕೆ ತೊಡಗಬೇಕು. ಪ್ರಚಲಿತ ಘಟನೆಗಳನ್ನಾಧರಿಸಿ ಮೂಲ ವಿಷಯಗಳ ಅಧ್ಯಯನ ಮಾಡಬೇಕು. ಪರಿಕಲ್ಪನೆಯನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳಬೇಕು.
ಇಂದು ಬಹುತೇಕ ವೃತ್ತಪತ್ರಿಕೆಗಳು ಇ-ಆವೃತ್ತಿಗಳಲ್ಲಿ ದೊರೆಯುತ್ತವೆ. ಅವುಗಳನ್ನು ಬಳಸಿಕೊಂಡು ವಿಷಯಗಳ ಅಧ್ಯಯನ ಮಾಡಬಹುದು.

ವಿಷಯದ ಆಳವಾದ ಅಧ್ಯಯನ

ಪ್ರಿಲಿಮ್ಸ್ ಪರೀಕ್ಷೆಗೆ ನಿಗದಿಪಡಿಸಿದ ಪಠ್ಯಕ್ರಮವನ್ನು ಗಮನಿಸಿ ವಿಷಯಗಳ ಅಧ್ಯಯನಕ್ಕೆ ತೊಡಗಬೇಕು. ಪಠ್ಯಕ್ರಮಕ್ಕೆ ನಿಗದಿಪಡಿಸಿದ ವಿಷಯಗಳ ಆಳವಾದ ಅಧ್ಯಯನ ಅಗತ್ಯ. ವಿಷಯಕ್ಕೆ ಸಂಬಂಧಿಸಿದ ಆಕರ ಗ್ರಂಥಗಳನ್ನು ಹೊಂದಿಸಿಕೊಳ್ಳುವುದು ಬಹಳ ಮುಖ್ಯ. ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಆಕರ ಗ್ರಂಥಗಳನ್ನು ಜೋಡಿಸಿಕೊಳ್ಳಿ. ವಿಷಯಗಳ ಮೂಲ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಿ. ಅದಕ್ಕಾಗಿ 6-12ನೇ ತರಗತಿಯ ರಾಜ್ಯ ಮತ್ತು ರಾಷ್ಟ್ರೀಯ ಪಠ್ಯಕ್ರಮದ ಪಠ್ಯಪುಸ್ತಕಗಳನ್ನು ಅಭ್ಯಸಿಸಿ. ವಿಷಯಗಳ ವ್ಯಾಪಕ ಅಧ್ಯಯನಕ್ಕೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಠ್ಯಪುಸ್ತಕಗಳ ಅಧ್ಯಯನ ಅಗತ್ಯ.

ಟಿಪ್ಪಣಿ ತಯಾರಿಕೆ

ಅಧ್ಯಯನದ ವೇಳೆ ಟಿಪ್ಪಣಿ ತಯಾರಿಸಿಕೊಳ್ಳುವುದು ಬಹಳ ಪರಿಣಾಮಕಾರಿ ಅಧ್ಯಯನ ತಂತ್ರವಾಗಿದೆ. ಮೂಲ ವಿಷಯಗಳು ಹಾಗೂ ಪ್ರಚಲಿತ ವಿಷಯಗಳ ಅಧ್ಯಯನ ಮಾಡುವಾಗ ಪರಿಕಲ್ಪನೆಯನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳಲು ಟಿಪ್ಪಣಿ ತಯಾರಿ ಅಗತ್ಯ. ವಿಷಯಗಳನ್ನು ಮೈಂಡ್ ಮ್ಯಾಪ್, ಫ್ಲೋಚಾರ್ಟ್, ಬುಲೆಟ್ ಪಾಯಿಂಟ್ಸ್, ಆಲೇಖಗಳ ರೂಪದಲ್ಲಿ ಟಿಪ್ಪಣಿ ಮಾಡಿಕೊಂಡರೆ ಪುನರಾವರ್ತನೆ ಅಧ್ಯಯನಕ್ಕೆ ತುಂಬಾ ಸಹಕಾರಿಯಾಗುತ್ತದೆ.

ಪುನರಾವರ್ತನೆ

ಐಎಎಸ್ ಸಿದ್ಧತೆಗೆ ಪುನರಾವರ್ತನೆ ಪ್ರಮುಖ ಆಧಾರ ಸ್ತಂಭವಾಗಿದೆ. 45 ದಿನಗಳಲ್ಲಿ ಅಧ್ಯಯನ ಮಾಡಿದ ಟಿಪ್ಪಣಿಗಳನ್ನು ಪುನರಾವರ್ತನೆಗಾಗಿ ಬಳಸಿಕೊಳ್ಳಬೇಕು. ಇದರಲ್ಲಿನ ಪ್ರಮುಖ ಅಂಶಗಳನ್ನು ಅಧ್ಯಯನ ಮಾಡುತ್ತಾ ವಿಷಯವನ್ನು ಪರಿಷ್ಕರಣೆ ಮಾಡಿಕೊಳ್ಳಬೇಕು. ಅಗತ್ಯ ಎನಿಸಿದರೆ ಟಿಪ್ಪಣಿಯನ್ನು ಕೂಡ ಪರಿಷ್ಕರಣೆ ಮಾಡಿಕೊಳ್ಳಿ. ಪರಿಕಲ್ಪನೆ ಕುರಿತ ಹೊಸ ಜ್ಞಾನವನ್ನು ಸೇರಿಸಿಕೊಳ್ಳಿ.

ಸ್ವಯಂ ಪರೀಕ್ಷೆ

ಪ್ರತಿದಿನ 9 ಗಂಟೆಗಳಲ್ಲಿ ಅಧ್ಯಯನ ಮಾಡಿದ ವಿಷಯವನ್ನು ಆಧರಿಸಿ ಸ್ವಯಂ ಪರೀಕ್ಷೆ ನಡೆಸಿಕೊಳ್ಳಿ. ಇದರಿಂದ ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳು ತಿಳಿಯುತ್ತವೆ. ದೌರ್ಬಲ್ಯಗಳನ್ನು ಸಾಮರ್ಥ್ಯಗಳನ್ನಾಗಿಸಿಕೊಳ್ಳಿ. 55 ದಿನಗಳ ಅಭ್ಯಾಸದ ನಂತರ ಉಳಿದ 5 ದಿನಗಳನ್ನು ಸಂಪೂರ್ಣವಾಗಿ ಅಣಕು ಪರೀಕ್ಷೆಗೆ ಬಳಸಿಕೊಳ್ಳಿ. ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಳಸಿಕೊಂಡು ಪ್ರತಿದಿನವೂ ಅಣಕು ಪರೀಕ್ಷೆ ನಡೆಸಿಕೊಳ್ಳಿ. ಇದು ನಿಮ್ಮ ಆತ್ಮವಿಶ್ವಾಸವನ್ನು ವೃದ್ಧಿಸುತ್ತದೆ.

ಆರೋಗ್ಯ ಮತ್ತು ಅಧ್ಯಯನ: ಪರಿಣಾಮಕಾರಿ ಅಧ್ಯಯನಕ್ಕೆ ಆರೋಗ್ಯ ಬಹಳ ಮುಖ್ಯ. ಲಘುವಾದ ಪೌಷ್ಟಿಕ ಆಹಾರ ಉತ್ತಮ ಆರೋಗ್ಯಕ್ಕೆ ಸಹಕಾರಿ. ಕನಿಷ್ಠ 4 ಲೀಟರ್ ನೀರು ಕುಡಿಯಿರಿ. 6 ಗಂಟೆಗಳ ನಿದ್ದೆ, ಲಘು ವ್ಯಾಯಾಮ, ಯೋಗ, ಧ್ಯಾನ ಪ್ರಾಣಾಯಾಮಗಳು ದಿನಚರಿಯಲ್ಲಿರಲಿ. ವಿಷಯಗಳ ಮಧ್ಯೆ ಕನಿಷ್ಠ 10-15 ನಿಮಿಷಗಳ ಬಿಡುವು ಇರಲಿ.

ಪ್ರಜಾವಾಣಿ ಉದ್ಯೋಗ ವಾರ್ತೆ

ನಬಾರ್ಡ್‌ನಲ್ಲಿ ವಿವಿಧ ಹುದ್ದೆಗಳು

ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಮ್ಯಾನೇಜರ್, ಅಸಿಸ್ಟೆಂಟ್ ಮ್ಯಾನೇಜರ್
ಹುದ್ದೆಗಳ ಸಂಖ್ಯೆ: 162
ಸ್ಥಳ: ದೇಶದಲ್ಲೆಡೆ
ವಿದ್ಯಾರ್ಹತೆ: ಹುದ್ದೆಗಳಿಗೆ ಅನುಗುಣವಾಗಿ ವಿದ್ಯಾರ್ಹತೆ ನಿಗದಿ ಮಾಡಲಾಗಿದೆ.
ವಯೋಮಿತಿ: ಕನಿಷ್ಠ 21 ವರ್ಷ ಹಾಗೂ ಗರಿಷ್ಠ 30 ವರ್ಷ. (ಜುಲೈ 1, 2021ಕ್ಕೆ ಅನುಗುಣವಾಗುವಂತೆ). ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ಹಾಗೂ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿ ಸಡಿಲಿಕೆ ಇದೆ.
ಆಯ್ಕೆ ಪ್ರಕ್ರಿಯೆ: ಪ್ರಾಥಮಿಕ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್ 7, 2021
ಹೆಚ್ಚಿನ ಮಾಹಿತಿಗಾಗಿ: nabard.org



ಸಾಂದರ್ಭಿಕ ಚಿತ್ರ

ಬ್ಯಾಂಕಿಂಗ್ ಪರೀಕ್ಷೆ ಎಂಜಿನಿಯರಿಂಗ್ ಪದವೀಧರರಿಗೆ ಹೇಗೆ ಸುಲಭ?

ಮನೋಜ್ ಟಿ.ಪಿ.

ಪಿಯುಸಿ ವಿಜ್ಞಾನ ಓದಿದ ವಿದ್ಯಾರ್ಥಿಗಳಲ್ಲಿ ಬಹುತೇಕ ಮಂದಿ ಎಂಜಿನಿಯರ್ ಆಗಲು ಬಯಸುವುದು ಸಹಜ. ಎಸ್ಸೆಸ್ಸೆಲ್ಸಿಯಲ್ಲಿರುವಾಗಲೇ ಇದಕ್ಕೆ ಪೂರ್ವಸಿದ್ಧತೆ ನಡೆಯುತ್ತಿರುತ್ತದೆ. ಅಂದರೆ ಮುಂದೆ ಪಿಯುಸಿಯಲ್ಲಿ ವಿಜ್ಞಾನ ವಿಷಯ ಅದರಲ್ಲೂ ಪಿಸಿಎಂ ತೆಗೆದುಕೊಳ್ಳಬೇಕು, ಸಿಇಟಿ ಅಥವಾ ಜೆಇಇಗೆ ಸಿದ್ಧತೆ ನಡೆಸಬೇಕು, ಅದಕ್ಕೆ ಸರಿಯಾಗಿ ಮನೆಪಾಠವೂ ಇರಬೇಕು, ಹಾಗೆಯೇ ಆನ್‌ಲೈನ್ ಸಹಾಯವನ್ನೂ ಪಡೆಯಬೇಕು... ಈ ರೀತಿ ಯೋಜನೆ ಹಾಕಿಕೊಳ್ಳುವುದು ಸಾಮಾನ್ಯ.

ಆದರೆ ಎಂಜಿನಿಯರಿಂಗ್ ಮುಗಿಸಿದ ನಂತರ ಎಷ್ಟು ಮಂದಿಗೆ ಉತ್ತಮ ಉದ್ಯೋಗ ಸಿಗುತ್ತದೆ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತ ಹೋದರೆ ಕೊಂಚ ನಿರಾಸೆಯಾಗುತ್ತದೆ. ಎಂಜಿನಿಯರಿಂಗ್‌ನಲ್ಲೂ ಕೆಲವೊಂದು ವಿಭಾಗಗಳಿಗಷ್ಟೇ ಹೆಚ್ಚಿನ ಬೇಡಿಕೆಯಿದ್ದು, ಕೆಲವರು ಬೇರೆ ಕ್ಷೇತ್ರಗಳಲ್ಲಿ ಉದ್ಯೋಗ ಅರಸುವುದು ಅನಿವಾರ್ಯವಾಗುತ್ತದೆ.

ಈಗೀಗ ಎಂಜಿನಿಯರಿಂಗ್ ಪದವಿ ಪಡೆದವರಲ್ಲಿ ಹಲವರು ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಮುಖ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ಓದುತ್ತಿರುವಾಗಲೇ ಈ ಬಗ್ಗೆ ತಯಾರಿ ನಡೆಸುವವರ ಸಂಖ್ಯೆಯೂ ಜಾಸ್ತಿಯೇ ಇದೆ. ಇತ್ತೀಚೆಗೆ ಪ್ರಕಟವಾದ ಒಂದು ಸಮೀಕ್ಷೆಯ ವರದಿ ಪ್ರಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನೇಮಕಾತಿ ಪ್ರಕ್ರಿಯೆ ನಿರಂತರವಾಗಿರುವುದರಿಂದ ಇಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ಎಂಜಿನಿಯರಿಂಗ್ ಪದವೀಧರರು ಉದ್ಯೋಗ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಹಾಗೆಯೇ ಗಣಿತ ವಿಷಯವನ್ನು ಬಹುತೇಕ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಕಲಿತಿರುವುದರಿಂದ ಆ ವಿಷಯದಲ್ಲಿ ಅವರಿಗೆ ಅದೊಂದು ಧನಾತ್ಮಕ ಅಂಶ ಎನ್ನಬಹುದು.

ಬ್ಯಾಂಕ್‌ನಲ್ಲಿ ಉದ್ಯೋಗ ಸಿಕ್ಕರೆ ಅದೊಂದು ಸುರಕ್ಷಿತ ಹಾಗೂ ಕಾಯಂ ಉದ್ಯೋಗ ಎಂದೇ ಪರಗಣಿಸಲಾಗಿದ್ದು, ಎಂಜಿನಿಯರಿಂಗ್ ಪದವೀಧರರು ಇದರತ್ತ ಆಕರ್ಷಿತರಾಗಲು ಇನ್ನೊಂದು ಕಾರಣ. ಹೀಗಾಗಿ ಇವರು ಮಾತ್ರವಲ್ಲ, ವಿವಿಧ ವೃತ್ತಿಪರ ವಿಷಯಗಳಲ್ಲಿ ಪದವಿ ಪಡೆದವರು ಕೂಡ ಬ್ಯಾಂಕಿಂಗ್ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಾಲಿಡುತ್ತಿದ್ದು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪೈಪೋಟಿ ಜಾಸ್ತಿಯಾಗಲು ಕಾರಣ ಎಂದೇ ವಿಶ್ಲೇಷಿಸಲಾಗುತ್ತಿದೆ.

ಸಾಮಾನ್ಯವಾಗಿ ಎಂಜಿನಿಯರಿಂಗ್‌ನ ಎಲ್ಲಾ ವಿಭಾಗಗಳಲ್ಲಿ ಪದವಿ ಪಡೆದವರು ಈ ಬ್ಯಾಂಕ್ ಪರೀಕ್ಷೆಗೆ ಕೂರಲು ಅರ್ಹರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್, ಕಂಪ್ಯೂಟರ್ ವಿಜ್ಞಾನ, ಮಾಹಿತಿ ತಂತ್ರಜ್ಞಾನದಲ್ಲಿ ಎಂಜಿನಿಯರಿಂಗ್ ಪದವಿ ಪಡೆದವರು ಕೆಲವು ಬ್ಯಾಂಕ್‌ಗಳಲ್ಲಿರುವ ಐಟಿ ಅಧಿಕಾರಿ ವಿಶೇಷ ಹುದ್ದೆಗೆ ಕೂಡ ಅರ್ಹರು.

ಎಂಜಿನಿಯರಿಂಗ್ ಓದುತ್ತಿರುವಾಗಲೇ ಬ್ಯಾಂಕ್ ಪರೀಕ್ಷೆಗಳ ಬಗ್ಗೆ ಅರಿತುಕೊಂಡು ಆ ನಿಟ್ಟಿನಲ್ಲಿ ತಯಾರಿ ನಡೆಸುವುದು ಸೂಕ್ತ. ಸ್ಪರ್ಧಾತ್ಮಕ ಪರೀಕ್ಷೆಯ ಕುರಿತು ವಿವರ, ಯಾವಾಗ ಪರೀಕ್ಷೆಗೆ ಪ್ರಕಟಣೆ ಹೊರಡಿಸುತ್ತಾರೆ, ಹೇಗೆ ಅಭ್ಯಾಸ ಮಾಡಬೇಕು ಎಂಬ ವಿವರಗಳನ್ನೆಲ್ಲ ಕಲೆ ಹಾಕಬೇಕಾಗುತ್ತದೆ. ಪದವಿ ಪಡೆದ ನಂತರ ಇದಕ್ಕಾಗಿ ಸೂಕ್ತ ವೇಳಾಪಟ್ಟಿಯನ್ನೂ ಇಟ್ಟುಕೊಂಡು ಅಭ್ಯಾಸ ಶುರು ಮಾಡಬೇಕು.

ಆಗಲೇ ಹೇಳಿದಂತೆ ಸಾಮಾನ್ಯವಾಗಿ ಎಂಜಿನಿಯರಿಂಗ್ ಪದವೀಧರರಿಗೆ ಗಣಿತಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭ. ಅಂದರೆ ನ್ಯೂಮರಿಕಲ್ ವಿಷಯವನ್ನು ಹೆಚ್ಚಿನ ಶ್ರಮವಿಲ್ಲದೇ ಉತ್ತಮ ಅಂಕಗಳೊಂದಿಗೆ ಪಾಸ್ ಮಾಡಬಹುದು. ಹಾಗಂತ ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುವುದು ಸರಿಯಲ್ಲ. ಪದವಿಯಲ್ಲಿ ಕಲಿತ ಜ್ಞಾನವನ್ನು ಇಲ್ಲಿ ಒರೆಗೆ ಹಚ್ಚಬೇಕಾಗುತ್ತದೆ. ಎಂಜಿನಿಯರಿಂಗ್ ಓದಿರುವವರು ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನಕ್ಕೂ ಹೆಚ್ಚು ಒತ್ತು ಕೊಡಬೇಕು. ಇದಕ್ಕಾಗಿ ವೃತ್ತಪತ್ರಿಕೆ, ನಿಯತಕಾಲಿಕೆಗಳನ್ನು ಓದುವುದರ ಜೊತೆಗೆ ಪ್ರಚಲಿತ ವಿದ್ಯಮಾನಗಳ ಬಗ್ಗೆಯೂ ಟಿಪ್ಪಣಿ ಮಾಡಿಕೊಳ್ಳಬೇಕು. ಹಾಗೆಯೇ ಇಂಗ್ಲಿಷ್ ದಿನಪತ್ರಿಕೆಗಳ ಓದಿನಿಂದ ಇಂಗ್ಲಿಷ್ ಭಾಷೆಯನ್ನು ಸುಧಾರಿಸಿಕೊಂಡರೆ ಪರೀಕ್ಷೆಗೆ ಹೆಚ್ಚು ಸಹಾಯಕ.

ಇನ್ನುಳಿದಂತೆ ರೀಸನಿಂಗ್ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳುವುದರ ಜೊತೆಗೆ ಬ್ಯಾಂಕಿಂಗ್ ಮತ್ತು ಆರ್ಥಿಕತೆ ಕುರಿತು ಜ್ಞಾನವನ್ನು ಹೆಚ್ಚು ಓದುವುದರ ಮೂಲಕ ಗಳಿಸಿಕೊಳ್ಳಬಹುದು. ಇದು ಸಂದರ್ಶನ ಎದುರಿಸುವಾಗ ನೆರವಿಗೆ ಬರುತ್ತದೆ.

ಸಿಇಟಿ ದಿಕ್ಸೂಚಿ

Maths - Trigonometry-1

1. Define a relation R on A = {1,2,3,4} as xRy if x divides y . R is
1) Reflexive and transitive
2) Reflexive and symmetric
3) Symmetric and transitive
4) Equivalence

2. In any ΔABC, the simplified form of $\frac{\cos 2A}{a^2}-\frac{\cos 2B}{b^2}$ is
1) a^2-b^2 2) $\frac{1}{a^2-b^2}$
3) $\frac{1}{a^2}-\frac{1}{b^2}$ 4) a^2+b^2

3. Angles of elevation of the top of a tower from three points (collinear) A, B & C on a road leading to the foot of the tower are 30^0, 45^0 & 60^0 respectively. The ratio of AB to BC is
1) $\sqrt{3}:1$ 2) $\sqrt{3}:2$
3) 1 : 2 4) $2:\sqrt{3}$

4. The value of is 10^0.sin 30^0.sin 50^0 sin 70^0 is
1) $\frac{1}{8}$ 2) $\frac{3}{16}$ 3) $\frac{\sqrt{3}}{16}$ 4) $\frac{1}{16}$

5. A value of θ satisfying $\sin 5\theta-\sin 3\theta+\sin\theta=0$, such that $0<\theta<\frac{\pi}{2}$ is
1) $\frac{\pi}{12}$ 2) $\frac{\pi}{6}$ 3) $\frac{\pi}{4}$ 4) $\frac{\pi}{2}$

6. $\frac{\sin 70^0+\cos 40^0}{\cos 70^0+\sin 40^0}=$
1) $\frac{1}{\sqrt{3}}$ 2) $\sqrt{3}$
3) $\frac{1}{2}$ 4) 1

7. If $\sin 2x = 4\cos x$, then x =
1) $n\frac{\pi}{2}\pm\frac{\pi}{4}, n\in Z$ 2) no value
3) $n\pi+(-1)^n\frac{\pi}{4} n\in Z$ 4) $2n\pi\pm\frac{\pi}{2} n\in Z$

8. $\log(\sin 1^\circ).\log(\sin 2^\circ).\log(\sin 3^\circ)$ ....$\log(\sin 179^\circ)$
1) is positive 2) is negative
3) lies between 1 and 180 4) is zero

9. If $\sin x-\sin y=\frac{1}{2}$ & $\cos x-\cos y=1$, then $\tan(x+y)=$ ___________
1) $\frac{3}{8}$ 2) $-\frac{3}{8}$
3) $\frac{4}{3}$ 4) $-\frac{4}{3}$

10. In a triangle ABC, if $\frac{\cos A}{a}=\frac{\cos B}{b}=\frac{\cos C}{c}$ and $a=2$, then its area is ___________
1) $2\sqrt{3}$ 2) $\sqrt{3}$
3) $\frac{\sqrt{3}}{2}$ 4) $\frac{\sqrt{3}}{4}$

11. The general solution of $\sin x-\cos x=\sqrt{2}$, for any integer 'n' is ___________
1) $2n\pi+\frac{3\pi}{4}$ 2) $n\pi$
3) $(2n+1)\pi$ 4) $2n\pi$

12. If $\sin\theta=\sin\alpha$ then
1) $\frac{\theta+\alpha}{2}$ is any odd multiple of $\frac{\pi}{2}$ and $\frac{\theta-\alpha}{2}$ is any multiple of π
2) $\frac{\theta+\alpha}{2}$ is any even multiple of $\frac{\pi}{2}$ and $\frac{\theta-\alpha}{2}$ is any odd multiple of π
3) $\frac{\theta+\alpha}{2}$ is any multiple of $\frac{\pi}{2}$ and $\frac{\theta-\alpha}{2}$ is any odd multiple of π
4) $\frac{\theta+\alpha}{2}$ is any multiple of $\frac{\pi}{2}$ and $\frac{\theta-\alpha}{2}$ is any even multiple of π


13. If $\tan x=\frac{3}{4}$, $\pi<x<\frac{3\pi}{2}$, then the value of $\cos\frac{x}{2}$ is
1) $\frac{3}{\sqrt{10}}$ 2) $-\frac{3}{\sqrt{10}}$
3) $-\frac{1}{\sqrt{10}}$ 4) $\frac{1}{\sqrt{10}}$

Answers

1. Answer (1)
Sol.: Given set A{1.2.3.4} and relation, xRy if x divides y.
$=\{(1,1),(2,2),(3,3),(4,4),(1,2),(1,3),(1,4),(2,4)\}$
Relation

2. Answer (3)
Sol.: $\frac{\cos 2A}{a^2}-\frac{\cos B}{b^2}$
$=\frac{(1-2\sin^2 A)}{a^2}-\frac{(1-2\sin^2 B)}{b^2}$
$=\frac{(1-2a^2k^2)}{a^2}-\frac{(1-2b^2k^2)}{b^2}$
$=\frac{1}{a^2}-\frac{1}{b^2}$

3. Answer (1)
Sol.: By sine law, in ΔABQ
$\frac{\sin 15^\circ}{AB}=\frac{\sin 30^\circ}{BQ}$



$\Rightarrow BQ=\frac{\sin 30^\circ.AB}{\sin 15^\circ}$
$\Rightarrow\frac{AB}{BC}=\frac{\sin 120^\circ}{\sin 30^\circ}=\frac{\cos 30^\circ}{\sin 30^\circ}=\frac{\sqrt{3}/2}{1/2}$
$AB:BC=\sqrt{3}:1$

4. Answer (4)
Sol.: $\sin 10^\circ.\sin 30^\circ.\sin 50^\circ.\sin 70^\circ$
$=\frac{1}{2}.\frac{1}{4}\sin 3(10^\circ)=\frac{1}{16}$

5. Answer (2)
Sol.: Given expression
$\sin 5\theta-\sin 3\theta+\sin\theta=0;\theta\in(0,\pi/2)$
$(\sin 5\theta+\sin\theta)=\sin 3\theta$
$2.\sin 3\theta.\cos 2\theta=\sin 3\theta$
$\Rightarrow\theta=0,\pi/3\ \&\ \theta=\pi/6$

6. Answer: (2)
Sol:- $\frac{\sin 70+\sin 50}{\cos 70+\cos 50}=\frac{2\sin 60.\cos 10}{2\cos 60.\cos 10}$
$=\tan 60=\sqrt{3}$

7. Answer: (4)
Sol:- $2\sin x\cos x-4\cos x=0$
$2\cos x(\sin x-2)=0\Rightarrow\cos x=0\Rightarrow x=2x\pi\pm\frac{\pi}{2}$

8. Answer (4)
Sol : $\log(\sin 90^\circ)=\log(1)=0$
$\therefore$ The product = 0

9. Answer (3)
Sol : $\frac{\sin x-\sin y}{\cos x-\cos y}=\frac{1}{2}$
$\Rightarrow\tan\left(\frac{x+y}{2}\right)=-2$
$\tan(x+y)=\frac{4}{3}$

10. Answer (2)
Sol : $\frac{\cos A}{a}=\frac{\cos B}{b}=\frac{\cos C}{c}$
$\Rightarrow$ the triangle is equilateral
Area $=\frac{\sqrt{3}}{4}a^2=\sqrt{3}$

11. Answer (1)
Sol : $\sin x-\cos x=\sqrt{2}$
$\Rightarrow\cos\left(x+\frac{\pi}{4}\right)=-1=\cos\pi$
$\Rightarrow x+\frac{\pi}{4}=2n\pi\pm\pi$
$\Rightarrow x=2n\pi+\frac{3\pi}{4}$ or $2n\pi-\frac{5\pi}{4}$

12. Answer (1)
Hint: Conceptual

13. Answer (3)
Hint: $\tan x=\frac{3}{4}$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 28

376. ಈ ಕೆಳಕಂಡವುಗಳಲ್ಲಿ ಯಾವುದನ್ನು ತಪ್ಪಾಗಿ ಹೊಂದಿಸಲಾಗಿದೆ?
ಎ) ಐಫೆಲ್ ಟವರ್-ಫ್ರಾನ್ಸ್
ಬಿ) ಲೀನಿಂಗ್ ಟವರ್ ಆಫ್ ಪೀಸಾ-ಇಟಲಿ
ಸಿ) ಅಂಗೋರ್ ವಾಟ್-ಕಾಂಬೋಡಿಯಾ
ಡಿ) ಸ್ಟ್ಯಾಚ್ಯು ಆಫ್ ಲಿಬರ್ಟಿ-ಆಸ್ಟ್ರೇಲಿಯಾ

377. ಹಸಿರು ಎಲೆಗಳಲ್ಲಿ ಕಂಡುಬರುವ ಲೋಹ
ಎ) ಕಬ್ಬಿಣ
ಬಿ) ಮ್ಯಾಗ್ನೇಷಿಯಂ
ಸಿ) ಪೊಟ್ಯಾಷಿಯಂ
ಡಿ) ಕೋಬಾಲ್ಟ್

378. ನಾಡಿದ್ದು ಸೋಮವಾರವಾದರೆ, ಮೊನ್ನೆಯ ದಿನ ಯಾವುದು?
ಎ) ಬುಧವಾರ ಬಿ) ಶುಕ್ರವಾರ
ಸಿ) ಗುರುವಾರ ಡಿ) ಶನಿವಾರ

379. ಯಾವುದೇ ಬಿಲ್ ಅನ್ನು 'ಹಣಕಾಸಿನ ಬಿಲ್' ಎಂದು ದೃಢೀಕರಿಸುವವರು ಯಾರು?
ಎ) ಹಣಕಾಸು ಸಚಿವರು
ಬಿ) ರಾಷ್ಟ್ರಪತಿ
ಸಿ) ಲೋಕಸಭೆಯ ಸ್ಪೀಕರ್
ಡಿ) ಪ್ರಧಾನಮಂತ್ರಿ

380. ರಾಜ್ಯ ನೀತಿ ನಿರ್ದೇಶಕ ತತ್ವಗಳು ಸಂವಿಧಾನದ ಯಾವ ಭಾಗದಲ್ಲಿ ಅಡಕವಾಗಿದೆ?
ಎ) ಭಾಗ 2 ಬಿ) ಭಾಗ 3
ಸಿ) ಭಾಗ 4 ಡಿ) ಭಾಗ 5

381. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಾವ ಪಟ್ಟಿಯಲ್ಲಿ ಸೇರಿಸಲಾಗಿದೆ?
ಎ) ರಾಜ್ಯ ಪಟ್ಟಿ
ಬಿ) ಕೇಂದ್ರ ಪಟ್ಟಿ
ಸಿ) ಸಮವರ್ತಿ ಪಟ್ಟಿ
ಡಿ) ಮೇಲಿನ ಯಾವುದೂ ಅಲ್ಲ

382. ಹೊಂದಿಸಿ ಬರೆಯಿರಿ:

1) ಸಮಾನತೆಯ ಹಕ್ಕು	ಎ) ಅನುಚ್ಛೇದ 25
2) ಜೀವಿಸುವ ಹಕ್ಕು	ಬಿ) ಅನುಚ್ಛೇದ 32
3) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು	ಸಿ) ಅನುಚ್ಛೇದ 21
4) ಸಾಂವಿಧಾನಿಕ ಪರಿಹಾರಗಳ ಹಕ್ಕು	ಡಿ) ಅನುಚ್ಛೇದ 14

ಎ) 1-ಎ, 2-ಬಿ, 3-ಸಿ, 4-ಡಿ
ಬಿ) 1-ಬಿ, 2-ಸಿ, 3-ಎ, 4-ಡಿ
ಸಿ) 1-ಡಿ, 2-ಸಿ, 3-ಎ, 4-ಬಿ
ಡಿ) 1-ಸಿ, 2-ಎ, 3-ಡಿ, 4-ಬಿ

383. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಮೊದಲ ಕನ್ನಡಿಗ ಯಾರು?
ಎ) ಮಾಸ್ತಿ ವೆಂಕಟೇಶ ಅಯ್ಯಂಗಾರ್
ಬಿ) ದ.ರಾ. ಬೇಂದ್ರೆ
ಸಿ) ಕುವೆಂಪು
ಡಿ) ವಿ.ಕೃ. ಗೋಕಾಕ್

384. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆ ಆಗುವುದಿಲ್ಲ?
ಎ) ಗೊಮ್ಮಟೇಶ್ವರ ವಿಗ್ರಹ–ಗಂಗರು
ಬಿ) ಬೇಲೂರಿನ ಚೆನ್ನಕೇಶವ ದೇವಾಲಯ-ಹೊಯ್ಸಳರು
ಸಿ) ಪಟ್ಟದಕಲ್ಲಿನ ಹುಚ್ಚಿಮಲ್ಲಿ ದೇವಾಲಯ-ಚಾಲುಕ್ಯರು
ಡಿ) ಐಹೊಳೆಯ ದುರ್ಗಾ ದೇವಾಲಯ-ಕದಂಬರು

385. 'ವಿಪ್ರೋ' ಸಂಸ್ಥಾಪಕರು ಯಾರು?
ಎ) ಕಿರಣ್ ಮಜುಮ್‌ದಾರ್ ಶಾ
ಬಿ) ನಾರಾಯಣ ಮೂರ್ತಿ
ಸಿ) ಅಜೀಂ ಪ್ರೇಮ್‌ಜೀ
ಡಿ) ನೀತಾ ಅಂಬಾನಿ

386. 'ವಿಕ್ರಮಾರ್ಜುನ ವಿಜಯ' ಮಹಾಕಾವ್ಯವನ್ನು ಬರೆದವರು ಯಾರು?
ಎ) ಪಂಪ ಬಿ) ಹರಿಹರ
ಸಿ) ರಾಘವಾಂಕ ಡಿ) ಶ್ರೀವಿಜಯ

387. 135 ರ 80% + 750 ರ 16% = ?
ಎ) 228 ಬಿ) 338
ಸಿ) 224 ಡಿ) 822

388. ಕೂಚಿಪುಡಿ ಶಾಸ್ತ್ರೀಯ ನೃತ್ಯ ಯಾವ ರಾಜ್ಯದ ಕಲೆ?
ಎ) ತಮಿಳುನಾಡು ಬಿ) ಕೇರಳ
ಸಿ) ಒಡಿಶಾ ಡಿ) ಗುಜರಾತ್

389. 6t6'ಹಾರ್ನ್ ಬಿಲ್' ಎಂಬ ಪ್ರಸಿದ್ಧ ಹಬ್ಬವನ್ನು ಎಲ್ಲಿ ಆಚರಿಸಲಾಗುತ್ತದೆ?
ಎ) ನಾಗಾಲ್ಯಾಂಡ್
ಬಿ) ಆಂಧ್ರಪ್ರದೇಶ
ಸಿ) ಕರ್ನಾಟಕ
ಡಿ) ಛತ್ತೀಸಗಡ

390. ಒಂದು ತೋಟದಲ್ಲಿ ತೆಂಗಿನ ಮರ ಮತ್ತು ಮಾವಿನ ಮರಗಳು 5:6 ಅನುಪಾತದಲ್ಲಿ ಇದ್ದು, ಒಟ್ಟು ಮರಗಳ ಸಂಖ್ಯೆ 121 ಇದ್ದರೆ ತೋಟದಲ್ಲಿ ತೆಂಗಿನ ಮರಗಳ ಸಂಖ್ಯೆ ಎಷ್ಟು?
ಎ) 50 ಬಿ) 45
ಸಿ) 55 ಡಿ) 66

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ- 27 ರ ಉತ್ತರ: 362. ಸಿ, 363. ಡಿ, 364. ಡಿ, 365. ಎ, 366. ಬಿ, 367. ಬಿ, 368. ಸಿ, 369. ಎ, 370. ಸಿ, 371. ಎ, 372. ಸಿ, 373. ಬಿ, 374. ಬಿ, 375. ಸಿ



ಸುಭಾಷಿತ

ಮೌಲಿಕವಾದ ವ್ಯಕ್ತಿತ್ವ ಉಳ್ಳವರೊಂದಿಗೆ ಒಡನಾಟ ಇಟ್ಟುಕೊಳ್ಳಿ. ಅವರು ನಿರ್ಗಮಿಸಿದ ನಂತರವೂ ಅವರ ಪ್ರಭಾವವು ನಿಮ್ಮ ಜೀವನದ ಮೇಲೆ ಮಹತ್ತರ ಪರಿಣಾಮವನ್ನು ಬೀರುತ್ತದೆ. –ಜಿಮ್ ರೌನ್

ನಾಯಕತ್ವ ಬದಲಾವಣೆ ವಿಚಾರ ಮಠಾಧೀಶರಿಗೆ ಪಕ್ಷ ರಾಜಕೀಯ ಸಲ್ಲ

ಮುಖ್ಯಮಂತ್ರಿ ಸ್ಥಾನದಿಂದ ಬಿ.ಎಸ್. ಯಡಿಯೂರಪ್ಪ ಅವರನ್ನು ಇಳಿಸಬಾರದು ಎಂದು ನಾಡಿನ ವಿವಿಧ ಸಮುದಾಯಗಳ ಮಠಾಧೀಶರು ಒತ್ತಾಯಿಸುತ್ತಿರುವುದು ರಾಜಕಾರಣ ಮತ್ತು ಧರ್ಮದ ನಡುವಣ ಗೆರೆ ತೆಳುವಾಗುತ್ತಿರುವುದಕ್ಕೆ ನಿದರ್ಶನದಂತಿದೆ. ರಾಜ್ಯದ ಮುಖ್ಯಮಂತ್ರಿ ಯಾರಾಗಬೇಕು ಅಥವಾ ಆ ಮುಖ್ಯಮಂತ್ರಿ ಯಾವ ಸಮುದಾಯಕ್ಕೆ ಸೇರಿದವನಾಗಿರಬೇಕು ಎಂದು ನಿರ್ಧರಿಸುವುದು ಧರ್ಮವನ್ನು ಪ್ರತಿನಿಧಿಸುವ ಮಠಾಧೀಶರ ಕೆಲಸವಲ್ಲ. ಅದು ಮತದಾರರಿಂದ ಆಯ್ಕೆಯಾದ ಶಾಸಕರು ನಿರ್ಧರಿಸಬೇಕಾದ ಸಂಗತಿ. ಮುಖ್ಯಮಂತ್ರಿಯ ಆಯ್ಕೆಯ ವಿವೇಚನೆಯು ಶಾಸಕರು ಹಾಗೂ ಅವರು ಪ್ರತಿನಿಧಿಸುವ ಪಕ್ಷಕ್ಕೆ ಸಂಬಂಧಿಸಿದ್ದೇ ಹೊರತು ಮಠಾಧೀಶರಿಗೆ ಸಂಬಂಧಿಸಿದ್ದಲ್ಲ. ಪ್ರಜಾಪ್ರತಿನಿಧಿಗಳಿಗೆ ಸಂಬಂಧಿಸಿದ ವಿಷಯದಲ್ಲಿ ಮಠಾಧೀಶರು ಮೂಗು ತೂರಿಸಲು ಪ್ರಯತ್ನಿಸುವುದು ಅಸಾಂವಿಧಾನಿಕ ನಡವಳಿಕೆ ಆಗಿರುವಂತೆಯೇ, ಧರ್ಮಪೀಠಗಳಿಗೆ ಶೋಭೆ ತರುವ ಕೆಲಸವೂ ಅಲ್ಲ. ಪಕ್ಷವೊಂದರ ಆಂತರಿಕ ಸಂಗತಿಯನ್ನು ನಾಡಿನ ಬಿಕ್ಕಟ್ಟಿನಂತೆ ಬಿಂಬಿಸಲು ಹೊರಟಿರುವ ಕೆಲವು ಸ್ವಾಮೀಜಿಗಳ ವರ್ತನೆಗೆ ಯಾವ ಸಮರ್ಥನೆಯೂ ಇಲ್ಲ. ರಾಜ್ಯದಲ್ಲಿ ಮುಖ್ಯಮಂತ್ರಿಯನ್ನು ಬದಲಿಸಲು ಆ ಪಕ್ಷದ ವರಿಷ್ಠರು ನಿರ್ಧರಿಸಿದ್ದಾರೆ ಎಂಬ ವದಂತಿಗಳ ಹಿನ್ನೆಲೆಯಲ್ಲಿ ಮೂವತ್ತಕ್ಕೂ ಹೆಚ್ಚು ಮಠಾಧೀಶರು ಯಡಿಯೂರಪ್ಪ ಅವರನ್ನು ಭೇಟಿಯಾಗಿ ತಮ್ಮ ಬೆಂಬಲ ಪ್ರಕಟಿಸಿದ್ದಾರೆ. ಯಡಿಯೂರಪ್ಪನವರನ್ನು ಪದಚ್ಯುತಗೊಳಿಸಿದರೆ ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ಕೆಲವು ಸ್ವಾಮೀಜಿಗಳು ಬಿಜೆಪಿ ವರಿಷ್ಠರಿಗೆ ಎಚ್ಚರಿಕೆ ನೀಡಿದ್ದಾರೆ. ಬೆಂಗಳೂರಿನಲ್ಲಿ ನೂರಾರು ಮಠಾಧೀಶರ ಸಭೆ ನಡೆಸಿ ಸಾಮೂಹಿಕ ಹೋರಾಟಕ್ಕೆ ಮುಂದಾಗುವುದಾಗಿ ಹೇಳಿದ್ದಾರೆ. ಅವಧಿಗೂ ಮುನ್ನ ಯಡಿಯೂರಪ್ಪನವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ಪಕ್ಷಕ್ಕೆ ನಷ್ಟವಾಗುವುದಾಗಿಯೂ ರಾಜ್ಯದಲ್ಲಿ ಬಿಜೆಪಿ ಸರ್ವನಾಶವಾಗುವುದಾಗಿಯೂ ಭವಿಷ್ಯ ನುಡಿದಿದ್ದಾರೆ. ಅವಧಿ ಪೂರ್ಣಗೊಳಿಸುವ ಮೊದಲು ಮುಖ್ಯಮಂತ್ರಿಗಳ ಬದಲಾವಣೆಯ ರಾಜಕಾರಣ ಕರ್ನಾಟಕಕ್ಕೆ ಹೊಸತೇನಲ್ಲ. ಮಠ ಮತ್ತು ರಾಜಕಾರಣಿಗಳ ನಂಟೂ ರಾಜ್ಯಕ್ಕೆ ಹೊಸತಲ್ಲ ಆದರೆ, ಮುಖ್ಯಮಂತ್ರಿಯನ್ನು ಬದಲಾವಣೆ ಮಾಡಬಾರದೆಂದು ಮಠಾಧೀಶರು ಹೀಗೆ ಗುಂಪು ಕಟ್ಟಿಕೊಂಡು ರಾಜಕಾರಣ ಮಾಡುತ್ತಿರುವುದು, ಬೆದರಿಕೆಯ ಮಾತುಗಳನ್ನು ಆಡುತ್ತಿರುವುದನ್ನು ಯಡಿಯೂರಪ್ಪನವರ ಸಂದರ್ಭದಲ್ಲಷ್ಟೇ ನೋಡುತ್ತಿದ್ದೇವೆ. ರಾಜಕೀಯ ಪಕ್ಷ ಹಾಗೂ ರಾಜಕಾರಣಿಯೊಬ್ಬರ ವಕ್ತಾರರಂತೆ ಮಠಾಧೀಶರು ಬಹಿರಂಗವಾಗಿ ನಡೆದುಕೊಳ್ಳುತ್ತಿರುವುದು ನಾಡಿಗೆ ಹೊಸತು.



ಈ ರಾಜಕೀಯ ಪ್ರಹಸನದಿಂದ ಮಠಾಧೀಶರು ದೂರವಿರುವುದು ಮಠಗಳು ಹಾಗೂ ನಾಡಿನ ಹಿತಾಸಕ್ತಿಯಿಂದ ಒಳ್ಳೆಯದು

ತಾವು ಪ್ರತಿನಿಧಿಸುವ ಜಾತಿಗಳ ಹೆಸರಿನಲ್ಲಿ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಬೇಕೆಂದು ಕೆಲವು ಸ್ವಾಮೀಜಿಗಳು ಸರ್ಕಾರದ ಮೇಲೆ ಒತ್ತಡ ತಂದಿದ್ದಾರೆ. ತಂತಮ್ಮ ಸಮುದಾಯಗಳನ್ನು ಸಂಘಟಿಸಿ ಶಕ್ತಿ ಪ್ರದರ್ಶನವನ್ನೂ ನಡೆಸಿದ್ದಾರೆ. ನಿರ್ದಿಷ್ಟ ಜಾತಿಗಳ ಪಟ್ಟಿಗೆ ತಮ್ಮ ಜಾತಿಯ ಬಾಂಧವರನ್ನೂ ಸೇರಿಸಿ, ಮೀಸಲಾತಿ ಕಲ್ಪಿಸುವಂತೆ ಒತ್ತಾಯಿಸಿ ಪಾದಯಾತ್ರೆಗಳನ್ನು ನಡೆಸಿದ್ದಾರೆ. ಸ್ವಾಮೀಜಿಗಳ ಇಂಥ ನಡವಳಿಕೆಗಳು ಜಾತೀಯ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಪ್ರಯತ್ನಗಳೇ ಹೊರತು, ಜಾತ್ಯತೀತ ಸಮಾಜದ ಪರಿಕಲ್ಪನೆಗೆ ಪೂರಕವಾಗಿಲ್ಲ. ಜಾತಿಗಳ ಹೆಸರಿನಲ್ಲಿ ನಿಗಮಗಳನ್ನು ರಚಿಸುವುದು ಸರಿಯಲ್ಲ ಎಂದು ಸರ್ಕಾರಕ್ಕೆ ಕಿವಿಮಾತು ಹೇಳುವ ಬದಲು, ತಾವೇ ಮುಂದೆ ನಿಂತು ಜಾತಿ ಹೆಸರಿನಲ್ಲಿ ನಿಗಮಗಳ ರಚನೆಗೆ ಕುಮ್ಮಕ್ಕು ನೀಡಿದ್ದಾರೆ. ಸಮಾಜದಲ್ಲಿನ ಒಡಕುಗಳ ನಿವಾರಣೆಗೆ ಪೂರಕವಾಗಿ ಕೆಲಸ ಮಾಡಬೇಕಾದವರು, ಜಾತಿಗಳ ಹೆಸರಿನಲ್ಲಿ ಸಮಾಜದಲ್ಲಿರುವ ಒಡಕುಗಳನ್ನು ಮತ್ತಷ್ಟು ಸಂಕೀರ್ಣಗೊಳಿಸುವ ಪ್ರಯತ್ನಗಳಲ್ಲಿ ತೊಡಗಿದ್ದಾರೆ.

ಮಠ ಮಂದಿರಗಳು ಸಕ್ರಿಯ ರಾಜಕಾರಣದಿಂದ ಅಂತರ ಕಾಯ್ದುಕೊಂಡು ಸಮುದಾಯ ಮತ್ತು ನಾಡಿನ ಹಿತಕ್ಕಾಗಿ ಧಾರ್ಮಿಕ ಮಾರ್ಗದಲ್ಲಿ ಚಿಂತಿಸುವುದು ಅಪೇಕ್ಷಣೀಯ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸ್ವಾಮೀಜಿಗಳು ರಾಜಕೀಯ ನಾಯಕರಂತೆ ವರ್ತಿಸುವ ಉದಾಹರಣೆಗಳು ಹೆಚ್ಚುತ್ತಿವೆ. ಸಕ್ರಿಯ ರಾಜಕಾರಣದಲ್ಲಿ ಹಸ್ತಕ್ಷೇಪ ಮಾಡುವುದು ಅವರು ಪ್ರತಿನಿಧಿಸುವ ಸ್ಥಾನಗಳಿಗೆ ಗೌರವ ತರುವಂತಹದ್ದಲ್ಲ. ಸ್ವಾಮೀಜಿಗಳ ಕೆಲಸ ಸಮಾಜಕ್ಕೆ ಅಗತ್ಯವಾದ ಧಾರ್ಮಿಕ ಮಾರ್ಗದರ್ಶನ ಮಾಡುವುದು, ನೈತಿಕ ಮಾದರಿಗಳನ್ನು ರೂಪಿಸಿಕೊಡುವುದು. ಎಲ್ಲಕ್ಕಿಂತ ಮುಖ್ಯವಾಗಿ ಜಾತ್ಯತೀತ ಸಮಾಜ ನಿರ್ಮಾಣದ ಪ್ರಯೋಗಶಾಲೆಗಳನ್ನಾಗಿ ತಾವು ಪ್ರತಿನಿಧಿಸುವ ಮಠಗಳನ್ನು ಬದಲಾಯಿಸುವುದು. ಈ ಹಿಂದೆ ಕೆಲವು ಮಠಾಧೀಶರು ಪರಿಸರ ಚಳವಳಿಗಳಲ್ಲಿ ತೊಡಗಿಕೊಳ್ಳುವ ಮೂಲಕ ವರ್ತಮಾನದ ತವಕತಲ್ಲಣಗಳಿಗೆ ಸ್ಪಂದಿಸಿರುವ ಉದಾಹರಣೆಗಳು ಕರ್ನಾಟಕದಲ್ಲೇ ಇವೆ. ಈ ಮೇಲ್ಪಂಕ್ತಿಯನ್ನು ಅನುಸರಿಸಿ ಧರ್ಮಪೀಠಗಳ ವರ್ಚಸ್ಸು ಹೆಚ್ಚಿಸುವುದರ ಬದಲಾಗಿ, ಪಕ್ಷ ಮತ್ತು ಜಾತಿ ರಾಜಕಾರಣದಲ್ಲಿ ಗುರುತಿಸಿಕೊಳ್ಳಲು ಮುಂದಾಗಿರುವುದು ಸರಿಯಲ್ಲ. ಜನರನ್ನು ದಿಕ್ಕುತಪ್ಪಿಸುವ ರಾಜಕೀಯ ಚಟುವಟಿಕೆಗಳಿಂದ ಮಠಾಧೀಶರು ದೂರವಿರಬೇಕು. ಮಠಕ್ಕೆ ಬರುವ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡುವುದು ಅಥವಾ ವ್ಯವಸ್ಥೆಯ ಲೋಪಗಳ ಬಗ್ಗೆ ಸಮಾಜದ ದನಿಯಾಗಿ ಸ್ವಾಮೀಜಿಗಳು ಕಾರ್ಯ ನಿರ್ವಹಿಸುವ ಬಗ್ಗೆ ಯಾರದೂ ಆಕ್ಷೇಪವಿಲ್ಲ. ಚುನಾವಣಾ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗಿಯಾಗುವ ತುಡಿತ ಸ್ವಾಮೀಜಿಗಳಿಗೆ ಇದ್ದಲ್ಲಿ, ಆ ಸ್ವಾತಂತ್ರ್ಯ ಅವರಿಗಿದ್ದೇ ಇದೆ. ಆದರೆ, ಮಠ ಮತ್ತು ಅಧಿಕಾರ ರಾಜಕಾರಣ ಎರಡರಲ್ಲೂ ಗುರುತಿಸಿಕೊಳ್ಳುವುದು ಗುರುಪೀಠದ ಪರಿಕಲ್ಪನೆಗೆ ಹೊಂದುವುದಿಲ್ಲ. ಹಾಗಾಗಿ ಪ್ರಸಕ್ತ ಮುಖ್ಯಮಂತ್ರಿ ಬದಲಾವಣೆ ಪ್ರಹಸನದಿಂದ ಮಠಾಧೀಶರು ದೂರವಿರುವುದು ಮಠಗಳು ಹಾಗೂ ನಾಡಿನ ಹಿತಾಸಕ್ತಿಯಿಂದ ಒಳ್ಳೆಯದು. ಮುಖ್ಯಮಂತ್ರಿ ಯಾರಿರಬೇಕು ಅಥವಾ ಯಾರಾಗಬೇಕು ಎನ್ನುವುದನ್ನು ಜನಪ್ರತಿನಿಧಿಗಳೇ ನಿರ್ಣಯಿಸಬೇಕು. ಅವರು ತಪ್ಪು ಮಾಡಿದಾಗ ಕಿವಿ ಹಿಂಡಲು ಮತದಾರರು ಇದ್ದೇ ಇದ್ದಾರೆ.

ದಿನದ ಟ್ವೀಟ್




ಸತ್ಯಾಂಶ ಹೊರತರಲಿ

ಎನ್‌ಎಸ್‌ಒ ಕಂಪನಿಯ ಪೆಗಾಸಸ್ ಪ್ರಾಜೆಕ್ಟ್ ಬಗ್ಗೆ ನಾವು ಮುಚ್ಚಿಡುವಂಥದ್ದು ಏನೂ ಇಲ್ಲ ಎಂದಾದರೆ, ಹಣ ಪಾವತಿಸಿದವರು ಯಾರು ಎಂಬುದೂ ಸೇರಿದಂತೆ ಈ ಯೋಜನೆಯ ಬಗ್ಗೆ ಸತ್ಯಾಂಶ ತಿಳಿಸುವಂತೆ ಕೋರಿ ಪ್ರಧಾನಿ ಮೋದಿ ಅವರು ಇಸ್ರೇಲ್ ಪ್ರಧಾನಿಗೆ ಪತ್ರ ಬರೆಯಲಿ.

ಸುಬ್ರಮಣಿಯನ್ ಸ್ವಾಮಿ, ರಾಜ್ಯಸಭಾ ಸದಸ್ಯ, ಬಿಜೆಪಿ ಮುಖಂಡ

ಕಿಡಿನುಡಿ

ಮಠಮಾನ್ಯಗಳು, ಧರ್ಮಾಧಿಕಾರಿಗಳು ಸಮಾಜದ ಭಾಗವಾಗಬೇಕೇ ಹೊರತು ರಾಜಕಾರಣದ, ಅಧಿಕಾರದ ಭಾಗವಾಗಬಾರದು. ಇದು ಜನತಂತ್ರ ವ್ಯವಸ್ಥೆಗೆ ಮಾರಕ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಕಾಗಿನೆಲೆ ಪೀಠದ ಸ್ವಾಮೀಜಿ ಈ ರೀತಿ ಬಾಲಿಶವಾಗಿ ಮಾತನಾಡಿದ್ದರು. ಅವತ್ತು ಕೂಡ ನಾನು ಖಂಡಿಸಿದ್ದೆ. ಧರ್ಮದಲ್ಲಿ ರಾಜಕಾರಣ ತರಬೇಡಿ ಎಂದು ಮಠಾಧೀಶರನ್ನು ಈಗಲೂ ಕೈ ಮುಗಿದು ಕೇಳುವೆ.



ಎಚ್.ವಿಶ್ವನಾಥ್, ವಿಧಾನಪರಿಷತ್ತಿನ ಬಿಜೆಪಿ ಸದಸ್ಯ

25 ವರ್ಷಗಳ ಹಿಂದೆ
ಸೋಮವಾರ, 22-7-1996

• ಸೈನಿಕರ ಹತ್ಯೆ: ಎಲ್‌ಟಿಟಿಇ ಸಮರ್ಥನೆ

ಕೊಲಂಬೊ, ಜುಲೈ 21 (ಯುಎನ್‌ಐ, ಪಿಟಿಐ)– ಶ್ರೀಲಂಕಾದ ಈಶಾನ್ಯ ಕರಾವಳಿ ತೀರದ ಮುಲ್ಲೈತೀವು ಸೇನಾ ನೆಲೆ ಮೇಲೆ ಗುರುವಾರ ದಾಳಿ ನಡೆಸಿದ ಎಲ್‌ಟಿಟಿಇ ಸಂಘಟನೆ ಒಂದು ಸಾವಿರಕ್ಕೂ ಹೆಚ್ಚು ಸೈನಿಕರನ್ನು ಕೊಂದಿರುವುದನ್ನು ಸಮರ್ಥಿಸಿದ್ದು, ಮೃತ ಸೈನಿಕರ ದೇಹಗಳನ್ನು ರೆಡ್‌ಕ್ರಾಸ್ ಸಂಸ್ಥೆ ಮೂಲಕ ಒಪ್ಪಿಸಿದೆ.

ಮುಲ್ಲೈತೀವು ಸೇನಾ ನೆಲೆ ತಲುಪಲು ಸೈನಿಕರಿಗೆ ಅಡ್ಡಿಯೊಡ್ಡಿರುವ ಎಲ್‌ಟಿಟಿಇ ಉಗ್ರಗಾಮಿಗಳು ಇಂದು ಹೆಲಿಕಾಪ್ಟರ್ ಹೊಡೆದುರುಳಿಸಿ 37 ಜನರನ್ನು ಕೊಂದಿರುವುದಾಗಿ ಹೇಳಿಕೊಂಡಿದ್ದಾರೆ. ನಿನ್ನೆಯಷ್ಟೇ ಎಲ್‌ಟಿಟಿಇ ಆತ್ಮಾಹುತಿ ದಳದ ದೋಣಿಗಳು ಶ್ರೀಲಂಕಾ ನೌಕಾದಳದ ಹಡಗು ‘ರಣವೀರು’ವನ್ನು ಮುಳುಗಿಸಿದ ಬೆನ್ನಲ್ಲೇ ಹೆಲಿಕಾಪ್ಟರನ್ನು ಹೊಡೆದುರುಳಿಸಲಾಗಿದೆ.

50 ವರ್ಷಗಳ ಹಿಂದೆ
ಗುರುವಾರ, 22-7-1971

• ಆಡಳಿತ ಕಾಂಗ್ರೆಸ್ ಸಮಿತಿಗಳಿಗೆಲ್ಲ ದೇವರಾಜ ಅರಸು ಅಧ್ಯಕ್ಷತೆ

ನವದೆಹಲಿ, ಜುಲೈ 21– ಆಡಳಿತ ಕಾಂಗ್ರೆಸ್ ಅಧ್ಯಕ್ಷ ದಾಮೋದರಂ ಸಂಜೀವಯ್ಯ ಅವರು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಡಿ. ದೇವರಾಜ ಅರಸು ಅವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಿದ್ದಾರೆ. ಅರಸು ಅವರೇ ಪ್ರದೇಶ ಚುನಾವಣೆ ಸಮಿತಿಯ ಅಧ್ಯಕ್ಷರೂ ಆಗಿರುತ್ತಾರೆ.

ಪ್ರದೇಶ ಕಾಂಗ್ರೆಸಿನ ಕಾರ್ಯಕಾರಿ ಸಮಿತಿ, ಪ್ರದೇಶ ಚುನಾವಣೆ ಸಮಿತಿ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಯ ಸರ್ವ ಸದಸ್ಯರ ಸಭೆಯ ಹೆಸರುಗಳನ್ನು ಇಂದು ಬಿಡುಗಡೆ ಮಾಡಿದ ಪ್ರಧಾನ ಕಾರ್ಯದರ್ಶಿ ಚಂದ್ರಜಿತ್ ಯಾದವ್ ಅವರು ‘ಇದು ಒಪ್ಪಿಗೆ ಪಡೆದ ಪಟ್ಟಿ’ ಎಂದು ಪತ್ರಕರ್ತರಿಗೆ ತಿಳಿಸಿದರು.

ಪಟ್ಟಿ ಪ್ರಕಟಿಸಿದಾಗ ಹಾಜರಿದ್ದ ಅರಸು ಮತ್ತು ವಿಸರ್ಜಿತ ವಿಧಾನಸಭೆಯಲ್ಲಿ ಪಕ್ಷದ ನಾಯಕರಾಗಿದ್ದ ಎಚ್. ಸಿದ್ದವೀರಪ್ಪ ಅವರು ತಮ್ಮ ಸಂತೋಷ ವ್ಯಕ್ತಪಡಿಸಿದರು.

ಅವಳನ್ನು ಕಾಣುವ ನೋಟ ಬದಲಾಗಬೇಕೇ ವಿನಾ ಅವಳಲ್ಲ

ದೇಹವನ್ನು ಕಟ್ಟಿಹಾಕುವ ಕಣ್ಕಟ್ಟು



ವಿಶ್ಲೇಷಣೆ

ಡಾ. ಗೀತಾ ವಸಂತ

‘ಹೆಣ್ಣುಮಕ್ಕಳು ಏನು ಧರಿಸಬೇಕು, ಏನು ತಿನ್ನಬೇಕು, ಹೇಗೆ ವರ್ತಿಸಬೇಕೆಂಬ ಆದೇಶಗಳನ್ನು ನಾವಿನ್ನೂ ಪಾಲಿಸುತ್ತಲೇ ಇರಬೇಕಾ? ಇಂಥ ಸ್ಥಿತಿಗೆ ಕೊನೆಯೇ ಇಲ್ಲವಾ?’ ಎಂದು ಗೆಳತಿಯೊಬ್ಬಳು ಉದ್ಗರಿಸಿದ್ದು ಯಾಕೋ ಇನ್ನೂ ತಣ್ಣಗೆ ಕೊರೆಯುತ್ತಿದೆ. ಹೆಣ್ಣಿನ ವಸ್ತ್ರಸಂಹಿತೆಯ ಕುರಿತು ಒಳಮನೆಗಳಲ್ಲಿ ಚರ್ಚೆ ನಡೆಯುತ್ತಲೇ ಇದೆ.


ಎಂಥೆಂಥ ಬೆಂಕಿಯನ್ನು ಬಚ್ಚಿಟ್ಟುಕೊಂಡಿರುತ್ತಾರೆ ಇವರೆಲ್ಲ ಎಂದು ನೆನೆದಾಗ ದಿಗಿಲಾಗುತ್ತದೆ. ಇಂದಿಗೂ ಹೆಣ್ಣೊಬ್ಬಳು ‘ನನ್ನ ದೇಹ ನನ್ನದು’ ಎಂದು ಘೋಷಿಸಿದರೆ ಸಂಸ್ಕೃತಿಯ ಸ್ವಘೋಷಿತ ವಕ್ತಾರರು ಉರಿದು ಬೀಳುತ್ತಾರೆ. ಈಗನಿಸುತ್ತದೆ, ಅಂದು ಅಕ್ಕಮಹಾದೇವಿ ಬಟ್ಟೆಯನ್ನೇ ಕಳಚಿಟ್ಟು ನಡೆದಾಗ ಲೋಕ ಹೇಗೆ ಬೆಚ್ಚಿಬಿದ್ದಿರಬೇಡ? ಕೃತಕವಾಗಿ ತೊಟ್ಟಿದ್ದನ್ನೆಲ್ಲ ಒಂದಿಲ್ಲೊಮ್ಮೆ ಕಳಚಲೇಬೇಕೆಂಬ ಅರಿವಿಗೆ ತೆತ್ತುಕೊಂಡವಳು ಅವಳು. ಭ್ರಾಂತಿಬೇರುಗಳನ್ನು ಕಳಚದೇ ನಿಜನೆಲೆ ದಕ್ಕದೆಂಬ ಎಚ್ಚರದಲ್ಲಿ ಬೆತ್ತಲಾದವಳು ಅವಳು. ಕೊನೆಗೊಮ್ಮೆ ತೊಟ್ಟು ಕಳಚಿ ಬೀಳುವ ಹಣ್ಣಿನಂತೆ ಮಣ್ಣಿಗೊರಗುವ ಕಾಯದ ಸಹಜ ನೆಲೆಯರಿತದ್ದರಿಂದಲೇ ಆಕೆಗೆ ಕಾಯದ ಲಜ್ಜೆ ಕಳೆದುಕೊಳ್ಳುವುದು ಸಾಧ್ಯವಾಯಿತು. ಅಂಥ ದೇಹವನ್ನು ನಿರ್ಬಂಧಿಸುವ ಅಧಿಕಾರಕ್ಕೆ ಬಟ್ಟೆಯೂ ಒಂದು ದಾರಿ.

ನಖಶಿಖಾಂತ ಸದಾ ಮುಚ್ಚಿಕೊಂಡಿರಬೇಕಾದ ಅವಳ ದೇಹ ಅವಳನ್ನು ಆಳುವ ಏಕೈಕ ಪುರುಷನಿಗೆ ಮಾತ್ರ ಮೀಸಲು. ಇದನ್ನು ಪಾತಿವ್ರತ್ಯವೆಂದು ನಿರೂಪಿಸುತ್ತಾ ಅದೇ ಹೆಣ್ಣಿನ ಧರ್ಮ ಎಂಬುದು ವಿದಿತವಾಯಿತು. ನಮ್ಮ ಪುರಾಣಗಳೂ ಪ್ರತಿಫಲಿಸಿದ್ದು ಪಾತಿವ್ರತ್ಯವೇ ಹೆಣ್ಣಿನ ಶಕ್ತಿಯೆಂದು. ಹೆಣ್ಣಿನ ನೈತಿಕತೆಯೆಂಬುದು ಅವಳ ದೇಹದಲ್ಲೇ ಅಡಗಿದೆಯೆಂಬ ಭಾವ ಸ್ಥಿರವಾಗುತ್ತ ಈ ಅಲಿಖಿತ ಕಾನೂನು ಅವಳನ್ನು ಪರಂಪರಾನುಗತವಾಗಿ ನಿಯಂತ್ರಿಸುತ್ತಲೇ ಬಂದಿದೆ. ದೇಹಕ್ಕಂಟಿದ ಮೌಲ್ಯಗಳ ಹೊರೆಯನ್ನು ಹೊರುತ್ತಾ ದೇಹಕ್ಕೆ ಸಹಜವಾಗಿ ಅನಿಸುವುದೇನೆಂದು ಕೇಳಿಕೊಳ್ಳುವುದನ್ನೇ ಅವಳು ಮರೆತಂತಿದೆ. ತನ್ನ ಬೆತ್ತಲಿಗೆ ತಾನೇ ಭಯಗೊಳ್ಳುತ್ತಾ ದೇಹವೆಂದರೆ ತನ್ನೊಳಗಿನ ತನ್ನನ್ನು ಬಂಧಿಸುವ ಕೋಟೆಯೆಂದೇ ಅವಳಿಗನಿಸಿದೆ.

ಹಾಗೆ ನೋಡಿದರೆ ಹೆಣ್ಣನ್ನು ಪ್ರಕೃತಿಯೊಂದಿಗೆ ಸಮೀಕರಿಸುತ್ತಲೇ ಬರಲಾಗಿದೆ. ಸೃಷ್ಟಿ ಹಾಗೂ ಸಂಗೋಪನೆಗಳು ಅವಳ ಸಹಜ ಧರ್ಮ. ಅವಳ ದೇಹವೂ ಅದಕ್ಕೆ ಪೂರಕ. ಇಲ್ಲಿ ದೇಹ ಹಾಗೂ ಧರ್ಮ ಬೇರೆಯಲ್ಲ. ಆದರೆ ದೇಹದೊಳಗಿನ ಅವಳ ಚೈತನ್ಯವಿದೆಯಲ್ಲ, ಅದು ಅಸೀಮವಾದುದು. ಆಕಾಶದಂತೆ ಅನಂತವಾದುದು. ಅದು ಲಿಂಗತ್ವದ ಹಂಗನ್ನು ಮೀರಿದ್ದು. ಅದನ್ನೇ ವಚನ ಕಾರರು ‘ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ’ ಎಂದಿರುವುದು. ಆದರೆ ಅವಳ ದೇಹವನ್ನು ಮೊಲೆಮುಡಿಗಳ ಮೂಲಕವೇ ಗುರುತಿಸುತ್ತಾ ಅದನ್ನು ಕಾಮದ ಮುದ್ರೆಯಂತೆ ಭಾವಿಸುವುದು ಪುರುಷ ಪ್ರಪಂಚದ ವಿಸಂಗತಿ. ಪ್ರಜನನಕ್ಕಾಗಿ ಇರುವ ಯೋನಿ ಹಾಗೂ ಹಾಲೂಡುವ ಸಲುವಾಗಿ ಇರುವ ಮೊಲೆಗಳು ಕಾಮಪ್ರಚೋದಕ ಅಂಗಗಳಾಗಿ ಕಾಣುವುದು ಅವರ ನೋಟದ ಮಿತಿಯೇ ವಿನಾ ಅದು ಪ್ರಕೃತಿಯ ವಿಕಾರವಲ್ಲ. ಈ ನೋಟದ ವಿಕಾರವನ್ನು ಗೆಲ್ಲಲಾಗದ ಪುರುಷನಿಗೆ ಸದಾ ಹೆಣ್ಣು ಮಾಯೆಯಾಗಿ ಕಾಣುವುದು ಸಹಜವೇ ಆಗಿದೆ. ಆದ್ದರಿಂದಲೇ ತನ್ನನ್ನು ನಿಯಂತ್ರಿಸಿಕೊಳ್ಳಲಾಗದ ಪುರುಷ ಹೆಣ್ಣನ್ನು ನಿಯಂತ್ರಿಸುವ ಅಸಹಾಯಕತೆಯನ್ನು ಪ್ರದರ್ಶಿಸುತ್ತಾನೆ. ಅವಳ ದೇಹವನ್ನು ತನ್ನ ಸೊತ್ತಾಗಿ ಭಾವಿಸುತ್ತ ನಿರ್ಬಂಧಗಳನ್ನು ಹೇರುವ ಪಿತೃಪ್ರಧಾನ ವ್ಯವಸ್ಥೆಯು ಪಾವಿತ್ರ್ಯ, ಪಾತಿವ್ರತ್ಯಗಳ ಭಾವನಾತ್ಮಕ ಆಯುಧಗಳನ್ನು ಬಳಸಿ, ಕಾಣದ ಗಾಯಗಳಲ್ಲಿ ಹೆಣ್ಣು ದೇಹವನ್ನು ಜರ್ಝರಿತಗೊಳಿಸಿದೆ. ಅವಳ ದೇಹದ ಮೇಲೆ ಹಕ್ಕು ಸ್ಥಾಪಿಸುವ ಮನಃಸ್ಥಿತಿ ನಿರಂತರವಾಗಿದೆ.

ತಾನು ಬಯಸಿದ ಹೆಣ್ಣು ತನಗೆ ದಕ್ಕದೇಹೋದಾಗ ಅತ್ಯಾಚಾರವೆಸಗುವ, ಆ್ಯಸಿಡ್ ಎರಚುವ ವಿಕೃತ ಮನಃಸ್ಥಿತಿಯ ಹಿಂದೆ ಭುಗಿಲೇಳುವ ಕ್ರೌರ್ಯ ಕಾಣುತ್ತದೆ. ಹೆಣ್ಣಿನ ಪಾಲಿಗೆ ದೇಹವೊಂದು ಭಯಕಾರಕ ವಸ್ತುವಾಗಿಯೂ ಅದುಮಿಟ್ಟುಕೊಳ್ಳಬೇಕಾದ ಸಂಗತಿಯಾಗಿಯೂ ಪರಿಣಮಿಸಿದ್ದು ಅವಳ ವಿಕಾಸದ ಗತಿಯನ್ನು ನಿಯಂತ್ರಿಸಿದ ದುರಂತಗಳಲ್ಲೊಂದು. ಪ್ರಕೃತಿಯು ಸಂಸ್ಕೃತಿಯಾಗಿ ರೂಪುಗೊಳ್ಳುವ ಹೊರಳುದಾರಿಯಲ್ಲಿ ಹೆಣ್ಣು ಬಲಿಪಶುವಾಗುತ್ತಲೇ ಇದ್ದಾಳೆ. ತನ್ನ ದೇಹದ ಸಹಜವಾದ ಅರಳುವಿಕೆಯನ್ನು ಸಂಭ್ರಮಿಸಲಾಗದ ರೂಕ್ಷ ಸ್ಥಿತಿಯನ್ನು ಅನಿವಾರ್ಯವಾಗಿ ಒಳಗೊಂಡಿದ್ದಾಳೆ. ಇದು ಒಳಗಿನ ತಲ್ಲಣವಾದರೆ, ಹೊರಗಿನ ಧರ್ಮರಕ್ಷಕರು ಸದಾ ಅವಳನ್ನು ರಕ್ಷಿಸುವ ಮಾತಾಡುತ್ತಲೇ ಬಂದಿದ್ದಾರೆ. ವಸ್ತ್ರಸಂಹಿತೆಯೂ ಈ ರಕ್ಷಣಾ ತಂತ್ರದ ಒಂದು ಭಾಗ.

ಕಾಮದ ಕಣ್ಣುಗಳಿಗೆ ಆಕೆ ಪ್ರಚೋದಕ ವಸ್ತುವಾಗುವುದನ್ನು ತಡೆಯಲು ಆಕೆ ಸದಾ ತನ್ನನ್ನು ಮುಚ್ಚಿಕೊಳ್ಳಬೇಕು. ಪರದಾ, ಗೂಂಘಟ್, ಬುರ್ಖಾ ಹೀಗೆ ನಾನಾ ವಿನ್ಯಾಸಗಳು ಧರ್ಮದ ಪರಿಧಿಗೆ ಬರಲು ಹೆಣ್ಣನ್ನು ಕಾಮದ ಗೊಂಬೆಯಾಗಿ ಮಾತ್ರ ಕಾಣಬಲ್ಲ ಕಣ್ಣುಗಳೇ ಕಾರಣ. ಸ್ತ್ರೀತ್ವದ ಅದಮ್ಯ ಚೈತನ್ಯವನ್ನು, ಆ ಸೃಜನಶಕ್ತಿಯ ಅನಂತ ಮುಖಗಳನ್ನು ಆರಾಧಿಸುವ ಪರಂಪರೆ ನಮ್ಮಲ್ಲಿದೆ. ಸ್ತ್ರೀದೇಹವನ್ನು ಶಕ್ತಿಕೇಂದ್ರವಾಗಿ ಕಾಣುವ, ಅವಳನ್ನು ವಿಶ್ರಂಖಲೆಯಾಗಿ ಪರಿಭಾವಿಸುವ ಧಾರ್ಮಿಕ ಪಠ್ಯಗಳು ನಮ್ಮ ನಡುವೆ ಇವೆ. ಆದರೆ ಧಾರ್ಮಿಕ ಪಠ್ಯಗಳಲ್ಲಿರುವ ಆಧ್ಯಾತ್ಮಿಕ ತಥ್ಯವನ್ನು ಅರಿಯಲಾರದೇ ಅದನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸುವ ಅರೆಬರೆತನ ಧರ್ಮವನ್ನು ಜಡಗೊಳಿಸಿದೆ. ತಮ್ಮ ಜೊತೆಗೆ ಬದುಕುತ್ತಿರುವ ವಾಸ್ತವದ ಹೆಣ್ಣುಗಳ ಈ ಸಾಧ್ಯತೆಗಳನ್ನು ಮೊಟಕುಗೊಳಿಸುವ ಸಮಾಜದ ದ್ವಿಮುಖ ನೀತಿಯನ್ನು ಮೀರಲು ಹೊಸ ನೀತಿ ಸಂಹಿತೆಯೇ ಬೇಕಾಗಿದೆ.




ಇಂದಿನ ಅನೇಕ ಮಹಿಳೆಯರು ತಮ್ಮ ದೇಹದ ಸಬಲತ್ವವನ್ನೂ ಮಾನಸಿಕ ಅಸೀಮತೆಯನ್ನೂ ಆರ್ಥಿಕ ಸ್ವಾವಲಂಬನೆಯನ್ನೂ ಸಿದ್ಧಿಸಿಕೊಂಡಿದ್ದಾರೆ. ಇನ್ನೂ ಅನೇಕರು ಅಂಥ ಕನಸುಗಳನ್ನು ಕಾಣುತ್ತಲಿದ್ದಾರೆ. ಅವರು ತಮ್ಮ ವ್ಯಕ್ತಿತ್ವದಿಂದ, ಜ್ಞಾನದಿಂದ ಗುರುತಿಸಿಕೊಳ್ಳಲಿಚ್ಛಿಸುತ್ತಾರೆ. ದೇಹ ಅದಕ್ಕೊಂದು ಸಾಧನ. ಹಾಗಂತ ದೇಹವನ್ನು ಅವರು ನಿರಾಕರಿಸುತ್ತಿಲ್ಲ. ದೇಹವನ್ನು ಆಕ್ರಮಿಸಿದ ಮೌಲ್ಯಗಳ ಹೊರೆ ಕಳಚಿ ಅವರು ಹಗುರಾಗಬಯಸುತ್ತಿದ್ದಾರೆ. ತಮ್ಮ ದೇಹದ ಮೇಲಿನ ಅನ್ಯರ ಅಧಿಕಾರವನ್ನು ನಿರಾಕರಿಸುತ್ತಿದ್ದಾರೆ. ಒಂದುಕಡೆ ಮಹಿಳೆಯರು ಬಾಹ್ಯಾಕಾಶದಲ್ಲೂ ತಮ್ಮ ಹೆಜ್ಜೆಗುರುತು ಮೂಡಿಸಿದ್ದರೆ, ಇನ್ನೊಂದು ಕಡೆ ತಮ್ಮ ಮೇಲೆ ಹೇರುವ ವಸ್ತ್ರಸಂಹಿತೆಯನ್ನು ಕಳಚಿಕೊಳ್ಳುವುದು ಹೇಗೆ ಎಂದೂ ಚರ್ಚಿಸುತ್ತಿದ್ದಾರೆ! ಈ ವಿಪರ್ಯಾಸಗಳ ನಡುವೆ ಅವರ ಬದುಕು ಜೀಕುತ್ತಿದೆ.

ಸೀರೆಯುಟ್ಟರೆ ಅವಳ ಘನತೆ ಹೆಚ್ಚುವುದೆಂದೂ ತಾಳಿ- ಕಾಲುಂಗುರ, ಬುರ್ಖಾಗಳು ಅವಳನ್ನು ರಕ್ಷಿಸುವುವೆಂದೂ ಎಲ್ಲಿಯವರೆಗೆ ನಾವು ಭ್ರಮಿಸುತ್ತೇವೆಯೋ ಅಲ್ಲಿಯವರೆಗೆ ನಾವು ಅವಳನ್ನು ಅವಳಾಗಿ ವಿಕಾಸಗೊಳ್ಳಲು ಬಿಡುವುದಿಲ್ಲ. ಮಹಿಳೆಯರು ಜಿಲ್ಲಾಧಿಕಾರಿಗಳಾಗಿರಲೀ ಪೊಲೀಸ್ ಅಧಿಕಾರಿಗಳಾಗಿರಲೀ ರಾಜಕಾರಣಿಗಳಾಗಿರಲೀ ವಿಜ್ಞಾನಿಗಳಾಗಿರಲೀ ಈ ಸಾಂಪ್ರದಾಯಿಕ ಮೌಲ್ಯಗಳಿಂದ ಅವರು ಮುಕ್ತರಾಗಿರುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಸ್ವಯಂ ಅರಿವಿಲ್ಲದ ಹೆಣ್ಣುಮಕ್ಕಳೇ ಈ ನಿರ್ಬಂಧ ಹೇರುವ ಸಾಧನವಾಗಿ ರೂಪುಗೊಂಡಿರುತ್ತಾರೆ. ದೇಹರಾಜಕಾರಣದ ಪಟ್ಟುಗಳಿಂದ ಬಿಡಿಸಿಕೊಳ್ಳುವುದು ಎಲ್ಲಿದ್ದರೂ ಕಷ್ಟವೇ.

ಸಾರ್ವಜನಿಕ ಬದುಕಿನಲ್ಲಿ ಮುಕ್ತವಾಗಿ ಬೆರೆತು ಹೋಗಿರುವ ಇಂದಿನ ಸ್ತ್ರೀ ಸಮುದಾಯವು ಅಷ್ಟೇ ಮುಕ್ತವಾಗಿ ಕರ್ತವ್ಯ ನಿರ್ವಹಿಸಲು ಅವರ ದೇಹ ಮನಸ್ಸುಗಳೂ ಮುಕ್ತವಾಗಿರಬೇಕು. ಶಿಕ್ಷಕಿಯರ ವಸ್ತ್ರಸಂಹಿತೆಯ ಕುರಿತು ನಡೆಯುತ್ತಿರುವ ಚರ್ಚೆಯಲ್ಲೂ ಹೆಣ್ಣುಮಕ್ಕಳು ಇದನ್ನೇ ಕೇಳುತ್ತಿದ್ದಾರೆ. ಲಿಂಗಸಂವೇದನಾಶೀಲತೆಯನ್ನು ಮೂಡಿಸಬೇಕಾದವರೇ ಲಿಂಗರಾಜಕಾರಣಕ್ಕೆ ಬಲಿಯಾಗಬಾರದೆಂಬುದು ಅವರ ಎಚ್ಚರ. ಇಂದಿನ ವಿದ್ಯಾರ್ಥಿಗಳೂ ಅಧ್ಯಾಪಕಿಯರಿಂದ ಬಯಸುವುದು ಹೊಸ ಅರಿವನ್ನು ಪ್ರೇರೇಪಿಸಬಲ್ಲ ವಿದ್ವತ್ತು ಹಾಗೂ ಅದನ್ನು ಅಭಿವ್ಯಕ್ತಿಸುವ ಸಮರ್ಥ ವೈಖರಿಯನ್ನೇ ಹೊರತು ಅವರ ಬಾಹ್ಯ ಉಡುಗೆ ತೊಡುಗೆಗಳನ್ನಲ್ಲ. ಹೆಣ್ಣಿಗೆ ಅವಳ ಸಾಮರ್ಥ್ಯ, ಧಾರಣಶಕ್ತಿ, ಪ್ರಬುದ್ಧತೆ, ಪ್ರತಿಭೆ, ಸೃಜನಶೀಲತೆಗಳು ಗೌರವ ತಂದುಕೊಡುತ್ತವೆಯೇ ಹೊರತು ಅವಳು ಧರಿಸುವ ದಿರಿಸುಗಳೋ ಲಾಂಛನಗಳೋ ಅಲ್ಲ. ಇದಕ್ಕಾಗಿ ಅವಳನ್ನು ಕಾಣುವ ನೋಟ ಬದಲಾಗಬೇಕೇ ವಿನಾ ಅವಳಲ್ಲ. ಯಾಕೆಂದರೆ ವಿಕಸಿಸುವುದು ಅವಳ ಪ್ರಾಕೃತಿಕ ಹಕ್ಕು.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ವಿಶ್ವವಿದ್ಯಾಲಯ ವಿಜ್ಞಾನ ಕಾಲೇಜು, ತುಮಕೂರು

ಚುರುಮುರಿ



ಫಲಿತಾಂಶದ ಸಿಹಿ-ಕಹಿ

• ಕೆ.ವಿ.ರಾಜಲಕ್ಷ್ಮಿ

‘ಅಂತೂ ರೆಕಾರ್ಡು, ನೂರಕ್ಕಷ್ಟೇ ನೂರು ಫಲಿತಾಂಶ. ಎಲ್ಲರೂ ಪಾಸ್... ಮೊದಲ ಸ್ಥಾನಕ್ಕೆ 2,239 ವಿದ್ಯಾರ್ಥಿಗಳು! ಆದರೇನು, ಸಂಭ್ರಮ ಕೊಂಡಾಡೋಕ್ಕಾಗೋಲ್ಲ’ ಪಿಯು ಪರೀಕ್ಷೆಯ ಫಲಿತಾಂಶದತ್ತ ಬೆಳಕು ಚೆಲ್ಲಿದೆ.

‘ಆದರೂ ಸಪ್ಪೆ ಸಪ್ಪೆ, ವಿದ್ಯಾರ್ಥಿಗಳ ಫೋಟೊ ಪೇಪರ್‌ನಲ್ಲಿ ಬರೋಲ್ಲ, ‘ನಮ್ಮ ಸಂಸ್ಥೆಯ ಹೆಮ್ಮೆ’ ಅಂತ ಟ್ಯೂಷನ್ ಸೆಂಟರ್‌ಗಳು ಭಿತ್ತಿಚಿತ್ರ ಹಾಕ್ಕೊಳ್ಳೋಕ್ಕಾಗೋಲ್ಲ. ಟೀವಿಗಳಲ್ಲಿ ‘ನಿಮ್ಮ ಸಾಧನೆಯ ಹಿಂದಿನ ಕಥೆಯೇನು’ ಅಂತ ಕೇಳೋವರಿಲ್ಲ, ಸಿಹಿ ತಿನ್ನಿಸುತ್ತಿರುವ, ಅಪ್ಪಿ ಹಿಡಿದ ಪೋಷಕರ ಫೋಟೊ ಕಾಣದು... ನಮ್ಮ ಕಾಲದಲ್ಲಿ ಸಪ್ಲಿಮೆಂಟರೀಲಿ ಪಾಸ್ ಆಗಿದ್ದಕ್ಕೇ ಮನೇಲಿ ಮೈಸೂರುಪಾಕ್ ಮಾಡಿದ್ದರು’ ಅತ್ತೆ ಮೆಲುಕು ಹಾಕಿದರು.

‘ಸದ್ಯ ಇನ್ನೊಂದು ಮುಖ್ಯವಾದ ಸಂಗತಿ ಅಂದ್ರೆ, ಕಡಿಮೆ ಮಾರ್ಕ್ಸ್ ಬಂತು ಅಂತಾನೋ ಫೇಲ್ ಆಯಿತು ಅಂತಲೋ ವಿಪರೀತ ಅನಾಹುತಗಳನ್ನು ಮಾಡ್ಕೊಳ್ಳೋದು ತಪ್ಪು’.

‘ಈಗ್ಲೂ ಅಷ್ಟೇ, ಸಮಾಧಾನವಿಲ್ಲದಿದ್ರೆ ಫಲಿತಾಂಶವನ್ನ ನಿರಾಕರಿಸಬಹುದು, ಮತ್ತೆ ಪರೀಕ್ಷೆ ಬರೀಬಹುದು. ಆದರೆ ಹುಷಾರಾಗಿರಬೇಕು. ಯಾಕಂದ್ರೆ ಬರೆದ ಪರೀಕ್ಷೇಲಿ ಕಡಿಮೆ ಮಾರ್ಕ್ಸ್ ಬಂದ್ರೆ, ಅದೇ ಫೈನಲ್’.

‘ಕುಚ್ ಭೀ ಲಿಖೇ ಬಿನಾ, ನಾವು ಮಾತ್ರ ಬರೀಬೇಕು’ ಪುಟ್ಟಿಯ ಅಳಲು.

‘ಯಾಕೆ ಹತ್ತನೆಯವರೂ ಬರೀಲಿಲ್ವಾ, ಅದೂ ದಿನಕ್ಕೆ ಮೂರು ಸಬ್ಜೆಕ್ಟ್! ಅದನ್ನ ನೋಡಿದರೆ ನಿಮ್ಮದು ಮೇಲು. ಪುಸ್ತಕಗಳಂತೂ ‘ಖರೀದಿಸಿದಾಗ ಹೇಗಿತ್ತೋ ಹಾಗೇ ಅನ್ನೋ ಸ್ಥಿತಿಯಲ್ಲಿ ಇದೆ’ ನನ್ನವಳು ಗುಡುಗಿದಳು.

‘ಇನ್ನೇನು ಕಾಲೇಜು ಶುರುವಾಗುತ್ತೆ ಅಂತಾಯ್ತಲ್ಲ, ಥಿಯೇಟರ್‌ಗಳೂ ರಿಓಪನ್, ಯಾವ ತೊಂದರೇನು ಇರೋಲ್ಲ’ ನಾನೆಂದೆ.

ಕಂಠಿ ಹೊರಲಾರದೆ ಹೊರುತ್ತ ದೊಡ್ಡ ಬ್ಯಾಗ್ ಹಿಡಿದು ಬಂದ. ‘ಬಾಸ್ ಕಸಿನ್ ಮಗ ಹತ್ತರಲ್ಲಿ ಎರಡು ಬಾರಿ ಡುಮ್ಕಿ, ಪಿ.ಯುಲಿ ಫಸ್ಟ್ ಅಟೆಂಪ್ಟ್‌ಗೇ ಸೆಕೆಂಡ್ ಕ್ಲಾಸ್. ಅದಕ್ಕೆ ಸ್ವೀಟ್ ಬಾಕ್ಸ್ ನಿಮಗೂ ತಂದೆ, ಇನ್ನೂ ಹಂಚೋದಿದೆ ಬರ್ಲಾ’ ಎಂದ.

‘ಹೆಲ್ಪ್ ಮಾಡೋಕ್ಕೆ ಇವರೂ ಬರ್ತಾರೆ, ಖಾಲಿ ಕೂತಿದಾರೆ... ತೊಟ್ಟು ಕಾಫಿ ಕುಡಿದು ಹೋಗ್ತೀರಂತೆ’ ಎಂದಳು ನನ್ನತ್ತ ನೋಡುತ್ತ.

ಸಂಗತ

ವಾಯುಮಾಲಿನ್ಯ: ಮಾಹಿತಿಯೇ ಮಲಿನ!

ವಾಯುಮಾಲಿನ್ಯದ ಮಾಹಿತಿ ಶೀಘ್ರ ಲಭಿಸುತ್ತದಾದರೂ ಈ ಮಾಹಿತಿಯೇ ಸರಿ ಇಲ್ಲ ಎಂಬುದು ಪತ್ತೆಯಾಗಿದೆ

• ಗುರುರಾಜ್ ಎಸ್. ದಾವಣಗೆರೆ


ದೇಶದ ಬಹುಪಾಲು ರಾಜ್ಯಗಳು ಈಗ ಅನ್‌ಲಾಕ್ ಘೋಷಿಸಿರುವುದರಿಂದ ಉದ್ಯಮಗಳು ಫುಲ್‌ಟೈಂ ಕೆಲಸ ಶುರುಮಾಡಿವೆ. ಲಾಕ್‌ಡೌನ್‌ನಿಂದಾಗಿ ದೇಶದ 90 ನಗರಗಳಲ್ಲಿ ಗಣನೀಯವಾಗಿ ಕಡಿಮೆಯಾಗಿದ್ದ ವಾಯುಮಾಲಿನ್ಯವು ಸರಕು ಸಾಗಣೆ, ಕಟ್ಟಡ ನಿರ್ಮಾಣ, ರಸ್ತೆ ಅಗಲೀಕರಣ, ನಾಗರಿಕ ವಾಹನಗಳ ಸಂಚಾರ ಬಿರುಸುಗೊಂಡು ಮತ್ತೆ ಏರತೊಡಗಿದೆ.

ಮಾಲಿನ್ಯ ತಡೆಯಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಲಿನ್ಯ ನಿಯಂತ್ರಣ ಮಂಡಳಿಗಳ ನಾಯಕತ್ವದಲ್ಲಿ ಹಲವು ಕ್ರಮ ಕೈಗೊಂಡಿವೆ. ಅದರಂತೆ ನಗರಗಳ ಮತ್ತು ನದಿ ತೀರಗಳ ಹೆಚ್ಚು ಮಾಲಿನ್ಯಕಾರಕ ಉದ್ಯಮಗಳು ಸೆಮ್ಸ್ (CEMS– ಕಂಟಿನ್ಯುಯಸ್ ಎಮಿಷನ್ ಮಾನಿಟರಿಂಗ್ ಸಿಸ್ಟಂ) ಅಳವಡಿಸಿಕೊಂಡು, ಹೊಮ್ಮುತ್ತಿರುವ ಮಾಲಿನ್ಯದ ಮಾಹಿತಿಯನ್ನು ನಿರಂತರವಾಗಿ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸರ್ವರ್‌ಗೆ ಪ್ರತೀ ಹದಿನೈದು ನಿಮಿಷಕ್ಕೊಮ್ಮೆ ಕಳಿಸಬೇಕೆಂಬ ನಿಯಮ ಜಾರಿಯಾಗಿದೆ. ಹಿಂದೆಲ್ಲಾ 3 ಅಥವಾ 6 ತಿಂಗಳಿಗೊಮ್ಮೆ ಮಾಲಿನ್ಯದ ವರದಿಯು ಮಂಡಳಿಯ ಕೈ ಸೇರುತ್ತಿತ್ತು. ಕ್ರಮ ತೆಗೆದುಕೊಳ್ಳಲು ಅಥವಾ ಸರಿಪಡಿಸಿಕೊಳ್ಳಿ ಎಂದು ಹೇಳಲು ಮತ್ತಾರು ತಿಂಗಳಾಗಿ ವಾತಾವರಣ ಮತ್ತಷ್ಟು ವಿಷಮಯವಾಗುತ್ತಿತ್ತು. ಈಗ ಹಾಗಲ್ಲ. ದಿನದ ಮಾಹಿತಿಯನ್ನು ಅಂದಂದೇ ನೋಡಿ, ಯಾವ್ಯಾವ ಉದ್ಯಮ ತನ್ನ ಮಾಲಿನ್ಯವನ್ನು ನಿಯಂತ್ರಣದಲ್ಲಿರಿಸಿದೆ ಅಥವಾ ಇಲ್ಲ ಎಂದು ಗಮನಿಸುವ ಮಂಡಳಿಯು, ಹೆಚ್ಚು ಮಾಲಿನ್ಯ ಉಂಟುಮಾಡುವ ಉದ್ಯಮಗಳಿಗೆ ಹಠಾತ್ ಭೇಟಿ ನೀಡಿ ಪರಿಶೀಲಿಸುವುದು, ನೋಟಿಸ್ ಜಾರಿ ಮಾಡುವುದು, ದಂಡ ವಿಧಿಸುವಂತಹ ಕೆಲಸ ಮಾಡುತ್ತಿದೆ. ಆದರೆ ಸರ್ವರ್‌ಗೆ ಬರುವ ಮಾಹಿತಿಯೇ ಸರಿ ಇಲ್ಲ ಎಂಬುದು ಪತ್ತೆಯಾಗಿದೆ!

2014ರಲ್ಲೇ ಕಾನೂನು ಜಾರಿಗೊಳಿಸಿದ ಮಂಡಳಿ, ದೇಶದ 17 ಬಗೆಯ ಉದ್ಯಮಗಳನ್ನು ಅತಿ ಹೆಚ್ಚು ಮಾಲಿನ್ಯಕಾರಕ ಉದ್ಯಮಗಳೆಂದು ಗುರುತಿಸಿ, ಸೆಮ್ಸ್ ಅಳವಡಿಸಿಕೊಳ್ಳಲೇಬೇಕು ಎಂದು ತಾಕೀತು ಮಾಡಿತ್ತು. ಚರ್ಮದ ಕೈಗಾರಿಕೆ, ಡಿಸ್ಟಿಲರೀಸ್, ಸಿಮೆಂಟ್ ಫ್ಯಾಕ್ಟರಿ, ಸಕ್ಕರೆ ಮಿಲ್ಲು, ತೈಲ ರಿಫೈನರಿಗಳು ಅತಿಹೆಚ್ಚು ಮಾಲಿನ್ಯ ಉಂಟು ಮಾಡುತ್ತವೆಯಾದ್ದರಿಂದ ಅಂಥ 4,251 ಘಟಕಗಳನ್ನು ಗುರುತಿಸಿತ್ತು. ತಮ್ಮ ಉದ್ಯಮಕ್ಕೆ ಸರಿಹೊಂದುವ ಸೆಮ್ಸ್ ಅನ್ನು ನೀವೇ ಆಯ್ಕೆ ಮಾಡಿಕೊಳ್ಳಿ ಎಂಬ ಸ್ವಾತಂತ್ರ್ಯ ನೀಡಿತ್ತು. ಎಡವಟ್ಟಾದದ್ದು ಇಲ್ಲಿಯೇ! ಮಾರುಕಟ್ಟೆಯಲ್ಲಿ ಸಾವಿರ ರೂಪಾಯಿಯಿಂದ ಹಿಡಿದು ಹಲವು ಲಕ್ಷ ರೂಪಾಯಿ ಬೆಲೆಯ ಸೆಮ್ಸ್ ಲಭ್ಯವಿವೆ. ಇಂಥದ್ದನ್ನೇ ಹಾಕಬೇಕೆಂಬ ನಿಯಮವಿಲ್ಲದ್ದರಿಂದ ಮಾಲಿನ್ಯವನ್ನು ಮುಚ್ಚಿಡಲು ಬಹುತೇಕ ಕಂಪನಿಗಳು ಕಡಿಮೆ ಬೆಲೆ- ದರ್ಜೆಯ ಸೆಮ್ಸ್ ಅಳವಡಿಸಿಕೊಂಡಿದ್ದು, ಅವು ನೀಡುವ ಮಾಹಿತಿ ಸರಿಯಾಗಿಲ್ಲ ಎಂಬುದು ಗೊತ್ತಾಗಿದೆ.

ಸೆಮ್ಸ್ ತುಂಬಾ ನಾಜೂಕಿನ ಮತ್ತು ಉನ್ನತ ತಂತ್ರಜ್ಞಾನದ ಸಂಕೀರ್ಣ ಉಪಕರಣ. ಅದನ್ನು ನಿರ್ವಹಿಸಲು ತರಬೇತಿ ಪಡೆದ ಕೆಲಸಗಾರರು ಬೇಕು. ಬಳಕೆದಾರರು ಮತ್ತು ವಾರ್ಷಿಕ ಸರ್ವಿಸ್ ನೀಡುವವರಿಗೆ ಸರಿಯಾದ ತರಬೇತಿ ನೀಡಿದ ನಂತರವೇ ಉಪಕರಣ ಅಳವಡಿಸಬೇಕು.

ಸರ್ಕಾರದಿಂದ ಗುರುತಿಸಲ್ಪಟ್ಟ ಲ್ಯಾಬ್‌ಗಳು ಉಪಕರಣಗಳನ್ನು ಪ್ರಮಾಣೀಕರಿಸಬೇಕೆಂಬ ನಿಯಮವಿದೆ. ಅಳವಡಿಕೆಯಾಗಿರುವ ಉಪಕರಣಗಳು ಸರಿ ಇವೆಯೇ? ಆಯಾ ಉದ್ಯಮಗಳಿಗೆ ಹೊಂದುತ್ತವೆಯೇ ಎಂಬುದನ್ನು ಜರ್ಮನಿ ಮತ್ತು ಇಂಗ್ಲೆಂಡ್‌ನ ಸಂಸ್ಥೆಗಳಿಂದ ಪ್ರಮಾಣೀಕರಿಸಿಕೊಳ್ಳಬೇಕು ಎಂಬುದು ಹಲವು ಕಂಪನಿಗಳನ್ನು ಕೆರಳಿಸಿದೆ. ಮೇಕ್ ಇನ್ ಇಂಡಿಯಾ ತಳಹದಿಯ ಮೇಲೆ ಕೆಲಸ ಮಾಡುವಾಗ ನಮ್ಮ ಉಪಕರಣಗಳಿಗೆ ನಮ್ಮದೇ ಪ್ರಮಾಣಪತ್ರವಿರಬೇಕು ಮತ್ತು ಆ ಕೆಲಸ ಶೀಘ್ರವಾಗಿ ಆಗಬೇಕು, ಇಲ್ಲದಿದ್ದರೆ ಅಳವಡಿಸಿರುವ ವ್ಯವಸ್ಥೆ ಔಟ್‌ಡೇಟೆಡ್ ಆಗುವ ಸಾಧ್ಯತೆಗಳಿವೆ ಎಂದಿರುವ ಕಂಪನಿ ಮಾಲೀಕರು, ನಮ್ಮ ತಂತ್ರಜ್ಞಾನ ವನ್ನು ಸರ್ಟಿಫೈ ಮಾಡಲು ನಮ್ಮದೇ ಲ್ಯಾಬ್‌ಗಳೇಕಿಲ್ಲ ಎಂದು ಪ್ರಶ್ನಿಸಿದ್ದಾರೆ. ಉತ್ತರವೆಂಬಂತೆ ಕಳೆದ ಆಗಸ್ಟ್‌ನಲ್ಲಿ ಸಿಎಸ್‌ಐಆರ್ (ಕೇಂದ್ರೀಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ) ಮತ್ತು ಎನ್‌ಪಿಎಲ್ (ನ್ಯಾಷನಲ್ ಫಿಸಿಕಲ್ ಲ್ಯಾಬೊರೇಟರಿ) ಸಹಯೋಗದಲ್ಲಿ ತಜ್ಞ ಸಮಿತಿಯೊಂದನ್ನು ರಚಿಸಿರುವ ಕೇಂದ್ರ ಸರ್ಕಾರ, ಇನ್ನು ಮುಂದೆ ಪ್ರಮಾಣಪತ್ರ ಈ ಸಮಿತಿಯಿಂದಲೇ ದೊರೆಯುತ್ತದೆ ಎಂದಿದೆ. ಅಲ್ಲಿಂದೀಚೆಗೆ ಹತ್ತು ತಿಂಗಳಾಗಿದ್ದರೂ ಕೆಲಸ ಶುರುವಾಗಿಲ್ಲ. ಈಗಲೂ ವಿದೇಶಿ ಕಂಪನಿಗಳೇ ಸರ್ಟಿಫೈ ಮಾಡುತ್ತಿವೆ.



ದೆಹಲಿ ಸರ್ಕಾರ ₹ 20 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ, ಪಾರ್ಟಿಕ್ಯುಲೇಟ್ ಮ್ಯಾಟರ್ ನಿಯಂತ್ರಿಸುವ ಸ್ಮಾಗ್ ಟವರ್ ಅನ್ನು ಆಗಸ್ಟ್ 15ಕ್ಕೆ ಕನಾಟ್ ಪ್ಲೇಸ್‌ನಲ್ಲಿ ಪ್ರಾರಂಭಿಸಲಿದೆ. ಕೇಂದ್ರ ಸರ್ಕಾರದ ನ್ಯಾಷನಲ್ ಕ್ಲೀನ್ ಏರ್ ಪ್ರೋಗ್ರಾಂ ಜಾರಿಯಲ್ಲಿದ್ದು, 2024ಕ್ಕೆ ದೇಶದ 122 ಪ್ರಮುಖ ನಗರಗಳ ಮಾಲಿನ್ಯವನ್ನು ಶೇ 25ರಷ್ಟು ಕಡಿಮೆ ಮಾಡುವ ಕೆಲಸ ನಡೆದಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಸೆಮ್ಸ್ ಅಳವಡಿಕೆ ಕುರಿತು ಸ್ಪಷ್ಟ ಗುರಿ ಹೊಂದಿ, ಪ್ರಮಾಣೀಕರಣಕ್ಕೆ ಇಂತಿಷ್ಟು ಸಮಯ ಎಂದು ನಿಗದಿಪಡಿಸಿ, ನಿರ್ವಹಣೆಗೆ ಬೇಕಾದ ಮಾರ್ಗಸೂಚಿಗಳನ್ನು ಶೀಘ್ರವಾಗಿ ರೂಪಿಸಿದರೆ ಮಾತ್ರ ಏರುತ್ತಿರುವ ಮಾಲಿನ್ಯಕ್ಕೆ ಕಡಿವಾಣ ಹಾಕಬಹುದು.

ವಾಚಕರ ವಾಣಿ

ಅರ್ಜಿ ಸಲ್ಲಿಸಿದ ದಿನವೇ ನೌಕರಿ ಖಾತರಿ!

ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳಿಗೆ ದ್ವಿತೀಯ ಪಿಯು ಪರೀಕ್ಷೆಯ ಅಂಕಗಳನ್ನಷ್ಟೇ ಮಾನದಂಡವನ್ನಾಗಿ ಪರಿಗಣಿಸಲಾಗುತ್ತಿದೆ. ಈ ವರ್ಷವಂತೂ 2,239 ವಿದ್ಯಾರ್ಥಿಗಳು 600ಕ್ಕೆ 600 ಅಂಕಗಳನ್ನು ಗಳಿಸಿದ್ದಾರೆ. ಇವರಲ್ಲಿ ಕೆಲವರು ಈ ಹುದ್ದೆಗೆ ಅರ್ಜಿ ಸಲ್ಲಿಸಿದರೆ, ಆ ದಿನವೇ ಅವರಿಗೆ ಸರ್ಕಾರಿ ನೌಕರಿ ಸಿಕ್ಕಂತೆಯೇ. ಹೀಗಾದರೆ ಹಿಂದಿನ ವರ್ಷಗಳಲ್ಲಿ ಓದಿದ ಪ್ರತಿಭಾವಂತ ವಿದ್ಯಾರ್ಥಿಗಳು ಮತ್ತು ಗ್ರಾಮೀಣ ವಿದ್ಯಾರ್ಥಿಗಳ ಪಾಡೇನು?

ಇನ್ನು ಮುಂದಾದರೂ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಬೇಕು. ಇದರಿಂದ ಗ್ರಾಮೀಣ ಭಾಗದ ಅದೆಷ್ಟೋ ಅಭ್ಯರ್ಥಿಗಳಿಗೆ ಅವಕಾಶ ಸಿಕ್ಕಂತಾಗುತ್ತದೆ.

ಮನು ಕೆ.ಬಿ., ದೊಡ್ಡಕೋಡಿಹಳ್ಳಿ, ಬೇಲೂರು

ಸನ್ನಡತೆಯ ಬದುಕು ಆದರ್ಶವಾಗಲಿ

ಸೆಲೆಬ್ರಿಟಿಗಳಿಗೆ ಮಾದರಿಯಾದ ಡಾ. ರಾಜ್‌ಕುಮಾರ್ ಅವರ ಘನ ವ್ಯಕ್ತಿತ್ವದ ಬಗೆಗಿನ ಡಾ. ಸಫ್ರಾಜ್ ಚಂದ್ರಗುತ್ತಿ ಅವರ ಲೇಖನವನ್ನು (ಸಂಗತ, ಜುಲೈ 20) ಓದಿದಾಗ, ಒಂದು ಕ್ಷಣ, ಮನುಷ್ಯ ಹೀಗೂ ಬದುಕಲು ಸಾಧ್ಯವೇ ಎಂದೆನಿಸಿದ್ದು ಸುಳ್ಳಲ್ಲ. ಹಾಗೆ ಬದುಕಲು ಸಾಧ್ಯ ಎಂದು ತೋರಿದ ಇಂತಹ ಮಹನೀಯರ ಸನ್ನಡತೆಯ ಜೀವನದ ಹಾದಿಯು ಇಂದಿನ ಸಮಾಜಕ್ಕೆ ಆದರ್ಶವಾದರೆ ಎಷ್ಟು ಚೆನ್ನ ಅಲ್ಲವೇ?

ಯಲುವಹಳ್ಳಿ ಸೊಣ್ಣೇಗೌಡ, ಚಿಕ್ಕಬಳ್ಳಾಪುರ

ಆಮ್ಲಜನಕದ ಕೊರತೆ: ದ್ವಂದ್ವ ಏಕೆ?

ಕೊರೊನಾ ಎರಡನೇ ಅಲೆ ವೇಳೆ ಆಮ್ಲಜನಕದ ಕೊರತೆಯಿಂದ ಯಾರೂ ಸತ್ತಿಲ್ಲ ಎಂದು ಸಂಸತ್ತಿಗೆ ಒಕ್ಕೂಟ ಸರ್ಕಾರ ಮಾಹಿತಿ ನೀಡಿರುವುದನ್ನು (ಪ್ರ.ವಾ., ಜುಲೈ 21) ತಿಳಿದು ಅಚ್ಚರಿಯಾಯಿತು. ಜನರ ಕಣ್ಣೆದುರಿಗೇ ಆಮ್ಲಜನಕ ಕೊರತೆಯಿಂದ ಸಾವುಗಳು ಸಂಭವಿಸಿರುವಾಗ ಸರ್ಕಾರವೇಕೆ ಈ ರೀತಿ ಸುಳ್ಳು ಹೇಳುತ್ತಿದೆ ಎಂಬುದು ತಿಳಿಯುತ್ತಿಲ್ಲ. ಆರೋಗ್ಯದ ವಿಷಯ ರಾಜ್ಯಗಳಿಗೆ ಸಂಬಂಧಪಟ್ಟದ್ದು, ರಾಜ್ಯಗಳು ಈ ರೀತಿಯ ಸಾವುಗಳ ಬಗ್ಗೆ ವರದಿ ನೀಡಿಲ್ಲ ಎಂಬ ಪಲಾಯನವಾದವು ಸರ್ಕಾರದ ಮೇಲಿನ ಜನರ ವಿಶ್ವಾಸ, ನಂಬಿಕೆಯನ್ನು ಹುಸಿಯಾಗಿಸುತ್ತದೆ.

ಅನೇಕ ರಾಜ್ಯಗಳಲ್ಲಿ ಆಮ್ಲಜನಕದ ಕೊರತೆಯಿಂದ ಸೋಂಕಿತರು ಸಾವನ್ನಪ್ಪಿರುವ ಬಗ್ಗೆ ಬಹಳಷ್ಟು ವರದಿಗಳಾಗಿವೆ. ಕರ್ನಾಟಕದಲ್ಲೂ ಚಾಮರಾಜನಗರ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ಆಮ್ಲಜನಕದ ಕೊರತೆಯಿಂದ ಹಲವಾರು ಮಂದಿ ಸಾವನ್ನಪ್ಪಿದ್ದಾರೆ ಎಂಬುದು ತಿಳಿಯದಿರುವ ವಿಷಯವೇನಲ್ಲ. ಕೊರೊನಾದ ವಿರುದ್ಧ ಇಡೀ ದೇಶ ಒಂದಾಗಿ ಹೋರಾಟ ನಡೆಸುತ್ತಿದೆ ಎಂದು ಪ್ರಧಾನಿ ಹೇಳುತ್ತಾರೆ. ಆದರೆ ಇನ್ನೊಂದು ಕಡೆ, ಆರೋಗ್ಯದ ವಿಚಾರ ರಾಜ್ಯಗಳಿಗೆ ಸಂಬಂಧಪಟ್ಟದ್ದು ಎಂದು ಸಂಸತ್‌ಗೆ ಮಾಹಿತಿ ನೀಡಲಾಗುತ್ತದೆ. ಈ ರೀತಿಯ ದ್ವಂದ್ವ ನಿಲುವು ಸರಿಯಲ್ಲ. ಹಾಗಿದ್ದರೆ ರಾಜ್ಯ ಸರ್ಕಾರಗಳು ಆಮ್ಲಜನಕ ಕೊರತೆಯ ಮಾಹಿತಿಯನ್ನು ನಿಜಕ್ಕೂ ನೀಡಿಲ್ಲವೇ ಅಥವಾ ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳ ಸಾವು ಎಂಬ ವರದಿಗಳೇ ಸುಳ್ಳೇ? ಇದಕ್ಕೆಲ್ಲ ವಿರೋಧ ಪಕ್ಷಗಳು ಉತ್ತರ ಪಡೆದೇ ತೀರಬೇಕು.

ಪ್ರದೀಪ್ ಚಿಕ್ಕಾಟಿ, ಬೆಂಗಳೂರು

ನಮ್ಮವರ ‘ಶಕೆ’ಯೇ ನಮಗಿರಲಿ

ಆರ್‌ಎಸ್‌ಎಸ್ ಮುಖಂಡ ಮೋಹನ ಭಾಗವತ್ ಅವರು ‘ದೇಶದ ನಾಗರಿಕರು ಒಂದೇ ಡಿಎನ್‌ಎ ಹಂಚಿಕೊಂಡಿದ್ದಾರೆ ಮತ್ತು ಭಾರತದಲ್ಲಿ ಇಸ್ಲಾಂ ಧರ್ಮ ಅಪಾಯದಲ್ಲಿದೆ ಎಂದು ಮುಸ್ಲಿಮರು ಭಯಪಡಬಾರದು’ ಎಂದು ಹೇಳಿದ (ಪ್ರ.ವಾ., ಜುಲೈ 7) ಸೌಹಾರ್ದದ್ಯೋತಕ, ಸರಳ ಮಾತನ್ನು ಈಗ ಯದ್ವಾತದ್ವಾ ತಿರುಚಲಾಗುತ್ತಿದೆ. ಜೆಡಿಎಸ್ ಮುಖಂಡ ವೈ.ಎಸ್.ವಿ. ದತ್ತ ಅವರು, ಬ್ರಿಟಿಷರು ಹುಟ್ಟುಹಾಕಿದ್ದ ಆರ್ಯ-ದ್ರಾವಿಡ ಚರ್ವಿತಚರ್ವಣ ವಾದವನ್ನು ಪ್ರತಿಪಾದಿಸುತ್ತಾ (ಚರ್ಚೆ, ಜುಲೈ14), ದಾಳಿಕೋರರಾದ ಶಕ ಮತ್ತು ಕುಶಾನರಲ್ಲಿ ಶಕರಿಂದಲೇ ‘ಶಕ ಸಂವತ್ಸರ’ ಆರಂಭವಾಯಿತು, ಜೊತೆಗೆ ದಾಳಿಕೋರರಿಂದಲೇ ನಮ್ಮ ಸಂಸ್ಕೃತಿ ಉದಿಸಿತು ಎಂದು ಬರೆದಿದ್ದಾರೆ. ಇದು ತಪ್ಪು ವ್ಯಾಖ್ಯಾನವಲ್ಲದೆ ಇನ್ನೇನೂ ಅಲ್ಲ. ಇದರಿಂದ ಅವರು ಒಂದೇ ಏಟಿಗೆ ಭಾರತೀಯರಿಗೆ ಇದ್ದ ಸ್ವಂತಿಕೆ ಯನ್ನೂ ಅಸ್ತಿತ್ವವನ್ನೂ ಅಲ್ಲಗಳೆದಿದ್ದಾರೆ.

ಕೆ.ಎಸ್.ನಾರಾಯಣಾಚಾರ್ಯರು ಬರೆದ ‘ರಾಷ್ಟ್ರೀಯ ಚಿಂತನೆಗಳು ಮತ್ತು ಪರಾಮರ್ಶೆಗಳು’ (ಹತ್ತು ಸಂಪುಟಗಳಲ್ಲಿ), ಶತಾವಧಾನಿ ಡಾ. ಆರ್.ಗಣೇಶ್ ಅವರ ‘ಭಾರತೀಯ ಕ್ಷಾತ್ರಪರಂಪರೆ’, ಡಾ. ಎಸ್.ಆರ್. ಲೀಲಾ ಅವರು ಕನ್ನಡಕ್ಕೆ ಅನುವಾದಿಸಿದ ‘ಸಿಕ್ಸ್ ಗ್ಲೋರಿಯಸ್ ಎಪಾಕ್ಸ್ ಆಫ್ ಇಂಡಿಯನ್ ಹಿಸ್ಟರಿ’ ಮೊದಲಾದ ಕೃತಿಗಳು ನಮ್ಮವರ ವೀರ್ಯ, ಶೌರ್ಯ, ಸಾಹಸ, ದಿಟ್ಟತನಗಳ ಬಗ್ಗೆ, ನಮ್ಮ ಅಸ್ಮಿತೆ ಬಗ್ಗೆ ಬಹಳಷ್ಟು ಬೆಳಕು ಚೆಲ್ಲುತ್ತವೆ.

ದತ್ತ ಅವರು ಹೇಳಿದಂತೆಯೇ ಗ್ರೀಕರ ನಂತರ ಶಕ-ಕುಶಾನರು ಭಾರತದ ಮೇಲೆ ದಾಳಿ ಮಾಡಿದ್ದು ಹೌದು. ಅವರು ಬರ್ಬರರೂ, ಕ್ರೂರಿಗಳೂ ಆಗಿದ್ದರು. ಆದರೆ ಅವರನ್ನು ನಮ್ಮವರೇ ಆದ, ವೈದಿಕ ಮತಾವಲಂಬಿಗಳಾದ ಕಳಿಂಗರು ಮತ್ತು ಆಂಧ್ರರು ಮೆಟ್ಟಿ ತುಳಿದಿದ್ದರು. ಅದೇ ಸಮಯದಲ್ಲಿ ಮಾಲವರೂ, ಯೌಧೇಯರೂ ಸೇರಿ ಅವರು ಉಸಿರೆತ್ತದಂತೆ ಮಾಡಿದ್ದರು. ಮಾಲವರು ಅವರ ವಿರುದ್ಧ ಜಯ ಸಾಧಿಸಿದ್ದುದರ ಮಧುರಸ್ಮರಣೆಗಾಗಿ ‘ಕೃತ್’ ಎಂಬ ಸಂವತ್ಸರವನ್ನು ಆರಂಭಿಸಿದರು. ಆಗಿನ ಕಾಲದ ನಾಣ್ಯಗಳ ಮೇಲೆ ಸಂಸ್ಕೃತ ಲಿಪಿಯಲ್ಲಿ ‘ಮಾಲವ ಜಯ’, ‘ಮಾಲವಾನಾಂ ಜಯಃ’, ‘ಮಾಲವ ಗಣಸ್ಯ’ ಮುಂತಾದ ವಿಜಯದ ಬರಹಗಳು ಕಾಣಬರುತ್ತವೆ. ಗೆದ್ದ ಭಾರತೀಯರೆಲ್ಲರೂ ತಮ್ಮ ವಿಜಯದ ಸಂಕೇತವಾಗಿ ಒಂದೊಂದು ಶಕೆಯನ್ನೇ ಆರಂಭಿಸಿಬಿಟ್ಟರು. ‘ಶಕ’ ಎಂದರೆ ಒಬ್ಬ ದೊರೆಯ ಹೆಸರು. ಒಂದು ನಿರ್ದಿಷ್ಟವಾದ ಕಾಲದಿಂದ ಪ್ರಾರಂಭವಾಗುವ ಕಾಲದ ಮಾನ ಅದು. ಶಾಲಿವಾಹನ ಶಕ, ಕ್ರಿಸ್ತಶಕ ಇತ್ಯಾದಿ. ‘ಶಕ’ ಅನ್ನುವುದಕ್ಕೆ ಒಂದು ದೇಶ, ಒಂದು ಜಾತಿಯ ಜನರು, ಜನಾಂಗ ಎಂಬ ಅರ್ಥಗಳಿವೆ ಎಂದು ಮನುಸ್ಮೃತಿ ಸಾರುತ್ತದೆ.

ಇಲ್ಲಿ ನಾವು ಗಮನಿಸಬೇಕಾದುದೆಂದರೆ- ದಾಳಿಕೋರರಾದ ‘ಶಕ-ಕುಶಾನ’ ಮೊದಲಾದವರ ನೆನಪನ್ನು ಹೊತ್ತು ಕಳಂಕಿತರಾಗುವುದಕ್ಕಿಂತ, ಆ ಮಹಾದುಷ್ಟರ ಕಪಿಮುಷ್ಟಿಯಿಂದ ಬಿಡುಗಡೆಗೊಂಡು, ನಾವು ವಿಜಯಿಗಳಾದುದರ ಸಂಕೇತವಾಗಿ, ಅದರ ಸವಿನೆನಪಿಗಾಗಿ ವಿಕ್ರಮಶಕೆಯನ್ನೋ ಶಾಲಿವಾಹನಶಕೆಯನ್ನೋ ಇಟ್ಟುಕೊಳ್ಳುವುದು ಸಾವಿರ ಪಾಲು ಮೇಲು.

ಗ.ನಾ.ಭಟ್ಟ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಸಹಕಾರ’ದ ಹೊಸ ಮನ್ವಂತರ



ಪುತ್ತೂರಿನಲ್ಲಿರುವ ಕ್ಯಾಂಪ್ಕೊ ಚಾಕೊಲೇಟ್ ಕಾರ್ಖಾನೆ

• ಶ್ರೀಕಾಂತ್ ಬರುವೆ



ಸಹಕಾರ ಕ್ಷೇತ್ರ ನಿಂತ ನೀರಲ್ಲ, ಸದಾ ಅಗ್ನಿಪರೀಕ್ಷೆಗೆ ಒಳಗಾಗಿದೆ. ಆದ್ದರಿಂದಲೇ ಇಂದು ಸಹ ಸಹಕಾರವು ವ್ಯವಸ್ಥೆಯಾಗದೇ ಚಳವಳಿಯಾಗಿಯೇ ಉಳಿದಿದೆ. ಕೇಂದ್ರ ಸರ್ಕಾರದ ಸಚಿವ ಸಂಪುಟವನ್ನು ಇತ್ತೀಚೆಗೆ ಪುನರ್‌ರಚಿಸಿದ ಸಂದರ್ಭದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಸೃಷ್ಟಿಸಿ ಕೇಂದ್ರದ ಗೃಹ ಸಚಿವರನ್ನೇ ನೂತನ ಸಹಕಾರ ಸಚಿವರನ್ನಾಗಿ ನೇಮಕ ಮಾಡಿದೆ. ಅಮಿತ್ ಶಾ ಅವರನ್ನು ಕೇಂದ್ರ ಸಹಕಾರ ಸಚಿವರನ್ನಾಗಿ ನೇಮಕ ಮಾಡಿದ ನಂತರ ಸಹಕಾರ ಕ್ಷೇತ್ರಕ್ಕೆ ಏನೋ ಮಾಡಿಬಿಡುತ್ತಾರೆ ಎಂಬಂತೆ ಪ್ರತಿಕ್ರಿಯಿಸಿದವರು ಅನೇಕ. ಆದರೆ ಒಂದನ್ನು ಮರೆಯಬಾರದು ನೂತನ ಸಹಕಾರ ಸಚಿವಾಲಯದ ಸೃಷ್ಟಿಯ ಉದ್ದೇಶ ನಾವು ಅಂದುಕೊಂಡಿದ್ದಕ್ಕಿಂತ ಭಿನ್ನವಾಗಿದೆ.

ಪ್ರಧಾನಿ ನರೇಂದ್ರ ಮೋದಿಯವರು ಭಾರತದ ಅರ್ಥವ್ಯವಸ್ಥೆಯನ್ನು 5 ಟ್ರಿಲಿಯನ್ ಡಾಲರ್ (ಸುಮಾರು ₹375 ಲಕ್ಷ ಕೋಟಿ) ಅರ್ಥವ್ಯವಸ್ಥೆಯನ್ನಾಗಿ ರೂಪಿಸುವ ಪಣ ತೊಟ್ಟಿದ್ದಾರೆ. ಆದರೆ ಸಹಕಾರ ಕ್ಷೇತ್ರವನ್ನು ಹೊರಗೆ ಇರಿಸಿ ಇದನ್ನು ಸಾಧಿಸಲು ಸಾಧ್ಯವಿಲ್ಲ ಎನ್ನುವುದನ್ನು ಅರಿತೇ ಹೊಸ ಸಹಕಾರ ಸಚಿವಾಲಯವನ್ನು ಸೃಷ್ಟಿಸಿದ್ದಾರೆ.

ದೇಶದಲ್ಲಿ ಅಮೂಲ್, ಇಫ್ಕೊ, ಕ್ರಿಭ್ಕೊ, ಕ್ಯಾಂಪ್ಕೊ ಸೇರಿದಂತೆ ಸದಸ್ಯ ಕೇಂದ್ರಿತ ಸೇವೆ ನೀಡುತ್ತಿರುವ 8.5 ಲಕ್ಷಕ್ಕೂ ವಿವಿಧ ರೀತಿಯ ಸಹಕಾರ ಸಂಸ್ಥೆಗಳಿವೆ. 30 ಕೋಟಿಗೂ ಹೆಚ್ಚು ಸದಸ್ಯರನ್ನು ಒಳಗೊಂಡಿರುತ್ತದೆ. ₹ 38.32 ಲಕ್ಷ ಕೋಟಿಯಷ್ಟು ಷೇರು ಬಂಡವಾಳವನ್ನು ಸಹಕಾರಿ ಕ್ಷೇತ್ರ ಹೊಂದಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿನ ಮಾತ್ರ ಇರುವ ಠೇವಣಿಯೇ ₹84.61 ಲಕ್ಷ ಕೋಟಿಯಷ್ಟಾಗುತ್ತದೆ. ಸಹಕಾರಿ ಬ್ಯಾಂಕುಗಳು, ಇನ್ನಿತರ ಸಹಕಾರ ಸಂಸ್ಥೆಗಳ ಹಣಕಾಸು ವಿವರಗಳನ್ನು ಪರಿಗಣಿಸಿದರೆ ಆರ್ಥಿಕವಾಗಿ ಸಹಕಾರಿ ಕ್ಷೇತ್ರ ಎಷ್ಟು ವಿಸ್ತಾರವಾಗಿ ಹರಡಿದೆ ಎನ್ನುವುದು ಅರಿವಾಗುತ್ತದೆ.

ಭಾರತದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರವನ್ನು ಒಳಗೊಳ್ಳುವುದರಿಂದ ಮೋದಿಯವರ 5 ಟ್ರಿಲಿಯನ್ ಡಾಲರ್ ಅರ್ಥವ್ಯವಸ್ಥೆಯ ಕನಸಿಗೆ ಬಲ ದೊರೆಯಲಿದೆ. ದೇಶದ ಶೇ 95ರಷ್ಟು ಗ್ರಾಮಗಳನ್ನು ಅಂದರೆ ಸುಮಾರು 6.30 ಲಕ್ಷ ಗ್ರಾಮಗಳನ್ನು ಸಹಕಾರ ಕ್ಷೇತ್ರವು ವ್ಯಾಪಿಸಿದೆ. ದೇಶದ ಕಾನೂನಾತ್ಮಕ ಚೌಕಟ್ಟಿನ ಸಹಕಾರ ಚಳವಳಿಗೆ 117 ವರ್ಷಗಳ ಸುದೀರ್ಘ ಇತಿಹಾಸವಿದ್ದರೂ, ಈ ಕ್ಷೇತ್ರ ಇಷ್ಟೊಂದು ಬೃಹದಾಕಾರವಾಗಿ ಬೆಳೆದಿದ್ದರೂ, ಅನೇಕ ಸಾಧನೆಗಳನ್ನು ಮಾಡಿದ್ದರೂ ಈ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸಲು ಕೇಂದ್ರದಲ್ಲಿ ಪ್ರತ್ಯೇಕ ಸಚಿವಾಲಯ ಇದುವರೆಗೂ ಇರಲಿಲ್ಲ ಎನ್ನುವುದೇ ಖೇದಕರ ವಿಷಯ.

ಸಹಕಾರ ಕ್ಷೇತ್ರದ ತೊಂದರೆಗಳ ನಿವಾರಣೆಗೆ ಕೇಂದ್ರದ ಕೃಷಿ ಸಚಿವರನ್ನು ವಿನಂತಿಸಬೇಕಾಗಿತ್ತು. ದೇಶದ ಕೃಷಿ ಕ್ಷೇತ್ರ ಅತ್ಯಂತ ದೊಡ್ಡದಾಗಿರುವುದರಿಂದ ಕೃಷಿ ಸಚಿವಾಲಯವು ಸಹಕಾರ ಕ್ಷೇತ್ರದ ಕಡೆ ಗಮನಹರಿಸುವುದು ಸಾಧ್ಯವಾಗುತ್ತಿರಲಿಲ್ಲ. ಹೊಸ ಸಚಿವಾಲಯವು ನಿಜವಾದ ಜನಾಧಾರಿತ ಚಳವಳಿಯಾಗಿ ಸಮುದಾಯ ಆಧರಿತ ಅಭಿವೃದ್ಧಿ ಸಹಭಾಗಿತ್ವಕ್ಕೆ ಕಾರಣವಾಗುತ್ತದೆ ಎಂಬ ಆಶಾಭಾವನೆ ಹೊಂದಬಹುದಾಗಿದೆ.

ಸಹಕಾರ ಭಾರತಿ ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರುಗಳ ಪ್ರಮುಖ ಒತ್ತಾಸೆಯ ಮೇರೆಗೆ ಹೊಸ ಸಹಕಾರ ಸಚಿವಾಲಯದ ರಚನೆಯಾಗಿರುತ್ತದೆ. ಕೇಂದ್ರ ಸರ್ಕಾರವು ನೂತನ ಸಹಕಾರ ಸಚಿವಾಲಯವನ್ನು ಸಹಕಾರ ಚಳವಳಿಯನ್ನು ಬಲಪಡಿಸಲು ಅಗತ್ಯವಾದ ಪ್ರತ್ಯೇಕ ಆಡಳಿತಾತ್ಮಕ, ಕಾನೂನು ಮತ್ತು ನೀತಿ ನಿರೂಪಣೆ ನಿರ್ಧರಿಸಲು ರಚಿಸಲಾಗಿದೆ ಎಂದು ತಿಳಿಸಲಾಗಿದೆ.

ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯ ಅಗತ್ಯ ಇದೆ. ಕೇಂದ್ರದ ನೂತನ ಸಚಿವಾಲಯವು ಸಹಕಾರಿ ಮನೋಭಾವವನ್ನು ಬೆಳೆಸುವ ಮೂಲಕ ಸಹಕಾರ ಕ್ಷೇತ್ರದ ವೇಗವರ್ಧಿಸುವ ಕಾರ್ಯವಾಗಬೇಕಿದೆ. ಸಹಕಾರ ಸಂಸ್ಥೆಗಳು ಲಾಭವನ್ನು ಗಳಿಸುವ ಮಾರುಕಟ್ಟೆ ತರ್ಕದಿಂದ ಕಾರ್ಯನಿರ್ವಹಿಸುವ ಸಂಸ್ಥೆಗಳಲ್ಲ. ಆದರೆ, ಸಹಕಾರ ಸಂಸ್ಥೆಯು ಎಲ್ಲಾ ಸದಸ್ಯರಿಗೆ ಪ್ರಯೋಜನಗಳನ್ನು ಸಮನಾಗಿ ಹಂಚುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತದೆ. ಆದರೆ ಈ ವ್ಯವಸ್ಥೆಯ ಬಗ್ಗೆ ಇರುವ ಗುರುತರ ಅಪಾದನೆಯೆಂದರೆ ಕೆಲವು ರಾಜ್ಯಗಳಲ್ಲಿ ವ್ಯವಸ್ಥೆಯ ದುರುಪಯೋಗ ಮತ್ತು ಭ್ರಷ್ಟಾಚಾರ ಇದೆ ಎಂಬುದಾಗಿದೆ; ಸ್ವಹಿತಾಸಕ್ತಿಯ ಪಾರಮ್ಯವಿದೆ ಎಂಬ ಆರೋಪವು ಈ ವಲಯದ ಮೇಲಿನ ನಂಬಿಕೆಯನ್ನು ಕಡಿಮೆಗೊಳಿಸಿದೆ.

ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯ ರಚನೆಯಿಂದಾಗಿ, ಈ ದೇಶದ ಬೃಹತ್ ಪ್ರಮಾಣದ ಸಹಕಾರ ಚಳವಳಿಯ ಸಮಸ್ಯೆಗಳಿಗೆ ಸ್ಪಂದಿಸಲು ಕೇಂದ್ರದಲ್ಲಿ ಪ್ರತ್ಯೇಕ ವ್ಯವಸ್ಥೆಯೊಂದು ದೊರೆತಂತಾಗುತ್ತದೆ. ಸಹಕಾರ ಕ್ಷೇತ್ರವನ್ನು ಆರೋಗ್ಯಕರವಾಗಿ ಮತ್ತು ಬಲಯುತವಾಗಿ ಬೆಳಸಲು ಒಬ್ಬರು ಸಚಿವರು, ಪ್ರತ್ಯೇಕ ಸಚಿವಾಲಯ ಇರುವುದರಿಂದ ಸಹಕಾರ ಕ್ಷೇತ್ರವು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲಿದೆ ಎನ್ನುವುದು ಸಹಕಾರಿಗಳ ಆಶಯವಾಗಿದೆ.

ಸಹಕಾರ ಆಧಾರಿತ ಆರ್ಥಿಕ ಅಭಿವೃದ್ಧಿ ಮಾದರಿಯು ನಮ್ಮ ದೇಶಕ್ಕೆ ಬಹಳ ಪ್ರಸ್ತುತವಾಗಿದೆ. ಸಹಕಾರ ಆರ್ಥಿಕ ವ್ಯವಸ್ಥೆಗೆ ಪರ್ಯಾಯವಾದ ವ್ಯವಸ್ಥೆ ಇಲ್ಲದಿರುವುದು ಗಮನಾರ್ಹ. ಸಹಕಾರ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಸದಸ್ಯರು ಜವಾಬ್ದಾರಿಯುತ ಮನೋಭಾವದಿಂದ ಕೆಲಸ ಮಾಡುತ್ತಾರೆ. ಸಹಕಾರ ಸಂಸ್ಥೆಗಳ ವ್ಯವಹಾರವನ್ನು ಸುಲಭಗೊಳಿಸಲು ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಮತ್ತು ಬಹು-ರಾಜ್ಯ ಸಹಕಾರಿ ಸಂಸ್ಥೆಗಳ (ಎಂಎಸ್‌ಸಿಎಸ್) ಅಭಿವೃದ್ಧಿಗೆ ಅನುವು ಮಾಡಿಕೊಡಲು ಸಚಿವಾಲಯವು ಕೆಲಸ ಮಾಡುತ್ತದೆ ಎಂಬುದು ಕೇಂದ್ರ ಸರ್ಕಾರದ ನೂತನ ಸಹಕಾರ ಸಚಿವಾಲಯದ ಸೃಷ್ಟಿಯ ಹಿಂದಿನ ಉದ್ದೇಶವಾಗಿದೆ.

ನೂತನ ಪ್ರತ್ಯೇಕ ಸಚಿವಾಲಯದ ರಚನೆಯು ಸಮುದಾಯ ಆಧಾರಿತ ಅಭಿವೃದ್ಧಿ ಸಹಭಾಗಿತ್ವಕ್ಕೆ ಕೇಂದ್ರ ಸರ್ಕಾರದ ಆಳವಾದ ಬದ್ಧತೆಯನ್ನು ಸೂಚಿಸುತ್ತದೆ. ಸಹಕಾರಕ್ಕಾಗಿ ಪ್ರತ್ಯೇಕ ಸಚಿವಾಲಯವನ್ನು ರಚಿಸುವುದು ಹಣಕಾಸು ಸಚಿವರು ಮಾಡಿದ ಬಜೆಟ್ ಪ್ರಕಟಣೆಯನ್ನು ಸಹ ಪೂರೈಸುತ್ತದೆ. ಆದರೆ ಇದು ಸ್ವತಃ ಆಜ್ಞಾ ಪ್ರಾಧಿಕಾರವಾಗಿ ರೂಪುಗೊಳ್ಳದಿರಲಿ ಎಂಬುದು ಸಹಕಾರ ಕ್ಷೇತ್ರದ ಗಣ್ಯರ ಆಶಯ.

ಲೇಖಕ: ಉಪ ಪ್ರಧಾನ ವ್ಯವಸ್ಥಾಪಕ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.

ಸಹಕಾರಿಗಳಲ್ಲಿ ಸಂತೋಷಕ್ಕಿಂತ ಆತಂಕವೇ ಹೆಚ್ಚು

• ಎಚ್.ಕೆ. ಪಾಟೀಲ



ಕೃಷಿ ಇಲಾಖೆ ಜತೆಗಿದ್ದ ಸಹಕಾರ ಕ್ಷೇತ್ರವನ್ನು ಕೇಂದ್ರ ಸರ್ಕಾರ ಪ್ರತ್ಯೇಕಗೊಳಿಸಿ ಸಹಕಾರ ಸಚಿವಾಲಯ ಮಾಡಿರುವುದು ಉತ್ತಮ ಬೆಳವಣಿಗೆ. ಆದರೆ, ಹೊಸ ಸಚಿವಾಲಯ ರಾಜಕೀಯಕ್ಕಾಗಿ ಬಳಕೆ ಆಗಬಾರದು. ಸಹಕಾರ ಕ್ಷೇತ್ರವನ್ನು ವಾಣಿಜ್ಯ ಕ್ಷೇತ್ರವಾಗಿಸುವ ಪ್ರಯತ್ನಗಳು ಈ ಸಚಿವಾಲಯದಿಂದ ನಡೆಯಬಾರದು.

ರಾಷ್ಟ್ರದ ಏಳಿಗೆ ಹಾಗೂ ರಾಷ್ಟ್ರ ಕಟ್ಟುವ ಕೆಲಸದಲ್ಲಿ ಸಹಕಾರ ಕ್ಷೇತ್ರ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾನಂತರ ಅಂದರೆ 1905ರಿಂದ, ಶತಮಾನಕ್ಕೂ ಹೆಚ್ಚುಕಾಲ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ಕೃಷಿ ಪತ್ತಿನ ವ್ಯವಸ್ಥೆಯಲ್ಲಂತೂ ಸಹಕಾರ ಕ್ಷೇತ್ರ ಇತ್ತೀಚಿನ ದಿನಗಳವರೆಗೆ ತನ್ನದೇ ಆದ ವಿಶೇಷ ಛಾಪು ಮೂಡುವಂತೆ ಕೆಲಸ ಮಾಡಿದೆ. ಆದರೆ, ಬಹಳ ಕಡಿಮೆ ಪ್ರಸಂಗಗಳಲ್ಲಿ ಮಾತ್ರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮಹತ್ವ ಗಳಿಸಿತ್ತು.

ಸಹಕಾರ ಸಂಘಗಳ ರಚನೆ ನಮ್ಮ ಹಕ್ಕು ಆಗಿರುವುದು ಇತ್ತೀಚಿನ ದಿನಗಳಲ್ಲಿ ಮಾತ್ರ. ಯುಪಿಎ ಸರ್ಕಾರದಲ್ಲಿ ಮನಮೋಹನ್ ಸಿಂಗ್ ಪ್ರಧಾನಮಂತ್ರಿ ಆಗಿದ್ದಾಗ, ಶರದ್ ಪವಾರ್ ಕೃಷಿ ಮಂತ್ರಿ ಆಗಿದ್ದ ಸಂದರ್ಭದಲ್ಲಿ ಸಂವಿಧಾನ ತಿದ್ದುಪಡಿ ಮಾಡುವುದರ ಮೂಲಕ ಇದನ್ನು ಹಕ್ಕು ಮಾಡಲಾಯಿತು. ಈ ರೀತಿಯಾಗಿ ಸಹಕಾರ ಕ್ಷೇತ್ರ ಸಂವಿಧಾನದಲ್ಲಿ ತನ್ನ ಅಸ್ತಿತ್ವ ಕಂಡುಕೊಂಡಿರುವುದು ಒಂದು ಸಮಾಧಾನಕರ ಅಂಶ.

97ನೇ ಸಂವಿಧಾನ ತಿದ್ದುಪಡಿಯನ್ನು ಸಹಕಾರ ಸಂಘಗಳ ಸ್ಥಾಪನೆಗಾಗಿ ಮಾತ್ರ ಮಾಡಲಿಲ್ಲ. ಅದರ ಜತೆಗೆ ಸಹಕಾರ ಸಂಸ್ಥೆಗಳನ್ನು, ಸಹಕಾರ ಕ್ಷೇತ್ರವನ್ನು ಪರಿಣಾಮಕಾರಿ ಹಾಗೂ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕೆಲಸ ನಿರ್ವಹಣೆ ಮಾಡಲು ಅಗತ್ಯವಿರುವ ಹಲವಾರು ಮಹತ್ವದ ಅಂಶಗಳನ್ನು ತಿದ್ದುಪಡಿಯಲ್ಲಿ ಅಳವಡಿಸಲಾಗಿದೆ. ಸಂವಿಧಾನದ ಈ ಅಂಶಗಳನ್ನು ಗೌರವಿಸಿ, ಸಹಕಾರ ಸಚಿವಾಲಯ ಕಾರ್ಯನಿರ್ವಹಿಸಬೇಕು.

ಹಲವಾರು ವರ್ಷಗಳ ಹಿಂದೆ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾರಂಭಿಸಿದ ನ್ಯಾಷನಲ್ ಕೋ ಅಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಶನ್ (ಎನ್‌ಸಿಡಿಸಿ) ಆಗಲಿ, ನಬಾರ್ಡ್ ಆಗಲೀ ತನ್ನ ಕಾರ್ಯವ್ಯಾಪ್ತಿ ವಿಸ್ತರಣೆ ಮಾಡಿಕೊಳ್ಳಲಿಲ್ಲ. ಸಹಕಾರ ಕ್ಷೇತ್ರದಲ್ಲಿ ಮಲ್ಟಿ ಸ್ಟೇಟ್ ಕೋ ಅಪರೇಟಿವ್ ಕಾಯ್ದೆ ಕೆಳಗೆ ಕೆಲಸ ಮಾಡುವ ಒಂದಕ್ಕಿಂತ ಹೆಚ್ಚು ರಾಜ್ಯಗಳಿಗೆ ಸೇವೆ ಮಾಡುವ ಸಂಸ್ಥೆಗಳು ಹಾಗೂ ರಾಜ್ಯ ಸರ್ಕಾರದ ಕಾನೂನಿನ ಅನ್ವಯ ಕೆಲಸ ಮಾಡುವ ರಾಜ್ಯ ಸಹಕಾರಿ ಸಂಸ್ಥೆಗಳಿವೆ.

ರಾಜ್ಯ ಸರ್ಕಾರದ ಕಾನೂನಿನ ಅಡಿಯಲ್ಲಿ ಕೆಲಸ ಮಾಡುವ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಕೇಂದ್ರ ಸಚಿವಾಲಯ ಯಾವುದೇ ರೀತಿಯಿಂದ ಇಣಕಿ ಹಾಕುವುದಾಗಲೀ, ತನ್ನ ಕಾರ್ಯಕ್ಷೇತ್ರ ಉಲ್ಲಂಘಿಸಿ ಸಹಕಾರ ಸಂಘಗಳ ನಿರ್ವಹಣೆಯಲ್ಲಿ ಕೈ ಹಾಕುವುದಾಗಲೀ ಮಾಡಬಾರದು. ಒಂದು ವೇಳೆ ಕೇಂದ್ರ ಸಚಿವಾಲಯ ಆ ರೀತಿ ಕೆಲಸಕ್ಕೆ ಕೈ ಹಾಕಿದರೆ ಅದು ರಾಷ್ಟ್ರದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಮಾಡಿದಂತಾಗುತ್ತದೆ.

ಇತ್ತೀಚಿನ ಹಲವು ಬೆಳವಣಿಗೆಗಳಿಂದ ಅಂದರೆ, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ತಿದ್ದುಪಡಿಯಿಂದ ಸಹಕಾರಿ ಬ್ಯಾಂಕ್ ಅಥವಾ ಸಂಸ್ಥೆಗಳ ಮೂಲ ಅಸ್ತಿತ್ವಕ್ಕೆ ಧಕ್ಕೆ ಉಂಟಾಗಿದೆ. ಸಹಕಾರಿ ಸಂಸ್ಥೆಗಳನ್ನು ಕಾರ್ಪೊರೇಟ್‌ಗಳನ್ನಾಗಿ ಮಾರ್ಪಡಿಸುವ ಪ್ರಯತ್ನ ನಡೆಸಲಾಗುತ್ತಿದೆ. ಸಹಕಾರಿ ಸಂಸ್ಥೆಗಳನ್ನು ಸೇವಾ ಸಂಸ್ಥೆಯಿಂದ ಬದಲಾಯಿಸಿ, ವಾಣಿಜ್ಯ ಸಂಸ್ಥೆಗಳನ್ನಾಗಿ ಪರಿವರ್ತಿಸುವ ಪ್ರಯತ್ನ ನಿರಂತರವಾಗಿ ನಡೆದಿದೆ. ಹಾಗಾಗಿ, ಈ ಹೊಸ ಸಚಿವಾಲಯ ಸ್ಥಾಪನೆ ಸಹಕಾರಿಗಳಲ್ಲಿ ಸಂತೋಷಕ್ಕಿಂತ ಆತಂಕವನ್ನೇ ಮೂಡಿಸಿದೆ.

ಹೊಸ ಸಚಿವಾಲಯವನ್ನು ರಾಜಕೀಯ ಉದ್ದೇಶಗಳಿಗಾಗಿ ರಚನೆ ಮಾಡಲಾಗಿದೆ ಎಂಬ ಗಂಭೀರ ಅನಿಸಿಕೆಗಳು ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಟೀಕೆ, ವಿಮರ್ಶೆ, ಆತಂಕಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ಸಚಿವಾಲಯ ಸಹಕಾರಿ ತತ್ವಕ್ಕೆ ಧಕ್ಕೆ ಬರದಂತೆ, ರಾಜಕೀಯಕರಣಗೊಳಿಸದಂತೆ ಸಹಕಾರ ಚಳವಳಿಗೆ ಶಕ್ತಿ ತುಂಬುವ ಕೆಲಸ ಮಾಡಿದರೆ ಉತ್ತಮ.

ಲೇಖಕ: ಶಾಸಕ ಮತ್ತು ಕಾಂಗ್ರೆಸ್ ಮುಖಂಡ

ಸುಲಲಿತ ವಹಿವಾಟಿನತ್ತ ನೋಟ

• ಡಾ. ಎಂ.ಆರ್. ವೆಂಕಟೇಶ್

ಸ್ವಾತಂತ್ರ್ಯಾನಂತರ ಇದೇ ಮೊದಲಿಗೆ, ಸಹಕಾರ ಕ್ಷೇತ್ರದ ಕುರಿತು ಅತ್ಯಂತ ದೃಢ ಹಾಗೂ ದೂರಗಾಮಿ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ. 112 ವರ್ಷದ ಇತಿಹಾಸವುಳ್ಳ ಸಹಕಾರ ಕ್ಷೇತ್ರವು ದೇಶದ ಜಿಡಿಪಿಗೆ ಶೇ 8ರಷ್ಟು ಕೊಡುಗೆಯನ್ನು ನೀಡುತ್ತಿದೆ. ಆದರೂ ಕೃಷಿ ಸಚಿವಾಲಯದಲ್ಲಿ ಸಣ್ಣ ಇಲಾಖೆಯಾಗಿದ್ದ ಸಹಕಾರ ಕ್ಷೇತ್ರವನ್ನು ಇದೀಗ ಪ್ರತ್ಯೇಕ ಸಚಿವಾಲಯವನ್ನಾಗಿ ರೂಪಿಸಿದೆ. ಸಣ್ಣ ಹಾಗೂ ಅತಿ ಸಣ್ಣ ರೈತರ, ಸಾಮಾನ್ಯ ಗ್ರಾಮೀಣರ ಹಣದ ಅವಶ್ಯಕತೆಯನ್ನು ಪೂರೈಸುತ್ತಿರುವ ಸಹಕಾರ ಕ್ಷೇತ್ರದಲ್ಲಿನ ತೊಂದರೆಗಳ ನಿವಾರಣೆಗೆ ಕೇಂದ್ರ ಸರ್ಕಾರ ಅನೇಕ ಕ್ರಮ ಕೈಗೊಂಡಿದೆಯಾದರೂ, ಇದೀಗ ಸಹಕಾರ ಸಚಿವಾಲಯ ಸ್ಥಾಪನೆ ಮಾಡುವ ಮೂಲಕ ಕ್ಷೇತ್ರದ ಶುದ್ಧೀಕರಣಕ್ಕೆ ಮುಂದಾಗಿದೆ.

ಸಹಕಾರ ಕ್ಷೇತ್ರವನ್ನು ಅನೇಕ ರಾಜ್ಯಗಳಲ್ಲಿ ಜನರ ಸಬಲೀಕರಣದ ಮಾರ್ಗವಾಗಿಸುವ ಬದಲಿಗೆ ವೋಟ್‌ಬ್ಯಾಂಕ್ ರಾಜಕೀಯದ ದಾಳವಾಗಿಸಿಕೊಳ್ಳಲಾಗಿದೆ. ಕರ್ನಾಟಕದ ಮಟ್ಟಿಗಂತೂ ಅತ್ಯುತ್ತಮ ಸಹಕಾರ ಚಳವಳಿ ರೂಪುಗೊಂಡಿದೆ. ಇಲ್ಲಿನ ಸಹಕಾರಿ ಧುರೀಣರು ರೈತರ ಹಾಗೂ ಜನಸಾಮಾನ್ಯರ ಸಂಕಷ್ಟಕ್ಕೆ ಸಹಕಾರ ಕ್ಷೇತ್ರ ಒದಗಿಬರುವಂತೆ ನೋಡಿಕೊಂಡಿದ್ದಾರೆ. ಆದರೆ ಇಲ್ಲಿವರೆಗೆ ಯಾವುದೇ ಸರ್ಕಾರವು ಸಹಕಾರ ಕ್ಷೇತ್ರಕ್ಕೆ ಇಷ್ಟು ಮಹತ್ವ ನೀಡಿರಲಿಲ್ಲ. ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯ ರೂಪಿಸುವ ಮುನ್ಸೂಚನೆಯನ್ನು ಕಳೆದ ಬಜೆಟ್‌ನಲ್ಲೆ ಕೇಂದ್ರ ಸರ್ಕಾರ ನೀಡಿತ್ತು. ರಾಷ್ಟ್ರೀಕೃತ ಹಾಗೂ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ ಪ್ರಕ್ರಿಯೆಗಳು ಜಾರಿಯಲ್ಲಿವೆ. ಸಾಲ ನೀಡಿಕೆಯಿಂದ ಹೂಡಿಕೆವರೆಗೆ ಎಲ್ಲ ಪ್ರಕ್ರಿಯೆಗಳನ್ನೂ ಪಾರದರ್ಶಕ ಹಾಗೂ ಸರಳವಾಗಿಸುವ ಪ್ರಕ್ರಿಯೆ ಸಹಕಾರ ಕ್ಷೇತ್ರದಲ್ಲಿ ತುಸು ನಿಧಾನವಾಗಿದೆ. ಸಹಕಾರ ಕ್ಷೇತ್ರದಲ್ಲೂ ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್ ಅಂಶಗಳನ್ನು ಜಾರಿ ಮಾಡಲು ಹೊಸ ಸಚಿವಾಲಯ ಸಹಕಾರಿಯಾಗಲಿದೆ.

ಸಹಕಾರ ಕ್ಷೇತ್ರಕ್ಕೆ ಕೇಂದ್ರದಲ್ಲಿ ಸಚಿವಾಲಯ ರೂಪಿಸಿರುವುದು ರಾಜ್ಯಗಳ ಪರಮಾಧಿಕಾರವನ್ನು ಕಸಿದುಕೊಂಡಂತೆ ಎಂದು ವಿರೋಧ ಪಕ್ಷಗಳ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ. ಹೌದು. ಸಹಕಾರ ಕ್ಷೇತ್ರ ಎಂಬುದು ಸಂವಿಧಾನದ ಪ್ರಕಾರ ರಾಜ್ಯಗಳ ವ್ಯಾಪ್ತಿಗೆ ಒಳಪಡುತ್ತದೆ. ಆದರೆ ವ್ಯವಸ್ಥೆಯನ್ನು ಸುಧಾರಿಸಲು ಕೇಂದ್ರ ಸರ್ಕಾರ ಮುಂದಾದಾಗ ಇಂತಹ ಆಪಾದನೆ ಮಾಡಲಾಗುತ್ತಿದೆ. ಶಿಕ್ಷಣ, ಭೂಮಿ ವಿಚಾರಗಳು ರಾಜ್ಯ ಪಟ್ಟಿಗೆ ಒಳಪಡುತ್ತವೆ. ಆದರೂ ಸರ್ವ ಶಿಕ್ಷಣ ಅಭಿಯಾನದ ಮೂಲಕ ರಾಜ್ಯಗಳಿಗೆ ಕೇಂದ್ರ ಹಣಕಾಸು ನೆರವು ನೀಡುತ್ತಿಲ್ಲವೇ? ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ರೇರಾ ಕಾಯ್ದೆ ರೂಪಿಸಿಲ್ಲವೇ? ಅದೇ ರೀತಿ ರಾಜ್ಯಗಳ ಹಕ್ಕುಗಳಿಗೆ ಬಾಧೆಯಾಗದಂತೆ, ಪೂರಕವಾಗಿ ಕೇಂದ್ರದಲ್ಲಿ ಮಾದರಿ ಕಾಯ್ದೆಯನ್ನು ರೂಪಿಸಲು ಹೊಸ ಸಚಿವಾಲಯ ಸಹಕಾರಿಯಾಗಲಿದೆ. ಆಡಳಿತಾತ್ಮಕ ನಿರ್ದೇಶನ ನೀಡುವುದರ ಜತೆಗೆ ಸ್ಪಷ್ಟ ಕಾನೂನುಗಳನ್ನು ರೂಪಿಸಲು ಮತ್ತು ನೀತಿಗಳನ್ನು ರೂಪಿಸಲು ಪೂರಕವಾಗುತ್ತದೆ.

ಸಹಕಾರ ಕ್ಷೇತ್ರ ಎಂದರೆ ಕೇವಲ ಹಣವನ್ನು ಬಡ್ಡಿಗೆ ನೀಡುವ ಹಣಕಾಸು ಸಂಸ್ಥೆಯಷ್ಟೆ ಅಲ್ಲ. ಗ್ರಾಮೀಣ ಜನರಲ್ಲಿ ಕೌಶಲ ಹೆಚ್ಚಿಸಲು ತರಬೇತಿ ನೀಡುವ, ಸಾವಯವ ಕೃಷಿಗೆ ಉತ್ತೇಜಿಸುವ, ಸೌರ ಶಕ್ತಿ ಬಳಕೆಗೆ ಪ್ರೋತ್ಸಾಹಿಸುವ ಕಾರ್ಯವನ್ನೂ ಮಾಡಬಲ್ಲವು. ಆಧುನಿಕ ತಂತ್ರಜ್ಞಾನದ ಮೂಲಕ ಕೃಷಿ ಚಟುವಟಿಕೆ, ಬೆಳೆ ವಿಮೆ, ಪಶು ಸಂಗೋಪನೆ ಮುಂತಾದ ಕ್ಷೇತ್ರದಲ್ಲಿ ಈ ಸಚಿವಾಲಯದಿಂದ ಉತ್ತೇಜನ ಸಿಗಲಿದೆ. ಸಹಕಾರದಿಂದ ಸಮೃದ್ಧಿ ಎಂಬ ಘೋಷವಾಕ್ಯವನ್ನು ಕೇಂದ್ರ ಸರ್ಕಾರ ನೀಡಿದೆ. ಸಹಕಾರ ಕ್ಷೇತ್ರದಿಂದ ದೇಶಕ್ಕೆ ಸಮೃದ್ಧಿ ಲಭಿಸುತ್ತದೆ ಎಂಬುದು ಒಂದು ಅರ್ಥವಾದರೆ, ಕೇಂದ್ರ ಹಾಗೂ ರಾಜ್ಯಗಳು ಪರಸ್ಪರ ಸಹಕಾರಿ ಭಾವದಿಂದ ಕೆಲಸ ಮಾಡಿದರೆ ರಾಷ್ಟ್ರದ ಅಭಿವೃದ್ಧಿ ಎಂಬ ಸಂದೇಶವನ್ನೂ ನೀಡುತ್ತಿದೆ.

ರಾಷ್ಟ್ರೀಕೃತ ಮತ್ತು ವಾಣಿಜ್ಯ ಬ್ಯಾಂಕ್‌ಗಳು ಹಾಗೂ ಸಹಕಾರ ಸಂಸ್ಥೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಭಿನ್ನವಾಗಿ ನೋಡುತ್ತದೆ ಎಂಬ ಅಳಲು ಇಂದು ನಿನ್ನೆಯದಲ್ಲ. ರಾಷ್ಟ್ರೀಕೃತ ಅಥವಾ ವಾಣಿಜ್ಯ ಬ್ಯಾಂಕೊಂದು ಸಂಕಷ್ಟಕ್ಕೆ ಸಿಲುಕಿದರೆ ಬೆರಳೆಣಿಕೆಯ ದಿನದಲ್ಲಿ ಧಾವಿಸುವ ವ್ಯವಸ್ಥೆ, ಅಲ್ಲಿನ ಗ್ರಾಹಕರ ಹಣವನ್ನು ಸುರಕ್ಷಿತವಾಗಿಸುತ್ತದೆ. ಆದರೆ, ಸಹಕಾರಿ ಬ್ಯಾಂಕ್‌ಗಳಿಗೆ ಈ ಪರಿಸ್ಥಿತಿ ಇಲ್ಲ. ಇದಲ್ಲದೆ, ಸಹಕಾರ ಬ್ಯಾಂಕುಗಳು ಮತ್ತು ಕ್ರೆಡಿಟ್ ಸೊಸೈಟಿಗಳ ಕುರಿತು ಆರ್‌ಬಿಐ ತೆಗೆದುಕೊಳ್ಳುತ್ತಿರುವ ಕೆಲವೊಂದು ನಿಲುವುಗಳು ಆತಂಕಕಾರಿಯಾಗಿವೆ. ಆಡಳಿತ ಮಂಡಳಿಗಳ ನೇಮಕದಲ್ಲಿ ಕೆಲವು ಗೊಂದಲಗಳನ್ನು ನಿರ್ಮಿಸಲಾಗಿದೆ. ಆಡಳಿತ ಮಂಡಳಿ ನಿರ್ದೇಶಕರುಗಳ ಅರ್ಹತೆ, ವಯಸ್ಸು ಹಾಗೂ ಅವಧಿಗಳ ಕುರಿತು ವಿಚಿತ್ರ ನಿಯಮಾವಳಿಗಳನ್ನು ರೂಪಿಸಲಾಗಿದೆ. ಪರಂಪರೆ, ಭಾವನಾತ್ಮಕತೆ, ಅಸ್ಮಿತೆ, ಜಾತಿ, ಭೌಗೋಳಿಕತೆ ಆಧಾರದಲ್ಲಿ ಅನೇಕ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇಂತಹ ಬ್ಯಾಂಕುಗಳ ವಿಲೀನ ಸರಿಯಲ್ಲ. ಆರ್‌ಬಿಐನ ಇಂತಹ ಅನೇಕ ನಿರ್ಧಾರಗಳನ್ನು ಪ್ರಶ್ನಿಸಲು ಇಲ್ಲಿವರೆಗೆ ಯಾವುದೇ ವೇದಿಕೆ ಇರಲಿಲ್ಲ. ಇದೀಗ ಪ್ರತ್ಯೇಕ ಸಚಿವರು ಇರುವ ಕಾರಣಕ್ಕೆ ಅಹವಾಲು ಆಲಿಸಲು ಒಂದು ಅವಕಾಶ ಲಭಿಸಿರುವುದು ಹೊಸ ಸಹಕಾರ ಸಚಿವಾಲಯದ ಅನುಕೂಲಗಳಲ್ಲೊಂದು.



ಸಹಕಾರ ಸಚಿವಾಲಯಕ್ಕೆ ಗೃಹ ಸಚಿವ ಅಮಿತ್ ಶಾ ಅವರೇ ಮೊದಲ ಸಚಿವರಾಗಿದ್ದಾರೆ. ಸಹಕಾರಿ ಕ್ಷೇತ್ರದಿಂದಲೇ ತಮ್ಮ ರಾಜಕೀಯ ಜೀವನವನ್ನು ಶಾ ಆರಂಭಿಸಿದವರು. ಕ್ಷೇತ್ರದ ಸಮಸ್ಯೆಗಳ ಜತೆಗೆ ಸಾಮರ್ಥ್ಯವನ್ನೂ ಸ್ಪಷ್ಟವಾಗಿ ಅರಿತಿರುವ ಶಾ ಅವರು ಸಹಕಾರಿ ವಲಯವನ್ನು ಬಲಗೊಳಿಸುವುದಕ್ಕಾಗಿ ಯಾವುದೇ ಪ್ರಯತ್ನಕ್ಕೂ ಹಿಂಜರಿಯುವುದಿಲ್ಲ ಎಂಬ ನಂಬಿಕೆ ಇದೆ.

ಲೇಖಕ: ಶ್ರೀ ತ್ಯಾಗರಾಜ ಕೊ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ, ಸಹಕಾರ ಭಾರತಿಯ ಬೆಂಗಳೂರು ಜಿಲ್ಲಾ ಅಧ್ಯಕ್ಷ


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

❌ **2022ರಲ್ಲಿ** ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ನಡೆಯಲಿದೆ. ಇದಕ್ಕೆ ರಾಜಕೀಯ ಪಕ್ಷಗಳ ಬಿರುಸಿನ ತಯಾರಿ ನಡೆದಿದ್ದು, ರಾಜಕೀಯ ನಾಯಕರು ಜನರ ಮನವೊಲಿಸುವ ಯತ್ನದಲ್ಲಿ ತೊಡಗಿದ್ದಾರೆ. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಮಾಡಿರುವ ಒಂದು ಟ್ವೀಟ್ ಸದ್ಯ ಸುದ್ದಿಗೆ ಗ್ರಾಸವಾಗಿದೆ. ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ರಾಮಮಂದಿರ ನಿರ್ಮಾಣವಾಗುತ್ತಿರುವ ಸ್ಥಳದಲ್ಲಿ ಬಾಬರಿ ಮಸೀದಿ ಕಟ್ಟುತ್ತೇವೆ ಎಂದು ಅವರು ಟ್ವೀಟ್ ಮಾಡಿದ್ದಾರೆ ಎನ್ನಲಾಗಿದೆ. ಇದರ ಸ್ಕ್ರೀನ್‌ಶಾಟ್ ಎಲ್ಲ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

✅ **ಅಖಿಲೇಶ್** ಅವರ ಟ್ವಿಟರ್ ಖಾತೆಯನ್ನು ಸಂಪೂರ್ಣ ಪರಾಮರ್ಶೆ ನಡೆಸಿದರೂ ಬಾಬರಿ ಮಸೀದಿ ಕಟ್ಟುವುದಾಗಿ ಘೋಷಿಸಿದ ಟ್ವೀಟ್ ಪತ್ತೆಯಾಗಿಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಒಂದು ವೇಳೆ ಅದು ಡಿಲೀಟ್ ಆಗಿದ್ದರೂ, ಆರ್ಕೈವ್‌ನಲ್ಲಿ ಇರಬೇಕಿತ್ತು. ಅದು ಅಲ್ಲಿಯೂ ಲಭ್ಯವಿಲ್ಲ. ಹೀಗಾಗಿ ಇದು ನಕಲಿ ಟ್ವೀಟ್ ಎಂಬ ತೀರ್ಮಾನಕ್ಕೆ ಬರಲಾಗಿದೆ ಎಂದು ವೆಬ್‌ಸೈಟ್ ತಿಳಿಸಿದೆ. ಅಖಿಲೇಶ್ ಅವರ ಅಸಲಿ ಖಾತೆಯ ಟ್ವೀಟ್ ಹಾಗೂ ವೈರಲ್ ಆಗಿರುವ ಟ್ವೀಟ್‌ನ ಸ್ವರೂಪದಲ್ಲಿ ಸಾಮ್ಯತೆ ಇಲ್ಲ ಎಂಬ ಅಂಶ ಕಂಡುಬಂದಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಂತರಂಗ -ಬಹಿರಂಗ

ಇಂತು ಹೊರಗೊಳಗುಗಳು ಬೇರೆ ಲೋಕಗಳಲ್ಲ |
ಅಂತರಂಗದೊಳೂರಸಂತೆ ಸದ್ದಿಹುದು ||
ಸಂತೆಯೊಳಮಂತರಂಗದ ಸದ್ದು ಕೇಳಿಪುದು |
ಸ್ವಾಂತದಿಕ್ಕೆಲಗಳವು – ಮಂಕುತಿಮ್ಮ || 441 ||

ಪದ-ಅರ್ಥ: ಹೊರಗೊಳಗುಗಳು = ಹೊರಗೆ + ಒಳಗುಗಳು, ಅಂತರಂಗದೊಳೂರಸಂತೆ = ಅಂತರಂಗದೊಳು + ಊರಸಂತೆ, ಸಂತೆಯೊಳ-ಮಂತರಂಗದ = ಸಂತೆಯೊಳಮ್ (ಸಂತೆಯಲ್ಲಿ) + ಅಂತರಂಗದ, ಸ್ವಾಂತದಿಕ್ಕೆಲಗಳವು = ಸ್ವಾಂತದ (ಮನಸ್ಸಿನ) + ಇಕ್ಕೆಲಗಳು (ಎರಡು ಬದಿಗಳು) + ಅವು.

ವಾಚ್ಯಾರ್ಥ: ಒಳಗೆ, ಹೊರಗೆ ಎನ್ನುವ ಲೋಕಗಳು ಬೇರೆಯಲ್ಲ. ಅಂತರಂಗದಲ್ಲಿ ಊರಸಂತೆಯ ಸದ್ದಿದೆ. ಅಂತೆಯೇ ಸಂತೆಯಲ್ಲೂ ಅಂತರಂಗದ ಸದ್ದು ಕೇಳಿಸುತ್ತದೆ. ಅವೆರಡೂ ಮನಸ್ಸಿನ ಎರಡು ಬದಿಗಳು.

ವಿವರಣೆ: ಭಗವದ್ಗೀತೆಯ ಹದಿನೆಂಟನೆ ಅಧ್ಯಾಯದಲ್ಲಿ ಒಂದು ಸುಂದರವಾದ ಚಿಂತನೆ ಬರುತ್ತದೆ.

ಜ್ಞಾನಂ ಜ್ಞೇಯಂ ಪರಿಜ್ಞಾತಾ ತ್ರಿವಿಧಾ ಕರ್ಮಚೋದನಾ|
ಕರಣಂ ಕರ್ಮ ಕರ್ತಾ ಇತಿ ತ್ರಿವಿಧಃ ಕರ್ಮಸಂಗ್ರಹಃ ||

ಕರ್ಮದ ಪ್ರೇರಣೆ ಮೂರು ಅಂಶಗಳ ಸಂಯೋಜನೆಯಿಂದ ಆಗುವಂಥದ್ದು. ತಿಳಿವಳಿಕೆ, ತಿಳಿಯಬೇಕಾದ ವಿಷಯ ಮತ್ತು ತಿಳಿದವನು. ಇವುಗಳನ್ನು ಗೀತೆ ಜ್ಞಾನ, ಕರ್ಮ ಮತ್ತು ಕರ್ಮಿ ಎಂದು ಕರೆಯುತ್ತದೆ. ಅಡುಗೆಮನೆಯಿಂದ ವಾಸನೆ ನುಗ್ಗಿ ಬರುತ್ತಿದ್ದರೆ ಬೋಂಡಾ ಕರಿಯುತ್ತಿದ್ದಾರೆ ಎಂದು ತಿಳಿಯುವುದು ಜ್ಞಾನ. ಒಳಗೆ ಹೋಗಿ ಹೊಟ್ಟೆತುಂಬ ಬೋಂಡಾ ತಿನ್ನುವುದು ಕರ್ಮ. ತಿಂದವನು ಕರ್ಮಿ. ಈ ಪ್ರತಿಯೊಂದು ಕರ್ಮದ ಚರಿತ್ರೆಯಲ್ಲಿ ಮೂರು ಘಟ್ಟಗಳಿವೆ - ಪ್ರಾರಂಭ, ಪ್ರವರ್ತನ ಮತ್ತು ಪರಿಣಾಮ. ಯಾವುದೇ ಕರ್ಮ ಪ್ರಾರಂಭವಾಗುವುದು ಅಂತರಂಗದಲ್ಲಿ. ಈ ಕಾರ್ಯವನ್ನು ಮಾಡಬೇಕೇ, ಬೇಡವೇ? ಹೇಗೆ ಮಾಡಿದರೆ ಚೆನ್ನಾದೀತು? ಕರ್ಮದ ಪ್ರಾರಂಭದಲ್ಲಿ ಈ ಚಿಂತನೆಗಳು ಅಂತರ್ಯದಲ್ಲಿ ಮೂಡುತ್ತವೆ. ಅದು ಜ್ಞಾನಕ್ಷೇತ್ರದ್ದು. ಅದು ಕೇವಲ ಚಿಂತನೆಯಲ್ಲೇ ಉಳಿದುಬಿಟ್ಟರೆ ಕರ್ಮ-ವಾಗುವುದಿಲ್ಲ. ಚಿಂತನೆ ಮುಂದುವರೆದು ಅದು ಪ್ರಪಂಚದಲ್ಲಿ ಕಾರ್ಯರೂಪವಾಗುತ್ತದೆ. ಕಾರ್ಯ ನಡೆಯುವುದು ಬಾಹ್ಯರೂಪದಲ್ಲಿ. ಅದು ಎಲ್ಲರಿಗೂ ಕಾಣುತ್ತದೆ. ಅಂದರೆ, ಅಂತರಂಗದಲ್ಲಿ ನಡೆದ ಚಿಂತನೆ ಕಾರ್ಯವಾಗುವುದು ಬಹಿರಂಗದಲ್ಲಿ. ಮೂರನೆಯ ಘಟ್ಟ, ಪರಿಣಾಮ. ಅದು ದೈವದ ಕೆಲಸ. ಕೆಲವೊಮ್ಮೆ ಎಷ್ಟೊಂದು ಚಿಂತನೆ ಮಾಡಿದ, ಸರಿಯಾಗಿ ಯೋಜಿಸಿದ ಕೆಲಸ ಫಲಕಾರಿಯಾಗದೆ ಹೋಗಬಹುದು. ಮತ್ತೆ ಕೆಲವು ಬಾರಿ, ಅಷ್ಟೊಂದು ಆಳವಾಗಿ ಯೋಚಿಸದ, ತಕ್ಷಣಕ್ಕೆ ಮಾಡಿದ ಕಾರ್ಯ ಅಭೂತಪೂರ್ವ ಪರಿಣಾಮವನ್ನು ನೀಡೀತು. ಪರಿಣಾಮ ನಮ್ಮನ್ನು ಮೀರಿದ್ದು. ಅದು ದೈವದ್ದು.

ಪ್ರಸ್ತುತ ಚಿಂತನೆಗೆ ಮೊದಲ ಎರಡು ಘಟ್ಟಗಳು ಮುಖ್ಯ. ಯಾವುದೇ ಕರ್ಮದ ಪ್ರಾರಂಭ ಆಗುವುದು ಅಂತರಂಗದಲ್ಲಿ. ಅದು ಜ್ಞಾನಕ್ಷೇತ್ರದ್ದು. ನಂತರ ಅದು ಪ್ರಕಟವಾಗಿ ಕಾರ್ಯವಾಗುವುದು, ಪ್ರವರ್ತನೆ. ಅದು ಬಾಹ್ಯಪ್ರಪಂಚದ್ದು, ಕ್ರಿಯಾಕ್ಷೇತ್ರದ್ದು. ಹೀಗೆ ಅಂತರಂಗದ ಯೋಜನೆ ಬಹಿರಂಗವಾಗುತ್ತ-ದೆ. ಬಹಿರಂಗದಲ್ಲಿ ನಡೆದ ಕರ್ಮ ಬೆಳೆದಂತೆ ಹೊಸ ಯೋಚನೆಗಳು ಹುಟ್ಟಿಕೊಳ್ಳುತ್ತವೆ. ಆ ಹೊಸ ಯೋಚನೆಗಳಿಂದ ಮತ್ತೆ ಹೊಸಕಾರ್ಯ. ಹೀಗೆ ಅಂತರಂಗ, ಬಹಿರಂಗಗಳು ಬೇರೆಯಲ್ಲ. ಅವು ಮತ್ತೊಂದರ ಮುಂದುವರೆದ ಭಾಗ. ಇದನ್ನು ಈ ಕಗ್ಗ ತುಂಬ ಕಾವ್ಯಮಯವಾಗಿ ಹೇಳುತ್ತದೆ. ಅಂತರಂಗದಲ್ಲಿ ಊರಸಂತೆಯ ಸದ್ದಿದೆ. ಊರಸಂತೆಯೆಂದರೆ ಜಗತ್ತಿನ ವ್ಯಾಪಾರ, ಅದು ಬಹಿರಂಗದ್ದು, ಗದ್ದಲದ್ದು. ಅಂತೆಯೇ ಸಂತೆಯಲ್ಲಿ ಅಂತರಂಗದ ಕೂಗು ಕೇಳಿಸುತ್ತದೆ. ಪ್ರಪಂಚದ ಗದ್ದಲ ಹೊಸದೊಂದು ಯೋಚನೆಗೆ ದಾರಿಯಾಗುತ್ತದೆ. ಆದ್ದರಿಂದ ಅಂತರಂಗ-ಬಹಿರಂಗಗಳು ಮನಸ್ಸಿನ ಎರಡು ಬದಿಗಳು ಅಷ್ಟೇ.

ದಿನ ಭವಿಷ್ಯ

ಗುರುವಾರ ಜುಲೈ 22, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುಷ್ಯ ತ್ರಯೋದಶಿ ಗಂ. 14-43 (ಹ. 12-03) ಗುರುವಾರ ನಿತ್ಯ ನಕ್ಷತ್ರ ಮೂಲ ಗಂ. 24-29 (ಹ, 3-57) ಐಂದ್ರ ನಾಮ ಯೋಗ ಗಂ. 17-6 ತೈತಲ ಕರಣ ಗಂ. 14-43 ವಿಷ ಗಂ. 20-43 ಅಮೃತ ಗಂ. 9-41 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-06 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 2, 7

ಮೇಷ: ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಮಾಡುವ ಅವಕಾಶ ಹೊಂದಲಿದ್ದೀರಿ. ಹಿರಿಯ ಅಧಿಕಾರಿಗಳೊಂದಿಗಿನ ಸಂಬಂಧ ಉತ್ತಮಗೊಳ್ಳಲಿದೆ. ಪದೋನ್ನತಿಯ ವಿಚಾರ ಪ್ರಸ್ತಾಪವಾಗಿ ಸಂತಸ ಮೂಡಲಿದೆ.

ವೃಷಭ: ಸಾಮರ್ಥ್ಯಕ್ಕೆ ತಕ್ಕುದಾದ ಉದ್ಯೋಗ ದೊರಕಲಿದೆ. ಮಹಿಳೆಯರ ವಿಚಾರದಲ್ಲಿ ಎಚ್ಚರಿಕೆಯ ನಡೆ ಅಗತ್ಯವೆನಿಸಲಿದೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಾಳಜಿ ವಹಿಸಿ. ದೇವತಾ ದರ್ಶನದಿಂದ ನೆಮ್ಮದಿ ಮೂಡಿಬರಲಿದೆ.

ಮಿಥುನ: ಸಹೋದರನಿಗೆ ಉದ್ಯೋಗ ದೊರೆಯುವ ಸಾಧ್ಯತೆ. ಮನೆಯಲ್ಲಿ ಸಂಭ್ರಮ ಮನೆಮಾಡಲಿದೆ. ನೆರೆಯವರೊಂದಿಗೆ ಹೆಚ್ಚಿನ ಕಾಲಹರಣ ಮಾಡಬೇಕಾದೀತು. ಮನಸ್ಸಿಗೆ ನೆಮ್ಮದಿ ಮೂಡಿಬರಲಿದೆ.

ಕರ್ಕಾಟಕ: ನೇತ್ರ ಸಂಬಂಧಿ ವ್ಯಾಧಿಗಳಿಂದ ಮುಕ್ತರಾಗಲಿದ್ದೀರಿ. ಮಕ್ಕಳ ವ್ಯವಹಾರಗಳಲ್ಲಿ ಭಾಗಿಯಾಗುವ ಸಾಧ್ಯತೆ. ಮನೆಯವರೊಂದಿಗೆ ನೆಮ್ಮದಿಯ ದಿನವನ್ನಾಗಿಸಿಕೊಳ್ಳುವಿರಿ. ಉತ್ತಮ ಆರೋಗ್ಯ ಭಾಗ್ಯ.

ಸಿಂಹ: ಕಚೇರಿಯ ಸಹೋದ್ಯೋಗಿಗಳಿಂದ ಪ್ರಶಂಸೆಯ ಮಾತುಗಳೊಂದಿಗೆ ಭೋಜನ ಕೂಟದಲ್ಲಿ ಭಾಗಿಯಾಗುವಿರಿ. ಸರ್ಕಾರದಿಂದ ಬರಬೇಕಾದ ಹಣ ಕೈ ಸೇರುವ ನಿರೀಕ್ಷೆ. ವೃದ್ಧಾಪ್ಯದ ಸಂಕಟಗಳು ಎದುರಾಗುವ ಸಾಧ್ಯತೆ.

ಕನ್ಯಾ: ಮೇಲ್ಮಟ್ಟದ ಅಧಿಕಾರಿಗಳ ಬೆಂಬಲದಿಂದ ಕಾರ್ಯಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಿದ್ದೀರಿ. ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗುವ ಸಾಧ್ಯತೆ.

ತುಲಾ: ಪುಸ್ತಕ ಪ್ರಕಾಶಕರೊಂದಿಗೆ ಒಪ್ಪಂದ ಮಾಡಿಕೊಳ್ಳಲಿದ್ದೀರಿ. ಸ್ಟೇಷನರಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ದೊರಕಲಿದೆ. ನೆರೆಯವರೊಂದಿಗಿನ ಸಂಬಂಧ ವೃದ್ಧಿಯಾಗಲಿದೆ. ಕುಟುಂಬಕ್ಕೆ ಹೊಸಬರೊಬ್ಬರ ಆಗಮನ ಸಾಧ್ಯತೆ.

ವೃಶ್ಚಿಕ: ಉನ್ನತ ಶಿಕ್ಷಣದಲ್ಲಿರುವವರಿಗೆ ಸಾಧನೆಯ ಗರಿ ಮುಡಿಗೇರಲಿದೆ. ಪಾರಮಾರ್ಥಿಕ ವಿಚಾರಗಳು ಮನಸ್ಸಿನಲ್ಲಿ ಮೂಡಲಿವೆ. ವ್ಯವಹಾರದಲ್ಲಿ ಉತ್ತಮ ಫಲಗಳು ದೊರಕುವವು. ಸ್ನೇಹಿತರ ಸಹವಾಸದಿಂದಾಗಿ ನೆಮ್ಮದಿ.

ಧನು: ಚಿನ್ನಾಭರಣಗಳನ್ನು ಖರೀದಿಸುವ ಸಾಧ್ಯತೆ. ತಾಂತ್ರಿಕ ಪರಿಣತರಿಗೆ ಮಾಧ್ಯಮಗಳ ಕೆಲಸ ಕಾರ್ಯಗಳು ದೊರೆತು ಉತ್ತಮ ಆದಾಯ ದೊರಕಲಿದೆ. ಪ್ರಚಾರ ಸಾಮಗ್ರಿ ತಯಾರಕರಿಗೆ ಅಮಿತ ಆದಾಯ.

ಮಕರ: ಹಿರಿಯರನ್ನು ಪುಣ್ಯಕ್ಷೇತ್ರ ದರ್ಶನಕ್ಕೆ ಕಳುಹಿಸುವ ಸಂಕಲ್ಪ ಮಾಡಲಿದ್ದೀರಿ. ರಾಜಕೀಯ ಧುರೀಣರೊಬ್ಬರ ಸಹಕಾರದಿಂದ ಮಹತ್ತರ ಕೆಲಸವೊಂದನ್ನು ಮಾಡಿಸಿಕೊಳ್ಳಲಿದ್ದೀರಿ. ಗುತ್ತಿಗೆ ವ್ಯವಹಾರದಲ್ಲಿ ಲಾಭ.

ಕುಂಭ: ಕೆಲಸ ಕಾರ್ಯಗಳು ನಿಧಾನವಾಗಿ ಆದರೂ ಪ್ರಗತಿಯಲ್ಲಿರುವವು. ದೂರದ ಪ್ರಯಾಣ ದಿನದಮಟ್ಟಿಗೆ ಮಾಡದಿರುವುದು ಒಳಿತು. ಮಕ್ಕಳ ಓದಿನ ಬಗ್ಗೆ ಅತೀವ ಕಾಳಜಿ ವಹಿಸಲಿದ್ದೀರಿ. ವೈದ್ಯಕೀಯ ಖರ್ಚು.

ಮೀನ: ನಿಮ್ಮ ಮಾತಿಗೆ ಈಗ ಹೆಚ್ಚಿನ ಮಹತ್ವ ಬರುವುದರಲ್ಲಿ ಸಂಶಯವಿಲ್ಲ. ಆತ್ಮೀಯರೊಬ್ಬರಿಗೆ ಶಿಫಾರಸು ನಡೆಸಿ ಬದುಕಿನ ದಾರಿ ಕಲ್ಪಿಸಿಕೊಡುವಿರಿ. ಸಂಬಂಧಗಳು ಗಟ್ಟಿಗೊಳ್ಳಲಿವೆ. ಉತ್ತಮ ದೇಹಾರೋಗ್ಯ.


ನಿಮ್ಮ ಜನ್ಮದಿನ 22-ಜುಲೈ ಇಂದು ಅತ್ಯಂತ ಶುಭದಾಯಕ. ಕೌಟುಂಬಿಕ ಸೌಖ್ಯವನ್ನು ಅನುಭವಿಸುವಿರಿ. ವಾಹನ ಖರೀದಿಯಿಂದ ಸಂತಸ. ಅವಿವಾಹಿತರಿಗೆ ಕಂಕಣ ಭಾಗ್ಯ. ಬ್ಯಾಂಕ್ ಉದ್ಯೋಗಿಗಳಿಗೆ ಹೆಚ್ಚಿನ ಕಾರ್ಯಬಾಹುಳ್ಯ ಉಂಟಾದೀತು. ಆರೋಗ್ಯದಲ್ಲಿ ಸುಧಾರಣೆ ಕಾಣುವುದರಿಂದ ನೆಮ್ಮದಿ ಮೂಡಿಬರುವುದು. ದೂರದೇಶದ ಪ್ರಯಾಣ ಸಾಧ್ಯತೆ.

ಪದಬಂಧ 4665

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ತನ್ನನ್ನು ತಾನೇ ಹೊಗಳಿಕೊಳ್ಳುವುದು (5)
6.ಅಂತಃಕರಣವೂ ಆದ ಪಚನಾಂಗ (3)
7.ಅರಸಿ ಹಿಡಿದಿರುವ ಕೇರುವ ಸಾಧನ (3)
8.ಸಂವಹನದ ನಂತರ ನಡೆಸಿರುವ ಯಜ್ಞ (3)
10.ರಕ್ತಸಿಕ್ತನಾದವನ ಖಾಲಿ ಕೈ! (4)
11.ಶೌರ್ಯವನ್ನು ಕುರಿತ ಹಾಡು (4)
12.ಬೇರೆಯವರ ಅಧೀನದಲ್ಲಿರುವಿಕೆ (4)
13.ಪುಸ್ತಕದ ಮೇಲು ಹೊದಿಕೆ (4)
14.ವಲಯದ ಬಳಿ ಖರೀದಿಸಿದ ಉಪ್ಪು (3)
16.ಆನೆಯ ಮರಿಯಿದು (3)
18.ದಾಸನು ಶೇಖರಿಸಿರುವ ಸಾಮಾನು (3)
20.ಪ್ರವಾಸದಲ್ಲಿ ಉಳಿದುಕೊಂಡಿರುವ ಮನೆ (5)

ಮೇಲಿಂದ ಕೆಳಕ್ಕೆ
1.ಈತ ಮಾತು ಬಾರದವನು (2)
2.ಆಕಳು ಮೇಯಿಸುತ್ತಿರುವ ಸೇವಕ (2)
3.ಭಾವ ಬೀರಿರುವ ವರ್ಚಸ್ಸು (3)
4.ಬೇಸಿಗೆಯ ತಾಪ (2)
5.ಮಸ್ತಿಯಿಂದ ಅಂಟಿದ ಕಪ್ಪು ಕಲೆ! (2)
8.ಕೈಚಳಕ ಇಲ್ಲಿದೆ (5)
9.ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
15.ಗತಿಸಿದ ಮಹಾತ್ಮರ ಹುಟ್ಟುಹಬ್ಬ (3)
16.ಕತ್ತೆತ್ತಿದಾಗ ಕಾಣಿಸಿರುವ ಗಾರ್ಧಭ (2)
17.ಭವನದಲ್ಲಿರುವ ಸಂಸಾರ (2)
18.ದಾಸೋಹದಲ್ಲಿ ಬಾಯಾರಿಕೆಯೇ? (2)
19.ಪುಡಿ ಮಾಡಿರುವ ಧಾನ್ಯ (2)



4664ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರವರ್ತಕ 2.ಆಕ್ಷೇಪಣೆ4.ಚಕ್ರವಾಕ7.ಜಗತಿ 8.ನೊಣ9.ವಲ್ಲಭ10.ಪಂಕ್ತಿ 11.ಹಾವಸೆ12.ತರತಮ14.ಹಗೆತನ 15.ಅಡಾವುಡಿ
ಮೇಲಿಂದ ಕೆಳಕ್ಕೆ: 1.ಪ್ರಪಂಚ 3.ಪದಾತಿ5.ಕ್ರಮೇಣ6.ಕತ್ತಿವರಸೆ 7.ಜಡಭರತ10.ಪಂಡಿತ 11.ಹಾವುಗೆ13.ಮಹಡಿ

ಸುಡೊಕು 5051

	3		6		2		4	
6		2				8		3
	4		3		9		1	
4		8			5		2	
				1		4		7
2		5	4				6	
			8		3		9	
7		3				6		5
	8		7		6		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5050 ಸುಡೊಕು

6	8	4	5	7	1	2	9	3
9	7	1	2	4	3	6	5	8
5	2	3	8	6	9	1	4	7
2	9	5	4	1	7	3	8	6
1	6	8	3	9	5	4	7	2
3	4	7	6	2	8	5	1	9
4	1	6	9	8	2	7	3	5
8	3	2	7	5	4	9	6	1
7	5	9	1	3	6	8	2	4

‘ಬಿಎಸ್‌ವೈಗೆ ಬೆಂಬಲ; ಅದು ವೈಯಕ್ತಿಕ’

ನವದೆಹಲಿ: ‘ಶಾಮನೂರು ಶಿವಶಂಕರಪ್ಪ ಹಾಗೂ ಎಂ.ಬಿ. ಪಾಟೀಲ ಯಾವ ಅರ್ಥದಲ್ಲಿ ಯಡಿಯೂರಪ್ಪ ಅವರಿಗೆ ಬೆಂಬಲ ನೀಡಿದ್ದಾರೋ ಗೊತ್ತಿಲ್ಲ. ಈ ಬಗ್ಗೆ ಅವರೊಂದಿಗೆ ಮಾತನಾಡುವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯೆ ನೀಡಿದರು.

ಬುಧವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಮುಖಂಡರು ಈ ರೀತಿ ಬೆಂಬಲ ಘೋಷಿಸಿದ್ದು ಪಕ್ಷದ ನಿಲುವಲ್ಲ. ಅದು ವೈಯಕ್ತಿಕ’ ಎಂದು ಹೇಳಿದರು.

ಹೇಳಿಕೆ ನೀಡಬಾರದಿತ್ತು: ‘ಹಿರಿಯ ಮುಖಂಡರಾದ ಶಾಮನೂರು ಶಿವಶಂಕರಪ್ಪ ಹಾಗೂ ಎಂ.ಬಿ. ಪಾಟೀಲ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬೆಂಬಲ ವ್ಯಕ್ತಪಡಿಸಿ ಹೇಳಿಕೆ ನೀಡಬಾರದಿತ್ತು’ ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ ಅಭಿಪ್ರಾಯ ಪಟ್ಟರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ತಮ್ಮ ಸಮುದಾಯದ ಮುಖಂಡರಿಗೆ ಬೆಂಬಲ ವ್ಯಕ್ತಪಡಿಸುವುದು ವೈಯಕ್ತಿಕ ವಿಚಾರ. ಆದರೆ, ಇನ್ನೊಂದು ಪಕ್ಷದ ಮುಖಂಡರಿಗೆ ಬೆಂಬಲ ಘೋಷಿಸುವುದು ಸೂಕ್ತವಲ್ಲ. ಆದರೂ ಅದು ಅವರವರ ವೈಯಕ್ತಿಕ ವಿಚಾರ’ ಎಂದು ಹೇಳಿದರು.

ಕಾಡಂಚಿನಲ್ಲೂ ಝೂಮ್ ಪಾಠ!

ಗುಂಡ್ಲುಪೇಟೆ ತಾಲ್ಲೂಕಿನ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರ ಪ್ರಯತ್ನ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಜಿಲ್ಲೆಯ ಕಾಡಂಚಿನ ಗ್ರಾಮೀಣ ಪ್ರದೇಶಗಳ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸ್ಮಾರ್ಟ್ ತರಗತಿ ಕೊಠಡಿಗಳ ಸೌಲಭ್ಯ ಇಲ್ಲದಿದ್ದರೂ, ಶಿಕ್ಷಕರೇ ಸ್ವತಃ ಆಸಕ್ತಿ ವಹಿಸಿ ಮೊಬೈಲ್ ಆ್ಯಪ್‌ಗಳ ಮೂಲಕ ಮಕ್ಕಳಿಗೆ ಪಾಠ ಮಾಡುತ್ತಿದ್ದಾರೆ.

ಖಾಸಗಿ ಶಾಲೆಗಳಲ್ಲಿ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಆ್ಯಪ್‌ಗಳ ಮೂಲಕ ಶಿಕ್ಷಕರು ಈಗಾಗಲೇ ಪಾಠ ಮಾಡುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇಂಥ ಪ್ರಯತ್ನ ನಡೆದಿಲ್ಲ.

ಗುಂಡ್ಲುಪೇಟೆ ತಾಲ್ಲೂಕಿನ ಕಾಡಂಚಿನ ಗ್ರಾಮಗಳಾದ ದೇವರಹಳ್ಳಿ, ಗೋಪಾಲಪುರ, ಹಂಗಳ, ಬರಗಿ, ಭೀಮನಬೀಡು, ಬನ್ನಿತಾಳಪುರ, ದೇಸಿಹಳ್ಳಿ, ಅಂಕಹಳ್ಳಿ ಸೇರಿದಂತೆ 13ಕ್ಕೂ ಹೆಚ್ಚು ಶಾಲೆಗಳಲ್ಲಿ ಶಿಕ್ಷಕರು 6, 7, 8ನೇ ತರಗತಿ ವಿದ್ಯಾರ್ಥಿಗಳಿಗೆ ಗೂಗಲ್ ಮೀಟ್, ಝೂಮ್ ಆ್ಯಪ್ ಮೂಲಕ ಪಾಠ ಕಲಿಸುತ್ತಿದ್ದಾರೆ.


ಹಲವು ಮಿತಿ: ಹಳ್ಳಿಗಳಲ್ಲಿರುವ ಎಲ್ಲ ಪೋಷಕರ ಬಳಿ ಸ್ಮಾರ್ಟ್‌ಫೋನ್‌ಗಳಿಲ್ಲ. ಇದ್ದರೂ ಬಳಸುವುದು ಗೊತ್ತಿಲ್ಲ. ರೀಚಾರ್ಜ್ ಮಾಡುವುದಕ್ಕೆ ಕಷ್ಟಪಡುವವರೂ ಇದ್ದಾರೆ. ಎಲ್ಲ ಇದ್ದರೆ ನೆಟ್‌ವರ್ಕ್ ಸಮಸ್ಯೆ. ಇಂಥ ಮಿತಿಗಳ ನಡುವೆಯೇ ಶಿಕ್ಷಕರು ಮಕ್ಕಳನ್ನು ಆನ್‌ಲೈನ್ ಬೋಧನೆಯ ದಾರಿಯಲ್ಲಿ ಕರೆದೊಯ್ಯುತ್ತಿದ್ದಾರೆ.

ಎಲ್ಲರಲ್ಲೂ ಸ್ಮಾರ್ಟ್‌ಫೋನ್ ಇಲ್ಲದೆ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಹಾಜರಾಗುತ್ತಿದ್ದಾರೆ.

ಗೋಪಾಲಪುರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6 ಮತ್ತು 7ನೇ ತರಗತಿಯಲ್ಲಿ 35 ವಿದ್ಯಾರ್ಥಿಗಳ ಪೈಕಿ ಎಂಟು ವಿದ್ಯಾರ್ಥಿಗಳು ಆನ್‌ಲೈನ್ ಪಾಠಕ್ಕೆ ಕೂರುತ್ತಾರೆ. ದೇವರಹಳ್ಳಿ ಶಾಲೆಯಲ್ಲಿ 10, ಹಂಗಳ ಶಾಲೆಯಲ್ಲಿ 20 ಮಕ್ಕಳು ಹಾಜರಾಗುತ್ತಿದ್ದಾರೆ.

‘ಪ್ರಾಯೋಗಿಕವಾಗಿ ಆರಂಭಿಸಿರುವ ಆನ್‌ಲೈನ್ ಪಾಠಕ್ಕೆ ಸ್ಮಾರ್ಟ್‌ಫೋನ್ ಇರುವ ಪೋಷಕರ ಮಕ್ಕಳು ಮಾತ್ರ ಹಾಜರಾಗುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಹಾಜರಾಗದವರಿಗೆ ಶಾಲೆಯಲ್ಲೇ ವರ್ಕ್ ಶೀಟ್‌ಗಳನ್ನು ಕೊಡುತ್ತೇವೆ. ವಾಟ್ಸ್‌ಆ್ಯಪ್ ಗ್ರೂಪ್‌ಗಳ ಮೂಲಕವೂ ಪಾಠ ಮುಂದುವರಿದಿದೆ’ ಎಂದು ಗೋಪಾಲಪುರ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕ ಸಿ.ಎಸ್.ನಾಗೇಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೋವಿಡ್ ಕಾರಣದಿಂದ ಮಕ್ಕಳ ಕಲಿಕೆಗೆ ತೊಂದರೆಯಾಗಬಾರದು ಎಂದು ನಡೆಸುತ್ತಿರುವ ಆನ್‌ಲೈನ್ ಪಾಠಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ’ ಎಂದು ದೇವರಹಳ್ಳಿ ಶಾಲೆಯ ಶಿಕ್ಷಕ ಮಲ್ಲಿಕಾರ್ಜುನಸ್ವಾಮಿ, ದೊಡ್ಡಹುಂಡಿ ಶಾಲೆಯ ಶಿಕ್ಷಕಿ ನಿರ್ಮಲಾ ಹೇಳಿದರು.





ಮೊಬೈಲ್ ಮೂಲಕ ಆನ್‌ಲೈನ್ ಪಾಠ ಮಾಡುವ ಶಿಕ್ಷಕಿ ನಿರ್ಮಲಾ (ಎಡ ಚಿತ್ರ), ದೇವರಹಳ್ಳಿ ಶಾಲೆ ಶಿಕ್ಷಕ ನವೀನ್ ಅವರು ಗೂಗಲ್ ಮೀಟ್ ಮೂಲಕ ಮಕ್ಕಳಿಗೆ ಪಾಠ ಮಾಡುತ್ತಿರುವುದು (ಬಲ ಚಿತ್ರ)

ಮುಖ್ಯಾಂಶಗಳು

- ಗುಂಡ್ಲುಪೇಟೆ ತಾಲ್ಲೂಕಿನ ಶಿಕ್ಷಕರ ಪ್ರಯೋಗ
- ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಪಾಠ
- ಸ್ಮಾರ್ಟ್‌ಫೋನ್ ಇರುವ ವಿದ್ಯಾರ್ಥಿಗಳ ಹಾಜರಿ

ಶಾಲೆ ಅವಧಿಯ ನಂತರ ಪಾಠ

ಪೋಷಕರು ಕೆಲಸಕ್ಕೆ ಹೋಗುವುದರಿಂದ ಶಾಲೆಯ ಸಮಯದಲ್ಲಿ ಮಕ್ಕಳಿಗೆ ಮೊಬೈಲ್ ಫೋನ್ ಸಿಗುವುದಿಲ್ಲ. ಹೀಗಾಗಿ, ಕೆಲವು ಶಾಲೆಗಳ ಶಿಕ್ಷಕರು ಪೋಷಕರು ಸಂಜೆಯ ವೇಳೆ ಆನ್‌ಲೈನ್ ತರಗತಿ ನಡೆಸುತ್ತಿದ್ದಾರೆ.

‘ನನ್ನ ತರಗತಿಯಲ್ಲಿ 20 ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಠ ಕೇಳುತ್ತಿದ್ದಾರೆ. ಸಂಜೆ ಆರು ಗಂಟೆಯ ನಂತರ ಮನೆಯಿಂದಲೇ ಆನ್‌ಲೈನ್ ತರಗತಿ ನಡೆಸುತ್ತಿದ್ದೇವೆ’ ಎಂದು ಹಂಗಳ ಪಬ್ಲಿಕ್ ಶಾಲೆಯ ಇಂಗ್ಲಿಷ್ ಶಿಕ್ಷಕಿ ಅನಿತಾ ತಿಳಿಸಿದರು.



ಪ್ರೌಢಶಾಲೆಗಳಲ್ಲಿ ಆನ್‌ಲೈನ್ ಪಾಠ ನಡೆಯುತ್ತಿದೆ. ಪ್ರಾಥಮಿಕ ಶಾಲೆಯಲ್ಲಿ ಈಗ ಆರಂಭವಾಗಿದೆ. 8 ಶಾಲೆಗಳಲ್ಲಿ ಪ್ರಯೋಗ ನಡೆದಿತ್ತು. ಈಗ ಶಾಲೆಗಳ ಸಂಖ್ಯೆ ಹೆಚ್ಚಿದೆ

ಶಿವಮೂರ್ತಿ, ಕ್ಷೇತ್ರ ಶಿಕ್ಷಣಾಧಿಕಾರಿ, ಗುಂಡ್ಲುಪೇಟೆ

ಆನ್‌ಲೈನ್ ತರಗತಿಗಳಲ್ಲಿ ಶಿಕ್ಷಕರು ಚೆನ್ನಾಗಿ ಹೇಳಿ ಕೊಡುತ್ತಿದ್ದಾರೆ. ಮೊಬೈಲ್ ಫೋನ್‌ನಲ್ಲೇ ಪಾಠ ಕೇಳಿದರೂ ಅರ್ಥವಾಗುತ್ತಿದೆ

ಅಂಜಲಿ, ಹಂಗಳ ಪಬ್ಲಿಕ್ ಶಾಲೆ ವಿದ್ಯಾರ್ಥಿನಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3eJ1pZ8

ಪೆಗಾಸಸ್: ವಿಚಾರಣೆ ಸಾಧ್ಯತೆ

ಒಂದನೇ ಪುಟದಿಂದ...

‘ರಾಷ್ಟ್ರೀಯ ಭದ್ರತೆ, ಭಯೋತ್ಪಾದನೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತ್ರ ಗೂಢಚರ್ಯೆ ನಡೆಸಲು ಕಾನೂನಿನಲ್ಲಿ ಅವಕಾಶವಿದೆ. ಅದಲ್ಲದೆ, ಬೇರೆ ರೀತಿಯ ಗೂಢಚರ್ಯೆ ನಡೆಸಿದ್ದರೆ ಅದು ಸಂಪೂರ್ಣ ಕಾನೂನು ಬಾಹಿರ. ಈ ಬಗ್ಗೆ ತನಿಖೆ ನಡೆದರೆ, ತನಿಖೆಗೆ ಸರ್ಕಾರವು ಸಹಕಾರ ನೀಡಬೇಕಾಗುತ್ತದೆ’ ಎಂದು ತರೂರ್ ಹೇಳಿದ್ದಾರೆ.

‘ಗೂಢಚರ್ಯೆಗೆ ಗುರಿಯಾಗಿದ್ದ ಭಾರತೀಯರ ಫೋನ್‌ಗಳಲ್ಲಿ ಪೆಗಾಸಸ್ ಅಳವಡಿಕೆಯಾಗಿತ್ತು ಎಂಬುದು ಸಾಬೀತಾಗಿದೆ. ಪೆಗಾಸಸ್ ಅನ್ನು ಸರ್ಕಾರಗಳಿಗೆ ಮಾತ್ರವೇ ಮಾರಾಟ ಮಾಡಲಾಗುತ್ತದೆ. ಹೀಗಿದ್ದಾಗ ಭಾರತೀಯರ ಫೋನ್‌ಗಳ ಗೂಢಚರ್ಯೆ ನಡೆಸಿದ್ದು ಯಾವ ಸರ್ಕಾರ ಎಂಬ ಪ್ರಶ್ನೆ ಮೂಡುತ್ತದೆ. ನಾವು ಗೂಢಚರ್ಯೆ ನಡೆಸಿಲ್ಲ ಎಂದು ನಮ್ಮ ಸರ್ಕಾರ ಹೇಳುವುದಾದರೆ, ಬೇರೆ ಸರ್ಕಾರ ಗೂಢಚರ್ಯೆ ನಡೆಸಿದೆ ಎಂದಲ್ಲವೇ? ಬೇರೆ ಸರ್ಕಾರವೇ ಗೂಢಚರ್ಯೆ ನಡೆಸಿದ್ದರೆ ಅದು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಅತ್ಯಂತ ಗಂಭೀರ ಕಳವಳ’ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

2018-2019ರ ಅವಧಿಯಲ್ಲಿ ಪೆಗಾಸಸ್ ಕಣ್ಗಾವಲು ತಂತ್ರಾಂಶದ ಮೂಲಕ ಗೂಢಚರ್ಯೆಯ ಗುರಿಯಾಗಿದ್ದವರ ವಿವರಕ್ಕೆ ಸಂಬಂಧಿಸಿದ ದತ್ತಾಂಶವನ್ನು ಫ್ರಾನ್ಸ್‌ನ ಫಾರ್‌ಬಿಡನ್ ಸ್ಟೋರೀಸ್ ಎಂಬ ತನಿಖಾ ಸಂಸ್ಥೆ ಮತ್ತು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆ ಬಹಿರಂಗಪಡಿಸಿದ್ದವು.

ಇದನ್ನು ಭಾರತದ ದಿ ವೈರ್ ಪೋರ್ಟಲ್ ಸೇರಿ ವಿಶ್ವದಾದ್ಯಂತ 15 ಮಾಧ್ಯಮ ಸಂಸ್ಥೆಗಳು ಏಕಕಾಲಕ್ಕೆ ಪ್ರಕಟಿಸಿದ್ದವು. ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು, ಕೇಂದ್ರ ಸಚಿವರು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಸಾಂವಿಧಾನಿಕ ಸಂಸ್ಥೆಗಳ ಅಧಿಕಾರಿಗಳು ಆ ಗೂಢಚರ್ಯೆಯ ಗುರಿಯಾಗಿದ್ದರು ಎಂಬುದನ್ನು ಈ ವರದಿಗಳ ಬಹಿರಂಗಪಡಿಸಿದ್ದವು.

ಇದೇ ಮೊದಲಲ್ಲ...

ಭಾರತೀಯರ ಮೇಲೆ ಪೆಗಾಸಸ್ ಮೂಲಕ ಗೂಢಚರ್ಯೆ ನಡೆಸಿದ್ದರ ಬಗ್ಗೆ ಈ ಸಮಿತಿಯು ಸಭೆ ನಡೆಸಿದ್ದು ಇದೇ ಮೊದಲಲ್ಲ. 2019ರಲ್ಲೂ ಈ ಸಮಿತಿಯು ಈ ಬಗ್ಗೆ ಸಭೆ ನಡೆಸಿತ್ತು. ಕೇಂದ್ರ ಸರ್ಕಾರವು ಭಾರತೀಯರ ಮೇಲೆ ಪೆಗಾಸಸ್ ಮೂಲಕ ಗೂಢಚರ್ಯೆ ನಡೆಸಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿದ್ದವು. ಈ ವಿಚಾರವನ್ನು ಚರ್ಚೆ ನಡೆಸಲು ಸಮಿತಿಯು ಸಭೆ ನಡೆಸಿತ್ತು. ಸಮಿತಿಯಲ್ಲಿದ್ದ ಬಿಜೆಪಿ ಸದಸ್ಯರು ಚರ್ಚೆ ನಡೆಸುವುದು ಬೇಡ ಎಂದು ಮತ ಹಾಕಿದ್ದರು. ಆದರೆ ಚರ್ಚೆ ನಡೆಸಲು ಸಮಿತಿಯ ಇತರ ಸದಸ್ಯರು ಒಪ್ಪಿಗೆ ಸೂಚಿಸಿದ್ದರು. ಹೀಗಾಗಿ ಸಮಿತಿಯು ಚರ್ಚೆ ಕೈಗೆತ್ತಿಕೊಂಡಿತ್ತು.

ಚರ್ಚೆಯ ಭಾಗವಾಗಿ ಕೇಂದ್ರ ಗೃಹ ಸಚಿವಾಲಯ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. 121 ಭಾರತೀಯರನ್ನು ಪೆಗಾಸಸ್ ಮೂಲಕ ಗೂಢಚರ್ಯೆಗೆ ಒಳಪಡಿಸಲಾಗಿತ್ತು ಎಂದು ಸರ್ಕಾರವು ಒಪ್ಪಿಕೊಂಡಿತ್ತು. ಆದರೆ ಆ 121 ಮಂದಿ ಯಾರು ಎಂಬುದನ್ನು ಸರ್ಕಾರವು ಬಹಿರಂಗಪಡಿಸಿರಲಿಲ್ಲ. ಕಾಂಗ್ರೆಸ್‌ನ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, ಹಲವು ಪತ್ರಕರ್ತರು ಮತ್ತು ಹಲವು ಸಾಮಾಜಿಕ ಕಾರ್ಯಕರ್ತರನ್ನು ಗೂಢಚರ್ಯೆಗೆ ಒಳಪಡಿಸಲಾಗಿತ್ತು ಎಂದು ಮಾಧ್ಯಮಗಳ ತನಿಖಾ ವರದಿಗಳು ಹೇಳಿದ್ದವು.

ತನಿಖೆಗೆ ಇಸ್ರೇಲ್ ಸಮಿತಿ

‘ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಮಾರಾಟ ಮಾಡಿರುವ ಪೆಗಾಸಸ್ ಕಣ್ಗಾವಲು ತಂತ್ರಾಂಶಕ್ಕೆ ಸಂಬಂಧಿಸಿದಂತೆ ಜಗತ್ತಿನ ವಿವಿಧೆಡೆ ಉಂಟಾಗಿರುವ ವಿವಾದದ ಪರಿಶೀಲನೆಗೆ ಇಸ್ರೇಲ್ ಸರ್ಕಾರವು ಉನ್ನತ ಸಮಿತಿಯೊಂದನ್ನು ರಚಿಸಿದೆ’ ಎಂದು ರಾಯಿಟರ್ಸ್ ವರದಿ ಮಾಡಿದೆ.

‘ಫ್ರಾನ್ಸ್, ಮೆಕ್ಸಿಕೊ, ಭಾರತ ಮತ್ತು ಇರಾಕ್‌ನಲ್ಲಿ ಪೆಗಾಸಸ್ ಅನ್ನು ಬಳಕೆ ಮಾಡಿರುವುದು ಇಸ್ರೇಲ್‌ಗೆ ರಾಜತಾಂತ್ರಿಕವಾಗಿ ಹಿನ್ನಡೆಯಾಗುವ ಸಾಧ್ಯತೆ ಇದೆ. ಹೀಗಾಗಿ ಪೆಗಾಸಸ್ ತಂತ್ರಾಂಶವನ್ನು ಯಾರಿಗೆಲ್ಲಾ ಮಾರಾಟ ಮಾಡಲಾಗಿದೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಮೂಲಗಳು ಹೇಳಿವೆ’ ಎಂದು ವರದಿಯಲ್ಲಿ ಹೇಳಲಾಗಿದೆ. ಫ್ರಾನ್ಸ್‌ನ ರಾಜಕೀಯ ಪ್ರಮುಖರ ವಿರುದ್ಧ ಗೂಢಚರ್ಯೆ ನಡೆಸಲು ಪೆಗಾಸಸ್ ತಂತ್ರಾಂಶ ಬಳಸಿಕೊಂಡಿರುವುದರ ವಿರುದ್ಧ ತನಿಖೆ ನಡೆಸಲು ಫ್ರಾನ್ಸ್ ಸರ್ಕಾರ ಆದೇಶಿಸಿದೆ.

‘ಗೂಢಚರ್ಯೆ ಪ್ರಜಾಪ್ರಭುತ್ವಕ್ಕೆ ಮಾರಕ’

ಪೆಗಾಸಸ್ ಮೂಲಕ ಗೂಢಚರ್ಯೆ ನಡೆಸುತ್ತಿರುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಈ ಮೂಲಕ ಸರ್ಕಾರವು ಪೊಲೀಸ್ ರಾಜ್ಯವನ್ನು ಸೃಷ್ಟಿಸಲು ಹೊರಟಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

‘ಮಾಧ್ಯಮ, ನ್ಯಾಯಾಂಗ ಮತ್ತು ಚುನಾವಣಾ ಆಯೋಗಗಳಿಂದ ಪ್ರಜಾಪ್ರಭುತ್ವ ರೂಪುಗೊಳ್ಳುತ್ತದೆ. ಪೆಗಾಸಸ್ ಈ ಮೂರೂ ಅಂಗಗಳನ್ನು ಬಂಧಿಸಿದೆ. ಪೆಗಾಸಸ್ ಅತ್ಯಂತ ಅಪಾಯಕಾರಿ ಮತ್ತು ಭೀಕರವಾದ ತಂತ್ರಾಂಶ. ನನ್ನ ಫೋನ್ ಅನ್ನೂ ಕದ್ದಾಲಿಸುತ್ತಿರುವ ಕಾರಣ ವಿರೋಧ ಪಕ್ಷಗಳ ಬೇರೆ ನಾಯಕರ ಜತೆ ನಾನು ಫೋನ್‌ನಲ್ಲಿ ಮಾತನಾಡುತ್ತಿಲ್ಲ’ ಎಂದು ಅವರು ಹೇಳಿದ್ದಾರೆ.

‘ನೋಡಿ, ಕದ್ದಾಲಿಕೆ ನಡೆಯುತ್ತಿರುವ ಕಾರಣ ನನ್ನ ಫೋನ್‌ನ ಕ್ಯಾಮೆರಾಗೆ ಪ್ಲಾಸ್ಟರ್ ಹಾಕಿದ್ದೇನೆ’ ಎಂದು ಪ್ಲಾಸ್ಟರ್ ಅಂಟಿಸಿದ್ದ ತಮ್ಮ ಫೋನ್ ಅನ್ನು ಅವರು ಪ್ರದರ್ಶಿಸಿದ್ದಾರೆ.

‘ಪೆಗಾಸಸ್ ಗೂಢಚರ್ಯೆ ಸಂಬಂಧ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಬೇಕು. ಎಲ್ಲರ ಫೋನ್‌ಗಳನ್ನೂ ಕದ್ದಾಲಿಸಲಾಗುತ್ತಿದೆ. ಈ ಬಗ್ಗೆ ಸುಪ್ರೀಂ ಕೋರ್ಟ್ ತನಿಖಾ ಸಮಿತಿಯನ್ನು ರಚಿಸಬೇಕು. ನ್ಯಾಯಾಂಗ ಮಾತ್ರವೇ ದೇಶವನ್ನು ಕಾಪಾಡಬಲ್ಲದು’ ಎಂದು ಅವರು ಹೇಳಿದ್ದಾರೆ.

ನಾಚಿಕೆಗೇಡಿನ ಸಂಗತಿ: ‘ನಲವತ್ತು ಪತ್ರಕರ್ತರು, ವಿರೋಧ ಪಕ್ಷಗಳ ನಾಯಕರ ವಿರುದ್ಧ ನರೇಂದ್ರ ಮೋದಿ ಅವರ ಸರ್ಕಾರ ಪೆಗಾಸಸ್ ಎಂಬ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆಸಿದ್ದು ನಾಚಿಕೆಗೇಡಿನ ಕಾರ್ಯಸೂಚಿಯಾಗಿದೆ. ಈ ಕೃತ್ಯಕ್ಕೆ ಗುರಿಯಾದವರೆಲ್ಲರೂ ಮೋದಿ ಸರ್ಕಾರದ ನಡೆಯನ್ನು ಟೀಕಿಸಿದವರೇ ಆಗಿದ್ದಾರೆ ಎಂಬುದು ಗಮನಿಸಬೇಕಾದ ವಿಷಯ’ ಎಂದು ಕಾಂಗ್ರೆಸ್ ನಾಯಕ ಪ್ರೊ.ಬಿ.ಕೆ.ಚಂದ್ರಶೇಖರ್ ಅವರು ಟೀಕಿಸಿದ್ದಾರೆ.

‘ಸ್ಥಾಪಿತ ಸರ್ಕಾರಗಳಿಗೆ ಮಾತ್ರವೇ ಪೆಗಾಸಸ್ ತಂತ್ರಾಂಶವನ್ನು ಮಾರಾಟ ಮಾಡುವುದಾಗಿ ಇಸ್ರೇಲ್ ಕಂಪನಿ ಹೇಳಿದೆ. ಹಾಗಿರುವಾಗ ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಕೂಡ ಈ ವಿಷಯವನ್ನು ಬಚ್ಚಿಡುವ ಪ್ರಯತ್ನ ನಡೆಸಿರುವುದು ಖಂಡನೀಯ ಹಾಗೂ ಹಾಸ್ಯಾಸ್ಪದ’ ಎಂದು ಅವರು ಹೇಳಿದ್ದಾರೆ.

ಆಮ್ಲಜನಕ ಕೊರತೆಯಿಂದಲೇ ಸಾವು: ಕೇಂದ್ರಕ್ಕೆ ದೆಹಲಿ ತಿರುಗೇಟು

ಒಂದನೇ ಪುಟದಿಂದ...

‘ಇಂತಹ ಸಾವುಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಮತ್ತು ಮೃತರ ಕುಟುಂಬಗಳಿಗೆ ₹5 ಲಕ್ಷ ಪರಿಹಾರ ನೀಡಲು ದೆಹಲಿ ಸರ್ಕಾರ ಸಮಿತಿ ರಚಿಸಿತ್ತು. ಆದರೆ ಕೇಂದ್ರವು ಲೆಫ್ಟಿನೆಂಟ್ ಗವರ್ನರ್ ಮೂಲಕ ಸಮಿತಿಯನ್ನು ವಿಸರ್ಜಿಸಿತು’ ಎಂದು ಅವರು ಆರೋಪಿಸಿದ್ದಾರೆ.

ಆದರೆ, ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಅವರು ವ್ಯತಿರಿಕ್ತ ಹೇಳಿಕೆ ನೀಡಿದ್ದಾರೆ. ‘ರಾಜ್ಯದಲ್ಲಿ ಆಮ್ಲಜನಕದ ಕೊರತೆಯಿಂದ ಜನರು ಸತ್ತರು ಎಂದು ನಾವು ಹೇಳಿಲ್ಲ. ಮೃತಪಟ್ಟವರ ಪೈಕಿ ಕೆಲವು ರೋಗಿಗಳು ಇತರೆ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಆಮ್ಲಜನಕದ ಕೊರತೆಯಿಂದ ಯಾವುದೇ ಸಾವು ಸಂಭವಿಸಿಲ್ಲ’ ಎಂದು ಹೇಳಿದ್ದಾರೆ.

ಕೇಂದ್ರದ ನೀತಿಯೇ ಕಾರಣ: ಕೇಂದ್ರ ಸರ್ಕಾರವು ಆಮ್ಲಜನಕದ ರಫ್ತನ್ನು ಶೇ 700ರಷ್ಟು ಹೆಚ್ಚಿಸಿದ್ದೇ ಕೊರತೆ ಉಂಟಾಗಲು ಕಾರಣ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಆರೋಪಿಸಿದ್ದಾರೆ.

‘ಸರ್ಕಾರವು ಆಮ್ಲಜನಕವನ್ನು ಸಾಗಿಸಲು ಟ್ಯಾಂಕರ್ ವ್ಯವಸ್ಥೆ ಮಾಡಲಿಲ್ಲ. ಉನ್ನತಾಧಿಕಾರ ಸಮಿತಿ ಮತ್ತು ಸಂಸದೀಯ ಸಮಿತಿಯ ಸಲಹೆಯನ್ನು ಕಡೆಗಣಿಸಿದ್ದರಿಂದ ಸಾವು ಸಂಭವಿಸಿದವು ಎಂದು ಆರೋಪಿಸಿದ ಅವರು, ಆಸ್ಪತ್ರೆಗಳಲ್ಲಿ ಆಮ್ಲಜನಕ ಘಟಕಗಳನ್ನು ನಿರ್ಮಿಸಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ’ ಎಂದಿದ್ದಾರೆ.

ಕೇಂದ್ರ ಆರೋಗ್ಯ ಖಾತೆ ರಾಜ್ಯ ಸಚಿವೆ ಭಾರತಿ ಪವಾರ್ ಅವರು ಸದನವನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಹಿರಿಯ ಮುಖಂಡ ಕೆ.ಸಿ. ವೇಣುಗೋಪಾಲ್ ಆರೋಪಿಸಿದ್ದಾರೆ. ಸಚಿವೆಯ ವಿರುದ್ಧ ಹಕ್ಕುಚ್ಯುತಿ ನಿರ್ಣಯ ಮಂಡನೆ ಮಾಡುವ ಬೆದರಿಕೆ ಹಾಕಿದ್ದಾರೆ.

ಪ್ರತಿಪಕ್ಷಗಳ ದ್ವಂದ್ವ ನಿಲುವಿಗೆ ಬಿಜೆಪಿ ತರಾಟೆ

ಒಂದನೇ ಪುಟದಿಂದ...

‘ಆಮ್ಲಜನಕದ ಕೊರತೆಯಿಂದಾಗಿ ಸಂಭವಿಸಿದ ಸಾವಿನ ಅಂಕಿ ಅಂಶಗಳನ್ನು ನೀಡುವಂತೆ ನಿಮ್ಮ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರನ್ನು ಕೇಳಿ. ರಾಜ್ಯ ಸರ್ಕಾರಗಳು ಯಾವ ದತ್ತಾಂಶಗಳನ್ನು ಕಳುಹಿಸಿವೆಯೋ ಅದನ್ನು ಕೇಂದ್ರ ಸರ್ಕಾರ ತಿಳಿಸಿದೆಯಷ್ಟೇ’ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, ‘ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳು ಸಾವನ್ನಪ್ಪಿದ್ದಾರೆ ಎಂಬುದಕ್ಕೆ ಯಾವುದೇ ಪುರಾವೆಗಳು ದೊರೆತಿಲ್ಲ ಎಂದು ಮಹಾರಾಷ್ಟ್ರ ಮತ್ತು ದೆಹಲಿ ಸರ್ಕಾರಗಳು ಆಯಾ ಹೈಕೋರ್ಟ್‌ಗಳಿಗೆ ತಿಳಿಸಿವೆ’ ಎಂದು ಹೇಳಿದರು.

ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುತ್ತಿರುವ ಸಮಯದಲ್ಲಿ ದೇಶದಲ್ಲಿ ಗೊಂದಲ ಮತ್ತು ಅರಾಜಕತೆ ಹರಡುವ ಏಕೈಕ ಕಾರ್ಯಸೂಚಿಯೊಂದಿಗೆ ಕೋವಿಡ್ ಸಾವಿನ ಬಗ್ಗೆ ಕಾಂಗ್ರೆಸ್ ಮತ್ತು ಎಎಪಿ ಸುಳ್ಳುಗಳನ್ನು ಹರಡುತ್ತಿವೆ ಎಂದು ಪಾತ್ರ ಆರೋಪಿಸಿದರು.

ಕೋವಿಡ್ ವಿರುದ್ಧದ ಹೋರಾಟದಲ್ಲಿ ಕಾಂಗ್ರೆಸ್ ಮತ್ತು ಎಎಪಿ ಬದ್ಧತೆಯನ್ನು ಅವರು ಪ್ರಶ್ನಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಸಂಜೆ ಕರೆದಿದ್ದ ಸಂಸತ್ತಿನ ನಾಯಕರ ಸಭೆಗೆ ಉಭಯ ಪಕ್ಷಗಳ ನಾಯಕರು ಬರಲಿಲ್ಲ ಎಂದಿದ್ದಾರೆ. ಆಮ್ಲಜನಕದ ಕೊರತೆಯಿಂದಾಗಿ ರೋಗಿಗಳು ಸಾಯುತ್ತಿರುವ ಬಗ್ಗೆ ಯಾವುದೇ ರಾಜ್ಯವು ಯಾವುದೇ ದತ್ತಾಂಶವನ್ನು ಕಳುಹಿಸಿಲ್ಲ ಎಂದು ಅವರು ಪ್ರತಿಪಾದಿಸಿದರು.

ದೆಹಲಿಯಲ್ಲಿರುವ ಜೈಪುರ ಗೋಲ್ಡನ್ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದಾಗಿ ಸುಮಾರು 21 ಜನರು ಸಾವನ್ನಪ್ಪಿದ್ದಾರೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ದೆಹಲಿ ಸರ್ಕಾರದ ಸಮಿತಿಯು ಹೈಕೋರ್ಟ್‌ಗೆ ತಿಳಿಸಿದೆ.

ಆಮ್ಲಜನಕದ ಕೊರತೆಯಿಂದ ಯಾರೂ ಸಾವನ್ನಪ್ಪಿಲ್ಲ ಎಂದು ಮಹಾರಾಷ್ಟ್ರ ಸರ್ಕಾರ ಬಾಂಬೆ ಹೈಕೋರ್ಟ್‌ಗೆ ತಿಳಿಸಿದೆ. ಛತ್ತೀಸಗಡ ಆರೋಗ್ಯ ಸಚಿವ ಟಿ.ಎಸ್ ಸಿಂಗ್‌ದೇವ್ ಕೂಡ ಇದೇ ರೀತಿಯ ಹೇಳಿಕೆ ನೀಡಿದ್ದಾರೆ ಎಂದು ಪಾತ್ರಾ ತಿಳಿಸಿದರು.

ಭಾರಿ ಮಳೆ ಮುನ್ಸೂಚನೆ; ಮುಂಬೈನಲ್ಲಿ 'ರೆಡ್ ಅಲರ್ಟ್'



ಮುಂಬೈ (ಪಿಟಿಐ): ಭಾರಿ ಮಳೆಯಾಗುವ ಮುನ್ಸೂಚನೆಯ ಹಿನ್ನೆಲೆಯಲ್ಲಿ ಭಾರತೀಯ ಹವಾಮಾನ ಇಲಾಖೆಯ, ಪ್ರಾದೇಶಿಕ ಹವಾಮಾನ ಕೇಂದ್ರ ಬುಧವಾರ ವಾಣಿಜ್ಯ ನಗರಿ ಮುಂಬೈನಲ್ಲಿ ರೆಡ್ ಅಲರ್ಟ್ ಘೋಷಿಸಿದೆ.

ಇದಕ್ಕೂ ಮುನ್ನ ಹವಾಮಾನ ಇಲಾಖೆ 'ಆರೆಂಜ್ ಅಲರ್ಟ್' ಘೋಷಿಸಿತ್ತು, ಆದರೆ, 'ಭಾರಿ ಮಳೆಗೆ ಪೂರಕ ವಾತಾವರಣ' ಉಂಟಾದ ಕಾರಣ ಈಗ 'ರೆಡ್ ಅಲರ್ಟ್' ಘೋಷಿಸಲಾಗಿದೆ ಎಂದು ಪ್ರಾದೇಶಿಕ ಹವಾಮಾನ ಕೇಂದ್ರದ ಮುಖ್ಯಸ್ಥ ಡಾ. ಜಯಂತ್ ಸರ್ಕಾರ್ ತಿಳಿಸಿದ್ದಾರೆ. ಮುಂಬೈನಲ್ಲಿ ಭಾನುವಾರ ಮತ್ತು ಸೋಮವಾರ ಭಾರಿ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿತ್ತು.


'ಮುಂಬೈನಲ್ಲಿ ಬುಧವಾರ ಮತ್ತು ಮುಂದಿನ ಕೆಲ ದಿನಗಳ ಕಾಲ ಭಾರಿ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಗುಜರಾತ್‌ನ ಕರಾವಳಿಯಿಂದ ಕರ್ನಾಟಕದವರೆಗಿನ ತೀರದಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆ ಇದೆ' ಎಂದು ಸರ್ಕಾರ್ ಹೇಳಿದರು. ಮಳೆಗಾಳಿಯ ಮುನ್ಸೂಚನೆಯೂ ಕೂಡ ಮುಂಬೈ ಮತ್ತಿತರ ಪ್ರದೇಶಗಳಲ್ಲಿ ಭಾರಿ ಮಳೆಯ ಮುನ್ಸೂಚನೆ ನೀಡಿದೆ. ಮಹಾರಾಷ್ಟ್ರದ ಮಧ್ಯ ಭಾಗ ಮತ್ತು ಕೊಂಕಣ ಭಾಗದಲ್ಲಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ' ಎಂದು ಸರ್ಕಾರ್ ತಿಳಿಸಿದ್ದಾರೆ.

ಸಿಎಎ, ಎನ್‌ಆರ್‌ಸಿ ಜಾರಿಯಿಂದ ತೊಂದರೆ ಆಗದು ಎಂದ ಆರ್‌ಎಸ್‌ಎಸ್ ಮುಖ್ಯಸ್ಥ

ಮುಸ್ಲಿಮರಿಗೆ ಮೋಹನ್ ಭಾಗವತ್ ಅಭಯ

ಗುವಾಹಟಿ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಹಾಗೂ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಬಗ್ಗೆ ಭಾರತೀಯ ಮುಸ್ಲಿಮರು ಆತಂಕ ಪಡಬೇಕಿಲ್ಲ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು.

'ಎನ್‌ಆರ್‌ಸಿ, ಸಿಎಎ–ಅಸ್ಸಾಂ ಮತ್ತು ಇತಿಹಾಸದ ರಾಜಕಾರಣ' ಶೀರ್ಷಿಕೆಯ ಕೃತಿಯನ್ನು ಬಿಡುಗಡೆ ಮಾಡಿ ಭಾಗವತ್ ಬುಧವಾರ ಮಾತನಾಡಿದರು. 'ಹಿಂದೂ–ಮುಸ್ಲಿಮರನ್ನು ಒಡೆಯುವ ಉದ್ದೇಶವು ಪೌರತ್ವ ನೋಂದಣಿಗಾಗಲೀ ಪೌರತ್ವ ತಿದ್ದುಪಡಿ ಕಾಯ್ದೆಗಾಗಲೀ ಇಲ್ಲ. ಇವುಗಳಿಂದ ದೇಶದ ಯಾವ ಮುಸ್ಲಿಮರಿಗೂ ತೊಂದರೆಯಾಗದು. ಆದರೆ, ರಾಜಕೀಯ ಲಾಭಕ್ಕಾಗಿ ಕೆಲವರು ಇದಕ್ಕೆ ಕೋಮು ಬಣ್ಣ ಹಚ್ಚುತ್ತಿದ್ದಾರೆ' ಎಂದು ಅಭಿಪ್ರಾಯಪಟ್ಟರು.



ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವತ್ – ಪಿಟಿಐ ಚಿತ್ರ

ಸ್ವಾತಂತ್ರ್ಯಾನಂತರ, ಅಲ್ಪಸಂಖ್ಯಾತರ ಹಿತ ಕಾಯಲಾಗುತ್ತದೆ ಎಂದು ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಹೇಳಿದ್ದರು. ಭಾರತವು ಹಾಗೆಯೇ ನಡೆದುಕೊಂಡು ಬಂದಿದೆ ಕೂಡ. ಇನ್ನು ಮುಂದೆಯೂ ಅದು ಮುಂದುವರಿಯುತ್ತದೆ. ಪೌರತ್ವ ತಿದ್ದುಪಡಿ ಕಾಯ್ದೆಯಿಂದ ಯಾವ ಮುಸ್ಲಿಮರಿಗೂ ಹಾನಿಯಾಗದು ಎಂದರು.

ಎನ್‌ಆರ್‌ಸಿ ಬಗ್ಗೆ ಮಾತನಾಡಿದ ಅವರು, ಪ್ರತಿಯೊಂದು ದೇಶಕ್ಕೂ ಅದರ ಅಧಿಕೃತ ನಾಗರಿಕರು ಯಾರು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಇದೆ. ಹೀಗಾಗಿ, ದೇಶದಲ್ಲಿ ಅನಧಿಕೃತವಾಗಿ ನೆಲೆಸಿದವರನ್ನು ಪತ್ತೆ ಮಾಡಿ, ದೇಶದ ನಾಗರಿಕರಿಗೆ ಸಿಗಬೇಕಾದ ಸವಲತ್ತುಗಳನ್ನು ಒದಗಿಸಿಕೊಡುವುದು ಸರ್ಕಾರದ ಕೆಲಸ ಎಂದರು.

'ದೇಶ ವಿಭಜನೆಯ ನಂತರ, ಭಾರತವು ದೇಶದ ಅಲ್ಪಸಂಖ್ಯಾತರ ಬಗೆಗೆ ಕಾಳಜಿ ವಹಿಸಿತು. ಆದರೆ, ಪಾಕಿಸ್ತಾನವು ಆ ಕೆಲಸವನ್ನು ಮಾಡಲಿಲ್ಲ. ಹೀಗಾಗಿ ಅಲ್ಲಿಂದ ಸಾವಿರಾರು ಸಂಖ್ಯೆಯಲ್ಲಿ ಹಿಂದೂ, ಸಿಖ್ ಹಾಗೂ ಜೈನ ಕುಟುಂಬಗಳು ಭಾರತಕ್ಕೆ ಬಂದವು. ಪೌರತ್ವ ತಿದ್ದುಪಡಿ ಕಾಯ್ದೆಯು ನೆರೆದೇಶಗಳಲ್ಲಿನ ಅಂಥ ನಿರಾಶ್ರಿತರ ಬೆಂಬಲಕ್ಕಿದೆಯೇ ಹೊರತು ಭಾರತೀಯ ಮುಸ್ಲಿಮರಿಗೆ ಯಾವುದೇ ತೊಂದರೆ ಮಾಡದು' ಎಂದು ಹೇಳಿದರು.

ಒಂದು ವೇಳೆ, ಅನಧಿಕೃತವಾಗಿ ನೆಲೆಸಿದವರದೇ ಸಂಖ್ಯಾ ಪ್ರಾಬಲ್ಯ ಹೆಚ್ಚುತ್ತ ಹೋಗಿ ಚುನಾವಣಾ ರಾಜಕೀಯದಲ್ಲಿ ಹಿಡಿತ ಸಾಧಿಸಿದರೆ, ನಿಜವಾದ ನಿವಾಸಿಗಳು ಖಂಡಿತವಾಗಿಯೂ ಭಯದಲ್ಲಿರಬೇಕಾಗುತ್ತದೆ ಎಂದರು.

ದೇಶಕ್ಕೆ ವ್ಯವಸ್ಥಿತವಾಗಿ ವಲಸೆ ಬರುತ್ತಿರುವ ಮುಸ್ಲಿಮರು ಮತ್ತು ನಿರ್ದಿಷ್ಟ ವಿನ್ಯಾಸದಲ್ಲಿ ಹೆಚ್ಚಳವಾಗುತ್ತಿರುವ ಅವರ ಜನಸಂಖ್ಯೆ ಪ್ರಮಾಣವು ಅಸ್ಸಾಮಿಗರಿಗೂ ಸೇರಿದಂತೆ ದೇಶದ ವಿವಿಧ ಸಮುದಾಯಗಳಿಗೆ ನಿಜಕ್ಕೂ ಆತಂಕಕಾರಿಯಾಗಿದೆ ಎಂದರು.

ಭಾರತವು ವಿವಿಧತೆಯಲ್ಲಿ ಏಕತೆ ಇರುವ ರಾಷ್ಟ್ರವಾಗಿದೆ. ಎಲ್ಲರನ್ನೂ ಒಳಗೊಂಡ 'ವಸುದೈವ ಕುಟುಂಬಕಂ' ನೀತಿಯನ್ನು ಪಾಲಿಸುತ್ತಿದ್ದು, ಮುಂದೆಯೂ ಅಂತೆಯೇ ಇರುತ್ತದೆ ಎಂದು ಭಾಗವತ್ ಹೇಳಿದರು.

ವೈವಿಧ್ಯದ ಪ್ರತಿಪಾದನೆ

ಈ ನೆಲದ ಐದು ಸಾವಿರ ವರ್ಷಗಳ ನಾಗರಿಕತೆಯನ್ನು ಯಾವುದೋ ಒಂದು ಗುಂಪು ನಿರಾಕರಿಸತೊಡಗಿದರೆ, ಒಂದೇ ಧರ್ಮ, ಭಾಷೆ ಮತ್ತು ಸಾಮಾಜಿಕ ಆಚರಣೆ ಇರಬೇಕು ಎಂದು ಬಯಸಿದರೆ ಸಮಸ್ಯೆ ಆರಂಭವಾಗುತ್ತದೆ ಎಂದು ಭಾಗವತ್ ಹೇಳಿದ್ದಾರೆ.

ಹೆಚ್ಚುತ್ತಿರುವ ತಮ್ಮ ಜನಸಂಖ್ಯೆಯನ್ನು ಬಳಸಿಕೊಂಡು ಪ್ರಜಾಸತ್ತಾತ್ಮಕವಾಗಿಯೇ ತಮ್ಮ ಶಕ್ತಿಯನ್ನು ಬಳಸಿಕೊಳ್ಳಲು ಅವರು ಹಿಂದೇಟು ಹಾಕುವುದಿಲ್ಲ. ಅದು ಮೂಲ ನಿವಾಸಿಗಳ ಸಾಂಸ್ಕೃತಿ ಮತ್ತು ಸಾಮಾಜಿಕ ಮೌಲ್ಯಕ್ಕೆ ಬೆದರಿಕೆಯಾಗುತ್ತದೆ ಎಂದು ಅವರು ವಿವರಿಸಿದ್ದಾರೆ.


ಭಾರತವು ವೈವಿಧ್ಯತೆಯ ನಾಡು. ಪ್ರತಿ ರಾಜ್ಯವೂ ತನ್ನದೇ ಭಾಷೆ, ಸಂಸ್ಕೃತಿ, ಪದ್ಧತಿಗಳು, ಆಹಾರ ವ್ಯವಸ್ಥೆಯನ್ನು ಹೊಂದಿದೆ. ಇವುಗಳ ನಡುವೆ ಪರಸ್ಪರ ಸಂಪರ್ಕವೂ ಇದೆ. ಅದು ಹಾಗೆಯೇ ಮುಂದುವರಿಯಲಿದೆ ಎಂದೂ ಅವರು ಪ್ರತಿಪಾದಿಸಿದ್ದಾರೆ.

ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಹೇಳಿಕೆ

'ಸಿ.ಎಂ ಆಗಿ ಬಿಎಸ್‌ವೈ ಮುಂದುವರಿಕೆ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಬಿ.ಎಸ್.ಯಡಿಯೂರಪ್ಪ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ. ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರೇ ಇದನ್ನು ಸ್ಪಷ್ಟಪಡಿಸಲಿದ್ದಾರೆ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದರು.



ರವಿಕುಮಾರ್

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಮಾಧ್ಯಮದಲ್ಲಿಯಷ್ಟೇ ಚರ್ಚೆ ನಡೆಯುತ್ತಿದೆ. ದೆಹಲಿಯ ನಾಯಕರೇ ಈ ಗೊಂದಲಗಳಿಗೆ ತೆರೆ ಎಳೆಯಲಿದ್ದಾರೆ' ಎಂದು ಹೇಳಿದರು.

'ಸರ್ಕಾರಕ್ಕೆ ಎರಡು ವರ್ಷವಾಗುತ್ತರುವ ಕಾರಣಕ್ಕೆ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿತ್ತು. ಮುಖ್ಯಮಂತ್ರಿ ಬದಲಾವಣೆಯ ವಿಚಾರ ಮುನ್ನೆಲೆಗೆ ಬಂದಿದ್ದರಿಂದ ಸಭೆ ರದ್ದುಪಡಿಸಲಾಗಿದೆ. ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ಪಕ್ಷ ಹಾಗೂ ಮುಖ್ಯಮಂತ್ರಿಗೆ ಮುಜುಗರ ಉಂಟು ಮಾಡುವಂತೆ ನಡೆದುಕೊಳ್ಳುತ್ತಿರುವವರನ್ನು ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ. ಬಸನಗೌಡ ಪಾಟೀಲ ಯತ್ನಾಳ ಸೇರಿ ಅನೇಕರಿಗೆ ನೋಟಿಸ್ ನೀಡಲಾಗಿದೆ. ಸೂಕ್ತ ಸಂದರ್ಭದಲ್ಲಿ ಪಕ್ಷ ನಿರ್ಧಾರ ಕೈಗೊಳ್ಳಲಿದೆ' ಎಂದರು.

ರಾಜ್ಯ ಪದಾಧಿಕಾರಿಗಳ ಸಭೆ 24ಕ್ಕೆ

ಮುಂಬರುವ ಚುನಾವಣೆಗೆ ಕಾರ್ಯತಂತ್ರ ರೂಪಿಸುವ ಉದ್ದೇಶದಿಂದ ಜುಲೈ 24ರಂದು ಚಿತ್ರದುರ್ಗದಲ್ಲಿ ರಾಜ್ಯ ಬಿಜೆಪಿ ಪದಾಧಿಕಾರಿಗಳ ಸಭೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದರು.

'ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ, ಹಾನಗಲ್ ಮತ್ತು ಸಿಂದಗಿ ಉಪಚುನಾವಣೆಯ ರೂಪುರೇಷಗಳ ಬಗ್ಗೆ ಚರ್ಚೆ ನಡೆಯಲಿದೆ. ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯ ಬಗ್ಗೆಯೂ ಕಾರ್ಯತಂತ್ರ ರೂಪಿಸಲಾಗುವುದು' ಎಂದು ಹೇಳಿದರು.

ಬಿಎಸ್‌ವೈಗೆ ಮುಕ್ತ ಅವಕಾಶ ನೀಡಿ: ಕನಕ ಗುರುಪೀಠ ಸ್ವಾಮೀಜಿ

ಬೆಂಗಳೂರು: ಯಡಿಯೂರಪ್ಪ ಅವರಿಗೆ ಮುಕ್ತವಾಗಿ ಕಾರ್ಯ ನಿರ್ವಹಿಸಲು ಬಿಡಬೇಕು. ಅವರೊಬ್ಬ ಸಮರ್ಥ ಆಡಳಿತಗಾರ ಎಂದು ಕಾಗಿನೆಲೆ ಕನಕ ಗುರುಪೀಠದ ಹೊಸದುರ್ಗ ಶಾಖಾಮಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದ್ದಾರೆ.

ಬುಧವಾರ ಬೆಳಿಗ್ಗೆಯೇ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಜಾತ್ಯತೀತವಾಗಿ ಉತ್ತಮ ಆಡಳಿತ ನೀಡುತ್ತಲೇ ಬಂದಿದ್ದಾರೆ. ರಾಜ್ಯಕ್ಕೆ ಸಾಕಷ್ಟು ಉತ್ತಮ ಕೊಡುಗೆಗಳನ್ನೂ ನೀಡಿದ್ದಾರೆ. ಅವರನ್ನು ಪಕ್ಷ ಗೌರವದಿಂದ ನಡೆಸಿಕೊಳ್ಳಬೇಕು ಮತ್ತು ಬದಲಿಸಬಾರದು ಎಂದು ಸಲಹೆ ನೀಡಿದರು.

'ಚಮಚಾ ಅಲ್ಲದ ಕಾರಣ ಪಿತೂರಿ'

ಬೆಂಗಳೂರು: ಬಿಜೆಪಿಯ ಹಿರಿಯ ನಾಯಕ ಸುಬ್ರಮಣಿಯನ್ ಸ್ವಾಮಿ ಅವರು 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಬದಲಿಸಬಾರದು' ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಕರ್ನಾಟಕದಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರಕ್ಕೆ ಬರಲು ಯಡಿಯೂರಪ್ಪ ಅವರೇ ಕಾರಣರು. ಅವರು ಚಮಚಾ ಅಲ್ಲದ ಕಾರಣ ಅವರನ್ನು ಇಳಿಸಲು ಕೆಲವರು ಪಿತೂರಿ ನಡೆಸಿದ್ದಾರೆ. ಅವರಿಲ್ಲದೇ ಮುಂದೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಕಷ್ಟ. ಹಿಂದೆಯೂ ಅವರು ಇಲ್ಲದಾಗ ಪಕ್ಷ ಸೋತಿತ್ತು. ಹಿಂದಿನ ತಪ್ಪನ್ನೇ ಏಕೆ ಮಾಡುತ್ತೀರಿ' ಎಂದು ಪ್ರಶ್ನಿಸಿದ್ದಾರೆ.

ವೈದ್ಯರ ಗ್ರಾಮೀಣ ಸೇವೆ: ವಿನಾಯಿತಿಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಸೇವೆ ಕಡ್ಡಾಯ ನಿಯಮ ಪ್ರಶ್ನಿಸಿ ವೈದ್ಯಕೀಯ ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿ ಸಂಬಂಧ ಪರಿಹಾರಾತ್ಮಕ ಮಧ್ಯಂತರ ಆದೇಶ ಹೊರಡಿಸಲು ಹೈಕೋರ್ಟ್ ನಿರಾಕರಿಸಿದೆ. ಈ ವಿಷಯದಲ್ಲಿ ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಕರಾರು ಮಾಡಿಕೊಟ್ಟಿದ್ದಾರೆ ಎಂದು ಪೀಠ ಹೇಳಿದೆ.



2020–21ನೇ ಸಾಲಿನಲ್ಲಿ ಎಂಬಿಬಿಎಸ್ ಮುಗಿಸಿದ ವಿದ್ಯಾರ್ಥಿಗಳು ಗ್ರಾಮೀಣ ಸೇವೆಗೆ ನೋಂದಾಯಿಸಿಕೊಳ್ಳಬೇಕು ಎಂದು 2021ರ ಜೂನ್ 8ರಂದು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದನ್ನು ಪ್ರಶ್ನಿಸಿ ಡಾ.ಎನ್. ಪ್ರಾರ್ಥನಾ ಹಾಗೂ ಇತರರು ಅರ್ಜಿ ಸಲ್ಲಿಸಿದ್ದಾರೆ.

ಈ ಅಧಿಸೂಚನೆ ವಿಷಯದಲ್ಲಿ ಮಧ್ಯಂತರ ಪರಿಹಾರ ನೀಡಲು ನಿರಾಕರಿಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಮ್ ಅವರಿದ್ದ ಪೀಠ, 'ಒಂದು ವರ್ಷದ ಗ್ರಾಮೀಣ ಸೇವೆಗೆ ವಿದ್ಯಾರ್ಥಿಗಳನ್ನು ಆಹ್ವಾನಿಸಿರುವ ಸರ್ಕಾರದ ನಿರ್ಧಾರ ಸಮಂಜಸವಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

'ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಾರೆ ಎಂಬ ವಿಶ್ವಾಸದಿಂದ ಶುಲ್ಕ ರಿಯಾಯಿತಿಯೊಂದಿಗೆ ವೈದ್ಯಕೀಯ ಶಿಕ್ಷಣವನ್ನು ಸರ್ಕಾರ ನೀಡಿದೆ. ಕೋವಿಡ್ 3ನೇ ಅಲೆಯ ನಿರೀಕ್ಷೆ ಇರುವ ಸಂದರ್ಭದಲ್ಲಿ ವೈದ್ಯಕೀಯ ಪದವಿ ಪಡೆದ ಹೊಸ ವಿದ್ಯಾರ್ಥಿಗಳ ಗ್ರಾಮೀಣ ಸೇವೆ ಸರ್ಕಾರಕ್ಕೆ ಅಗತ್ಯವಿದೆ. ವೃತ್ತಿಪರ ವೈದ್ಯರು ತಮ್ಮ ಕರ್ತವ್ಯ ಅರ್ಥ ಮಾಡಿಕೊಳ್ಳುವ ಸಮಯ ಇದಾಗಿದೆ' ಎಂದು ತಿಳಿಸಿತು.

'ಹೊಸದಾಗಿ ಎಂಬಿಬಿಎಸ್ ಪದವಿ ಪಡೆದವರ ಗ್ರಾಮೀಣ ಸೇವೆ ಜೂನ್ 30ರಿಂದ ಆರಂಭವಾಗಿದೆ. ಆಡಳಿತ ಮಂಡಳಿ ಕೋಟಾದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಈ ನಿಯಮ ಅನ್ವಯ ಆಗುವುದಿಲ್ಲ. ಆದ್ದರಿಂದ ಇದು ವಿದ್ಯಾರ್ಥಿಗಳಲ್ಲಿ ತಾರತಮ್ಯ ಹುಟ್ಟು ಹಾಕಿದೆ. ಉನ್ನತ ಶಿಕ್ಷಣಕ್ಕಾಗಿ ನೀಟ್ ಪರೀಕ್ಷೆಗೆ ಹಾಜರಾಗಬೇಕಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಬೇಕಿದೆ. ಗ್ರಾಮೀಣ ಸೇವೆ ಕಡ್ಡಾಯಗೊಳಿಸಿದರೆ ಉನ್ನತ ಶಿಕ್ಷಣದ ಮೇಲೆ ಪರಿಣಾಮ ಬೀರಲಿದೆ' ಎಂದು ಅರ್ಜಿದಾರರು ವಾದಿಸಿದ್ದಾರೆ.

ಜಗನ್ ರೀತಿ ವಿಜಯೇಂದ್ರ ಸಿ.ಎಂ: ಸುರೇಶ್‌ಗೌಡ

ಬೆಂಗಳೂರು: 'ಬಿ.ಎಸ್.ಯಡಿಯೂರಪ್ಪ ಅವರನ್ನು ಕೈಬಿಟ್ಟರೆ ಆಂಧ್ರದಲ್ಲಿ ಜಗನ್ ಮೋಹನ್ ರೆಡ್ಡಿ ಮುಖ್ಯಮಂತ್ರಿ ಆದ ರೀತಿಯಲ್ಲಿ ರಾಜ್ಯದಲ್ಲಿ ಬಿ.ವೈ. ವಿಜಯೇಂದ್ರ ಅವರು ಮುಖ್ಯಮಂತ್ರಿ ಆಗುತ್ತಾರೆ 'ಎಂದು ತುಮಕೂರು ಗ್ರಾಮಾಂತರ ಕ್ಷೇತ್ರದ ಬಿಜೆಪಿಯ ಮಾಜಿ ಶಾಸಕ ಬಿ. ಸುರೇಶ್‌ಗೌಡ ಹೇಳಿದ್ದಾರೆ.

'ಆಂಧ್ರದಲ್ಲಿ ವೈ.ಎಸ್.ರಾಜಶೇಖರ ರೆಡ್ಡಿ ನಿಧನದ ಬಳಿಕ ಅವರ ಪುತ್ರ ಜಗನ್ ಮೋಹನ್ ರೆಡ್ಡಿ ಅವರನ್ನು ಕಡೆಗಣಿಸಿದ ಕಾಂಗ್ರೆಸ್, ಪಕ್ಷದಿಂದ ಹೊರ ಹಾಕಿತು. ಪ್ರತ್ಯೇಕ ಪಕ್ಷ ಕಟ್ಟಿದ ಜಗನ್, ಏಕಾಂಗಿ ಹೋರಾಟ ನಡೆಸಿ ಮುಖ್ಯಮಂತ್ರಿ ಆದರು. ಅದೇ ರೀತಿ ಇಲ್ಲೂ ಆಗಬಹುದು ಎಂದು ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ' ಅವರು ಸುದ್ದಿಗಾರರ ಜತೆ ಮಾತನಾಡುತ್ತಾ ತಿಳಿಸಿದರು.

'ಯಡಿಯೂರಪ್ಪ ಅವರಿಂದ ರಾಜೀನಾಮೆ ಪಡೆದರೆ ಬಿಜೆಪಿಗೆ ಹೊಡೆತ ಬೀಳುವುದು ಖಚಿತ. ಯಾವುದೇ ಕಾರಣಕ್ಕೂ ನಾಯಕತ್ವ ಬದಲಾವಣೆ ಮಾಡಬಾರದು. ಯಡಿಯೂರಪ್ಪ ಅವರಿಗೆ ಪ್ರತಿ ಸಲವೂ ತೊಂದರೆ ನೀಡಲಾಗುತ್ತಿದೆ. ಈ ಬಾರಿ ತೊಂದರೆ ಕೊಟ್ಟರೆ ಪಕ್ಷಕ್ಕೆ ಕಷ್ಟ ಎದುರಾಗಬಹುದು' ಎಂದೂ ತಿಳಿಸಿದರು.

ಸುರೇಶ್‌ಗೌಡ ಅವರನ್ನು ಇತ್ತೀಚೆಗೆ ಒಕ್ಕಲಿಗ ಅಭಿವೃದ್ಧಿ ನಿಗಮದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಮೊದಲಿನಿಂದಲೂ ಅವರು ಯಡಿಯೂರಪ್ಪ ಜತೆ ಗುರುತಿಸಿಕೊಂಡಿದ್ದಾರೆ.

ಯಡಿಯೂರಪ್ಪ ಪರ 'ಶ್ರೀ' ಶಕ್ತಿ

ಒಂದನೇ ಪುಟದಿಂದ...

'ಅವರು ರಾಜೀನಾಮೆ ಬಗ್ಗೆ ಏನೂ ಮಾತನಾಡಲಿಲ್ಲ. ನೀವೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು ಎಂದು ಅವರಿಗೆ ಹೇಳಿದೆವು. ನಾವು ಮಠಾಧೀಶರು ಯಾವುದೇ ಒಂದು ಪಕ್ಷಕ್ಕೆ ಸೇರಿದವರಲ್ಲ. ಎಲ್ಲ ಪಕ್ಷಗಳು ಮತ್ತು ರಾಜಕಾರಣಗಳಿಗೆ ಒಳಿತನ್ನು ಬಯಸುವವರು. ಆದರೆ, ಯಡಿಯೂರಪ್ಪ ಅವರನ್ನು ಮಧ್ಯೆ ಕೈಬಿಡುವುದು ಸರಿಯಲ್ಲ ಎಂಬುದಷ್ಟೇ ನಮ್ಮ ಅಭಿಪ್ರಾಯ' ಎಂದರು.

ಕೋವಿಡ್ ಸಂದರ್ಭದಲ್ಲಿ ಮಠಗಳು ಬಾಗಿಲು ಹಾಕಿಕೊಂಡಿದ್ದವು ಎಂಬ ಎಚ್.ವಿಶ್ವನಾಥ್ ಅವರ ಟೀಕೆಗೆ, 'ಯಾವುದೇ ಮಠಗಳು ಬಾಗಿಲು ಹಾಕಿರಲಿಲ್ಲ. ನಮ್ಮ ಮಠದಲ್ಲಿ ಕೋವಿಡ್ ಆರೈಕೆ ಕೇಂದ್ರ ತೆರೆದು ಕಾರ್ಯ ನಿರ್ವಹಿಸಲಾಗಿತ್ತು' ಎಂದರು.

ಸ್ವಪಕ್ಷೀಯರ ಷಡ್ಯಂತ್ರ: ಚಿಕ್ಕಮಗಳೂರಿನ ಜಯಬಸವಾನಂದ ಸ್ವಾಮೀಜಿ ಮಾತನಾಡಿ, 'ಯಡಿಯೂರಪ್ಪ ಅವರನ್ನು ಕೆಳಗಿಳಿಸಲು ಸ್ವಪಕ್ಷೀಯರೇ ಷಡ್ಯಂತ್ರ ಮಾಡಿದ್ದಾರೆ. ಇದರಿಂದ ಬೇಸರವಾಗಿದೆ. ನಾವು ಕೈಕಟ್ಟಿ ಕೂರುವವರೂ ಅಲ್ಲ' ಎಂದರು.

'ಯಡಿಯೂರಪ್ಪ ಅವರನ್ನು ತೆಗೆದರೆ ಅಲ್ಲೋಲ ಕಲ್ಲೋಲವಾಗುತ್ತದೆ. ಬಿಜೆಪಿ ಉಳಿಯುವುದಿಲ್ಲ. ನಾವು ರಾಜಕೀಯ ಮಾಡಲು ಬಂದವರಲ್ಲ, ಅನ್ಯಾಯ ಆಗುತ್ತಿರುವುದರಿಂದ ಎಚ್ಚರಿಸಲು ಬಂದಿದ್ದೇವೆ' ಎಂದರು.

ತಿಪಟೂರಿನ ಷಡಕ್ಷರಿ ರುದ್ರಮುನಿ ಸ್ವಾಮೀಜಿ ಮಾತನಾಡಿ, 'ವೀರಶೈವ ಮಠಾಧೀಶರು ಮಾತ್ರವಲ್ಲ, ಎಲ್ಲ ಸಮುದಾಯದ ಮಠಾಧೀಶರು ಯಡಿಯೂರಪ್ಪ ಅವರನ್ನು ಮುಂದುವರಿಸಬೇಕು ಎಂಬುದಾಗಿ ಒತ್ತಾಯಿಸಿದ್ದಾರೆ. ಅವರನ್ನು ತೆಗೆದರೆ ಬಿಜೆಪಿ ಎಲ್ಲಿದೆ ಎಂದು ಬ್ಯಾಟರಿ ಹಾಕಿ ಹುಡುಕಬೇಕಾದ ಸ್ಥಿತಿ ಬರಬಹುದು' ಎಂದು ಎಚ್ಚರಿಕೆ ನೀಡಿದರು.

ಕೊಳದ ಮಠದ ಶಾಂತವೀರ ಸ್ವಾಮೀಜಿ ಸುದ್ದಿಗೋಷ್ಠಿ ನಡೆಸಿ, 'ಯಡಿಯೂರಪ್ಪ ಅವರನ್ನು ಕೈಬಿಡಬಾರದು. ಒಂದು ವೇಳೆ ಕೈಬಿಟ್ಟರೂ ಲಿಂಗಾಯತ ಸಮುದಾಯದವರನ್ನೇ ಮುಖ್ಯಮಂತ್ರಿ ಮಾಡಬೇಕು' ಎಂದು ಆಗ್ರಹಿಸಿದರು.

ನಿಡುಮಾಮಿಡಿ ಶ್ರೀಗಳ ಎಚ್ಚರಿಕೆ: ನಿಡುಮಾಮಿಡಿಯ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಮಾತನಾಡಿ, 'ರಾಜ್ಯದಲ್ಲಿ ಬಿಜೆಪಿಗೆ ಯಡಿಯೂರಪ್ಪ ಅವರ ನೆರವಿಲ್ಲದೆ ಅಧಿಕಾರಕ್ಕೆ ಬರುವ ಶಕ್ತಿ ಇದೆಯೇ? ಯಡಿಯೂರಪ್ಪ ಅವರನ್ನು ದೂರ ಮಾಡಿದರೆ ಜನರೂ ಬಿಜೆಪಿಯಿಂದ ದೂರವಾಗುತ್ತಾರೆ. ಬಿಜೆಪಿ ಮೂಲೆಗುಂಪಾಗುತ್ತದೆ' ಎಂದರು.

'ಈವರೆಗೆ ಯಡಿಯೂರಪ್ಪ ಅವರನ್ನು ಅಪಮಾನಿಸುತ್ತಲೇ ಬಂದಿದ್ದಾರೆ. ಮುಖ್ಯಮಂತ್ರಿಯಾಗಿ ಸ್ವತಂತ್ರವಾಗಿ ಕೆಲಸ ಮಾಡಲು ಬಿಟ್ಟಿಲ್ಲ. ಅವರನ್ನು ಅಪಮಾನ ಮಾಡದೇ ಅವರ ಒಪ್ಪಿಗೆ ಪಡೆದೇ ಬದಲಾವಣೆಗಳನ್ನು ಮಾಡಿ. ಇಲ್ಲವಾದರೆ ಪಕ್ಷ ಮೂಲೆ ಗುಂಪಾಗುತ್ತದೆ. ಅವರದೇ ಸಮುದಾಯದ ಯೋಗ್ಯ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಿ. ಆದರೆ ಬಲವಂತವಾಗಿ ಇಳಿಸಬೇಡಿ' ಎಂದು ಅವರು ಸಲಹೆ ನೀಡಿದರು.

ಬ್ರಾಹ್ಮಣ ಸಿ.ಎಂ: ಆರ್‌ಎಸ್‌ಎಸ್ ಚಿತಾವಣೆ

ಹೊಸಪೇಟೆ (ವಿಜಯನಗರ): 'ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು (ಆರ್‌ಎಸ್‌ಎಸ್) ಜಾತಿವಾದಿಗಳು. ಉದಾರ ಮನಸ್ಸಿನವರಲ್ಲ. ತಮ್ಮದೇ ಹಟ ಸಾಧಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಿಸಲು ಹೊರಟಿದ್ದಾರೆ' ಎಂದು ವೀರಶೈವ ಶಿವಯೋಗ ಮಂದಿರ ಸಂಸ್ಥೆ ಅಧ್ಯಕ್ಷ ಸಂಗನಬಸವ ಸ್ವಾಮೀಜಿ ದೂರಿದರು.

'ಆರ್‌ಎಸ್‌ಎಸ್‌ನವರ ಮಾತು ಕೇಳಿಯೇ ಮಹಾರಾಷ್ಟ್ರದಲ್ಲಿ ಬ್ರಾಹ್ಮಣ ಸಮುದಾಯದವರನ್ನು ಮುಖ್ಯಮಂತ್ರಿ ಮಾಡಿದ್ದರು. ಅದು ಸರಿಯಾಗಿ ನಡೆಯಲಿಲ್ಲ. ಆರ್‌ಎಸ್‌ಎಸ್‌ನವರ ಮಾತು ಬೇರೆ ಕಡೆ ನಡೆಯಬಹುದು, ಕರ್ನಾಟಕದಲ್ಲಿ ನಡೆಯುವುದಿಲ್ಲ. ಅವರ ಮಾತು ಕೇಳಿ ರಾಜ್ಯದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಬದಲಿಸಿದರೆ ಬಿಜೆಪಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗುತ್ತದೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

'ವೀರಶೈವ ಲಿಂಗಾಯತರು ಆರ್‌ಎಸ್‌ಎಸ್ ಜೊತೆಗೆ ಹೋಗುತ್ತಿಲ್ಲ. ಯಡಿಯೂರಪ್ಪನವರ ಜತೆಗೆ ಹೋಗುತ್ತಿದ್ದೇವೆ. ಲಿಂಗಾಯತರು ಆತ್ಮವಂಚನೆ ಮಾಡಿಕೊಳ್ಳುತ್ತಿಲ್ಲ. ಪ್ರಲ್ಹಾದ ಜೋಶಿ ಅವರು ಮುಂದಿನ ಮುಖ್ಯಮಂತ್ರಿ ಎಂಬ ಮಾತುಗಳು ಕೇಳಿ ಬರುತ್ತಿವೆ. ಅದಕ್ಕೆ ಆರ್‌ಎಸ್‌ಎಸ್‌ನವರ ಚಿತಾವಣೆಯೇ ಮುಖ್ಯ ಕಾರಣ' ಎಂದು ಆರೋಪಿಸಿದರು.

'ಯಡಿಯೂರಪ್ಪ ಸಮರ್ಥ ನಾಯಕರಿದ್ದಾರೆ. ಬೇರೊಬ್ಬರನ್ನು ಮುಖ್ಯಮಂತ್ರಿ ಮಾಡುವ ಅವಶ್ಯಕತೆ ಇಲ್ಲ. ಹೈಕಮಾಂಡ್ ಕೂಡಲೇ ಗೊಂದಲ ಬಗೆಹರಿಸಿ, ಯಡಿಯೂರಪ್ಪನವರು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಆಸ್ಪದ ಮಾಡಿಕೊಡಬೇಕು' ಎಂದು ಆಗ್ರಹಪಡಿಸಿದರು.

'ಬಿಎಸ್‌ವೈ ಕೆಳಗಿಳಿಸಿದರೆ ಜೇನುಗೂಡಿಗೆ ಕೈ ಹಾಕಿದಂತೆ'

ಮುನವಳ್ಳಿ(ಬೆಳಗಾವಿ): 'ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಅವರನ್ನು ಕೆಳಗಿಳಿಸಿದರೆ, ಜೇನುಗೂಡಿಗೆ ಕೈ ಹಾಕಿದಂತಾಗುತ್ತದೆ' ಎಂದು ರಂಭಾಪುರಿ ಪೀಠದ ಜಗದ್ಗುರು ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಲ್ಲಾ ಧರ್ಮದವರಿಗೆ ಒಳ್ಳೆಯ ಕೆಲಸ ಮಾಡಿರುವ ಯಡಿಯೂರಪ್ಪ ಅವರು ಪ್ರಶ್ನಾತೀತ ನಾಯಕ' ಎಂದರು.

'ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಯಡಿಯೂರಪ್ಪ ಅವರ ಪಾತ್ರ ಪ್ರಮುಖವಾಗಿದೆ. ಯಾವುದೇ ಕಾರಣಕ್ಕೂ ಅವರ ಬದಲಾವಣೆ ಸೂಕ್ತವಲ್ಲ. ಎಲ್ಲಾ ಚುನಾವಣೆಗಳೂ ಅವರ ನೇತೃತ್ವದಲ್ಲೇ ನಡೆದಿವೆ. ಅವರನ್ನು ಬದಲಾವಣೆ ಮಾಡಿದರೆ ರಾಜ್ಯದಲ್ಲಿ ಬಿಜೆಪಿಗೆ ನಷ್ಟವಾಗಲಿದೆ' ಎಂದು ಅಭಿಪ್ರಾಯಪಟ್ಟರು.ಕಟಕೋಳ ಎಂ. ಚಂದರಗಿಯ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಬೆಳಗಾವಿ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಸೋಮಶೇಖರ ಮಠದ ಮುರುಘೇಂದ್ರ ಸ್ವಾಮೀಜಿ ಹಾಗೂ ಮುಕ್ತಾನಂದ ಸ್ವಾಮೀಜಿ ಇದ್ದರು.

ರಾಜ್ಯದ ಮೇಲೆ ಹತೋಟಿಗೆ ಸಂಚು

ಚಿತ್ರದುರ್ಗ: 'ಮುಖ್ಯಮಂತ್ರಿ ಬದಲಾವಣೆ ಮಾಡುವುದರಿಂದ ರಾಜ್ಯದಲ್ಲಿ ಅವ್ಯವಸ್ಥೆ ಸೃಷ್ಟಿಯಾಗುವ ಸಾಧ್ಯತೆ ಇದೆ. ಇದಕ್ಕೆ ಅವಕಾಶ ಮಾಡಿಕೊಡದೇ ಬಿ.ಎಸ್.ಯಡಿಯೂರಪ್ಪ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು. ಅವಧಿ ಪೂರ್ಣಗೊಳಿಸಲು ಅವಕಾಶ ನೀಡಬೇಕು' ಎಂದು ಸಾಣೇಹಳ್ಳಿಯ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಒತ್ತಾಯಿಸಿದ್ದಾರೆ.

'ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಮೇಲೆ ಹತೋಟಿ ಸಾಧಿಸಲು ಸಂಚು ಮಾಡುತ್ತಿರುವಂತೆ ಕಾಣುತ್ತಿದೆ. ಇದರಿಂದ ಮುಖ್ಯಮಂತ್ರಿಯ ಕೈಗಳನ್ನು ಕಟ್ಟಿಹಾಕಿದಂತೆ ಆಗುತ್ತದೆ. ಪದೇ ಪದೇ ಕಿರುಕುಳ ನೀಡಿದರೆ ಉತ್ತಮ ಆಡಳಿತ ನೀಡಲು ಸಾಧ್ಯವಿಲ್ಲ. ಅವರಿಗೆ ಪೂರ್ಣ ಸ್ವಾತಂತ್ರ್ಯ ನೀಡುವುದು ಸೂಕ್ತ' ಎಂದು ಸಲಹೆ ನೀಡಿದ್ದಾರೆ.

'ಆಡಳಿತದಲ್ಲಿ ದೋಷ ಕಂಡುಬಂದರೆ ಕ್ರಮ ಕೈಗೊಳ್ಳಬೇಕೆ ಹೊರತು, ವರ್ಷಕ್ಕೊಮ್ಮೆ ಮುಖ್ಯಮಂತ್ರಿ ಬದಲಾವಣೆ ಮಾಡಬಾರದು. ಯಾವುದೇ ಪಕ್ಷದ ವ್ಯಕ್ತಿ ಆಡಳಿತ ನಡೆಸಲು ಕನಿಷ್ಠ ಐದು ವರ್ಷ ಅವಕಾಶ ಸಿಗಬೇಕು. ಸಣ್ಣ ನೆಪ ಮಾಡಿಕೊಂಡು ಮುಖ್ಯಮಂತ್ರಿ ಬದಲಾವಣೆ ಮಾಡುವುದು ಒಳ್ಳೆಯ ರಾಜಕಾರಣದ ಸಂಕೇತವಲ್ಲ. ಕೇಂದ್ರ ಸರ್ಕಾರ ಅನಗತ್ಯವಾಗಿ ಮೂಗು ತೂರಿಸುವುದು ಸರಿಯಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಅಪರೂಪದ ಆನುವಂಶಿಕ ಕಾಯಿಲೆ: ಬದುಕುಳಿಯದ ಆರು ತಿಂಗಳ ಕೂಸು

ತಿರುವನಂತಪುರ (ಪಿಟಿಐ): ಅಪರೂಪದ ಆನುವಂಶಿಕ ಕಾಯಿಲೆಯಿಂದ ಬಳಲುತ್ತಿದ್ದ ಕೇರಳದ ಆರು ತಿಂಗಳ ಮಗು ಇಮ್ರಾನ್ ಚಿಕಿತ್ಸೆಗೆ ಸ್ಪಂದಿಸದೆ ಕೋಯಿಕೋಡ್ ಜಿಲ್ಲೆಯ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಮಂಗಳವಾರ ಕೊನೆ ಉಸಿರೆಳೆದಿದೆ.

ಮಲಪ್ಪುರಂ ಜಿಲ್ಲೆಯ ಪೆರಿಂಥಾಲ್‌ಮಣ್ಣ ಮೂಲದ ಆಟೊರಿಕ್ಷಾ ಚಾಲಕ ಆರಿಫ್ ಅವರ ಪುತ್ರ ಇಮ್ರಾನ್ ಬೆನ್ನುಮೂಳೆಯ ಸ್ನಾಯು ಕ್ಷೀಣತೆ (ಎಸ್‌ಎಂಎ) ಸಮಸ್ಯೆಯಿಂದ ಬಳಲುತ್ತಿತ್ತು. ಈ ಮಗು ಹುಟ್ಟಿದ 17ನೇ ದಿನದಿಂದಲೇ ಚಿಕಿತ್ಸೆ ಪಡೆಯುತ್ತಿತ್ತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಈ ಮಗುವಿನ ಚಿಕಿತ್ಸೆಗಾಗಿ ವಿಶ್ವದ ಅತ್ಯಂತ ದುಬಾರಿ ಔಷಧಿಗಳಲ್ಲಿ ಒಂದಾದ ಜೋಲ್ಗೆನ್ಸ್ಮಾ ಒನಾಸೆಮ್ನೋಜೀನ್ ಇಂಜೆಕ್ಷನ್ ಅನ್ನು ಖರೀದಿಸಲು ದಾನಿಗಳು ನೀಡಿದ ಉದಾರ ದೇಣಿಗೆಯಿಂದ ಹಣ ಸಂಗ್ರಹವಾದ ಕೆಲವೇ ದಿನಗಳಲ್ಲಿ ಮಗು ಕೊನೆ ಉಸಿರೆಳೆದಿದೆ. ಈ ಇಂಜೆಕ್ಷನ್ನ ಒಂದು ಡೋಸ್ ಬೆಲೆ ₹ 18 ಕೋಟಿ ಆಗಿದೆ. ಈ ಔಷಧವನ್ನು ವಿದೇಶದಿಂದ ಆಮದು ಮಾಡಿಕೊಳ್ಳಲು ಆರಿಫ್ ಕುಟುಂಬವು ಉಳಿದ ಮೊತ್ತ ಹೊಂದಿಸಲು ಹೆಣಗಾಡುತ್ತಿತ್ತು. ಶೀಘ್ರದಲ್ಲೇ ಬಾಕಿ ಹಣ ಸಂಗ್ರಹಿಸುವ ಭರವಸೆಯಲ್ಲಿ ಆ ಕುಟುಂಬವಿತ್ತು.

ಔಷಧದ ಬೆಲೆ ದುಬಾರಿ ಇರುವುದರಿಂದ ಮತ್ತು ಅಷ್ಟೊಂದು ಮೊತ್ತ ಹೊಂದಿಸಲು ಸಾಧ್ಯವಾಗದ ಕಾರಣಕ್ಕೆ ಮಗುವಿನ ತಂದೆ ಈ ತಿಂಗಳ ಆರಂಭದಲ್ಲಿ ತನ್ನ ಮಗನಿಗೆ ರಾಜ್ಯ ಸರ್ಕಾರದಿಂದ ಉಚಿತ ಚಿಕಿತ್ಸೆ ಕೊಡಿಸಬೇಕೆಂದು ಕೋರಿ ಹೈಕೋರ್ಟ್ ಮೊರೆ ಹೋಗಿದ್ದರು.

ಆರಿಫ್ ಮನವಿ ಆಧರಿಸಿ, ಇಮ್ರಾನ್ ಆರೋಗ್ಯ ತಪಾಸಣೆಗೆ ಐದು ಸದಸ್ಯರ ವೈದ್ಯಕೀಯ ಮಂಡಳಿ ಸ್ಥಾಪಿಸುವಂತೆ ಕೇರಳ ಹೈಕೋರ್ಟ್ ಇತ್ತೀಚೆಗೆ ನಿರ್ದೇಶನ ಕೂಡ ನೀಡಿತ್ತು.

ಕೃತಕ ಉಸಿರಾಟದ ವ್ಯವಸ್ಥೆಯಲ್ಲಿರುವ ಆರಿಫ್ ಅವರ ಮಗನಿಗೆ ಅಗತ್ಯ ಚಿಕಿತ್ಸೆ, ಔಷಧದ ದುಬಾರಿ ವೆಚ್ಚ ಭರಿಸಲು ಆರೋಗ್ಯ ಇಲಾಖೆ ಅಥವಾ ಕೇರಳ ಸಾಮಾಜಿಕ ಭದ್ರತಾ ಮಿಷನ್ (ಕೆಎಸ್‌ಎಸ್‌ಎಂ) ಆರ್ಥಿಕ ನೆರವು ನೀಡುವ ಸ್ಥಿತಿಯಲ್ಲಿಲ್ಲ ಎಂದು ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಹೇಳಿಕೆ ಸಲ್ಲಿಸಿತ್ತು.

ಆಂಧ್ರದ ನೇರ ನಗದು ವರ್ಗಾವಣೆ ಯೋಜನೆ: ಅನರ್ಹರ ಪಾಲಾದ ₹700 ಕೋಟಿ

ಅಮರಾವತಿ (ಪಿಟಿಐ): ಆಂಧ್ರಪ್ರದೇಶ ಸರ್ಕಾರವು ಜಾರಿಗೆ ತಂದಿರುವ ವಿವಿಧ ನೇರ ನಗದು ವರ್ಗಾವಣೆ ಯೋಜನೆಗಳ ಹಣದಲ್ಲಿ ₹700 ಕೋಟಿ ಮೊತ್ತವು ಅನರ್ಹರ ಕೈ ಸೇರಿರುವುದು ಹಣಕಾಸು ಇಲಾಖೆಯ ಪರಿಶೀಲನೆಯಲ್ಲಿ ಪತ್ತೆಯಾಗಿದೆ.

ವೈ.ಎಸ್. ಜಗನ್ ಮೋಹನ್ ರೆಡ್ಡಿ ಸರ್ಕಾರವು 2019ರ ಜೂನ್ ಮತ್ತು 2021 ಜೂನ್ ನಡುವೆ ವಿವಿಧ ಉಚಿತ ಯೋಜನೆಗಳ ಅಡಿಯಲ್ಲಿ ಒಂದು ಲಕ್ಷ ಕೋಟಿ ರೂಪಾಯಿ ಹಣ ವರ್ಗಾವಣೆ ಮಾಡಿದೆ.

'ಕೆಲವು ಪ್ರಮುಖ ಯೋಜನೆಗಳನ್ನು ಪರಿಶೀಲನೆ ನಡೆಸುವಾಗ ಫಲಾನುಭವಿಗಳ ದತ್ತಾಂಶದಲ್ಲಿರುವ ಹುಳುಕುಗಳು ಬಹಿರಂಗಗೊಂಡಿವೆ. ಇದು ದೊಡ್ಡ ಮೊತ್ತದ ಹಣ ಅನರ್ಹರ ಖಾತೆಗಳಿಗೆ ಸಂದಾಯವಾಗಿರುವುದನ್ನು ಸೂಚಿಸುತ್ತದೆ' ಎಂದು ಹಣಕಾಸು ಇಲಾಖೆಯ ಅಧಿಕೃತ ಮೂಲಗಳು ತಿಳಿಸಿವೆ.

'ನಾವು ಈಗಷ್ಟೇ ಪರಿಶೀಲನೆ ಪ್ರಾರಂಭಿಸಿದ್ದೇವೆ. ಕಳೆದ ಎರಡು ವರ್ಷಗಳಲ್ಲಿ ₹3,000 ಕೋಟಿಗೂ ಹೆಚ್ಚು ಹಣ ಸಂಶಯಾಸ್ಪದ ವ್ಯಕ್ತಿಗಳ ಖಾತೆಗೆ ಹೋಗಿರುವ ಅನುಮಾನವಿದೆ' ಎಂದು ಮೂಲಗಳು ಸುದ್ದಿ ಸಂಸ್ಥೆಗೆ ತಿಳಿಸಿವೆ.

ಲಕ್ಷಾಂತರ ಫಲಾನುಭವಿಗಳಿಗೆ ದೊಡ್ಡ ಮೊತ್ತವನ್ನು ನೇರ ನಗದಿನ ರೂಪದಲ್ಲಿ ವರ್ಗಾಯಿಸುವ ವಾರ್ಷಿಕ ಯೋಜನೆಗಳಲ್ಲಿ ಅಮ್ಮ ವೋಡಿ (ಪ್ರತಿ ತಾಯಿಗೆ ₹15,000), ಪಿಎಂ ಕಿಸಾನ್ ರೈತು ಭರೋಸಾ (ಪ್ರತಿ ರೈತನಿಗೆ ₹13,500), ಚೆಯುಟಾ (ಹಿಂದುಳಿದ ವರ್ಗದವರಿಗೆ, ಎಸ್‌ಟಿ, ಎಸ್‌ಸಿ ಮತ್ತು 45 ವರ್ಷಕ್ಕಿಂತ ಮೇಲ್ಪಟ್ಟ ಅಲ್ಪಸಂಖ್ಯಾತ ಮಹಿಳೆಯರಿಗೆ ತಲಾ ₹18,750), ವಾಹನಾ ಮಿತ್ರ (ಕ್ಯಾಬ್ / ಆಟೊ ಚಾಲಕರಿಗೆ ತಲಾ ₹10,000) ಮತ್ತು ಮತ್ಸ್ಯಕಾರ ಭರೋಸಾ (ಪ್ರತಿ ಮೀನುಗಾರನಿಗೆ ₹10,000) ಪ್ರಮುಖವಾಗಿವೆ.

ಬ್ರ್ಯಾಂಡಿಂಗ್, ಜಾಹೀರಾತು ಪ್ರದರ್ಶನ: ಅದಾನಿ ಸಮೂಹದಿಂದ ನಿಯಮ ಉಲ್ಲಂಘನೆ

ನವದೆಹಲಿ (ಪಿಟಿಐ): ಬ್ರ್ಯಾಂಡಿಂಗ್‌ಗೆ ಸಂಬಂಧಿಸಿ ಒಪ್ಪಂದಗಳಲ್ಲಿ ಉಲ್ಲೇಖಿಸಿರುವ ನಿಯಮಗಳನ್ನು ಅದಾನಿ ಸಮೂಹ ಉಲ್ಲಂಘಿಸಿರುವುದನ್ನು ಎಂದು ಭಾರತೀಯ ವಿಮಾನನಿಲ್ದಾಣಗಳ ಪ್ರಾಧಿಕಾರ (ಎಎಐ) ನೇಮಿಸಿದ್ದ ಮೂರು ಸಮಿತಿಗಳು ಪತ್ತೆ ಮಾಡಿವೆ.



ಅಹಮದಾಬಾದ್, ಮಂಗಳೂರು ಹಾಗೂ ಲಖನೌ ವಿಮಾನನಿಲ್ದಾಣಗಳ ನಿರ್ವಹಣೆಯ ಜವಾಬ್ದಾರಿಯನ್ನು ಅದಾನಿ ಸಮೂಹಕ್ಕೆ ಕಳೆದ ವರ್ಷ ನೀಡಲಾಗಿದೆ. ಈ ವಿಮಾನ ನಿಲ್ದಾಣಗಳಲ್ಲಿ ಬ್ರ್ಯಾಂಡಿಂಗ್, ಜಾಹೀರಾತು ಫಲಕಗಳ ಪ್ರದರ್ಶನಕ್ಕೆ ಸಂಬಂಧಿಸಿ, ಎಎಐ ಹಾಗೂ ಅದಾನಿ ಸಮೂಹದ ನಡುವೆ ನಡೆದಿರುವ ಒಪ್ಪಂದದಲ್ಲಿ ಕೆಲವು ವಿನಾಯಿತಿಗಳನ್ನು ನೀಡಲಾಗಿದೆ.

ಈ ಮೂರು ವಿಮಾನ ನಿಲ್ದಾಣಗಳನ್ನು ಕ್ರಮವಾಗಿ ಅದಾನಿ ಅಹಮದಾಬಾದ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಎಎಐಎಲ್), ಅದಾನಿ ಮಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಎಎಂಐಎಎಲ್) ಹಾಗೂ ಅದಾನಿ ಲಖನೌ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಎಎಲ್‌ಐಎಎಲ್) ಎಂಬ ಕಂಪನಿಗಳು ನಿರ್ವಹಿಸುತ್ತಿವೆ.

ಕಂಪನಿಗಳ ಹೆಸರುಗಳಿರುವ ಫಲಕಗಳ ಅಳತೆ, ಅವುಗಳನ್ನು ಪ್ರದರ್ಶಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಕಂಪನಿಗಳು ಉಲ್ಲಂಘಿಸಿರುವುದನ್ನು ಈ ಸಮಿತಿಗಳು ಜನವರಿಯಲ್ಲಿ ಪತ್ತೆ ಮಾಡಿದ್ದವು. ಇದರ ಬೆನ್ನಲ್ಲೇ, ಈ ಮೂರು ವಿಮಾನ ನಿಲ್ದಾಣಗಳಲ್ಲಿ ಬ್ರ್ಯಾಂಡಿಂಗ್ ಹಾಗೂ ಜಾಹೀರಾತು ಫಲಕಗಳ ಪ್ರದರ್ಶನ ಸರಿಪಡಿಸುವ ಕಾರ್ಯಕ್ಕೆ ಕಂಪನಿಗಳು ಚಾಲನೆ ನೀಡಿವೆ.

'ಅಹಮದಾಬಾದ್ ವಿಮಾನನಿಲ್ದಾಣದಲ್ಲಿರುವ ಜಾಹೀರಾತು ಫಲಕಗಳ ಅಳವಡಿಕೆಯಲ್ಲಿ ನಿಯಮಾನುಸಾರ ಬದಲಾವಣೆ ಪೂರ್ಣಗೊಂಡಿದೆ. ಲಖನೌ ಹಾಗೂ ಮಂಗಳೂರು ವಿಮಾನನಿಲ್ದಾಣಗಳಲ್ಲಿ ಈ ಕಾರ್ಯ ನಡೆಯುತ್ತಿದೆ' ಎಂದು ಎಎಐ ತಿಳಿಸಿದೆ.

ಈ ವಿಷಯ ಕುರಿತ ವಿವಿಧ ದಾಖಲೆಗಳನ್ನು ಆರ್‌ಟಿಐ ನಡಿ ಅರ್ಜಿ ಸಲ್ಲಿಸಿ ಪಡೆದುಕೊಂಡಿರುವುದಾಗಿ ಪಿಟಿಐ ಸುದ್ದಿಸಂಸ್ಥೆ ತಿಳಿಸಿದೆ.

ದೇಶೀಯ ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ: ಸೈನಿಕರು ಹೊತ್ತು ಸಾಗಿಸಬಹುದಾದ ಯುದ್ಧ ಟ್ಯಾಂಕ್ ನಿರೋಧಕ ಕ್ಷಿಪಣಿ ಮತ್ತು ಕ್ಷಿಪಣಿ ಲಾಂಚರ್‌ನ ಅಂತಿಮ ಹಂತದ ಪರೀಕ್ಷಾರ್ಥ ಕಾರ್ಯಾಚರಣೆಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಬುಧವಾರ ನಡೆಸಿದೆ.

ಹಗುರ ತೂಕದ ಈ ಕ್ಷಿಪಣಿ ವ್ಯವಸ್ಥೆಯನ್ನು ಸಂಪೂರ್ಣ ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದೆ. ಗುರಿ ನಿರ್ದೇಶಿತವಾದ ಈ ಕ್ಷಿಪಣಿಯನ್ನು ಯುದ್ಧ ಟ್ಯಾಂಕ್‌ಗಳ ಮೇಲೆ ದಾಳಿ ನಡೆಸಲು ಬಳಸಬಹುದಾಗಿದೆ. ಕ್ಷಿಪಣಿಯ ಕನಿಷ್ಠ ಅಂತರದ ದಾಳಿಯ ಸಾಮರ್ಥ್ಯವನ್ನು ಬುಧವಾರ ಪರೀಕ್ಷಿಸಲಾಯಿತು. ಕ್ಷಿಪಣಿಯು ಯಶಸ್ವಿಯಾಗಿ ತನ್ನ ಗುರಿಯನ್ನು ತಲುಪಿತು. ಗುರಿಯನ್ನು ಧ್ವಂಸ ಮಾಡಿತು ಎಂದು ಡಿಆರ್‌ಡಿಒ ಮಾಹಿತಿ ನೀಡಿದೆ.

ಅಡಿಕೆ ತೋಟದ ಉಪ ಬೆಳೆ ಮೌಲ್ಯವರ್ಧನೆ

ಕೋಕೊ ಹೋಳಿಗೆಗೆ ಬಲು ಬೇಡಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಡಿಕೆ ತೋಟದ ಉಪ ಬೆಳೆಯಾಗಿರುವ ಕೋಕೊದಿಂದ ಕೃಷಿಕರೊಬ್ಬರು ತಯಾರಿಸಿರುವ ಹೋಳಿಗೆಗೆ ಮಾರುಕಟ್ಟೆಯಲ್ಲಿ ಭರಪೂರ ಬೇಡಿಕೆ ಬರುತ್ತಿದೆ. ಹೊಸ ಪ್ರಯೋಗ ಆರಂಭಿಸಿ ಎರಡು ವಾರದಲ್ಲೇ 1,000ಕ್ಕೂ ಹೆಚ್ಚು ಹೋಳಿಗೆಗಳು ಖಾಲಿಯಾಗಿವೆ.

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಗುರಿಮೂಲೆಯ ಪಾಕತಜ್ಞ ಶ್ರೀಕೃಷ್ಣ ಶಾಸ್ತ್ರಿ ಅವರು, ಕೋಕೊ ಬೀನ್ಸ್‌ನಿಂದ ಹೋಳಿಗೆ ತಯಾರಿಸಿ, ಸ್ಥಳೀಯ ಅಂಗಡಿಗಳಿಗೆ ನೀಡಿದ್ದರು. ಗ್ರಾಹಕರ ಪ್ರತಿಕ್ರಿಯೆಯಿಂದ ಪ್ರೇರಿತರಾಗಿ ಅಡಿಕೆಯಿಂದಲೂ ಹೋಳಿಗೆ ಸಿದ್ಧಪಡಿಸುವ ಪ್ರಯೋಗ ನಡೆಸಿದ್ದಾರೆ.



ತೋಟದಲ್ಲಿ ಲಭ್ಯವಾಗುವ ಬೇರೆ ಬೇರೆ ಕೃಷಿ ಉತ್ಪನ್ನಗಳಿಂದ ಹೊಸ ತಿನಿಸು ತಯಾರಿಸಿ ಮಾರುಕಟ್ಟೆ ಮೌಲ್ಯ ಹೆಚ್ಚಿಸುವ ಯೋಚನೆ ಇದೆ

ಶ್ರೀಕೃಷ್ಣ ಶಾಸ್ತ್ರಿ, ಪಾಕತಜ್ಞ

ಕೋಕೊ ಹೋಳಿಗೆ ಸುಲಭವಾಗಿರುವ ಕಾರಣ ಸಿದ್ಧಪಡಿಸಿ ಮಾರುಕಟ್ಟೆಗೆ ಪೂರೈಸುತ್ತಿದ್ದಾರೆ. ಚಾಕೊಲೇಟ್‌ಗೆ ಬಳಸುವ ಕೋಕೊಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಈಗ ಹೋಳಿಗೆ ತಯಾರಿಕೆಯ ಪ್ರಯೋಗವು ಭವಿಷ್ಯದಲ್ಲಿ ಬೆಳೆಗಾರರ ಪಾಲಿಗೆ ಹೊಸ ನಿರೀಕ್ಷೆ ಸೃಷ್ಟಿಸಿದೆ.



ಕೋಕೊ ಬೀನ್ಸ್ ಬಳಸಿ ಸಿದ್ಧಪಡಿಸಿರುವ ಹೋಳಿಗೆ

'ನಾನು ಕೃಷಿಕನಾಗಿರುವುದರಿಂದ ಕೃಷಿ ಉತ್ಪನ್ನಕ್ಕೆ ಬೇಡಿಕೆ ಹೆಚ್ಚಬೇಕೆನ್ನುವ ಉದ್ದೇಶದಿಂದ ಕೋಕೊ, ಅಡಿಕೆ ಹೋಳಿಗೆ ತಯಾರಿಸಿದೆ. ನಿರೀಕ್ಷೆ ಮೀರಿ ಗ್ರಾಹಕರ ಸ್ಪಂದನ ದೊರೆತಿದೆ' ಎನ್ನುತ್ತಾರೆ ಶ್ರೀಕೃಷ್ಣ ಶಾಸ್ತ್ರಿ.

'ಹೊಸ ಅಡಿಕೆಯಲ್ಲಿ ಚೊಗರು ಜಾಸ್ತಿ. ಎರಡು ವರ್ಷ ಹಳೆಯ ಅಡಿಕೆಯನ್ನು ಹೋಳಿಗೆಗೆ ಬಳಸಬಹುದು. ಇದನ್ನು ಮಿಕ್ಸರ್‌ನಲ್ಲಿ ಪುಡಿ ಮಾಡುವುದು ಕಷ್ಟ. ಯಂತ್ರ ದೊರೆತರೆ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಬಹುದು. 250 ಗ್ರಾಂ ಅಡಿಕೆಯಲ್ಲಿ 52 ಹೋಳಿಗೆ ತಯಾರಿಸಬಹುದು. 1 ಕೆ.ಜಿ ಕೋಕೊ ಬೀನ್ಸ್ ಅನ್ನು ಹುರಿದು ಹಿಟ್ಟು ಮಾಡಿ, ಅದಕ್ಕೆ ರವೆ, ಸಕ್ಕರೆ ಸೇರಿಸಿ ತಯಾರಿಸುವ ಕಣಕದಿಂದ 130 ಹೋಳಿಗೆ ಸಿದ್ಧಪಡಿಸಬಹುದು. ಕಳೆದ ವರ್ಷ ಮಾಡಿದ್ದ ಹಲಸಿನ ಹೋಳಿಗೆಯೂ ಗ್ರಾಹಕರ ಮನಗೆದ್ದಿತ್ತು' ಎಂದರು.

ಗುರುವಾರ • ಜುಲೈ 22, 2021 ಪ್ರಜಾವಾಣಿ

ಕೋವಿಡ್ ಪೀಡಿತ ಪತಿ: ಐವಿಎಫ್‌ಗೆ ಅನುಮತಿ ಕೋರಿದ ಪತ್ನಿ

ಅಹಮದಾಬಾದ್ (ಪಿಟಿಐ): ಕೋವಿಡ್ ಪೀಡಿತ ಪತಿ ಬದುಕುಳಿಯುವ ಸಾಧ್ಯತೆ ತೀರಾ ಕಮ್ಮಿ ಇದ್ದು, ಅವರಿಂದ ಮಗು ಪಡೆಯಬೇಕೆಂಬ ಪತ್ನಿಯ ಇಚ್ಛೆಯಂತೆ ಐವಿಎಫ್/ಎಆರ್‌ಟಿ ವಿಧಾನವನ್ನು ನೆರವೇರಿಸುವಂತೆ ವಡೋದರಾದ ಆಸ್ಪತ್ರೆಯೊಂದಕ್ಕೆ ಗುಜರಾತ್ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಈ ಕುರಿತು ಆದೇಶ ಹೊರಡಿಸಿರುವ ಹೈಕೋರ್ಟ್, ಇದನ್ನು 'ಅಸಾಮಾನ್ಯ ತುರ್ತುಪರಿಸ್ಥಿತಿ' ಎಂದು ಪರಿಗಣಿಸಿದೆ.

ರೋಗಿಯ ಪತ್ನಿ ಸಲ್ಲಿಸಿದ ಅರ್ಜಿಯ ತುರ್ತು ವಿಚಾರಣೆಯ ನಂತರ, ನ್ಯಾಯಮೂರ್ತಿ ಅಶುತೋಷ್ ಜೆ. ಶಾಸ್ತ್ರಿ ಅವರು, ವಡೋದರಾ ಮೂಲದ ಆಸ್ಪತ್ರೆಗೆ ವೈದ್ಯಕೀಯ ಸಲಹೆಯಂತೆ ಐವಿಎಫ್/ಎಆರ್‌ಟಿ ಕಾರ್ಯವಿಧಾನದ ಮೂಲಕ ರೋಗಿಯಿಂದ ಮಾದರಿಯನ್ನು ಸಂಗ್ರಹಿಸಲು ಮತ್ತು ಸೂಕ್ತ ಸ್ಥಳದಲ್ಲಿ ಶೇಖರಿಸಿಡಲು ನಿರ್ದೇಶಿಸಿದರು.

'ಐವಿಎಫ್/ಎಆರ್‌ಟಿಯ ತಂತ್ರಜ್ಞಾನದ ಮೂಲಕ ರೋಗಿಯ ಪತ್ನಿಯು ಕೃತಕ ಗರ್ಭಧಾರಣೆ ಮೂಲಕ ಮಗುವನ್ನು ಪಡೆಯಲು ಬಯಸಿದ್ದರು. ಆದರೆ, ಇದಕ್ಕೆ ನ್ಯಾಯಾಲಯದಿಂದ ಅನುಮತಿ ಬೇಕೆಂದು ಆಸ್ಪತ್ರೆ ಸೂಚಿಸಿತ್ತು' ಎಂದು ಅರ್ಜಿದಾರ ಮಹಿಳೆಯ ಪರ ವಕೀಲರಾದ ನಿಲೇ ಪಟೇಲ್ ತಿಳಿಸಿದ್ದಾರೆ.

ಈ ಬಗ್ಗೆ ಅರ್ಜಿ ಸಲ್ಲಿಸಿದ್ದ ಅರ್ಜಿದಾರ ಮಹಿಳೆಯು ಇದನ್ನು ತುರ್ತು ವಿಚಾರಣೆಗೆ ಪರಿಗಣಿಸುವಂತೆ ಕೋರಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಗುಜರಾತ್ ಹೈಕೋರ್ಟ್ ರಾಜ್ಯ ಸರ್ಕಾರ ಮತ್ತು ಆಸ್ಪತ್ರೆಯ ನಿರ್ದೇಶಕರಿಗೆ ನೋಟಿಸ್ ನೀಡಿದ್ದು, ಜುಲೈ 23ರೊಳಗೆ ಉತ್ತರಿಸುವಂತೆ ಸೂಚಿಸಿದೆ.

ಕೋವಿಡ್–19 ಪೀಡಿತರಾಗಿರುವ ಪತಿಯು ಬಹು ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದು, ಜೀವ ಬೆಂಬಲದ (ಲೈಫ್ ಸಪೋರ್ಟ್) ವ್ಯವಸ್ಥೆಯಲ್ಲಿದ್ದಾರೆ. ವೈದ್ಯರ ಪ್ರಕಾರ ಅವರು ಬದುಕುಳಿಯುವ ಸಾಧ್ಯತೆ ಕಡಿಮೆ ಇದೆ. ಹಾಗಾಗಿ, ಐವಿಎಫ್/ಎಆರ್‌ಟಿ ಕಾರ್ಯವಿಧಾನಕ್ಕೆ ಪೂರಕವಾಗಿ ರೋಗಿಯ ವೀರ್ಯಾಣುಗಳ ಮಾದರಿಗಳನ್ನು ಸಂಗ್ರಹಿಸಿಡಲು ಆಸ್ಪತ್ರೆಗೆ ಆದೇಶ ನೀಡಬೇಕೆಂದು ಕೋರಿ ಅರ್ಜಿದಾರ ಮಹಿಳೆಯು ಹೈಕೋರ್ಟ್‌ಗೆ ತುರ್ತು ಮನವಿ ಸಲ್ಲಿಸಿದ್ದರು.

ಚುನಾವಣಾ ಬಾಂಡ್ ಮಾಹಿತಿ: ಆರ್‌ಟಿಐಗೆ ಇದೆ, ಸಂಸತ್ತಿಗೆ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಚುನಾವಣಾ ಬಾಂಡ್‌ಗಳ 15 ಹಾಗೂ 16ನೇ ಹಂತದ ಮಾರಾಟದ ಬಗ್ಗೆ ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ನೀಡಿದ ಮಾಹಿತಿಯು ಸಾರ್ವಜನಿಕರಿಗೆ ಈಗಾಗಲೇ ಲಭ್ಯವಾಗಿದೆ. ಆದರೆ, ಇದೇ ಮಾಹಿತಿಯನ್ನು ಸಂಸತ್ತಿನಲ್ಲಿ ಒದಗಿಸಲು ಇನ್ನೂ ಸಮಯ ಹಿಡಿಯುವುದಾಗಿ ಹಣಕಾಸು ಸಚಿವಾಲಯವು ಮಂಗಳವಾರ ತಿಳಿಸಿದೆ.

ಈ ಬಗ್ಗೆ ರಾಜ್ಯಸಭಾ ಸಂಸದ, ತೃಣಮೂಲ ಕಾಂಗ್ರೆಸ್‌ನ ಶಂತನು ಸೇನ್ ಅವರು ಕೇಳಿದ್ದ ಪ್ರಶ್ನೆಗೆ, ಸರ್ಕಾರ ಈ ಉತ್ತರ ನೀಡಿದೆ.

ಪ್ರಶ್ನೆಗಳ ಸರಣಿಯನ್ನೇ ಮುಂದಿಟ್ಟಿದ್ದ ಸಂಸದ ಸೇನ್, 'ಶಾಖಾವಾರು ಮಾರಾಟವಾದ ಚುನಾವಣಾ ಬಾಂಡ್‌ಗಳು, ಅವುಗಳ ಮೊತ್ತ, ನಗದೀಕರಣಗೊಂಡ ಬಾಂಡ್‌ಗಳು, ಯಾವ ಪಕ್ಷಗಳಿಗೆ ಎಷ್ಟು ಹಣ ಸಂದಾಯವಾಗಿದೆ, ಬಾಂಡ್ ನೀಡಿಕೆ ಯೋಜನೆಯು ಆರಂಭವಾದ 2018ನೇ ವರ್ಷದಿಂದ ಇಲ್ಲಿಯವರೆಗೆ ಮುದ್ರಣಗೊಂಡ ಚುನಾವಣಾ ಬಾಂಡ್‌ಗಳು ಎಷ್ಟು ಹಾಗೂ ಅವುಗಳ ಮಾರಾಟದಿಂದ ಎಸ್‌ಬಿಐ ಪಡೆದ ಕಮಿಷನ್ ಎಷ್ಟು' ಎಂಬ ವಿವರ ಕೇಳಿದ್ದರು.

ಸೇನ್ ಆಕ್ರೋಶ

'ಈಗಾಗಲೇ ಇರುವ ಮಾಹಿತಿಯನ್ನೂ ಸದನದ ಗಮನಕ್ಕೆ ತರಲು ಸರ್ಕಾರ ಸಿದ್ಧವಿಲ್ಲ. ಅದು ವಿಳಂಬ ತಂತ್ರವನ್ನು ಅನುಸರಿಸುತ್ತಿದೆ' ಎಂದು ಟಿಎಂಸಿ ಸಂಸದ ಸೇನ್ ಆರೋಪಿಸಿದ್ದಾರೆ. ತಮಗೆ ಮಾಹಿತಿ ನೀಡದೇ ಇರುವುದರ ಬಗ್ಗೆ ಸಭಾಪತಿಗೆ ಪತ್ರ ಬರೆಯುವುದಾಗಿಯೂ ಅವರು ತಿಳಿಸಿದ್ದಾರೆ.

ಈ ಬಗ್ಗೆ ಸದನಕ್ಕೆ ಲಿಖಿತ ಉತ್ತರ ನೀಡಿದ ಹಣಕಾಸು ಇಲಾಖೆಯ ರಾಜ್ಯ ಸಚಿವ ಪಂಕಜ್ ಚೌಧರಿ, 'ಈ ವಿವರ ಸಲ್ಲಿಸಲು, ಸರ್ಕಾರಕ್ಕೆ ಇನ್ನಷ್ಟು ಕಾಲಾವಕಾಶ ಬೇಕು' ಎಂದಿದ್ದಾರೆ.

ಆದರೆ, ಪಶ್ಚಿಮ ಬಂಗಾಳವೂ ಸೇರಿದಂತೆ ಐದು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಜ.1ರಿಂದ ಜ.10 ರವರೆಗೆ (15ನೇ ಹಂತ) ಹಾಗೂ ಏ.1ರಿಂದ ಏ.10ರ ಅವಧಿಯಲ್ಲಿ (16ನೇ ಹಂತ) ಮಾರಾಟವಾದ ಚುನಾವಣಾ ಬಾಂಡ್‌ಗಳ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ವಿವರ ಕೋರಿದ್ದ ಲೋಕೇಶ್ ಬಾತ್ರಾ ಎಂಬುವವರಿಗೆ ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆ ಹಾಗೂ ಎಸ್‌ಬಿಐ ಈಗಾಗಲೇ ವಿಸ್ತೃತ ವರದಿ ನೀಡಿವೆ.

15ನೇ ಹಂತದಲ್ಲಿ ₹ 42.10 ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳು ಮಾರಾಟವಾಗಿದ್ದು, ₹ 42.07 ಕೋಟಿ ಮೊತ್ತವು ರಾಜಕೀಯ ಪಕ್ಷಗಳಿಗೆ ಸಂದಾಯವಾಗಿದೆ. 16ನೇ ಹಂತದಲ್ಲಿ ₹695.34 ಕೋಟಿ ಮೊತ್ತದ ಬಾಂಡ್‌ಗಳು ಮಾರಾಟವಾಗಿದ್ದು, ₹1,000 ಮೌಲ್ಯದ ಎರಡು ಬಾಂಡ್‌ಗಳು ಮಾತ್ರ ಯಾವ ಪಕ್ಷಕ್ಕೂ ಸಂದಾಯವಾಗಿಲ್ಲ. ಏಪ್ರಿಲ್‌ನಲ್ಲಿ, ಕೋಲ್ಕತ್ತಾದ ಎಸ್‌ಬಿಐ ಮುಖ್ಯ ಶಾಖೆಯೊಂದರಲ್ಲಿಯೇ ₹ 176.19 ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳು ಮಾರಾಟವಾಗಿವೆ. ನವದೆಹಲಿ, ಚೆನ್ನೈ ಹಾಗೂ ಮುಂಬೈನ ಮುಖ್ಯ ಶಾಖೆಯಿಂದ ಕ್ರಮವಾಗಿ ₹167.5 ಕೋಟಿ, ₹141.5 ಕೋಟಿ ಹಾಗೂ ₹ 91.5 ಕೋಟಿ ಮೊತ್ತದ ಬಾಂಡ್‌ಗಳು ಮಾರಾಟವಾಗಿವೆ ಎಂಬುದು ಭಾತ್ರಾ ಅವರು ಪಡೆದ ಮಾಹಿತಿಯಿಂದ ತಿಳಿದುಬಂದಿದೆ.

ಈ ಎರಡೂ ಹಂತಗಳ ಮಾಹಿತಿಯನ್ನು ಅವರು ಕ್ರಮವಾಗಿ ಫೆ. 17ರಂದು ಏ. 27ರಂದು ಪಡೆದಿದ್ದಾರೆ.

ಸುದ್ದಿ 2 ನಿಮಿಷ

ಸಚಿವೆ ವಿರುದ್ಧ ಆಕ್ಷೇಪಾರ್ಹ ಹೇಳಿಕೆ: ನ್ಯಾಯಾಲಯಕ್ಕೆ ಪ್ರಾಧ್ಯಾಪಕ ಶರಣು

ಫಿರೋಜಾಬಾದ್(ಉತ್ತರ ಪ್ರದೇಶ): ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರ ವಿರುದ್ಧ ಫೇಸ್‌ಬುಕ್‌ನಲ್ಲಿ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಪ್ರಾಧ್ಯಾಪಕರೊಬ್ಬರು ನ್ಯಾಯಾಲಯದ ಮುಂದೆ ಶರಣಾಗಿದ್ದು, ಅವರನ್ನು ಜೈಲಿಗೆ ಕಳುಹಿಸಲಾಗಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅನುರಾಗ್ ಕುಮಾರ್ ಅವರ



ಮುಂದೆ ಶಹರ್ಯಾರ್ ಅಲಿ ಶರಣಾಗಿದ್ದು, ಅವರು ಮಂಗಳವಾರ ಮಧ್ಯಂತರ ಜಾಮೀನು ಅರ್ಜಿ ಸಲ್ಲಿಸಿದ್ದರು. ಆದರೆ ನ್ಯಾಯಾಧೀಶರು ಅರ್ಜಿ ತಿರಸ್ಕರಿಸಿ, ಅವರನ್ನು ಜೈಲಿಗೆ ಕಳುಹಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ವಿರುದ್ಧ ಫೇಸ್‌ಬುಕ್‌ನಲ್ಲಿ ಅಶ್ಲೀಲ ಪೋಸ್ಟ್ ಹಾಕಿದ್ದ ಆರೋಪದಡಿ ಫಿರೋಜಾಬಾದ್ ಪೊಲೀಸರು ಮಾರ್ಚ್‌ನಲ್ಲಿ ಶಹರ್ಯಾರ್ ಅಲಿ ವಿರುದ್ಧ ಪ್ರಕರಣ ದಾಖಲಿಸಿದ್ದರು. ಶಹರ್ಯಾರ್ ಅಲಿ ಅವರು ಎಸ್‌ಆರ್‌ಕೆ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದಾರೆ.

ಆದರೆ ಈ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಕಾಲೇಜು ಅವರಿಗೆ ಅಮಾನತು ನೋಟಿಸ್ ಜಾರಿಗೊಳಿಸಿದೆ.

ಹಕ್ಕಿಜ್ವರದ ಬಗ್ಗೆ ಆತಂಕ ಬೇಡ: ಏಮ್ಸ್ ಮುಖ್ಯಸ್ಥರ ಅಭಯ

ನವದೆಹಲಿ (ಪಿಟಿಐ): 'ಹಕ್ಕಿಜ್ವರ ಮನುಷ್ಯನಿಂದ ಮನುಷ್ಯನಿಗೆ ಹರಡುವುದು ಅಪರೂಪ. ಈ ಕುರಿತು ಆತಂಕ ಬೇಡ' ಎಂದು ಏಮ್ಸ್ ಮುಖ್ಯಸ್ಥ ಡಾ. ರಣದೀಪ್ ಗುಲ್ಡೇರಿಯಾ ಬುಧವಾರ ತಿಳಿಸಿದ್ದಾರೆ.

ಹಕ್ಕಿಜ್ವರದಿಂದ 12 ವರ್ಷದ ಬಾಲಕನೊಬ್ಬ ಏಮ್ಸ್ ಆಸ್ಪತ್ರೆಯಲ್ಲಿ ಮಂಗಳವಾರ ಮೃತಪಟ್ಟಿದ್ದರು. ಹೀಗಾಗಿ, ಗುಲ್ಡೇರಿಯಾ ಈ ಸ್ಪಷ್ಟನೆ ನೀಡಿದ್ದಾರೆ.

ಜ್ವರದಿಂದ ಬಳಲುತ್ತಿದ್ದ ಬಾಲಕನನ್ನು ಜುಲೈ 2ರಂದು ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆಯ ವೇಳೆ ಕೋವಿಡ್ ಮತ್ತು ಹಕ್ಕಿಜ್ವರ ಕುರಿತು ಪರೀಕ್ಷೆ ನಡೆಸಲಾಗಿತ್ತು. ಕೋವಿಡ್ ವರದಿ ನೆಗೆಟಿವ್ ಬಂದಿತ್ತು. ಆದರೆ, ಹಕ್ಕಿಜ್ವರ ಇರುವುದು ಸಾಬೀತಾಗಿತ್ತು.

ಈ ಬಗ್ಗೆ ವಿವರಣೆ ನೀಡಿರುವ ರಣದೀಪ್ ಗುಲ್ಡೇರಿಯಾ ಅವರು, 'ಹಕ್ಕಿಜ್ವರದಿಂದ ಮೃತಪಟ್ಟ ಬಾಲಕ ವಾಸವಿದ್ದ ಪ್ರದೇಶದಲ್ಲಿ ಯಾರಿಗಾದರೂ ಸೋಂಕು ತಗುಲಿದೆಯೇ ಅಥವಾ ಕೋಳಿ ಸಾಕಣೆ ಕೇಂದ್ರದಲ್ಲಿ ಸಾವು ಸಂಭವಿಸಿದೆಯೇ ಎಂಬುದನ್ನು ಪರಿಶೀಲಿಸುವುದು ಅಗತ್ಯವಿದೆ' ಎಂದು ಹೇಳಿದ್ದಾರೆ.

'ಹಕ್ಕಿಗಳಿಂದ ಮನುಷ್ಯನಿಗೆ ಸೋಂಕು ಹರಡುವುದು ಅಪರೂಪ. ಮನುಷ್ಯನಿಂದ ಮನುಷ್ಯನಿಂದ ಹಬ್ಬುವುದು ಇನ್ನೂ ಸಾಬೀತಾಗಿಲ್ಲ. ಈ ಕಾರಣದಿಂದ ಆತಂಕಪಡುವುದು ಅಗತ್ಯವಿಲ್ಲ' ಎಂದು ತಿಳಿಸಿದರು.

'ಆದರೆ, ಕೋಳಿಸಾಕಣೆ ಕೇಂದ್ರದ ಆಸುಪಾಸಿನಲ್ಲಿ ವಾಸಿಸುತ್ತಿರುವ ಜನರು ಮುಂಜಾಗ್ರತೆ ವಹಿಸುವುದು ಮತ್ತು ಸ್ವಚ್ಛತೆ ಕಾಪಾಡಿಕೊಳ್ಳುವುದು ಅಗತ್ಯ' ಎಂದು ಸಲಹೆ ಮಾಡಿದ್ದಾರೆ.

ಮೃತ ಬಾಲಕ ಹರಿಯಾಣದವನು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಕ್ರೀದ್ ಹಬ್ಬ: ಕೇರಳದಾದ್ಯಂತ ಸರಳವಾಗಿ ಆಚರಣೆ

ಗಡಿಯಲ್ಲಿ ಯೋಧರ ಸಿಹಿ ವಿನಿಮಯ

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ಗಡಿಯುದ್ದಕ್ಕೂ ವಿವಿಧೆಡೆ ಗಡಿಭದ್ರತಾ ಪಡೆ (ಬಿಎಸ್‌ಎಫ್) ಮತ್ತು ಪಾಕಿಸ್ತಾನ ರೇಂಜರ್ಸ್ ಯೋಧರು ಬುಧವಾರ 'ಈದ್ ಉಲ್ ಅದಾ' ಹಬ್ಬದ ನಿಮಿತ್ತ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡರು.

2019ರ ನಂತರ ಹೀಗೆ ಸಿಹಿ ವಿನಿಮಯ ಆಗುತ್ತಿರುವುದು ಇದೇ ಮೊದಲು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 2019ರ ಆ.5ರಂದು ಸಂವಿಧಾನದ 370ನೇ ವಿಧಿ ರದ್ದುಪಡಿಸಿದ ಬಳಿಕ, ಅದಕ್ಕೂ ಹಿಂದಿನವರೆಗೂ ಚಾಲ್ತಿಯಲ್ಲಿದ್ದ ಸಂಪ್ರದಾಯವನ್ನು ಪಾಕಿಸ್ತಾನದ ಯೋಧರು ಕೈಬಿಟ್ಟಿದ್ದರು.

ಈ ಕುರಿತು ಪ್ರತಿಕ್ರಿಯಿಸಿದ ಬಿಎಸ್‌ಎಫ್ ವಕ್ತಾರರು, 'ಈದ್ ನಿಮಿತ್ತ ಉಭಯ ದೇಶಗಳ ಯೋಧರು ಪಂಜಾಬ್‌ನ ಅಟ್ಟಾರಿಯ ಜಂಟಿ ಚೆಕ್‌ಪೋಸ್ಟ್ ಬಳಿ ಸಿಹಿ ವಿನಿಮಯ ಮಾಡಿಕೊಂಡಿದ್ದಾರೆ. ವಾಗಾ ಗಡಿ, ರಾಜಸ್ಥಾನದ ಗಡಿಯಲ್ಲೂ ಸಿಹಿ ವಿನಿಮಯವಾಗಿದೆ' ಎಂದು ತಿಳಿಸಿದರು.

ಕಳೆದ ವರ್ಷ ಕೋವಿಡ್ ಪರಿಸ್ಥಿತಿಯ ಕಾರಣದಿಂದಾಗಿ ಈ ಪದ್ಧತಿಯನ್ನು ಕೈಬಿಡಲಾಗಿತ್ತು. ಜಮ್ಮು, ಪಂಜಾಬ್, ರಾಜಸ್ಥಾನ, ಗುಜರಾತ್‌ಗೆ ಹೊಂದಿಕೊಂಡ 2,290 ಕಿ.ಮೀ ಉದ್ದದ ಭಾರತ–ಪಾಕ್ ಗಡಿಯಲ್ಲಿ ಬಿಎಸ್‌ಎಫ್ ಕಾವಲಿದೆ. ದೀಪಾವಳಿ ಹಬ್ಬ, ಸ್ವಾತಂತ್ರ್ಯ ದಿನ, ಗಣರಾಜ್ಯ ದಿನ, ಬಿಎಸ್‌ಎಫ್ ಸ್ಥಾಪನಾ ದಿನವಾದ ಡಿಸೆಂಬರ್ 1, ಪಾಕಿಸ್ತಾನದ ಸ್ವಾತಂತ್ರ್ಯ ದಿನವಾದ ಆಗಸ್ಟ್ 14ರಂದೂ ಗಡಿಯಲ್ಲಿ ಯೋಧರು ಸಿಹಿ ವಿನಿಮಯ ಮಾಡಿಕೊಳ್ಳಲಿದ್ದಾರೆ.



ಭಾರತ–ಪಾಕಿಸ್ತಾನ ಗಡಿಯಾದ ಪೂಂಚ್–ರಾವಲಕೋಟ್ ಕ್ರಾಸಿಂಗ್ ಪಾಯಿಂಟ್ ಬಳಿ ಬುಧವಾರ ಉಭಯ ದೇಶಗಳ ಯೋಧರು ಸಿಹಿ ವಿನಿಮಯ ಮಾಡಿಕೊಂಡರು

ಮನೆಗಳಲ್ಲೇ ಪ್ರಾರ್ಥನೆ

ತಿರುವನಂತಪುರ: ಕೋವಿಡ್ ಸೋಂಕಿನ ಪರಿಸ್ಥಿತಿಯಿಂದಾಗಿ ಮುಸಲ್ಮಾನರು ಬುಧವಾರ ಕೇರಳದಾದ್ಯಂತ ಸರಳವಾಗಿ ಬಕ್ರೀದ್ ಹಬ್ಬವನ್ನು ಆಚರಿಸಿದರು. ಆಚರಣೆಯು ಬಹುತೇಕ ಮನೆಗಳಿಗೇ ಸೀಮಿತವಾಗಿತ್ತು.

ಸಾಮೂಹಿಕ ಪ್ರಾರ್ಥನೆ, ಸಮುದ್ರ ತೀರದಲ್ಲಿ ಪ್ರಾರ್ಥನೆಗಳು ಇರಲಿಲ್ಲ. ಕೋವಿಡ್ 2ನೇ ಅಲೆ ಗಂಭೀರವಾಗಿರುವ ಕಾರಣ ಸರ್ಕಾರ ಸಾರ್ವಜನಿಕ ಆಚರಣೆಯ ವಿರುದ್ಧ ವಿವಿಧ ನಿರ್ಬಂಧಗಳನ್ನು ಹೇರಿದೆ.

ಕೋವಿಡ್ ಮಾರ್ಗಸೂಚಿಗಳಿಗೆ ಅನುಸಾರವಾಗಿ ಕೇವಲ 40 ಜನರಷ್ಟೇ ಸೇರಿ ಪ್ರಾರ್ಥನೆಯನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಬಹುತೇಕ ಕುಟುಂಬಗಳು ಮನೆಯಲ್ಲಿಯೇ ಉಳಿದರು. ಹಬ್ಬದ ನಿಮಿತ್ತ ಆತ್ಮೀಯರನ್ನು ಭೇಟಿಯಾಗಿ ಶುಭ ಕೋರುವ ಚಿತ್ರಣಗಳು ವಿರಳವಾಗಿದ್ದವು.

ಉತ್ತರಾಖಂಡದಲ್ಲಿ ಭೂಕುಸಿತ ಸಂಕಷ್ಟದಲ್ಲಿ 150 ಮಂದಿ

ಡೆಹ್ರಾಡೂನ್ (ಪಿಟಿಐ): ಭಾರಿ ಮಳೆಯಿಂದಾಗಿ ಉತ್ತರಾಖಂಡದ ಚಂಪಾವತ್‌ನ ತಾನಕ್‌ಪುರ್ ಘಾಟ್ ರಾಷ್ಟ್ರೀಯ ಹೆದ್ದಾರಿ ಬಳಿ ಹಲವೆಡೆ ಭೂಕುಸಿತ ಸಂಭವಿಸಿದ್ದು, ಸುಮಾರು 150 ಮಂದಿ ತೊಂದರೆಗೆ ಸಿಲುಕಿದ್ದಾರೆ.

ವಿಶ್ರಮ್ ಘಾಟ್ ಪ್ರದೇಶದಲ್ಲಿ ಮಂಗಳವಾರ ತಡರಾತ್ರಿ ವರೆಗೂ ವಾಹನ ದಟ್ಟಣೆ ಇತ್ತು. ರಸ್ತೆ ಮಧ್ಯೆ ಸಿಕ್ಕಿಹಾಕಿಕೊಂಡಿರುವವರ ರಕ್ಷಣೆಗೆ ಜಿಲ್ಲಾಡಳಿತ ಕ್ರಮ ಕೈಗೊಂಡಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪಡೆಯ ಅಧಿಕಾರಿ ಮನೋಜ್ ಪಾಂಡೆ ತಿಳಿಸಿದ್ದಾರೆ.

ಹೆದ್ದಾರಿಯ ಎಂಟು ಕಡೆಗಳಲ್ಲಿ ಭೂಕುಸಿತ ಸಂಭವಿಸಿದೆ. ಏಳು ಕಡೆಗಳಲ್ಲಿ ರಸ್ತೆ ಮೇಲೆ ಬಿದ್ದಿರುವ ಮಣ್ಣು, ಬಂಡೆಗಳನ್ನು ಮಂಗಳವಾರ ಸಂಜೆಯೇ ತೆರವುಗೊಳಿಸಲಾಗಿದೆ. ಮಂಗಳವಾರ ಮಧ್ಯರಾತ್ರಿವರೆಗಿನ ಎಲ್ಲ ಪ್ರಯತ್ನಗಳ ಹೊರತಾಗಿಯೂ ವಿಶ್ರಮ್ ಘಾಟ್ ಪ್ರದೇಶದಲ್ಲಿ ಬಂಡೆಗಳು ಮತ್ತು ಅವಶೇಷಗಳನ್ನು ತೆರವುಗೊಳಿಸಲು ಸಾಧ್ಯವಾಗಿಲ್ಲ. ಬುಧವಾರ ಬೆಳಿಗ್ಗೆ ಮತ್ತೆ ತೆರವು ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಭೂಕುಸಿತದಿಂದಾಗಿ ರಸ್ತೆ ಮಧ್ಯೆ ಸಿಕ್ಕಿಹಾಕಿಕೊಂಡಿರುವವರ ಪೈಕಿ ಕೆಲವರು ಹಲ್ದ್ವಾನಿ ಪ್ರದೇಶಕ್ಕೆ ಸೇರಿದವರಾಗಿದ್ದು, ಇವರನ್ನು ದೇವಿಧುರಾಕ್ಕೆ ಕಳುಹಿಸಿಕೊಡಲಾಗಿದೆ ಎಂದು ಅವರು ಹೇಳಿದ್ದಾರೆ.

ಅಮೆರಿಕ: ಟ್ರಂಪ್ ಆಪ್ತ ಟಾಮ್ ಬರಾಕ್ ಬಂಧನ

ಲಾಸ್ ಏಂಜಲೀಸ್ (ಎಪಿ): ಡೊನಾಲ್ಡ್ ಟ್ರಂಪ್ 2017ರಲ್ಲಿ ನೂತನ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸುವ ಕಾರ್ಯಕ್ರಮದ ಆಯೋಜನೆ ಹೊಣೆ ಹೊತ್ತಿದ್ದ ಸಮಿತಿಯ ಮುಖ್ಯಸ್ಥರಾಗಿದ್ದ ಟಾಮ್ ಬರಾಕ್ ಅವರು, ಯುಎಇ ಏಜೆಂಟರಾಗಿದ್ದರು ಎಂಬ ಆರೋಪದ ಮೇಲೆ ಅವರನ್ನು ಬಂಧಿಸಲಾಗಿದೆ.

74 ವರ್ಷದ ಟಾಮ್ ಅವರಲ್ಲದೇ, ಅವರ ಕಂಪನಿಯ ಉದ್ಯೋಗಿಯಾಗಿದ್ದ ಮ್ಯಾಥ್ಯೂ ಗ್ರಿಮ್ಸ್, ಯುಎಇಯ ಉದ್ಯಮಿ ರಶೀದ್ ಅಲ್ ಮಲಿಕ್ ಅವರ ವಿರುದ್ಧ ಇದೇ ಆರೋಪಗಳಡಿ ಬ್ರೂಕ್‌ಲಿನ್‌ನ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿದೆ.

ಗ್ರಿಮ್ಸ್ ಅವರನ್ನು ಸಹ ಬಂಧಿಸಲಾಗಿದೆ. ಮಲಿಕ್ 2018ರಲ್ಲಿ ಅಮೆರಿಕ ತೊರೆದಿದ್ದು, ಸದ್ಯ ಮಧ್ಯಪ್ರಾಚ್ಯ ರಾಷ್ಟ್ರವೊಂದರಲ್ಲಿ ನೆಲೆಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಸಂಯುಕ್ತ ಅರಬ್ ಸಂಸ್ಥಾನಗಳಿಗೆ (ಯುಎಇ) ನೆರವಾಗುವ ರೀತಿಯಲ್ಲಿ ಅಮೆರಿಕದ ನೀತಿ ನಿರೂಪಣೆ ಮೇಲೆ ಪ್ರಭಾವ ಬೀರಲು ಸಂಚು ರೂಪಿಸಿದ್ದರು ಎಂಬ ಆರೋಪ ಟಾಮ್ ವಿರುದ್ಧ ಇದೆ.

ಟ್ರಂಪ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ, ರಾಜತಾಂತ್ರಿಕ ಹುದ್ದೆಗೇರಲು ಸಹ ಟಾಮ್ ಯತ್ನಿಸಿದ್ದರು ಎನ್ನಲಾಗಿದೆ.

ಹೈಟಿ: ನೂತನ ಪ್ರಧಾನಿಯಾಗಿ ಹೆನ್ರಿ ಅಧಿಕಾರ ಸ್ವೀಕಾರ

ಪೋರ್ಟ್–ಒ–ಪ್ರಿನ್ಸ್, ಹೈಟಿ(ಎಪಿ): ಹೈಟಿಯ ನೂತನ ಪ್ರಧಾನಿಯಾಗಿ ಏರಿಯಲ್ ಹೆನ್ರಿ ಅಧಿಕಾರ ಸ್ವೀಕರಿಸಿದ್ದಾರೆ.

ವೃತ್ತಿಯಿಂದ ನರ ಶಸ್ತ್ರಚಿಕಿತ್ಸಾ ತಜ್ಞ ಹೆನ್ರಿ, ಈ ಮೊದಲು ಸಂಪುಟ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿ ಅವರು, 'ಜೊವೆನೆಲ್ ಮೊಯಿಸ್ ಅವರ ಹತ್ಯೆ ಕುರಿತು ನಡೆಯುತ್ತಿರುವ ತನಿಖೆಗೆ ಮಿತ್ರ ರಾಷ್ಟ್ರಗಳ ಸಹಕಾರ ಕೋರುವೆ. ಈ ದುಷ್ಕೃತ್ಯಕ್ಕೆ ಕಾರಣರಾದವರಿಗೆ ಶಿಕ್ಷಿಸದೇ ಬಿಡುವುದಿಲ್ಲ' ಎಂದರು.



ಏರಿಯಲ್ ಹೆನ್ರಿ

ಅಧ್ಯಕ್ಷರಾಗಿದ್ದ ಜೊವೆನೆಲ್ ಮೊಯಿಸ್ ಅವರನ್ನು ಜುಲೈ 7ರಂದು ಅವರ ಮನೆಯಲ್ಲಿಯೇ ಹತ್ಯೆ ಮಾಡಲಾಗಿತ್ತು. ನಂತರ ನಡೆದ ಬೆಳವಣಿಗೆಗಳಲ್ಲಿ, ಕ್ಲಾಡ್ ಜೋಸೆಫ್ ಹಂಗಾಮಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

ದಿನಸಿ ಕಿಟ್ ಕೂಡ ವಿತರಿಸಿಲ್ಲ • ಪೋಷಣಾ ಭತ್ಯೆ ಯಾವುದಕ್ಕೂ ಸಾಲುವುದಿಲ್ಲ

ವಿಶೇಷ ಮಕ್ಕಳತ್ತ ಸರ್ಕಾರದ ನಿರ್ಲಕ್ಷ್ಯ!

• ಗುರು ಪಿ.ಎಸ್.

ಬೆಂಗಳೂರು: ಕೋವಿಡ್‌ನಂತಹ ಸಂಕಷ್ಟದ ಸಂದರ್ಭದಲ್ಲಿಯೂ ರಾಜ್ಯ ಸರ್ಕಾರದಿಂದ ಯಾವುದೇ ನೆರವು ಸಿಗದೇ ವಿಶೇಷ ಮಕ್ಕಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಅವರ ಕಲಿಕೆಯೂ ಕಷ್ಟವಾಗಿರುವ ಈ ಸಂದರ್ಭದಲ್ಲಿ, ಕನಿಷ್ಠ ದಿನಸಿ ಕಿಟ್ ವಿತರಿಸುವ ಕಾರ್ಯವನ್ನೂ ಸರ್ಕಾರ ಮಾಡುತ್ತಿಲ್ಲ ಎಂದು ಪೋಷಕರು, ಶಿಕ್ಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ವಾಕ್ ಮತ್ತು ಶ್ರವಣ ದೋಷ ಸೇರಿದಂತೆ ಬೇರೆ ಬೇರೆ ರೀತಿಯ ಅಂಗವೈಕಲ್ಯ ಹೊಂದಿರುವ ಮಕ್ಕಳು ಕೋವಿಡ್ ಬಿಕ್ಕಟ್ಟಿನಿಂದ ಹೆಚ್ಚು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗಾದರೆ ಕನಿಷ್ಠ ದಿನಸಿ ಕಿಟ್ ಆದರೂ ಕೊಟ್ಟಿದ್ದಾರೆ. ಇಂತಹ ಮಕ್ಕಳಿಗೆ ಅದೂ ಇಲ್ಲ' ಎಂದು ನಗರದ ಸುನಾದ ಕಿವುಡು ಮಕ್ಕಳ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಎಂ. ದಾಕ್ಷಾಯಿಣಿ ಹೇಳಿದರು.

ಅಂಕಿ–ಅಂಶ

27 ಬೆಂಗಳೂರಿನಲ್ಲಿರುವ ವಿಶೇಷ ಮಕ್ಕಳ ಶಾಲೆಗಳು

2,000 ಬೆಂಗಳೂರಿನಲ್ಲಿರುವ ವಿಶೇಷ ಮಕ್ಕಳ ಅಂದಾಜು ಸಂಖ್ಯೆ

140 ರಾಜ್ಯದಲ್ಲಿರುವ ವಿಶೇಷ ಶಾಲೆಗಳು

10,000 ರಾಜ್ಯದಲ್ಲಿರುವ ವಿಶೇಷ ಮಕ್ಕಳ ಅಂದಾಜು ಸಂಖ್ಯೆ

'ಇಂತಹ ಮಕ್ಕಳ ಮನೆಯ ವಿಳಾಸ, ದೂರವಾಣಿ ಸಂಖ್ಯೆಯು ಸರ್ಕಾರದ ಬಳಿ ಇದೆ. ದಿನಸಿ ಕಿಟ್ ಸೇರಿದಂತೆ ಇತರೆ ಸೌಲಭ್ಯವನ್ನು ಅವರ ಮನೆಯ ಬಾಗಿಲಿಗೇ ತಲುಪಿಸುವುದು ಕಷ್ಟವೇನೂ ಆಗದು. ಅಲ್ಲದೆ, ಶೇ 100ರಷ್ಟು ಅಂಗವೈಕಲ್ಯ ಹೊಂದಿರುವ ಮಕ್ಕಳಿಗೆ ₹1,400 ಪೋಷಣಾ ಭತ್ಯೆಯನ್ನು ನೀಡಲಾಗುತ್ತದೆ. ಆದರೆ, ಈ ಮಕ್ಕಳ ನಿರ್ವಹಣೆಗೆ ಅದು ಏನೇನೂ ಸಾಲುವುದಿಲ್ಲ. ಈ ಸಂಕಷ್ಟದ ಸಂದರ್ಭದಲ್ಲಾದರೂ ಪೋಷಣಾ ಭತ್ಯೆಯನ್ನು ಹೆಚ್ಚಿಸಬೇಕು' ಎಂದು ಅವರು ಒತ್ತಾಯಿಸಿದರು.

'ಸಾಮಾನ್ಯ ಶಾಲೆಗಳ ಮಾರ್ಗಸೂಚಿಯಂತೆಯೇ ಕಾರ್ಯನಿರ್ವಹಿಸಲು ಹಲವು ಸವಾಲುಗಳು ಎದುರಾಗುತ್ತವೆ. ತುಟಿಚಲನೆಯಿಂದಲೇ ಮಾತುಗಳನ್ನು ಗ್ರಹಿಸುವ ಮಕ್ಕಳಿಗೆ ಮಾಸ್ಕ್ ಧರಿಸುವುದರಿಂದ ಕಷ್ಟವಾಗುತ್ತಿದೆ. ಎಷ್ಟೋ ವಿದ್ಯಾರ್ಥಿಗಳ ಬಳಿಯಲ್ಲಿ ಸ್ಮಾರ್ಟ್‌ಫೋನ್‌ಗಳು ಇಲ್ಲ. ಆನ್‌ಲೈನ್ ತರಗತಿ ನಡೆಸುವುದೂ ಕಷ್ಟವಾಗುತ್ತಿದೆ' ಎಂದು ಅವರು ಅಳಲು ತೋಡಿಕೊಂಡರು.

'ಊಟ, ಉಪಾಹಾರ ಭತ್ಯೆ ಎಂದು ಪ್ರತ್ಯೇಕವಾಗಿ ಹಣ ನೀಡಲಾಗುತ್ತಿತ್ತು. ಈಗ ಭೌತಿಕ ತರಗತಿಗಳು ನಡೆಯುತ್ತಿಲ್ಲವಾದ್ದರಿಂದ ಶಾಲೆಯ ನಿರ್ವಹಣಾ ವೆಚ್ಚ ಮಾತ್ರ ಕೊಡುತ್ತಿದ್ದಾರೆ. ಶಾಲಾ ವಾಹನದ ಚಾಲಕರು, ಸಹಾಯಕರು ಸೇರಿದಂತೆ ಬೋಧಕೇತರ ಸಿಬ್ಬಂದಿಗೆ ವೇತನ ಪಾವತಿಸಿಲ್ಲ. ಅವರು ಕೆಲಸ ಬಿಟ್ಟು ಹೋದರೆ, ಕೋವಿಡ್ ಬಿಕ್ಕಟ್ಟು ಪರಿಹಾರದ ನಂತರ ಅವರನ್ನು ವಾಪಸ್ ಕರೆಸಿಕೊಳ್ಳಲು ಕಷ್ಟವಾಗುತ್ತದೆ' ಎಂದು ನಗರದ ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ ಹಿಯರಿಂಗ್‌ನ ಸಂಚಾಲಕಿ ರತ್ನಾ ಶೆಟ್ಟಿ ಹೇಳಿದರು.

'ವಿಶೇಷ ಮಕ್ಕಳ ಪೋಷಕರಿಗೆ ಆದ್ಯತೆ ಮೇರೆಗೆ ಕೋವಿಡ್ ಲಸಿಕೆ ನೀಡಲು ಕ್ರಮ ಕೈಗೊಳ್ಳಬೇಕು' ಎಂದೂ ಅವರು ಒತ್ತಾಯಿಸಿದರು.

'ಪೋಷಣಾ ಭತ್ಯೆ ಹೆಚ್ಚಳಕ್ಕೆ ಶಿಫಾರಸು'

'ಕೋವಿಡ್ ಸಂದರ್ಭದಲ್ಲಿ ವಿಶೇಷ ಮಕ್ಕಳ ಶಾಲಾ ನಿರ್ವಹಣೆ ಕಷ್ಟವಾಗುತ್ತಿದೆ ಎಂದು ಹಲವು ಸರ್ಕಾರೇತರ ಸಂಸ್ಥೆಗಳು ಮನವಿ ಮಾಡಿದ್ದವು. ಈ ಕುರಿತು ಉನ್ನತ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಪೋಷಣಾ ಭತ್ಯೆಯನ್ನು ಹೆಚ್ಚಿಸುವ ಬಗ್ಗೆಯೂ ಶಿಫಾರಸು ಮಾಡಲಾಗಿದೆ. ಹಣಕಾಸು ಇಲಾಖೆಯ ಒಪ್ಪಿಗೆ ದೊರೆತರೆ, ಭತ್ಯೆ ಪ್ರಮಾಣ ಹೆಚ್ಚಾಗಲಿದೆ' ಎಂದು ಅಂಗವಿಕಲರ ಸಬಲೀಕರಣ ಇಲಾಖೆಯ ನಿರ್ದೇಶಕ ಡಾ. ಮುನಿರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಮಾನಸಿಕ ಸಮಸ್ಯೆ ಅಥವಾ ಬುದ್ಧಿಮಾಂದ್ಯ ಮಕ್ಕಳ ಪೋಷಣಾ ಭತ್ಯೆಯ ಪ್ರಮಾಣವನ್ನು ₹2,000ಕ್ಕೆ ಹೆಚ್ಚಿಸಿ ಮುಖ್ಯಮಂತ್ರಿಗಳು ಈಗಾಗಲೇ ಆದೇಶಿಸಿದ್ದಾರೆ. ನಿರ್ದಿಷ್ಟ ವರ್ಷಗಳ ನಂತರ ಭತ್ಯೆಯ ಪ್ರಮಾಣ ನಿಗದಿತವಾಗಿ ಹೆಚ್ಚಾಗೇ ಆಗುತ್ತದೆ. ಕೋವಿಡ್ ಬಿಕ್ಕಟ್ಟು ಇರುವುದರಿಂದ ಈಗಲೇ ಭತ್ಯೆ ಹೆಚ್ಚಳ ಮಾಡಬೇಕು ಎಂದು ಇಲಾಖೆಯಿಂದಲೂ ಮನವಿ ಮಾಡಿದ್ದೇವೆ' ಎಂದೂ ಅವರು ಹೇಳಿದರು.

ಕೋವಿಡ್ : ದಾಖಲೆ ಪ್ರಮಾಣದಲ್ಲಿ ಕಡಿಮೆಯಾದ ಅಮೆರಿಕನ್ನರ ಜೀವಿತಾವಧಿ

ನ್ಯೂಯಾರ್ಕ್ (ಎಪಿ): ಕೋವಿಡ್–19 ಸಾಂಕ್ರಾಮಿಕದಿಂದಾಗಿ ಅಮೆರಿಕದ ಜನರ ಜೀವತಾವಧಿ ಒಂದೂವರೆ ವರ್ಷ ಕಡಿಮೆಯಾಗಿದೆ. ಇದು ವಿಶ್ವದ ಎರಡನೇ ಮಹಾಯುದ್ಧದ ನಂತರ ಆಗಿರುವ ಅತಿ ದೊಡ್ಡ ಕುಸಿತ ಎಂದು ಸಾರ್ವಜನಿಕ ಆರೋಗ್ಯ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಈ ಅವಧಿಯಲ್ಲಿ ಕಪ್ಪು ವರ್ಣೀಯ ಅಮೆರಿಕನ್ನರ ಜೀವಿತಾವಧಿಯಲ್ಲಿ ಗಣನೀಯ ಇಳಿಕೆ ಕಂಡು ಬಂದಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರಗಳ (ಸಿಡಿಸಿ) ಮಾಹಿತಿ ಪ್ರಕಾರ, 'ಒಂದು ವರ್ಷದವರೆಗಿನ ಜೀವಿತಾವಧಿ ಕಡಿಮೆಯಾಗುವುದಕ್ಕೆ ಮುಖ್ಯವಾಗಿ ಕೋವಿಡ್ ಸಾಂಕ್ರಾಮಿಕವೇ ಕಾರಣವಾಗಿದೆ. ಆರೋಗ್ಯ ಅಧಿಕಾರಿಗಳ ಪ್ರಕಾರ ಒಟ್ಟು ಜೀವಿತಾವಧಿಯ ಶೇ 74ರಷ್ಟು ಕಡಿಮೆಯಾಗಿದೆ.

ಕಳೆದ ವರ್ಷ 33 ಲಕ್ಷಕ್ಕೂ ಹೆಚ್ಚು ಅಮೆರಿಕನ್ನರು ಸಾವಿಗೀಡಾಗಿದ್ದಾರೆ. ಇದರಲ್ಲಿ ಶೇ 11ರಷ್ಟು ಮಂದಿ ಕೋವಿಡ್‌ನಿಂದಾಗಿ ಸಾವನ್ನಪ್ಪಿದ್ದಾರೆ. ಅಮೆರಿಕದ ಇತಿಹಾಸದಲ್ಲಿ ಯಾವ ವರ್ಷದಲ್ಲೂ ಇಷ್ಟು ಸಾವುಗಳು ಸಂಭವಿಸಿರಲಿಲ್ಲ ಎಂದು ಸಿಡಿಸಿ ತಿಳಿಸಿದೆ.

1930ರ ನಂತರ, ಬಹುದೊಡ್ಡ ಆರ್ಥಿಕ ಕುಸಿತಗಳು ಸಂಭವಿಸಿದ್ದರೂ, ಹೀಗೆ ಒಂದೇ ವರ್ಷದಲ್ಲಿ ಇಷ್ಟು ಜೀವಿತಾವಧಿ ಕಡಿಮೆಯಾದ ದಾಖಲೆ ಈ ಮೊದಲು ಇರಲಿಲ್ಲ ಎನ್ನಲಾಗಿದೆ.

ಪಾಲಕರನ್ನು ಕಳೆದುಕೊಂಡ 15 ಲಕ್ಷ ಮಕ್ಕಳು

ವಾಷಿಂಗ್ಟನ್ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದ ಮೊದಲ 14 ತಿಂಗಳಲ್ಲಿ ಇಪತ್ತೊಂದು ರಾಷ್ಟ್ರಗಳ 15 ಲಕ್ಷಕ್ಕೂ ಹೆಚ್ಚು ಮಕ್ಕಳು ಪಾಲಕರನ್ನು ಕಳೆದುಕೊಂಡಿದ್ದಾರೆ. ಭಾರತದಲ್ಲಿಯೇ 1.19 ಲಕ್ಷ ಮಕ್ಕಳು ತಮ್ಮ ಪಾಲಕರನ್ನು ಕಳೆದುಕೊಂಡಿರುವುದು ದಿ ಲ್ಯಾನ್‌ಸೆಟ್‌ನಲ್ಲಿ ಪ್ರಕಟಿಸಿರುವ ಅಧ್ಯಯನ ವರದಿಯಿಂದ ತಿಳಿದು ಬಂದಿದೆ.

ಅಧ್ಯಯನದ ಪ್ರಕಾರ, ಭಾರತದಲ್ಲಿ 25,500 ಮಕ್ಕಳು ಕೋವಿಡ್–19 ಕಾರಣಗಳಿಂದಾಗಿ ತಮ್ಮ ತಾಯಿಯನ್ನು ಕಳೆದುಕೊಂಡಿದ್ದಾರೆ ಹಾಗೂ 90,751 ಮಕ್ಕಳು ತಂದೆಯನ್ನು ಕಳೆದುಕೊಂಡಿದ್ದಾರೆ. 12 ಮಕ್ಕಳು ತಂದೆ ಮತ್ತು ತಾಯಿ ಇಬ್ಬರನ್ನೂ ಕಳೆದುಕೊಂಡಿದ್ದಾರೆ. 2,898 ಮಕ್ಕಳು ತಾತ ಅಥವಾ ಅಜ್ಜಿಯನ್ನು ಕಳೆದುಕೊಂಡಿದ್ದಾರೆ.

ಜಗತ್ತಿನ 21 ರಾಷ್ಟ್ರಗಳಲ್ಲಿ ಒಟ್ಟು 15,62,000 ಮಕ್ಕಳು ಅಪ್ಪ–ಅಮ್ಮ, ಅಜ್ಜಿ–ತಾತ ಅಥವಾ ಇತರೆ ಪಾಲಕರನ್ನು ಕಳೆದುಕೊಂಡಿರುವುದಾಗಿ ರಾಷ್ಟ್ರೀಯ ಆರೋಗ್ಯ ಸಂಸ್ಥೆ (ಎನ್‌ಐಎಚ್) ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಇಂದಿನಿಂದ ಜಿ–20ರ ಪರಿಸರ ಸಚಿವರ ಶೃಂಗ

ನವದೆಹಲಿ (ಪಿಟಿಐ): ಭಾರತವು ಗುರುವಾರದಿಂದ ಆರಂಭವಾಗಲಿರುವ 'ಜಿ–20'ರ ಪರಿಸರ ಸಚಿವರ ಶೃಂಗಸಭೆಯಲ್ಲಿ ಭಾಗವಹಿಸಲಿದೆ.

ಎರಡು ದಿನಗಳ ವರ್ಚುವಲ್ ಸಭೆಯಲ್ಲಿ ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಪರಿಸರ ಇಲಾಖೆಯ ರಾಜ್ಯಖಾತೆ ಸಚಿವ ಅಶ್ವಿನಿ ಚೌಬೆ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಪಾಲ್ಗೊಳ್ಳುವರು ಎಂದು ಪರಿಸರ ಸಚಿವಾಲಯ ಟ್ವೀಟ್ ಮಾಡಿದೆ.

ಇಟಲಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಶೃಂಗಸಭೆಯಲ್ಲಿ ಪ್ರಮುಖವಾಗಿ 'ಜನರು, ಗ್ರಹ ಮತ್ತು ಸಮೃದ್ಧಿ' ಕುರಿತು ಚರ್ಚೆಗಳು ನಡೆಯಲಿವೆ.

ನವೋದಯ ವಿದ್ಯಾಲಯ: ಆ.11ಕ್ಕೆ ಪ್ರವೇಶ ಪರೀಕ್ಷೆ

ನವದೆಹಲಿ (ಪಿಟಿಐ): ಜವಾಹರ್ ನವೋದಯ ವಿದ್ಯಾಲಯಕ್ಕೆ 2021–22ನೇ ಸಾಲಿಗೆ 6ನೇ ತರಗತಿಗೆ ಪ್ರವೇಶಕ್ಕಾಗಿ ಆಗಸ್ಟ್ 11ರಂದು ಪರೀಕ್ಷೆ ನಡೆಯಲಿದೆ ಎಂದು ಕೇಂದ್ರದ ಶಿಕ್ಷಣ ಸಚಿವಾಲಯ ಮಂಗಳವಾರ ಪ್ರಕಟಿಸಿದೆ.

ಎಲ್ಲ ಕೇಂದ್ರಾಡಳಿತ ಪ್ರದೇಶಗಳು, ರಾಜ್ಯಗಳಲ್ಲಿ ಕೋವಿಡ್ ಮಾರ್ಗಸೂಚಿಗೆ ಅನುಸಾರ ಪರೀಕ್ಷೆ ನಡೆಯಲಿದೆ ಎಂದು ಸಚಿವಾಲಯವು ಟ್ವೀಟ್ ಮಾಡಿದೆ. 11,182 ಕೇಂದ್ರಗಳಲ್ಲಿ, 47,320 ವಿದ್ಯಾರ್ಥಿಗಳ ಆಯ್ಕೆಗೆ ಪರೀಕ್ಷೆ ನಡೆಯಲಿದೆ.

ಡೆಲ್ಟಾ: ಎಚ್ಚರವಹಿಸಲು ಬೈಡನ್ ಸಲಹೆ

ವಾಷಿಂಗ್ಟನ್ (ಪಿಟಿಐ): 'ಅಮೆರಿಕದಲ್ಲಿ ಲಸಿಕಾ ಅಭಿಯಾನದಿಂದಾಗಿ ಕೋವಿಡ್–19 ಸಾವಿನ ಸಂಖ್ಯೆಯಲ್ಲಿ ಭಾರಿ ಕುಸಿತ ಕಂಡುಬಂದಿದೆ. ಆದರೆ ದೇಶದ ನಾಗರಿಕರು ಕೊರೊನಾ ವೈರಸ್‌ನ ಡೆಲ್ಟಾ ರೂಪಾಂತರ ತಳಿಯಿಂದ ಜಾಗರೂಕರಾಗಿರಬೇಕು' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಎಚ್ಚರಿಸಿದ್ದಾರೆ.

ಬೈಡನ್ ನೇತೃತ್ವದ ಸರ್ಕಾರವು ಆರು ತಿಂಗಳು ಪೂರೈಸಿದೆ. ಈ ಹಿನ್ನೆಲೆಯಲ್ಲಿ ಬೈಡನ್ ಅವರು ಮಂಗಳವಾರ ಕ್ಯಾಬಿನೆಟ್ ಸಭೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, 'ಲಸಿಕಾ ಅಭಿಯಾನದಿಂದಾಗಿ ಕಳೆದ ಆರು ತಿಂಗಳುಗಳಲ್ಲಿ ಕೋವಿಡ್ ಸಾವಿನ ಸಂಖ್ಯೆಯು ಶೇಕಡ 90ರಷ್ಟು ಕಡಿಮೆಯಾಗಿದೆ. ಪ್ರಸ್ತುತ ಕೋವಿಡ್ ಸೋಂಕಿಗೆ ತುತ್ತಾದವರು ಮತ್ತು ಸಾವಿಗೀಡಾದವರಲ್ಲಿ ಹೆಚ್ಚಿನವರು ಲಸಿಕೆ ಪಡೆಯದವರು. ಹಾಗಾಗಿ ಕೋವಿಡ್ ಪ್ರಸರಣ ತಡೆಯಲು ಅತಿ ಸುರಕ್ಷತಾ ಕ್ರಮವೇ ಲಸಿಕೆ. ಆದಷ್ಟು ಬೇಗ ಎಲ್ಲರಿಗೆ ಲಸಿಕೆ ನೀಡುವುದೇ ನಮ್ಮ ಗುರಿ' ಎಂದರು.

'ಅಮೆರಿಕ ಮಾತ್ರವಲ್ಲದೇ ಬೇರೆ ರಾಷ್ಟ್ರಗಳ ನಾಗರಿಕರೂ ಲಸಿಕೆ ಪಡೆಯಲು ನಾವು ಸಹಾಯ ಮಾಡುತ್ತಿದ್ದೇವೆ. ಇದರೊಂದಿಗೆ ಉದ್ಯೋಗ ಸೃಷ್ಟಿ ಮತ್ತು ಮಧ್ಯಮ ವರ್ಗದವರ ಏಳಿಗೆಗಾಗಿ ದುಡಿಯುತ್ತಿದ್ದೇವೆ. ನಮ್ಮೊಂದಿಗೆ ಬೇರೆ ದೇಶದ ಆರ್ಥಿಕತೆಯೂ ಬೆಳೆಯಬೇಕು. ಅಮೆರಿಕದ ಆರ್ಥಿಕತೆಯು ಐತಿಹಾಸಿಕ ಪ್ರಗತಿ ಸಾಧಿಸಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಮುಂಬರುವ ವಾರಗಳಲ್ಲಿ ಡೆಲ್ಟಾ ರೂಪಾಂತರ ತಳಿಯು ತೀವ್ರಗೊಳ್ಳಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಅಮೆರಿಕದ ಹಲವು ಭಾಗಗಳಲ್ಲಿ ವರದಿಯಾದ ಹೊಸ ಪ್ರಕರಣಗಳ ಪೈಕಿ ಶೇಕಡ 80ರಷ್ಟು ಡೆಲ್ಟಾ ರೂಪಾಂತರ ತಳಿ ಪ್ರಕರಣಗಳಿವೆ.

'ಡೆಲ್ಟಾ ರೂಪಾಂತರ ತಳಿಗೆ ವಯಸ್ಕರು ಮತ್ತು ಮಕ್ಕಳು ತುತ್ತಾಗುತ್ತಿದ್ದಾರೆ. ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ' ಎಂದು ಸ್ಥಳೀಯ ಆರೋಗ್ಯ ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಗುಣಮುಖ ದರ ಶೇ 98


ಏರಿಕೆಯತ್ತ ಕೋವಿಡ್ ಹೊಸ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ದೃಢಪ್ರಮಾಣ ಶೇ 1ರ ಆಸುಪಾಸಿನಲ್ಲಿಯೇ ಇದ್ದರೂ, ಸಾವಿನ ಸಂಖ್ಯೆ ಏರಿಕೆಯಾಗಿದೆ. ಹೊಸದಾಗಿ 1,639 ಮಂದಿಗೆ ಸೋಂಕು ತಗುಲಿರುವುದು ಬುಧವಾರ ದೃಢಪಟ್ಟಿದ್ದು, 36 ಸೋಂಕಿತರು ಸಾವಿಗೀಡಾಗಿದ್ದಾರೆ.

ಮಂಗಳವಾರಕ್ಕೆ ಹೋಲಿಸಿದರೆ ಸೋಂಕು ಪರೀಕ್ಷೆಗಳು 39 ಸಾವಿರ (1.52 ಲಕ್ಷಕ್ಕೆ) ಹೆಚ್ಚಾಗಿದ್ದರೆ, ಹೊಸ ಪ್ರಕರಣಗಳು 175, ಸೋಂಕಿತರ ಸಾವಿನ ಸಂಖ್ಯೆಯಲ್ಲಿ 6 ಜಾಸ್ತಿಯಾಗಿದೆ. ಆದರೆ, ಸೋಂಕು ದೃಢಪ್ರಮಾಣ ಶೇ.1.29 ರಿಂದ ಶೇ.1.07 ಕ್ಕೆ ತಗ್ಗುವ ಮೂಲಕ ಶೇ.2.2 ರಷ್ಟಾಗಿದೆ. 2,214 ಮಂದಿ ಗುಣಮುಖರಾಗಿದ್ದಾರೆ.

ಹೊಸ ಪ್ರಕರಣ ಹೆಚ್ಚಳ: ಎರಡು ದಿನಗಳಿಂದ ಸೋಂಕು ಹೊಸ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಸೋಮವಾರ 1,229 ಪ್ರಕರಣಗಳು ವರದಿಯಾಗಿದ್ದರೆ, ಮಂಗಳವಾರ 1,464 ಹೊಸ ಪ್ರಕರಣಗಳಿದ್ದವು. ಬುಧವಾರ ಈ ಸಂಖ್ಯೆ 1,639ಕ್ಕೆ ಏರಿಕೆಯಾಗಿವೆ.



ಇನ್ನು ಮೊದಲ ಮತ್ತು ಎರಡನೇ ಅಲೆ ಸೇರಿ ಒಟ್ಟು ಸೋಂಕಿತರ ಸಂಖ್ಯೆ 28.88 ಲಕ್ಷ ದಾಟಿದ್ದು, ಒಟ್ಟು ಗುಣಮುಖರ ಸಂಖ್ಯೆ 28.26 ಲಕ್ಷ ಮೀರಿದೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 25,645 ಕ್ಕೆ ಇಳಿಕೆಯಾಗಿದೆ. 36,262 ಸೋಂಕಿತರು ಮೃತಪಟ್ಟಿದ್ದಾರೆ. ಗುಣಮುಖ ದರ ಶೇ 98 ರಷ್ಟಿದ್ದು, ಮರಣ ದರ ಶೇ 1.1 ರಷ್ಟಿದೆ.

ರಾಜಧಾನಿಯಲ್ಲಿ 419 ಹೊಸ ಪ್ರಕರಣ: ಬೆಂಗಳೂರು ನಗರದಲ್ಲಿ 419 ಹೊಸ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡ 190, ಮೈಸೂರು 160, ಹಾಸನ 141 ಹಾಗೂ ಉಡುಪಿ 104 ಜನರಲ್ಲಿ ಕೋವಿಡ್ ದೃಢಪಟ್ಟಿದೆ. ಉಳಿದಂತೆ 16 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಎರಡಂಕಿ ಹಾಗೂ 7 ಜಿಲ್ಲೆಗಳಲ್ಲಿ ಒಂದಂಕಿಗೆ ಇಳಿಕೆಯಾಗಿದೆ. ಬೀದರ್ ಮತ್ತು ಯಾದಗಿರಿಯಲ್ಲಿ ಶೂನ್ಯವಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

28,88,341 ▲ ಒಟ್ಟು ಸೋಂಕಿತರು (28,86,702 ನಿನ್ನೆಯ ವಿವರ)

25,645 ▼ ಸಕ್ರಿಯ ಪ್ರಕರಣಗಳು

28,26,411 ▲ ಗುಣಮುಖರಾದವರು

36,262 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	1,639	▲
ಗುಣಮುಖ	2,214	▼
ಸಾವು	36	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಟ್ವೀಟ್

ಚಾಹರ್ ಬೇಡವೆಂದಿದ್ದ ಚಾಪೆಲ್



ವೆಂಕಟೇಶ್ ಪ್ರಸಾದ್



ದೀಪಕ್ ಚಾಹರ್ —ಪಿಟಿಐ ಚಿತ್ರ

ನವದೆಹಲಿ: 'ಕೆಲವು ವರ್ಷಗಳ ಹಿಂದೆ ಆರ್‌ಸಿಎದಲ್ಲಿ ಆಯ್ಕೆ ಬಯಸಿ ಬಂದಿದ್ದ ದೀಪಕ್ ಚಾಹರ್ ಅವರನ್ನು ಕಡಿಮೆ ಎತ್ತರವಿದ್ದ ಕಾರಣಕ್ಕೆ ಕೋಚ್ ಗ್ರೇಗ್ ಚಾಪೆಲ್ ವ್ಯಂಗ್ಯ ಮಾಡಿ ಕಳಿಸಿದ್ದರು. ಬೇರೆ ಉದ್ಯೋಗ ನೋಡಿಕೊ ಹೋಗು ಎಂದಿದ್ದರು. ಆದರೆ ಈಗ ನೋಡಿ ಏಕಾಂಗಿಯಾಗಿ ಭಾರತಕ್ಕೆ ಪಂದ್ಯ ಗೆದ್ದುಕೊಟ್ಟಿದ್ದಾರೆ. ಇದರಿಂದ ಕಲಿಯುವ ನೀತಿ ಪಾಠವೆಂದರೆ; ನಿಮ್ಮ ಮೇಲೆ ನೀವು ನಂಬಿಕೆ ಇಡಿ. ವಿದೇಶಿ ತರಬೇತುದಾರರನ್ನು ಗಂಭೀರವಾಗಿ ಪರಿಗಣಿಸಬೇಡಿ'–

ಬುಧವಾರ ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಅವರು ಮಾಡಿರುವ ಈ ಟ್ವೀಟ್ ಸಂದೇಶವು ಬಹಳಷ್ಟು ಚರ್ಚೆಗೆ ಗ್ರಾಸವಾಗಿದೆ.

ಮಂಗಳವಾರ ಶ್ರೀಲಂಕಾ ಎದುರಿನ ಎರಡನೇ ಏಕದಿನ ಪಂದ್ಯದಲ್ಲಿ ದೀಪಕ್ ಚಾಹರ್ 69 ರನ್‌ಗಳನ್ನು ಗಳಿಸಿ ಭಾರತದ ಗೆಲುವಿಗೆ ಕಾರಣರಾದರು. ಸೋಲುವ ಹಂತದಲ್ಲಿದ್ದ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಭಾರತವು ಮೂರು ವಿಕೆಟ್‌ಗಳಿಂದ ಜಯಿಸಿತು. ಇದರಿಂದಾಗಿ ತಂಡವು ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಮಾಜಿ ಬೌಲರ್ ವೆಂಕಟೇಶ್ ಪ್ರಸಾದ್, ವಿದೇಶಿ ಕೋಚ್‌ಗಳ ಕಾರ್ಯವೈಖರಿಯನ್ನು ಟೀಕಿಸುವುದರ ಜೊತೆಗೆ ಶ್ರೀಲಂಕಾದಲ್ಲಿ ಆಡುತ್ತಿರುವ ಭಾರತ ತಂಡಕ್ಕೆ ಮುಖ್ಯ ಕೋಚ್ ಆಗಿರುವ ಕರ್ನಾಟಕದ ರಾಹುಲ್ ದ್ರಾವಿಡ್ ಅವರ ಸಾಧನೆಯನ್ನೂ ಬಿಂಬಿಸಿದ್ದಾರೆ.

ವೆಂಕಟೇಶ್ ಪ್ರಸಾದ್ ಟ್ವೀಟ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದಕ್ಕೆ ಪ್ರತಿಯಾಗಿ ಇನ್ನೊಂದು ಟ್ವೀಟ್ ಮಾಡಿರುವ ಪ್ರಸಾದ್, 'ಕೆಲವು ಉತ್ತಮ ಉದಾಹರಣೆಗಳು ಇವೆ. ಆದರೆ ಭಾರತದಲ್ಲಿ ಅಮೋಘವಾದ ಪ್ರತಿಭೆಗಳಿವೆ. ಐಪಿಎಲ್‌ನ ಫ್ರ್ಯಾಂಚೈಸಿಗಳು ದೇಶಿ ಕೋಚ್ ಮತ್ತು ಮೆಂಟರ್‌ಗಳನ್ನು ನೇಮಕ ಮಾಡಲು ಇದು ಸಕಾಲ' ಎಂದಿದ್ದಾರೆ.

2004–05ರ ಸಂದರ್ಭದಲ್ಲಿ ಚಾಪೆಲ್ ಭಾರತ ತಂಡದ ಕೋಚ್ ಆಗಿದ್ದರು. ಆಗ ತಂಡದ ನಾಯಕ ಸೌರವ್ ಗಂಗೂಲಿ ಮತ್ತು ಚಾಪೆಲ್ ಅವರ ನಡುವಣ ಭಿನ್ನಾಭಿಪ್ರಾಯ ದೊಡ್ಡ ಸುದ್ದಿಯಾಗಿತ್ತು.

ಎಲುಬು ಮುರಿದರೂ ಎದೆಗುಂದದ ಬ್ರೌನ್

ತಲೆ ಬುರುಡೆಗೆ ಪೆಟ್ಟು, ಮಣಿಗಂಟು– ಕೈ ಮುರಿದರೂ ಛಲ ಬಿಡದ ಸ್ಕೇಟ್‌ಬೋರ್ಡ್ ಕ್ರೀಡಾಪಟು



ಅಭ್ಯಾಸದಲ್ಲಿ ತೊಡಗಿರುವ ಸ್ಕೈ ಬ್ರೌನ್ —ರಾಯಿಟರ್ಸ್ ಚಿತ್ರ

ನವದೆಹಲಿ (ಪಿಟಿಐ): ತಲೆಬುರುಡೆಯ ವಿವಿಧ ಕಡೆ ಗಾಯಗಳಾಗಿದ್ದು, ಮಣಿಗಂಟು ಮತ್ತು ಕೈಯ ಎಲುಬು ಮುರಿದರೂ 13 ವರ್ಷದ ಸ್ಕೇಟ್‌ಬೋರ್ಡ್ ಪಟು ಸ್ಕೈ ಬ್ರೌನ್ ಅವರು ತಮ್ಮ ಕನಸನ್ನು ಕೈಚೆಲ್ಲಲಿಲ್ಲ. ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಅತಿ ಕಿರಿಯ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಅವರು ಪದಕ ಗೆಲ್ಲುವ ಹುಮ್ಮಸ್ಸಿನಲ್ಲಿದ್ದಾರೆ.

'ಬಾಲ ಪ್ರತಿಭೆ' ಬ್ರೌನ್ ಈ ವರ್ಷದ ಮೇ ತಿಂಗಳಲ್ಲಿ ತರಬೇತಿ ಸಂದರ್ಭದಲ್ಲಿ ಸಂಭವಿಸಿದ ಅಪಘಾತದಲ್ಲಿ ಗಂಭೀರ ಸ್ವರೂಪದ ಗಾಯಗಳೊಂದಿಗೆ ಆಸ್ಪತ್ರೆ ಸೇರಿದ್ದರು. ಇಳಿಜಾರಾದ ಎರಡು ಹಲಿಗೆಗಳ ನಡುವಿನಿಂದ ಜಿಗಿಯಲು ಪ್ರಯತ್ನಿಸುವಾಗ ನಿಯಂತ್ರಣ ಕಳೆದುಕೊಂಡ ಅವರು 15 ಅಡಿ ಎತ್ತರದಿಂದ ನೆಲಕ್ಕೆ ಬಿದ್ದಿದ್ದರು.

'ಅಂದಿನ ಆ ದುರ್ಘಟನೆಯನ್ನು ನೆನಪಿಸಿಕೊಳ್ಳುವುದಕ್ಕೆ ಬಯಸುವುದಿಲ್ಲ. ಆ ದುರ್ದಿನವನ್ನು ಮರೆತು ಸ್ಕೇಟಿಂಗ್ ಮಾಡಲು ಪ್ರಯತ್ನಿಸುತ್ತೇನೆ. ಈಗ ಹಳೆಯ ತಂತ್ರಗಳಿಗೆ ಮರಳಿ ಸಾಣೆ ಹಿಡಿಯುವ ಹುಮ್ಮಸ್ಸಿನಲ್ಲಿದ್ದೇನೆ' ಎಂದು ಅವರು ಹೇಳಿದರು. ಅವರ ಕುರಿತು ಸಿದ್ಧಪಡಿಸಿರುವ 'ರೀಚಿಂಗ್ ದ ಸ್ಕೈ' ಸಾಕ್ಷ್ಯಚಿತ್ರ ಪ್ರಸಾರಗೊಂಡಿದೆ.

'ಫ್ರಂಟ್ ಅಲೀ ವೂಪ್ ಎಂಬ ತಂತ್ರ ಬಳಸಿ ಜಿಗಿಯುವಾಗ ಕೆಳಕ್ಕೆ ಬಿದ್ದಿದ್ದೆ. ಗಾಳಿಯಲ್ಲಿ ದೇಹವನ್ನು ಬಳುಕಿಸುವಾಗ ಹಿಂದೆ ಏನಿದೆ ಎಂದು ಕಾಣಲು ಸಾಧ್ಯವಾಗಲಿಲ್ಲ. ಹಲಗೆ ಮೇಲೆ ಕಾಲೂರಲು ಸಾಧ್ಯವಾಗುವ ಪರಿಸ್ಥಿತಿಯಲ್ಲಿಲ್ಲ ಎಂದು ಕೆಳಗೆ ಬೀಳುತ್ತಿದ್ದಾಗಲೇ ನನಗೆ ಮನವರಿಕೆಯಾದದ್ದು' ಎಂದು ವಿವರಿಸಿದರು.

'ಗಾಯಗೊಂಡ ನಂತರ ನನ್ನನ್ನು ಹೆಲಿಕ್ಯಾಪ್ಟರ್‌ನಲ್ಲಿ ಆಸ್ಪತ್ರೆಗೆ ಸಾಗಿಸಲಾಗಿತ್ತು ಎಂದೂ ಅನಂತರ ಏನಾಯಿತು ಎಂದೂ ತಂದೆ ತಾಯಿ ವಿವರಿಸಿದ ಮೇಲೆಯೇ ಅವರಿಗೆ ತಿಳಿದದ್ದು. ನೆತ್ತರ ಧಾರೆ ಹರಿದಿತ್ತು ಎಂದು ಅವರು ತಿಳಿಸಿದ್ದರು. ಅದೇನೇ ಇರಲಿ, ಎಲ್ಲದರ ಕೊನೆಯಲ್ಲಿ ಅಂಗಣಕ್ಕೆ ವಾಪಸಾಗಲು ಸಾಧ್ಯವಾದದ್ದು ಸಮಾಧಾನ ತಂದಿದೆ' ಎಂದರು.

ಸ್ಕೇಟ್ ಬೋರ್ಡಿಂಗ್ ಕ್ರೀಡೆಯನ್ನು ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಗೊಳಿಸಲಾಗಿದೆ. ಈ ವಿಷಯ ತಿಳಿದಾಗಲೇ ಪಾಲ್ಗೊಳ್ಳುವ ಆಸೆ ಬ್ರೌನ್ ಅವರಿಗಿತ್ತು. ಅಪಘಾತಕ್ಕೆ ಒಳಗಾದ ನಂತರ ಅವರ ಕನಸಿಗೆ ಹಿನ್ನಡೆಯಾಗಿತ್ತು. ಆದರೆ ಚೇತರಿಸಿಕೊಂಡ ಅವರು ಈಗ ಸ್ಪರ್ಧೆಗೆ ಪೂರ್ಣವಾಗಿ ಸಜ್ಜಾಗಿದ್ದಾರೆ. ಆದರೆ ಅವರ ಪಾಲಕರು ಈಗಲೂ ಆತಂಕದಲ್ಲೇ ಇದ್ದಾರೆ.

2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಬ್ರೌನ್ ಒಲಿಂಪಿಕ್ಸ್‌ನಲ್ಲಿ ಪಾರ್ಕ್ ಸ್ಕೇಟ್‌ಬೋರ್ಡಿಂಗ್‌ನಲ್ಲಿ ಸ್ಪರ್ಧಿಸಲಿದ್ದಾರೆ. 13 ವರ್ಷ 23 ದಿನಗಳ ಅವರು 1928ರ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಈಜುಪಟು ಮಾರ್ಗರಿ ಹಿಲ್ಟನ್ ದಾಖಲೆಯನ್ನು ಮುರಿಯಲಿದ್ದಾರೆ. ಹಿಲ್ಟನ್ 13 ವರ್ಷ 44 ದಿನಗಳಲ್ಲಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದರು.

ಇನ್‌ಸ್ಟಾಗ್ರಾಮ್‌ನಲ್ಲಿ 8,40,000 ಹಿಂಬಾಲಕರನ್ನು ಹೊಂದಿರುವ ಬ್ರೌನ್ ತಮ್ಮ ಸಾಧನೆ ಬಾಲಕಿಯರಿಗೆ ಸ್ಫೂರ್ತಿಯಾದರೆ ಸಾಕು ಎನ್ನುತ್ತಾರೆ.

ಫುಟ್‌ಬಾಲ್: ಅಮೆರಿಕಕ್ಕೆ ನಿರಾಸೆ




ಸ್ವೀಡನ್‌ನ ಮೆಡೆಲಿನ್ ಜನೋಗಿ (ಎಡ) ಮತ್ತು ಅಮೆರಿಕದ ಟೀರ್ನಾ ಡೇವಿಡ್ಸನ್ ಅವರು ಚೆಂಡಿಗಾಗಿ ಪೈಪೋಟಿ ನಡೆಸಿದ ಸಂದರ್ಭ –ರಾಯಿಟರ್ಸ್ ಚಿತ್ರ

ಟೋಕಿಯೊ (ಎಎಫ್‌ಪಿ): ಚಿನ್ನದ ಪದಕ ಗೆಲ್ಲುವ ನೆಚ್ಚಿನ ತಂಡ ಎಂದೇ ಬಿಂಬಿತವಾಗಿದ್ದ ಅಮೆರಿಕ ಮಹಿಳಾ ಫುಟ್‌ಬಾಲ್ ತಂಡ ಒಲಿಂಪಿಕ್ಸ್‌ನ ಮೊದಲ ಪಂದ್ಯದಲ್ಲೇ ಆಘಾತ ಕಂಡಿದೆ. ಬುಧವಾರ ನಡೆದ ಹಣಾಹಣಿಯಲ್ಲಿ ನಾಲ್ಕು ಬಾರಿಯ ಚಾಂಪಿಯನ್ನರನ್ನು ಸ್ವೀಡನ್ 3–0ಯಿಂದ ಮಣಿಸಿತು.

ಸ್ಟಿನಾ ಬ್ಲ್ಯಾಕ್‌ಸ್ಟೆನಿಯಸ್ ಎರಡು ಗೋಲು ಗಳಿಸಿದರೆ ಬದಲಿ ಆಟಗಾರ್ತಿ ಲೀನಾ ಹುರ್ಟಿಗ್ ಒಂದು ಗೋಲು ಗಳಿಸಿ ಸ್ವೀಡನ್ ಜಯಕ್ಕೆ ಕಾರಣರಾದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಸ್ವೀಡನ್ ಬೆಳ್ಳಿ ಪದಕ ಗಳಿಸಿತ್ತು. ಈ ಪಂದ್ಯದ ಸೋಲಿನೊಂದಿಗೆ ಅಮೆರಿಕದ 44 ಪಂದ್ಯಗಳ ಅಜೇಯ ಓಟಕ್ಕೆ ತೆರೆ ಬಿತ್ತು. ವಿವಿಯಾನಿ ಮೀಡಿಯಾಮ ಗಳಿಸಿದ 4 ಗೋಲುಗಳ ಬಲದಿಂದ ಜಾಂಬಿಯಾವನ್ನು 10–3ರಲ್ಲಿ ನೆದರ್ಲೆಂಡ್ಸ್ ಮಣಿಸಿತು. ಒಲಿಂಪಿಕ್ಸ್‌ನ ಮಹಿಳಾ ಫುಟ್‌ಬಾಲ್‌ನಲ್ಲಿ ಅತಿ ಹೆಚ್ಚು ಗೋಲು ಕಂಡ ಪಂದ್ಯ ಇದು. ಲೀಕ್ ಮರ್ಟೆನ್ಸ್ ಎರಡು, ಶಾನಿಸ್ ವ್ಯಾನ್ ಸ್ಯಾಂಡೆನ್, ಜಿಲ್ ರೂರ್ಡ್, ಲಿನೆತ್ ಬೀರೆನ್‌ಸ್ಟೈನ್ ಮತ್ತು ವಿಕ್ಟೋರಿಯಾ ಪೆಲ್ರೊಲ ತಲಾ ಒಂದೊಂದು ಗೋಲು ಗಳಿಸಿದರು.

ಸಂದೇಶ್ ಜಿಂಗಾನ್ ವರ್ಷದ ಫುಟ್‌ಬಾಲ್ ಆಟಗಾರ



ಸಂದೇಶ್ ಜಿಂಗಾನ್

ನವದೆಹಲಿ (ಪಿಟಿಐ): ಭಾರತದ ಅನುಭವಿ ಫುಟ್‌ಬಾಲ್ ಆಟಗಾರ ಸಂದೇಶ್ ಜಿಂಗಾನ್ ಅವರು ಬುಧವಾರ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ವರ್ಷದ ಆಟಗಾರ ಗೌರವಕ್ಕೆ ಭಾಜನರಾಗಿದ್ದಾರೆ. ಸುರೇಶ್ ಸಿಂಗ್ ವಾಂಗ್‌ಜಮ್ ಅವರನ್ನು ವರ್ಷದ ಉದಯೋನ್ಮುಖ ಆಟಗಾರ ಎಂದು ಹೆಸರಿಸಲಾಗಿದೆ.

ಡಿಫೆನ್ಸ್ ವಿಭಾಗದಲ್ಲಿ ಆಡುವ ಜಿಂಗಾನ್2014ರಲ್ಲಿ ಉದಯೋನ್ಮುಖ ಆಟಗಾರ ಎನಿಸಿಕೊಂಡಿದ್ದರು.

ಇಂಡಿಯನ್ ಸೂಪರ್ ಲೀಗ್ (ಐ ಎ ಸ್ ಎ ಲ್) ಮತ್ತು ಐ-ಲೀಗ್ ಕ್ಲಬ್‌ಗಳ ತರಬೇತುದಾರರು, ವರ್ಷದ ಆಟಗಾರರ ಆಯ್ಕೆಗಾಗಿ ಮತದಾನ ಮಾಡುತ್ತಾರೆ. 2015ರಲ್ಲಿ ರಾಷ್ಟ್ರೀಯ ತಂಡಕ್ಕೆ ಪದಾರ್ಪಣೆ ಮಾಡಿರುವ ಜಿಂಗಾನ್, ಇದುವರೆಗೆ 40 ಪಂದ್ಯಗಳಲ್ಲಿ ಆಡಿದ್ದಾರೆ. ನಾಲ್ಕು ಗೋಲುಗಳು ಅವರ ಖಾತೆಯಲ್ಲಿವೆ. ಐದು ಸಂದರ್ಭಗಳಲ್ಲಿ ತಂಡದ ನಾಯಕತ್ವವನ್ನೂ ವಹಿಸಿದ್ದಾರೆ.

ಕುಸ್ತಿ: ಜಸ್‌ಕರಣ್‌ಗೆ ಬೆಳ್ಳಿ ಪದಕ

ಬುಡಾಪೆಸ್ಟ್, ಹಂಗೇರಿ (ಪಿಟಿಐ): ಭಾರತದ ಜಸ್‌ಕರಣ್ ಸಿಂಗ್ ಇಲ್ಲಿ ನಡೆಯುತ್ತಿರುವ ಕೆಡೆಟ್ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗಳಿಸಿದರು. ಚಿರಾಗ್ ಮತ್ತು ಜೈದೀಪ್ ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಂಡರು.

ಬುಧವಾರ ನಡೆದ 60 ಕೆಜಿ ವಿಭಾಗದ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಜಸ್‌ಕರಣ್ ಉಜ್ಬೆಕಿಸ್ತಾನದ ಕಮ್ರೊನ್ಬೆಕ್ ಕಡಮೊವ್ ವಿರುದ್ಧ 2–6ರಲ್ಲಿ ಸೋತರು. ಮೊದಲ ಅವಧಿಯಲ್ಲಿ 0–5ರ ಹಿನ್ನಡೆಯಲ್ಲಿದ್ದ ಜಸ್‌ಕರಣ್ ನಂತರ ಚೇತರಿಸಿಕೊಂಡು ತಿರುಗೇಟು ನೀಡಲು ಪ್ರಯತ್ನಿಸಿದರು. ಆದರೆ ಕಡಮೊವ್ ಬಳಸಿದ ತಂತ್ರಗಳಿಗೆ ಯಶಸ್ಸು ಸಿಕ್ಕಿತು.

ಭಾರಿ ಹೋರಾಟ ಕಂಡ 51 ಕೆಜಿ ವಿಭಾಗದ ಪಂದ್ಯದಲ್ಲಿ ಅಜರ್‌ಬೈಜಾನ್‌ನ ಎಲ್ಮನ್ ಮಮ್ಮಡೊವ್ ಎದುರು 9–6ರಲ್ಲಿ ಗೆಲುವು ಸಾಧಿಸಿ ಚಿರಾಗ್ ಕಂಚಿನ ಪದಕ ಗಳಿಸಿದರು. 0–3ಯ ಹಿನ್ನಡೆಯಲ್ಲಿದ್ದ ಚಿರಾಗ್ ನಂತರ ಉತ್ತಮ ಪಟ್ಟುಗಳನ್ನು ಪ್ರಯೋಗಿಸಿ ಮೇಲುಗೈ ಸಾಧಿಸಿದರು. 71 ಕೆಜಿ ವಿಭಾಗದ ಪಂದ್ಯದಲ್ಲಿ ಜೈದೀಪ್ ರೊಮೇನಿಯಾದ ಗಿಗಿ ಮರಿಯನ್ ವಿರುದ್ಧ 7–3ರಲ್ಲಿ ಗೆಲುವು ಸಾಧಿಸಿದರು.

ಕಂಚಿನ ಪದಕಕ್ಕಾಗಿ ನಡೆದ ಪ್ಲೇ ಆಫ್‌ನಲ್ಲಿ ಶೌರ್ಯ 0–4ರಲ್ಲಿ ಕಿರ್ಗಿಸ್ತಾನದ ಇಮ್ರಾನ್‌ಬೆಕ್ ರಖುಮನೊವ್‌ಗೆ ಮಣಿದರು.

ಅಮನ್ ಗುಲಿಯಾ (48 ಕೆಜಿ) ಮತ್ತು ಸಾಗರ್ ಜಗ್ಲನ್ (80 ಕೆಜಿ) ಅವರು ಮಂಗಳವಾರ ರಾತ್ರಿ ನಡೆದ ಫೈನಲ್ ಬೌಟ್‌ಗಳಲ್ಲಿ ಗೆದ್ದು ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದರು.

ಗ್ಲೆನ್‌ಮಾರ್ಕ್ ಲೈಫ್ ಸೈನ್ಸಸ್ ಐಪಿಒ ಇದೇ 27ರಿಂದ

ನವದೆಹಲಿ (ಪಿಟಿಐ): ಗ್ಲೆನ್‌ಮಾರ್ಕ್ ಲೈಫ್ ಸೈನ್ಸಸ್ ಕಂಪನಿಯು ಇದೇ 27ರಂದು ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸಲಿದ್ದು (ಐಪಿಒ), ಪ್ರತಿ ಷೇರಿಗೆ ₹ 695–720ರವರೆಗೆ ಬೆಲೆ ನಿಗದಿಪಡಿಸಿದೆ.

ಜುಲೈ 27ರಿಂದ 29ರವರೆಗೆ ಮೂರು ದಿನಗಳವರೆಗೆ ಷೇರು ಖರೀದಿಗೆ ಅವಕಾಶ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

₹ 1,060 ಕೋಟಿ ಮೊತ್ತದ ಹೊಸ ಷೇರುಗಳು ಹಾಗೂ ಗ್ಲೆನ್‌ಮಾರ್ಕ್ ಫಾರ್ಮಾದ 63 ಲಕ್ಷ ಷೇರುಗಳು ಮಾರಾಟಕ್ಕೆ ಲಭ್ಯವಿರಲಿವೆ. ಒಟ್ಟಾರೆ ₹ 1,513 ಕೋಟಿ ಬಂಡವಾಳ ಸಂಗ್ರಹಿಸುವ ನಿರೀಕ್ಷೆಯನ್ನು ಕಂಪನಿ ಹೊಂದಿದೆ.

ಐಪಿಒ ಮೂಲಕ ಸಂಗ್ರಹ ಆಗಲಿರುವ ಬಂಡವಾಳವನ್ನು ದುಡಿಯುವ ಬಂಡವಾಳದ ಅಗತ್ಯ ಮತ್ತು ಇನ್ನಿತರೆ ಉದ್ದೇಶಗಳಿಗೆ ಬಳಸಿಕೊಳ್ಳಲಾಗುವುದು ಎಂದು ಕಂಪನಿ ತಿಳಿಸಿದೆ.

ಮಾರಾಟ ಮಾಡಲಿರುವ ಒಟ್ಟಾರೆ ಷೇರುಗಳಲ್ಲಿ ಅರ್ಧದಷ್ಟನ್ನು ಸಾಂಸ್ಥಿಕ ಹೂಡಿಕೆದಾರರರಿಗೆ ಮೀಸಲಿಡಲಾಗಿದೆ. ಶೇ 35ರಷ್ಟನ್ನು ರಿಟೇಲ್ ಹೂಡಿಕೆದಾರರಿಗೆ ಇನ್ನುಳಿದ ಶೇ 15ರಷ್ಟು ಸಾಂಸ್ಥಿಕೇತರ ಹೂಡಿಕೆದಾರರು ಖರೀದಿಸಬಹುದಾಗಿದೆ.

ಗೋಲ್ಡ್‌ಮನ್ ಸ್ಯಾಚ್ಸ್ (ಇಂಡಿಯಾ) ಸೆಕ್ಯುರಿಟೀಸ್ ಪ್ರೈ. ಲಿ., ಎಸ್‌ಬಿಐ ಕ್ಯಾಪಿಟಲ್ ಮಾರ್ಕೆಟ್ಸ್, ಕೋಟಕ್ ಮಹೀಂದ್ರ ಕ್ಯಾಪಿಟಲ್ ಕಂಪನಿ, ಬಿಒಎಫ್‌ಎ ಸೆಕ್ಯುರಿಟೀಸ್ ಇಂಡಿಯಾ ಲಿ., ಡಿಎಎಂ ಕ್ಯಾಪಿಟಲ್ ಅಡ್ವೈಸರ್ಸ್ ಲಿಮಿಟೆಡ್ ಮತ್ತು ಬಿಒಬಿ ಕ್ಯಾಪಿಟಲ್ ಮಾರ್ಕೆಟ್ಸ್ ಕಂಪನಿಗಳು ಐಪಿಒ ಪ್ರಕ್ರಿಯೆಯ ನಿರ್ವಹಣೆ ಮಾಡಲಿವೆ.

ಮಾರುಕಟ್ಟೆಯಲ್ಲಿವೆ 24 ಬಗೆಯ ಚಾಕೊಲೆಟ್

'ಜಾಕ್ ಫ್ರುಟ್ ಎಕ್ಲೇರ್ಸ್' ಮಾರುಕಟ್ಟೆಗೆ

ಪ್ರಜಾವಾಣಿ ವಾರ್ತೆ



ಕ್ಯಾಂಪ್ಕೊ ಸಂಸ್ಥೆ ಹಲಸಿನ ಹಣ್ಣಿನಿಂದ ತಯಾರಿಸಿದ 'ಜಾಕ್ ಫ್ರುಟ್ ಎಕ್ಲೇರ್ಸ್' ಚಾಕೊಲೆಟ್‌ನ್ನು ಬುಧವಾರ ಶಿರಸಿಯ ಪ್ರಾದೇಶಿಕ ಕಚೇರಿಯಲ್ಲಿ ಬಿಡುಗಡೆಗೊಳಿಸಲಾಯಿತು.

ಶಿರಸಿ: ಹಲಸಿನ ಹಣ್ಣಿನಿಂದ ತಯಾರಿಸಿದ 'ಎಕ್ಲೇರ್ಸ್' ಚಾಕೊಲೆಟ್‌ನ್ನು ಕ್ಯಾಂಪ್ಕೊ ಸಂಸ್ಥೆ ಬುಧವಾರ ಮಾರುಕಟ್ಟೆಗೆ ಪರಿಚಯಿಸಿದೆ. ಇಲ್ಲಿನ ಕ್ಯಾಂಪ್ಕೊ ಪ್ರಾದೇಶಿಕ ಕಚೇರಿಯಲ್ಲಿ ಸಂಸ್ಥೆಯ ನಿರ್ದೇಶಕ ಶಂಭುಲಿಂಗ ಹೆಗಡೆ 'ಜಾಕ್ ಫ್ರುಟ್ ಎಕ್ಲೇರ್ಸ್' ಬಿಡುಗಡೆಗೊಳಿಸಿದರು.

'ಸಂಸ್ಥೆಯು ಹಿಂದೆ ಅಡಿಕೆ, ರಬ್ಬರ್, ಕೋಕೊ, ಕಾಳುಮೆಣಸು ಬೆಳೆಗಳ ಮೌಲ್ಯವರ್ಧನೆಗೆ ಆದ್ಯತೆ ನೀಡಲಾಗಿತ್ತು. ಈಗ ಹಣ್ಣುಗಳಿಗೂ ಆದ್ಯತೆ ನೀಡಿ ಉತ್ಪನ್ನ ಸಿದ್ಧಗೊಳ್ಳುತ್ತಿದೆ. ಮುಂಬರುವ ದಿನದಲ್ಲಿ ಬೆಲ್ಲ, ಆಯುರ್ವೇದಿಕ್ ಗುಣದ ವಸ್ತುಗಳಿಂದ ಚಾಕೊಲೆಟ್ ತಯಾರಿಸುವ ಚಿಂತನೆ ಸಂಸ್ಥೆ ಹೊಂದಿದೆ' ಎಂದರು.

'ಈಗಾಗಲೆ ಸಂಸ್ಥೆಯು 24 ಬಗೆಯ ಚಾಕೊಲೆಟ್‌ನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಈಗ ಹಲಸಿನ ಹಣ್ಣು ಬಳಸಿ ತಯಾರಿಸಿದ್ದೇವೆ. ಪ್ರತಿ ಚಾಕೊಲೆಟ್ ದರ ₹2 ಆಗಿದೆ' ಎಂದು ಸಂಸ್ಥೆಯ ಮಾರುಕಟ್ಟೆ ವ್ಯವಸ್ಥಾಪಕ ಶಿವಮಾದ ನಾಯಕ ಹೇಳಿದರು. ಸಂಸ್ಥೆಯ ವಿಭಾಗೀಯ ವ್ಯವಸ್ಥಾಪಕ ಭರತ ಭಟ್, ಶಿರಸಿ ಭಾಗದ ವಿತರಕ ಗಜಾನನ ಹೆಗಡೆ ಇದ್ದರು.

ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ವಿಚಾರಣೆಗೆ ಮುನ್ನವೇ ಮೃತಪಟ್ಟ 108ರ ವೃದ್ಧ

ಮುಖ್ಯಾಂಶಗಳು

- ಭೂ ವಿವಾದಕ್ಕೆ ಸಂಬಂಧಿಸಿದ ಮೊಕದ್ದಮೆ
- 'ಕಾನೂನುಬದ್ಧ ಉತ್ತರಾಧಿಕಾರಿಗಳಿಂದ ಮೊಕದ್ದಮೆ ಮುಂದುವರಿಕೆ'

ನವದೆಹಲಿ (ಪಿಟಿಐ): ಜಮೀನು ವಿವಾದವನ್ನು ಪರಿಹರಿಸಿಕೊಳ್ಳಬೇಕು ಎಂಬುದು ಅವರ ಮಹದಾಸೆಯಾಗಿತ್ತು. ಅದಕ್ಕಾಗಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲು ಕೂಡ ಏರಿದ್ದರು. ಆದರೆ, ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಎತ್ತಿಕೊಳ್ಳುವುದಕ್ಕೆ ಮುನ್ನವೇ 108 ವರ್ಷದ ಅರ್ಜಿದಾರರು ಮೃತಪಟ್ಟಿದ್ದಾರೆ.

ಅರ್ಜಿದಾರ ಮಹಾರಾಷ್ಟ್ರದ ಸೋಪನ್ ನರ್ಸಿಂಗ ಗಾಯಕ್ವಾಡ್ 1968ರಿಂದಲೇ ಈ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಲು ಓಡಾಡುತ್ತಿದ್ದರು. ಬಾಂಬೆ ಹೈಕೋರ್ಟ್ ಪ್ರಕರಣವನ್ನು ವಜಾ ಮಾಡುವ ಮುನ್ನ 27 ವರ್ಷ ಅಲ್ಲಿ ಅದು ವಿಚಾರಣೆಗೆ ಬಾಕಿ ಇತ್ತು.

ಭೂ ವಿವಾದದ ಸಂಬಂಧಿಸಿದ ಮೊಕದ್ದಮೆಯೊಂದನ್ನು 1968ರಲ್ಲಿ ಕೆಳಹಂತದ ಕೋರ್ಟ್ ಒಂದರಲ್ಲಿ ಸಲ್ಲಿಸಿದ್ದರು. ಅದು ಇಷ್ಟು ವರ್ಷಗಳ ವರೆಗೆ ಕೋರ್ಟ್‌ನಲ್ಲಿ ಇತ್ಯರ್ಥವಾಗದೇ ಉಳಿದಿತ್ತು. ಇದೇ 12ರಂದು ಈ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತ್ತು. ಆದರೆ ಕೋರ್ಟ್ ಈ ಮೊಕದ್ದಮೆಯನ್ನು ಕೈಗೆತ್ತಿಕೊಳ್ಳುವ ಹಿಂದಿನ ದಿನವೇ ನರ್ಸಿಂಗ ಗಾಯಕ್ವಾಡ್ ಮೃತಪಟ್ಟಿದ್ದಾರೆ. ಈ ವಿಷಯ ಕೋರ್ಟ್ ಈ ಮೊಕದ್ದಮೆಯನ್ನು ಕೈಗೆತ್ತಿಕೊಂಡ ಬಳಿಕವೇ ತಿಳಿದುಬಂದಿದೆ. ಈಗ ಈ ಮೊಕದ್ದಮೆಯನ್ನು ಅವರ ಕಾನೂನುಬದ್ಧ ಉತ್ತರಾಧಿಕಾರಿಗಳು ಮುಂದುವರಿಸಲಿದ್ದಾರೆ ಎಂದು ಅವರ ಪರ ವಕೀಲ ವಿರಾಜ್ ಕದಮ್ ತಿಳಿಸಿದ್ದಾರೆ.

ಹೈಕೋರ್ಟ್ ಈ ಅರ್ಜಿ ಕುರಿತು 2015ರ ಅ.23 ಮತ್ತು 2019ರ ಫೆ.13 ರಂದು ತೀರ್ಪುಗಳನ್ನು ನೀಡಿತ್ತು. ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಅರ್ಜಿದಾರರು ಕ್ರಮವಾಗಿ 1,467 ಮತ್ತು 267 ದಿನಗಳು ವಿಳಂಬ ಮಾಡಿದ್ದಾರೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹೃಷಿಕೇಶ್ ರಾಯ್ ನೋಟಿಸ್ ನೀಡಿದ್ದರು.

ನೋಟಿಸ್‌ಗೆ ಉತ್ತರಿಸಿದ್ದ ವಕೀಲ ವಿರಾಜ್ ಕದಮ್, ವಯೋವೃದ್ಧ ಅರ್ಜಿದಾರರು ಮಹಾರಾಷ್ಟ್ರದ ಗ್ರಾಮವೊಂದರಲ್ಲಿ ನೆಲೆಸಿರುವವರು, ಹೈಕೋರ್ಟ್ ಈ ಅರ್ಜಿಯನ್ನು ತಿರಸ್ಕರಿಸಿರುವುದನ್ನು ಅವರು ಬಹಳ ತಡವಾಗಿ ತಿಳಿದರು ಮತ್ತು ಕೋವಿಡ್ ಸಮಯದಲ್ಲಿ ಅವರಿಗೆ ಮನೆಯಿಂದ ಹೊರಬರಲು ಸಾಧ್ಯವಾಗಲಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಅರ್ಜಿಯನ್ನು ಸುಪ್ರೀಂ ಕೋರ್ಟ್‌ಗೆ ತಡವಾಗಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದರು. ಬಳಿಕವೇ ಅರ್ಜಿಯನ್ನು ಕೋರ್ಟ್ ಕೈಗೆತ್ತಿಕೊಂಡಿದೆ. ಈ ಮೊಕದ್ದಮೆಯ ಎದುರು ಪಕ್ಷದವರಿಗೆ ಪ್ರತಿಕ್ರಿಯೆ ನೀಡಲು 8 ವಾರಗಳ ಕಾಲಾವಕಾಶ ನೀಡಿದೆ.

ಗ್ರಾಮೀಣ ಭಾಗದಲ್ಲಿ 50 ಲಕ್ಷಕ್ಕೂ ಅಧಿಕ ಮಾರಾಟ: ಮಾರುತಿ



ನವದೆಹಲಿ (ಪಿಟಿಐ): ದೇಶದ ಗ್ರಾಮೀಣ ಮಾರುಕಟ್ಟೆಯಲ್ಲಿ 50 ಲಕ್ಷಕ್ಕೂ ಅಧಿಕ ವಾಹನಗಳನ್ನು ಮಾರಾಟ ಮಾಡಿದ ಮೈಲಿಗಲ್ಲು ಸಾಧಿಸಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿ ಬುಧವಾರ ಹೇಳಿದೆ.

ಗ್ರಾಮೀಣ ಭಾಗದಲ್ಲಿ 1,700 ಮಾರಾಟ ಮಳಿಗೆಗಳಿದ್ದು, ಕಂಪನಿಯ ಒಟ್ಟಾರೆ ಮಾರಾಟದಲ್ಲಿ ಸುಮಾರು ಶೇ 40ರಷ್ಟು ಈ ಭಾಗದಿಂದಲೇ ಬರುತ್ತಿದೆ ಎಂದು ಕಂಪನಿಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.


ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಒಟ್ಟಾರೆ ಮಾರಾಟವು 3.53 ಲಕ್ಷದಷ್ಟಾಗಿದೆ. 2020–21ನೇ ಹಣಕಾಸು ವರ್ಷದಲ್ಲಿ ಒಟ್ಟಾರೆ 14.57 ಲಕ್ಷ ವಾಹನಗಳು ಮಾರಾಟ ಆಗಿವೆ.

ಗ್ರಾಹಕರು ಮತ್ತು ಸ್ಥಳೀಯ ವಿತರಕ ಪಾಲುದಾರರ ಬೆಂಬಲದಿಂದ ನಾವು ಈ ಮೈಲಿಗಲ್ಲು ಸಾಧಿಸಿದ್ದೇವೆ ಎಂದು ಘೋಷಿಸಲು ಹೆಮ್ಮೆಪಡುತ್ತೇವೆ ಎಂದು ಕಂಪನಿಯ ಹಿರಿಯ ವ್ಯವಸ್ಥಾಪಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

ಕಂಪನಿಯ ವಹಿವಾಟಿನಲ್ಲಿ ಗ್ರಾಮೀಣ ಮಾರುಕಟ್ಟೆಯು ಬಹಳ ವಿಶೇಷವಾದ ಸ್ಥಾನ ಹೊಂದಿದೆ. ಈ ಮಾರುಕಟ್ಟೆಯ ಅಗತ್ಯಗಳನ್ನು ಬಹಳ ಎಚ್ಚರಿಕೆಯಿಂದ ಅಧ್ಯಯನ ಮಾಡುತ್ತಿದ್ದೇವೆ. ಗ್ರಾಮೀಣ ಭಾರತದ ಗ್ರಾಹಕರ ಅಗತ್ಯಗಳಿಗೆ ಸರಿಹೊಂದುವ ಉತ್ಪನ್ನಗಳು ಮತ್ತು ಸೇವೆಗಳನ್ನು ತಲುಪಿಸಲು ನಾವು ಬದ್ಧರಾಗಿದ್ದೇವೆ ಎಂದು ಅವರು ಹೇಳಿದ್ದಾರೆ.

ಗ್ರಾಮೀಣ ಭಾಗದ ಗ್ರಾಹಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 235 'ಸರ್ವೀಸ್ ಆನ್ ವೀಲ್ಸ್' ಅನ್ನೂ ಒಳಗೊಂಡು 4 ಸಾವಿರಕ್ಕೂ ಅಧಿಕ ಸೇವಾ ಕೇಂದ್ರಗಳಿವೆ ಎಂದು ಅವರು ತಿಳಿಸಿದ್ದಾರೆ.

ಚೀನಾದಲ್ಲಿ ಭಾರಿ ಮಳೆ, ಭೂಕುಸಿತ; 16 ಸಾವು



ಮಂಗಳವಾರ ಧಾರಾಕಾರ ಮಳೆಯ ನಂತರ ಚೀನಾದ ಜೆಂಗ್‌ಜೌ ನಗರದ ಪಕ್ಷಿನೋಟ

ಬೀಜಿಂಗ್ (ಎಎಫ್‌ಪಿ): ಚೀನಾದ ಕೇಂದ್ರ ಭಾಗದಲ್ಲಿ ಮಂಗಳವಾರ ಸುರಿದ ಧಾರಾಕಾರ ಮಳೆ ಹಾಗೂ ಭೂಕುಸಿತ, ಪ್ರವಾಹ ಸಂಬಂಧಿತ ಅವಘಡಗಳಲ್ಲಿ 16 ಮಂದಿ ಮೃತಪಟ್ಟಿದ್ದಾರೆ. ರೈಲು ಬೋಗಿಗಳು ಜಲಾವೃತಗೊಂಡಿವೆ.

ಹೆನಾನ್ ಪ್ರಾಂತ್ಯದಲ್ಲಿ ದಾಖಲೆ ಪ್ರಮಾಣದಲ್ಲಿ ಮಳೆಯಾಗಿದ್ದು, ಹಲವು ನದಿಗಳು ಉಕ್ಕಿಹರಿದಿವೆ. 'ಪರಿಸ್ಥಿತಿ ಗಂಭೀರವಾಗಿದೆ' ಎಂದು ಅಧ್ಯಕ್ಷ ಷಿ ಜಿನ್‌ಪಿಂಗ್ ಘೋಷಿಸಿದ್ದು, ಪ್ರವಾಹ ಸ್ಥಿತಿ ನಿಯಂತ್ರಣವು ಚಿಂತಾಜನಕ ಸ್ಥಿತಿಯನ್ನು ತಲುಪಿದೆ ಎಂದಿದ್ದಾರೆ.

ತಗ್ಗುಪ್ರದೇಶ ಮತ್ತು ಸಂಕಷ್ಟದಲ್ಲಿದ್ದ ಸುಮಾರು 2 ಲಕ್ಷ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ರಕ್ಷಣಾ ಕಾರ್ಯಕ್ಕೆ ಸೇನೆ ನಿಯೋಜಿಸಲಾಗಿದೆ. 60 ವರ್ಷದ ಇತಿಹಾಸದಲ್ಲಿಯೇ ಇದು ದಾಖಲೆ ಮಳೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಧಾರಾಕಾರ ಮಳೆಯಿಂದಾಗಿ ಜೆಂಗ್‌ಜೌ ಮೆಟ್ರೊ ಮುಳುಗಡೆಯಾಗಿದ್ದು, 12 ಜನರು ಮೃತಪಟ್ಟಿದ್ದು, ಇತರೆ ಐದವರು ಗಾಯಗೊಂಡಿದ್ದಾರೆ. ರೈಲ್ವೆ ಸುರಂಗ ಮಾರ್ಗದಲ್ಲಿ ಸಿಲುಕಿಕೊಂಡಿದ್ದ ನೂರಾರು ಪ್ರಯಾಣಿಕರನ್ನು ರಕ್ಷಿಸಲಾಗಿದೆ.

ಗೊಂಗೈ ನಗರದಲ್ಲಿ ಮನೆ, ಗೋಡೆಗಳು ಕುಸಿದಿದ್ದು, ನಾಲ್ವರು ಮೃತಪಟ್ಟಿದ್ದಾರೆ. ಉಳಿದಂತೆ ನಗರದಲ್ಲಿ ಮಳೆಯಿಂದಾಗಿ ಹಲವೆಡೆ ಭೂಕುಸಿತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಲ್‌ಐಸಿಯಿಂದ ಆರೋಗ್ಯ ರಕ್ಷಕ್

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) 'ಆರೋಗ್ಯ ರಕ್ಷಕ್' ಎನ್ನುವ ಹೊಸ ಆರೋಗ್ಯ ವಿಮೆ ಯೋಜನೆ ಜಾರಿಗೆ ತಂದಿದೆ.

ಈ ಯೋಜನೆಯು ಕೆಲವು ನಿರ್ದಿಷ್ಟ ಆರೋಗ್ಯ ಸಮಸ್ಯೆಗಳ ವಿರುದ್ಧ ಸ್ಥಿರ ಲಾಭದ ಆರೋಗ್ಯ ವಿಮಾ ರಕ್ಷಣೆಯನ್ನು ಒದಗಿಸುತ್ತದೆ. ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ ಸಕಾಲಿಕ ಬೆಂಬಲವನ್ನು ಒದಗಿಸಲಿದೆ. ವಿಮೆ ಮಾಡಿದವರಿಗೆ ಮತ್ತು ಅವರ ಕುಟುಂಬಕ್ಕೆ ಕಷ್ಟದ ಸಮಯದಲ್ಲಿ ಆರ್ಥಿಕವಾಗಿ ಸ್ವತಂತ್ರವಾಗಿ ಇರಲು ಸಹಾಯ ಮಾಡಲಿದೆ ಎಂದು ತಿಳಿಸಿದೆ.

ಪಾಲಿಸಿದಾರರು ತಮ್ಮ ಪತ್ನಿ/ಪತಿ, ಮಕ್ಕಳು ಮತ್ತು ಕುಟುಂಬದವರನ್ನು ಒಂದೇ ಯೋಜನೆಯಡಿ ಸೇರಿಸಬಹುದಾಗಿದೆ ಎಂದು ಹೇಳಿದೆ.

ಬೈಜೂಸ್ ತೆಕ್ಕೆಗೆ ಎಪಿಕ್ ಕಂಪನಿ

ನವದೆಹಲಿ (ಪಿಟಿಐ): ಡಿಜಿಟಲ್ ರೀಡಿಂಗ್ ಪ್ಲಾಟ್‌ಫಾರಂ ಆಗಿರುವ ಅಮೆರಿಕದ ಎಪಿಕ್ ಕಂಪನಿಯನ್ನು ₹ 3,729 ಕೋಟಿಗೆ ಸ್ವಾಧೀನಪಡಿಸಿಕೊಂಡಿರುವುದಾಗಿ ಇ–ಕಲಿಕೆ ಕ್ಷೇತ್ರದ ಬೈಜುಸ್ ಕಂಪನಿಯು ಬುಧವಾರ ತಿಳಿಸಿದೆ.

ಅಮೆರಿಕದಲ್ಲಿ ತನ್ನ ಅಸ್ತಿತ್ವವನ್ನು ವಿಸ್ತರಿಸಲು ಈ ಸ್ವಾಧೀನವು ಸಹಾಯ ಮಾಡಲಿದೆ ಎಂದು ಹೇಳಿದೆ. ಉತ್ತರ ಅಮೆರಿಕದ ಮಾರುಕಟ್ಟೆಯಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಲು ಬೈಜುಸ್ ಹೆಚ್ಚುವರಿಯಾಗಿ ₹ 7,459 ಕೋಟಿ ಹೂಡಿಕೆಯನ್ನೂ ಮಾಡಲಿದೆ.

ತಿದ್ದುಪಡಿ

ಇಸ್ರೊ ಬೇಹುಗಾರಿಕೆ ಪ್ರಕರಣದ ಆರೋಪಿಯಾಗಿರುವ, ಗುಜರಾತ್‌ನ ನಿವೃತ್ತ ಡಿಜಿಪಿ ಆರ್. ಬಿ.ಶ್ರೀಕುಮಾರ್ ಅವರಿಗೆ ಜುಲೈ 28ರ ವರೆಗೆ ಬಂಧನದಿಂದ ರಕ್ಷಣೆ ನೀಡಿ ಗುಜರಾತ್ ಹೈಕೋರ್ಟ್ ಮಂಗಳವಾರ ಆದೇಶಿಸಿದೆ. ಮಂಗಳವಾರದ ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1470)
ಸೋಯಾ (ರಿಫೈನ್ಡ್)	₹1400 (1390)
ಸೂರ್ಯಕಾಂತಿ (ರಿಫೈನ್ಡ್)	₹1450(1450)
ಪಾಮೋಲಿನ್	₹1215(1215)

ಮುಂಬೈ ಧಾರಣೆ

ಶೇಂಗಾ

21-7-2021

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1480)
ಒಂದು ವಾರದ ಡೆಲಿವರಿ	1475 (1475)
ಸೋಯಾ ಕಚ್ಚಾ	1360 (1360)
ಪಾಮ್ ವಾರದ ಡೆಲಿವರಿ	1213 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,700 (48,000)

ಬೆಳ್ಳಿ ಕೆ.ಜಿ 67,000 (66,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1100-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	385

ರಾಮನಗರ ರೇಷ್ಮೆ

ಮಿಶ್ರತಳಿ	241-408
ದ್ವಿತಳಿ	223-471

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12150	11400	11450	156.25 ಸೆಂಟ್ಸ್
ಎಸಿ	4920	4400	4550	
ಆರ್‌ಪಿ	5850	5600	5800	ಲಂಡನ್
ಆರ್‌ಸಿ	3355	3250	3400	1732 ಡಾಲರ್ಸ್

ಟೇಬಲ್ ಟೆನಿಸ್: ಮಣಿಕಾ ಭಾತ್ರಾಗೆ ಮೊದಲ ಸುತ್ತಿನ ಪಂದ್ಯದಲ್ಲಿ ಹೊ ಟಿನ್ ಟಿನ್ ಎದುರಾಳಿ


ಭಾರತದ ಆಟಗಾರರಿಗೆ ಕಠಿಣ ಸವಾಲು

ಟೋಕಿಯೊ (ಪಿಟಿಐ): ಭಾರತದ ಟೇಬಲ್ ಟೆನಿಸ್ ಪಟುಗಳು ಒಲಿಂಪಿಕ್ಸ್‌ನಲ್ಲಿ ಕಠಿಣ ಸವಾಲು ಎದುರಿಸಲಿದ್ದಾರೆ. ಮಿಶ್ರ ಡಬಲ್ಸ್ ವಿಭಾಗದಲ್ಲಿ ಅಚಂತ ಶರತ್ ಕಮಲ್ ಮತ್ತು ಮಣಿಕಾ ಭಾತ್ರ ಮೊದಲ ಪಂದ್ಯದಲ್ಲೇ ಮೂರನೇ ಶ್ರೇಯಾಂಕದ ಚೀನಾ ಥೈಪೆಯ ಜೋಡಿ ಲಿನ್ ಯುನ್ ಜು ಮತ್ತು ಚೆಂಗ್ ಐ ಚಿಂಗ್ ಎದುರು ಸೆಣಸುವರು.


ವಿಶ್ವ ರ‍್ಯಾಂಕಿಂಗ್‌ನಲ್ಲಿ 62ನೇ ಸ್ಥಾನದಲ್ಲಿರುವ ಮಣಿಕಾ ಭಾತ್ರ, ಮಹಿಳಾ ಸಿಂಗಲ್ಸ್‌ನಲ್ಲಿ ಮೊದಲ ಸುತ್ತಿನ ಪಂದ್ಯದಲ್ಲಿ ಬ್ರಿಟನ್ ಆಟಗಾರ್ತಿ ಹೊ ಟಿನ್ ಟಿನ್ ಅವರನ್ನು ಎದುರಿಸುವರು. ಟಿನ್ ಟಿನ್ ರ‍್ಯಾಂಕಿಂಗ್‌ನಲ್ಲಿ ಮಣಿಕಾ ಭಾತ್ರಗಿಂತ 32 ಸ್ಥಾನಗಳ ಹಿಂದೆ ಉಳಿದಿದ್ದಾರೆ. ಈ ಪಂದ್ಯದಲ್ಲಿ ಗೆದ್ದರೆ ಎರಡನೇ ಸುತ್ತಿನಲ್ಲಿ ಉಕ್ರೇನ್‌ನ ಮಾರ್ಗರಿಟಾ ಪೆಸೊಟ್‌ಸ್ಕ ಎದುರು ಸೆಣಸುವರು.

ಶರತ್ ಕಮಲ್ ಮತ್ತು ಗುಣಶೇಖರನ್ ಸತ್ಯನ್ ಕ್ರಮವಾಗಿ 20 ಮತ್ತು 26ನೇ ಶ್ರೇಯಾಂಕ ಹೊಂದಿದ್ದು ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದಾರೆ. ಎರಡನೇ ಸುತ್ತಿನಲ್ಲಿ ಗೆಲುವು ಸಾಧಿಸಿದರೆ ಶರತ್ ಕಮಲ್ ರಿಯೊ ಒಲಿಂಪಿಕ್ಸ್ ಚಾಂಪಿಯನ್ ಹಾಗೂ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಚೀನಾದ ಮಾ ಲಾಂಗ್ ಎದುರು ಕಣಕ್ಕೆ ಇಳಿಯಬೇಕಾಗುತ್ತದೆ.

ಪೋರ್ಟೊ ರಿಕೊದ ಬ್ರಿಯಾನ್ ಅಫನದೊರ್ ಅಥವಾ ಹಾಂಕಾಂಗ್‌ನ ಲ್ಯಾಮ್ ಸಿಯು ಹ್ಯಾಂಗ್ ಅವರನ್ನು ಎರಡನೇ ಸುತ್ತಿನಲ್ಲಿ ಸತ್ಯನ್ ಎದುರಿಸುವರು. ಮೂರನೇ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಜಪಾನ್ ಆಟಗಾರ ತೊಮೊಕಸು ಅವರನ್ನು ಎದುರಿಸುವರು.



ಮಣಿಕಾ ಭಾತ್ರ –ಪಿಟಿಐ ಚಿತ್ರ



ಅಚಂತ ಶರತ್ ಕಮಲ್ –ಎಎಫ್‌ಪಿ ಚಿತ್ರ



ಭಾರತ ಹಾಕಿ ತಂಡದ ಆಟಗಾರ್ತಿಯರು ಕ್ರೀಡಾಗ್ರಾಮದಲ್ಲಿ ಬುಧವಾರ ದೈಹಿಕ ಕಸರತ್ತು ನಡೆಸಿದರು –ಪಿಟಿಐ ಚಿತ್ರ

ಉದ್ಘಾಟನಾ ಸಮಾರಂಭದಲ್ಲಿ ಭಾರತದ ಕನಿಷ್ಠ ಪ್ರಾತಿನಿಧ್ಯ

ಟೋಕಿಯೊ (ಪಿಟಿಐ): ಒಲಿಂಪಿಕ್ಸ್ ಕೂಟದ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಕ್ರೀಡಾಪಟುಗಳು ಕನಿಷ್ಠ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅಧಿಕಾರಿಗಳ ಪೈಕಿ ಆರು ಮಂದಿ ಮಾತ್ರ ಭಾಗವಹಿಸಲಿದ್ದಾರೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ತಿಳಿಸಿದೆ.

ಉದ್ಘಾಟನೆಯ ಮರುದಿನ ನಡೆಯುವ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವವರನ್ನು ಉದ್ಘಾಟನಾ ಸಮಾರಂಭದಿಂದ ದೂರ ಇರಿಸಲಾಗುವುದು ಎಂದು ಭಾರತ ತಂಡದ ಉಪ ಚೆಫ್ ಡಿ ಮಿಷನ್ ಪ್ರೇಮ್ ಕುಮಾರ್ ವರ್ಮಾ ತಿಳಿಸಿದ್ದಾರೆ.

‘ಕನಿಷ್ಠ ಸಂಖ್ಯೆಯ ಕ್ರೀಡಾಪಟುಗಳನ್ನು ಪಾಲ್ಗೊಳ್ಳಿಸುವುದು ನಮ್ಮ ಉದ್ದೇಶ. ಎಷ್ಟು ಮಂದಿಗೆ ಅವಕಾಶ ನೀಡಬೇಕು, ಅವರು ಯಾರೆಲ್ಲ ಎಂಬುದನ್ನು ಚೆಫ್ ಡಿ ಮಿಷನ್ ಮತ್ತು ಉಪ ಚೆಫ್ ಡಿ ಮಿಷನ್ ಗುರುವಾರ ನಿರ್ಧರಿಸಲಿದ್ದಾರೆ. ಕೋವಿಡ್ ಆತಂಕ ಇರುವುದರಿಂದ ಇದು ಅನಿವಾರ್ಯವಾಗಿದೆ’ ಎಂದು ಐಒಎ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ತಿಳಿಸಿದ್ದಾರೆ.



ಮನಪ್ರೀತ್

120ಕ್ಕೂ ಹೆಚ್ಚು ಕ್ರೀಡಾಪಟುಗಳನ್ನು ಒಳಗೊಂಡ ಭಾರತ ತಂಡದಲ್ಲಿ ಅಧಿಕಾರಿಗಳು, ಕೋಚ್‌ಗಳು ಮತ್ತು ಸಿಬ್ಬಂದಿ ಸೇರಿ ಒಟ್ಟು 228 ಮಂದಿ ಇದ್ದಾರೆ.10 ಮೀ. ಏರ್ ಪಿಸ್ತೂಲ್ ಶೂಟ ರ್‌ಗಳಾದ ಸೌರಭ್ ಚೌಧರಿ, ಅಭಿಷೇಕ್ ವರ್ಮಾ, ಅಪೂರ್ವಿ ಚಂಡೇಲ ಮತ್ತು ಇಳವೆನ್ನಿಲ ವಾಳರಿವನ್ ಅವರಿಗೆ ಮೊದಲ ದಿನವೇ ಸ್ಪರ್ಧೆಗಳಿವೆ. ಮರುದಿನ ಸ್ಪರ್ಧಿಸಲಿರುವ ಶೂಟರ್ ಗಳಾದ ಮನು ಭಾಕರ್, ಯಶಸ್ವಿನಿ ಸಿಂಗ್ ದೇಸ್ವಾಲ್, ದೀಪಕ್ ಕುಮಾರ್ ಮತ್ತು ದಿವ್ಯಾಂಶ ಸಿಂಗ್ ಪನ್ವರ್ ಅವರಿಗೆ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗುವ ಸಾಧ್ಯತೆ ಇಲ್ಲ.

ಭಾರತ ಹಾಕಿ ತಂಡದ ನಾಯಕ ಮನಪ್ರೀತ್ ಸಿಂಗ್ ಮತ್ತು ಆರು ಬಾರಿಯ ವಿಶ್ವ ಚಾಂಪಿಯನ್ ಮೇರಿ ಕೋಮ್ ಉದ್ಘಾಟನಾ ಸಮಾ ರಂಭದಲ್ಲಿ ಭಾರತದ ಧ್ವಜಧಾರಿಗಳಾಗಿರುವರು.

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಗಾಲ್ಫ್: ಮೊದಲ ಪದಕಕ್ಕೆ ಮೂವರ ತವಕ

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಮೊದಲ ಮಹಿಳೆ, ಅತಿ ಕಿರಿಯ ಮಹಿಳಾ ಗಾಲ್ಫರ್ (18 ವರ್ಷ, 144 ದಿನಗಳು), ಯೂತ್ ಒಲಿಂಪಿಕ್ಸ್, ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸಿದ ದೇಶದ ಮೊದಲ ಮಹಿಳೆ, ಮಹಿಳೆಯರ ಯುರೋಪಿಯನ್ ಗಾಲ್ಫ್ ಟೂರ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೊದಲ ಕ್ರೀಡಾಪಟು...

ಭಾರತದ ಗಾಲ್ಫ್‌ನಲ್ಲಿ ಅನೇಕ ಮೊದಲುಗಳಿಗೆ ಕಾರಣರಾದ ಕರ್ನಾಟಕದ ಅದಿತಿ ಅಶೋಕ್ ಈಗ ಒಲಿಂಪಿಕ್ಸ್‌ನಲ್ಲಿ ಮೊದಲ ಪದಕ ತಂದುಕೊಡುವ ತವಕದೊಂದಿಗೆ ಕಣಕ್ಕೆ ಇಳಿಯಲು ಸಜ್ಜಾಗಿದ್ದಾರೆ. ಟೋಕಿಯೊ ಕೂಟದಲ್ಲಿ ಪಾಲ್ಗೊಳ್ಳುವ ದೇಶದ ಮೂವರು ಗಾಲ್ಫರ್‌ಗಳ ಪೈಕಿ ಅವರೂ ಒಬ್ಬರು.

ಒಲಿಂಪಿಕ್ಸ್‌ನಲ್ಲಿ ಗಾಲ್ಫ್ ‘ಅತಿಥಿ’ ಇದ್ದಂತೆ. ಆರಂಭದಲ್ಲಿ ಒಮ್ಮೆ ಕಾಣಿಸಿಕೊಂಡು ವರ್ಷಗಳ ನಂತರ ಮತ್ತೆ ಮುನ್ನೆಲೆಗೆ ಬಂದಿತ್ತು. ಭಾರತಕ್ಕಂತೂ ಒಲಿಂಪಿಕ್ಸ್‌ನಲ್ಲಿ ಈ ಕ್ರೀಡೆಯಲ್ಲಿ ಈ ಕ್ರೀಡೆ ತೀರಾ ಹೊಸತು. ದೇಶದ ಗಾಲ್ಫರ್‌ಗಳು ಒಲಿಂಪಿಕ್ಸ್‌ನಲ್ಲಿ ಮೊದಲು ಕಾಣಿಸಿಕೊಂಡದ್ದು 2016ರ ಆವೃತ್ತಿಯಲ್ಲಿ.

1900ರ ಒಲಿಂಪಿಕ್ಸ್‌ನಲ್ಲಿ ಗಾಲ್ಫ್ ಕ್ರೀಡೆಯನ್ನು ಅಳವಡಿಸಿದಾಗ ಅಮೆರಿಕ, ಬ್ರಿಟನ್, ಗ್ರೀಸ್ ಮತ್ತು ಫ್ರಾನ್ಸ್ ದೇಶಗಳು ಪಾಲ್ಗೊಂಡಿದ್ದವು. 1904ರಲ್ಲಿ ಕೆನಡ ಮತ್ತು ಅಮೆರಿಕ ಮಾತ್ರ ಭಾಗವಹಿಸಿತ್ತು. ಅನಂತರ ಗಾಲ್ಫ್ ಕಾಣಿಸಿಕೊಂಡದ್ದು 2016ರಲ್ಲಿ. ಆಗ 41 ದೇಶಗಳ ಪ್ರತಿನಿಧಿಗಳು ಪಾಲ್ಗೊಂಡರು. ಭಾರತವೂ ಮೂವರನ್ನು ಕಳುಹಿಸಿತ್ತು. ಅನಿರ್ಬನ್ ಲಾಹಿರಿ ಮತ್ತು ಎಸ್‌ಎಸ್‌ಪಿ ಚೌರಾಸಿಯ ಅವರೊಂದಿಗೆ ಅದಿತಿ ಕೂಡ ಕಣದಲ್ಲಿದ್ದರು.

ಆದರೆ ಚೌರಾಸಿಯಾ 50ನೇ ಸ್ಥಾನ ಮತ್ತು ಅನಿರ್ಬನ್ 57ನೇ ಸ್ಥಾನದೊಂದಿಗೆ ಮರಳಿದರು. ಅದಿತಿ ಆ ಕೂಟದಲ್ಲಿ 41ನೇ ಸ್ಥಾನ ಗಳಿಸಿದ್ದರು. ಈ ವರ್ಷ ಪ್ರತಿ ಟೂರ್‌ನಲ್ಲೂ ಉತ್ತಮ ಸಾಮರ್ಥ್ಯ ತೋರಿರುವ ಅವರು ಈಗ ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

ಇನ್ನು 1 ದಿನ

ಎಲ್‌ಪಿಜಿಎ ಟೂರ್‌ನಲ್ಲಿ ಪಾಲ್ಗೊಂಡ ಭಾರತದ ಮೊದಲ ಗಾಲ್ಫ್ ಪಟು ಎಂಬ ಖ್ಯಾತಿಯನ್ನು 2017ರಲ್ಲಿ ಗಳಿಸಿದ ಅದಿತಿ 2013ರಲ್ಲಿ ಏಷ್ಯನ್ ಯೂತ್ ಗೇಮ್ಸ್‌ನಲ್ಲಿ ಮತ್ತು 2014ರಲ್ಲಿ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಿದ ಭಾಗವಹಿಸಿದ ಮೊದಲ ಆಟಗಾರ್ತಿ ಎನಿಸಿಕೊಂಡಿದ್ದರು. ರಿಯೊ ಒಲಿಂಪಿಕ್ಸ್‌ಗೆ ತೆರಳುವ ಮುನ್ನ 2016ರಲ್ಲಿ ಯುರೋಪಿಯನ್ ಟೂರ್ ಪ್ರಶಸ್ತಿ ಗೆದ್ದು ಗಮನ ಸೆಳೆದಿದ್ದರು.

ಪುಣೆಯ ಅನಿರ್ಬನ್ ಲಾಹಿರಿ ಪಿಜಿಎ ಚಾಂಪಿಯನ್‌ಷಿಪ್ ಮತ್ತು ಏಷ್ಯನ್ ಟೂರ್‌ನಲ್ಲಿ ಪರಿಚಿತ ಹೆಸರು. 2015ರ ಪಿಜಿಎ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಸ್ಥಾನವನ್ನು ಹಂಚಿಕೊಂಡಿದ್ದು ಅವರ ಗರಿಷ್ಠ ಸಾಧನೆ. ಏಷ್ಯನ್ ಟೂರ್‌ನಲ್ಲಿ ಒಂಬತ್ತನೇ ಸ್ಥಾನ ಹಂಚಿಕೊಂಡು ಗಮನ ಸೆಳೆದಿದ್ದರು.

ಬೆಂಗಳೂರಿನ ಉದಯನ್ ಮಾನೆ 2015ರಿಂದ ವೃತ್ತಿಪರ ಗಾಲ್ಫ್ ಆಡುತ್ತಿದ್ದಾರೆ. ವಿವಿಧ ಟೂರ್‌ಗಳಲ್ಲಿ ಈ ವರೆಗೆ 11 ಪ್ರಶಸ್ತಿ ಗೆದ್ದಿದ್ದಾರೆ. ಇವರಿಬ್ಬರೂ ಪುರುಷರ ವೈಯಕ್ತಿಕ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದು ಅದಿತಿ ಮಹಿಳೆಯ ವೈಯಕ್ತಿಕ ವಿಭಾಗದಲ್ಲಿ ಸ್ಪರ್ಧಿಸುವರು.



ಉದಯನ್ ಮಾನೆ ವಯಸ್ಸು: 30

ಅದಿತಿ ಅಶೋಕ್ ವಯಸ್ಸು: 23

ಅನಿರ್ಬನ್ ಲಾಹಿರಿ ವಯಸ್ಸು: 34 – ಎಎಫ್‌ಪಿ ಚಿತ್ರ

1900	1904	24	2016	219
ಗಾಲ್ಫ್ ಸೇರ್ಪಡೆಗೊಂಡ ಆವೃತ್ತಿ	ಎರಡೇ ದೇಶಗಳು ಪಾಲ್ಗೊಂಡ ಆವೃತ್ತಿ	ಗಾಲ್ಫ್ ಇಲ್ಲದೇ ಇದ್ದ ಆವೃತ್ತಿಗಳು	41 ದೇಶಗಳು ಪಾಲ್ಗೊಂಡ ವರ್ಷ	ಈವರೆಗೆ ಪಾಲ್ಗೊಂಡ ಒಟ್ಟು ಗಾಲ್ಫರ್‌ಗಳು

‘ಭಾರತ ಹೆಚ್ಚು ಪದಕ ಗೆಲ್ಲುವ ನಿರೀಕ್ಷೆ’

ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಭಾರತ ಈ ವರೆಗೆ ಗಳಿಸಿದ್ದಕ್ಕಿಂತ ಗರಿಷ್ಠ ಪದಕಗಳನ್ನು ಕೋವಿಡ್ ಕಾಲದಲ್ಲಿ ನಡೆಯುತ್ತಿರುವ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ’ ಎಂದು ಭಾರತ ಬ್ಯಾಡ್ಮಿಂಟನ್ ತಂಡದ ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಅಭಿಪ್ರಾಯಪಟ್ಟರು.

ಧ್ಯಾನ್ ಆ್ಯಪ್ ಮತ್ತು ಹಾರ್ಟ್‌ಫುಲ್‌ನೆಸ್ ಸಂಸ್ಥೆಗಳ ಒಗ್ಗೂಡುವಿಕೆಯನ್ನು ಘೋಷಿಸಲು ವರ್ಚುವಲ್ ಆಗಿ ಬುಧವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು. ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವ ಭಾರತ ತಂಡದವರ ಒತ್ತಡ ನಿರ್ವಹಣೆಗೆ ‘ಧ್ಯಾನ್’ ಆ್ಯಪ್ ಸಹಕಾರ ನಿಡುತ್ತಿದೆ. ಇದರ ಸ್ಥಾಪಕರೂ ಆಗಿರುವ ಗೋಪಿಚಂದ್ ‘ಒಲಿಂಪಿಕ್ಸ್‌ಗೆ ತೆರಳುವ ಕ್ರೀಡಾಪಟುಗಳಿಗೆ ಈ ಬಾರಿ ಸರ್ಕಾರ ಉತ್ತಮ ಬೆಂಬಲ ನೀಡಿದೆ. ಹೀಗಾಗಿ ಅವರ ಹುಮ್ಮಸ್ಸು ಹೆಚ್ಚಿದೆ’ ಎಂದರು.



ಪುಲ್ಲೇಲ ಗೋಪಿಚಂದ್

‘ಶೂಟಿಂಗ್, ಕುಸ್ತಿ, ಬ್ಯಾಡ್ಮಿಂಟನ್ ಮುಂತಾದ ಕ್ರೀಡೆಗಳಲ್ಲಿ ಪದಕ ಗೆಲ್ಲುವ ಸಾಧ್ಯತೆಗಳು ಹೆಚ್ಚು ಇವೆ. ಇಲ್ಲಿಯ ವರೆಗೆ ಒಂದೇ ಆವೃತ್ತಿಯಲ್ಲಿ ಆರು ಪದಕ ಗೆದ್ದಿರುವುದು ಭಾರತದ ಗರಿಷ್ಠ ಸಾಧನೆ. ಈ ಬಾರಿ ಇದರ ದುಪ್ಪಟ್ಟು ಸಂಖ್ಯೆಗಿಂತ ಹೆಚ್ಚು ಪದಕಗಳು ಸಿಗಲಿವೆ. ಪಿ.ವಿ. ಸಿಂಧು ಅವರ ಹಾದಿ ಸುಗಮವಾಗಿದೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ ಜೋಡಿ, ಸಿಂಗಲ್ಸ್‌ನಲ್ಲಿ ಬಿ. ಸಾಯ್ ಪ್ರಣೀತ್ ಅವರು ಕಠಿಣ ಸವಾಲುಗಳನ್ನು ಎದುರಿಸಬೇಕಾಗಿದೆ. ಆದರೂ ಒಳ್ಳೆಯ ಫಲಿತಾಂಶ ಹೊರಹೊಮ್ಮಲಿದೆ’ ಎಂದು ಅವರು ಹೇಳಿದರು.

‘ಸ್ಪರ್ಧಾ ಕಣದಲ್ಲಿ ಇದ್ದಾಗಲೇ ಧ್ಯಾನದ ಮಹತ್ವ ತಿಳಿದುಕೊಂಡಿದ್ದೆ. ರಷ್ಯಾದ ಮನೋರೋಗ ತಜ್ಞರೊಬ್ಬರು ಒಮ್ಮೆ ಭಾರತ ಕ್ರೀಡಾ ಪ್ರಾಧಿಕಾರದ ಅಧಿಕಾರಿಗಳ ಜೊತೆ ಯೋಗನಿದ್ರೆ ಬಗ್ಗೆ ಚರ್ಚಿಸುತ್ತಿದ್ದರು. ಮನಸ್ಸನ್ನು ಸಮಾಧಾನಪಡಿಸುವ ಕಲೆಯ ಬಗ್ಗೆ ಅವರು ಹೇಳುತ್ತಿದ್ದರು. ಅಲ್ಲಿಂದ ನಾನು ಕೂಡ ಹೆಚ್ಚು ಆಸಕ್ತಿಯಿಂದ ಅಭ್ಯಾಸ ಮಾಡಿದೆ. ಅದೇ ಹಿನ್ನೆಲೆಯಲ್ಲಿ ಆ್ಯಪ್ ಸಿದ್ಧಪಡಿಸಿದ್ದೆ. ಈಗ ಒಂದೂವರೆ ವರ್ಷದಿಂದ ಹಾರ್ಟ್‌ಫುಲ್‌ನೆಸ್ ಸಂಸ್ಥೆಯ ಜೊತೆ ನೆರವು ಕೂಡ ಸಿಗುತ್ತಿದೆ’ ಎಂದು ಗೋಪಿಚಂದ್ ವಿವರಿಸಿದರು.

‘ಮಾನಸಿಕ ಒತ್ತಡ ನಿಯಂತ್ರಣಕ್ಕೆ ತರಬೇತಿ ನೀಡುವುದು ಕಷ್ಟದ ಕಾರ್ಯ. ಕೆಲವರು ಕಣ್ಣು ಮುಚ್ಚಿ ಕುಳಿತುಕೊಂಡು ಧ್ಯಾನ ಮಾಡುವಂತೆ ಕಂಡುಬಂದರೂ ಅವರ ಮನಸ್ಸಿನೊಳಗೆ ಏನು ನಡೆಯುತ್ತಿದೆ ಎನ್ನಲು ಸಾಧ್ಯವಾಗುವುದಿಲ್ಲ. ಧ್ಯಾನ್ ಆ್ಯಪ್ ಧ್ಯಾನವನ್ನು ಸಮರ್ಪಕವಾಗಿ ನಿಯಂತ್ರಿಸುತ್ತದೆ’ ಎಂದು ಅವರು ಅಭಿಪ್ರಾಯಪಟ್ಟರು.

ಬ್ರಿಸ್ಬೇನ್‌ನಲ್ಲಿ 2032ರ ಒಲಿಂಪಿಕ್ಸ್

ಟೋಕಿಯೊ(ಎಪಿ): ಆಸ್ಟ್ರೇಲಿಯಾದ ಬ್ರಿಸ್ಬೇನ್‌ನಲ್ಲಿ 2032ರ ಒಲಿಂಪಿಕ್ ಕೂಟವು ಆಯೋಜನೆಗೊಳ್ಳಲಿದೆ.

ಇಲ್ಲಿ ನಡೆದ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಕೌನ್ಸಿಲ್ (ಐಒಸಿ) ಸಭೆಯಲ್ಲಿ ಬ್ರಿಸ್ಬೇನ್ 72–5 ಮತಗಳಿಂದ ಬಿಡ್ ಅನ್ನು ತನ್ನದಾಗಿಸಿಕೊಂಡಿತು.

32 ವರ್ಷಗಳ ಬಳಿಕ ಆಸ್ಟ್ರೇಲಿಯಾ ಒಲಿಂಪಿಕ್ ಕೂಟಕ್ಕೆ ಆತಿಥ್ಯ ವಹಿಸಲಿದೆ. 2000ರಲ್ಲಿ ಕೂಟಕ್ಕೆ ಸಿಡ್ನಿ ಆತಿಥ್ಯ ವಹಿಸಿತ್ತು. ಅದಕ್ಕೂ ಮೊದಲು 1956ರಲ್ಲಿ ಮೆಲ್ಬರ್ನ್‌ನಲ್ಲಿ ಒಲಿಂಪಿಕ್ಸ್ ಆಯೋಜನೆಯಾಗಿತ್ತು.

‘ನಮ್ಮ ದೇಶದಲ್ಲಿ ಕ್ರೀಡಾಕೂಟ ಯಶಸ್ವಿಯಾಗಲು ಏನು ಮಾಡಬೇಕೆಂಬ ಅರಿವು ನಮಗಿದೆ‘ ಎಂದು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಅವರು, ಐಒಸಿ ಸದಸ್ಯರೊಂದಿಗೆ ವಿಡಿಯೊ ಸಂವಾದದಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕ್ರೀಡಾಕೂಟಕ್ಕೆ ಸಜ್ಜುಗೊಳ್ಳಲು ಬ್ರಿಸ್ಬೇನ್‌ಗೆ 11 ವರ್ಷಗಳ ಅವಧಿಯಿದೆ. 2024ರ ಒಲಿಂಪಿಕ್ ಕೂಟಕ್ಕೆ ಪ್ಯಾರಿಸ್‌ನಲ್ಲಿ ಮತ್ತು 2028ರ ಕೂಟಕ್ಕೆ ಲಾಸ್ ಎಂಜಲೀಸ್ ಆತಿಥ್ಯ ವಹಿಸಲಿವೆ.

2032ರ ಕೂಟದ ಆತಿಥ್ಯದ ಕುರಿತು ಒಂದು ತಿಂಗಳ ಹಿಂದೆಯೇ ನಿರ್ಧಾರವಾಗಿತ್ತು. ಬುಧವಾರ ಅಧಿಕೃತವಾಗಿ ಪ್ರಕಟಿಸಲಾಯಿತು. ಈ ಸಂದರ್ಭದಲ್ಲಿ ಆಸ್ಟ್ರೇಲಿಯಾದ ನಿಯೋಗವು ಹಾಜರಿತ್ತು. ಅದರಲ್ಲಿ ಕ್ವಿನ್ಸ್‌ಲೆಂಡ್‌ನ ಪ್ರೀಮಿಯರ್ ಅನಾಸ್ತೇಸಿಯಾ ಪಲಾಸಜುಕ್, ಮೇಯರ್ ಆ್ಯಡ್ರಿಯನ್ ಶ್ರಿನ್ನರ್ ಮತ್ತು ಕ್ರೀಡಾ ಸಚಿವ ರಿಚರ್ಡ್ ಕಾಲ್‌ಬೆಕ್ ಇದ್ದರು. ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಬ್ರಿಸ್ಬೇನ್‌ನ ಗಾಬಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಒಲಿಂಪಿಕ್ ಕ್ರೀಡಾಕೂಟಗಳು ನಡೆಯಲಿವೆ. ಈ ಸುದ್ದಿ ಬಹಿರಂಗವಾಗುತ್ತಿದ್ದಂತೆಯೇ ಬ್ರಿಸ್ಬೇನ್‌ನಲ್ಲಿ ಜನರು ಬೀದಿಗೆ ಬಂದು ಸಂಭ್ರಮಿಸಿದರು.

1992ರಲ್ಲಿಯೂ ಬ್ರಿಸ್ಬೇನ್ ಒಲಿಂಪಿಕ್ ಆತಿಥ್ಯಕ್ಕಾಗಿ ಬಿಡ್ ಸಲ್ಲಿಸಿತ್ತು. ಆ ವರ್ಷದ ಬಿಡ್ ಬಾರ್ಸಿಲೋನಾ ಪಾಲಾಗಿತ್ತು.



ಒಲಿಂಪಿಕ್ಸ್ ಆಯೋಜನೆಯ ಹಕ್ಕು ಜಯಿಸಿದ ಬ್ರಿಸ್ಬೇನ್‌ನಲ್ಲಿ ನಾಗರಿಕರ ಸಂಭ್ರಮ–ಎಎಫ್‌ಪಿ ಚಿತ್ರ

ಈಜು: ಒಬ್ಬೊಬ್ಬರಿಗೆ ಒಂದೊಂದು ಸ್ಪರ್ಧೆ ಇಷ್ಟ

ಟೋಕಿಯೊ (ಎಪಿ/ಪಿಟಿಐ/ಎಎಫ್‌ಪಿ/ರಾಯಿಟರ್ಸ್): ಒಲಿಂಪಿಕ್ಸ್ ಸೇರಿದಂತೆ ಯಾವುದೇ ಕ್ರೀಡಾಕೂಟಗಳಲ್ಲಿ ಅತಿ ಹೆಚ್ಚು ಪದಕಗಳನ್ನು ಗೆಲ್ಲುವ ಅವಕಾಶಗಳಿರುವ ಸ್ಪರ್ಧೆ ಈಜು. ಹೆಚ್ಚು ವಿಭಾಗಗಳು ಇರುವುದೇ ಇದಕ್ಕೆ ಕಾರಣ. ಆದರೂ ಕೆಲವು ದೇಶಗಳು ನಿರ್ದಿಷ್ಟ ವಿಭಾಗಕ್ಕೆ ಹೆಚ್ಚು ಒತ್ತು ನೀಡುವುದನ್ನು ಕಾಣಬಹುದಾಗಿದೆ. ಹಂಗೇರಿಯಲ್ಲಿ ಮೆಡ್ಲೆ ಪ್ರಸಿದ್ಧವಾಗಿದ್ದರೆ, ನೆದರ್ಲೆಂಡ್ಸ್‌ನಲ್ಲಿ ಸ್ಪ್ರಿಂಟ್ ವಿಭಾಗಗಳಲ್ಲಿ ಪಾಲ್ಗೊಳ್ಳಲು ಬಹುತೇಕರು ಬಯಸುತ್ತಾರೆ. ಜಪಾನಿಯರಿಗೆ ಬ್ಯಾಕ್‌ಸ್ಟ್ರೋಕ್ ಇಷ್ಟ; ಸ್ವೀಡನ್ ಈಜುಪಟುಗಳಿಗೆ ಬಟರ್‌ಫ್ಲೈ ಮುದ ನೀಡುತ್ತದೆ.

ಟೋಕಿಯೊ ಒಲಿಂಪಿಕ್ಸ್‌ನ ಈಜಿನಲ್ಲಿ ಒಟ್ಟು 35 ವಿಭಾಗಗಳಲ್ಲಿ ಸ್ಪರ್ಧೆಗಳು ಇವೆ. ಒಂದೊಂದು ದೇಶದಲ್ಲಿ ಕೆಲವು ಸ್ಪರ್ಧೆಗಳು ಮುನ್ನೆಲೆಗೆ ಬರಲು ಆ ವಿಭಾಗದಲ್ಲಿ ಮಿಂಚಿರುವ ಯಾವುದಾದರೂ ಈಜುಪಟು ಕೂಡ ಕಾರಣರಾಗುತ್ತಾರೆ. ಸ್ವೀಡನ್‌ನಲ್ಲಿ ಥೆರೀಸ್ ಅಲ್ಶಮರ್, ಅನಾ ಕರೀನ್, ಜೊಸೆಫಿನ್ ಲಿಲೇಜ್, ಹಂಗೇರಿಯಲ್ಲಿ ಥಮಾಸ್ ಡರ್ನಿ, ಕ್ರಿಸ್ಟಿನಾ ಎಜೆರ್‌ಸೆಗಿ ಮುಂತಾದವರು ಇಂಥ ‘ರೋಲ್ ಮಾಡೆಲ್’ಗಳಲ್ಲಿ ಕೆಲವರು.



ಟೋಕಿಯೊ ಅಕ್ವಾಟಿಕ್ ಕೇಂದ್ರದಲ್ಲಿ ಡೈವಿಂಗ್ ಅಭ್ಯಾಸದಲ್ಲಿ ತೊಡಗಿರುವ ಈಜುಪಟುಗಳು –ಎಎಫ್‌ಪಿ ಚಿತ್ರ

ಜಿಂಬಾಬ್ವೆಯಿಂದ ಕಪ್ಪುವರ್ಣೀಯ ಈಜುಪಟು: ಆಫ್ರಿಕಾ ಖಂಡದ ದಕ್ಷಿಣದ ದೇಶವಾದ ಜಿಂಬಾಬ್ವೆ ಇದೇ ಮೊದಲ ಬಾರಿ ಒಲಿಂಪಿಕ್ಸ್‌ಗೆ ಕಪ್ಪುವರ್ಣೀಯ ಈಜುಪಟುವನ್ನು ಕಳುಹಿಸುತ್ತಿದೆ. ಆಫ್ರಿಕಾ ಯೂತ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದಿರುವ ಮತ್ತು ಯೂತ್ ವಿಭಾಗದ ದಾಖಲೆಗಳನ್ನು ಮುರಿದಿರುವ ಡೊನಾಟ ಕತಾಯಿ ಈ ಅಪರೂಪದ ಕ್ರೀಡಾಪಟು. ವಿಶೇಷವೆಂದರೆ, ಅವರ ವಯಸ್ಸು ಈಗ 17.

ಆಫ್ರಿಕಾ ಖಂಡದ ಹೆಸರಾಂತ ಈಜುಪಟು, ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಕ್ರಿಸ್ಟಿ ಕೊವೆಂಟ್ರಿ ಅವರ ಹೆಸರಿನಲ್ಲಿದ್ದ ಯೂತ್ ವಿಭಾಗದ ದಾಖಲೆಯನ್ನು ಡೊನಾಟ ಮುರಿದಿದ್ದರು.

ಆ ಯಶಸ್ಸಿನ ಭರವಸೆಯೊಂದಿಗೆ ಟೋಕಿಯೊಗೆ ಬಂದಿರುವ ಅವರು ಒಲಿಂಪಿಕ್ಸ್‌ನಲ್ಲೂ ಪದಕ ಗೆದ್ದು ಸಾಧನೆಯ ಮತ್ತೊಂದು ಮೆಟ್ಟಲು ಏರಲು ಸಿದ್ಧರಾಗಿದ್ದಾರೆ. ಜಿಂಬಾಬ್ವೆ ಜನಸಂಖ್ಯೆಯ 99 ಶೇಕಡಾ ಮಂದಿ ಕಪ್ಪುವರ್ಣೀಯರು. ಆದರೂ ಒಲಿಂಪಿಕ್ಸ್‌ನಲ್ಲಿ ಅವರನ್ನು ಪ್ರತಿನಿಧಿಸುವ ಒಬ್ಬರು ಈಜುಪಟುವನ್ನು ನೋಡಲು ಇಷ್ಟು ವರ್ಷ ಕಾಯಬೇಕಾಗಿ ನಂದಿತ್ತು.

ಭಾರತ ತಂಡದಲ್ಲಿ ಕೋವಿಡ್ ಅಲಾರ್ಮ್!

ಟೋಕಿಯೊ (ಪಿಟಿಐ): ಭಾರತದ ಕ್ರೀಡಾಪಟುಗಳು ಒಲಿಂಪಿಕ್ಸ್ ಆಯೋಜಕರು ಸಿದ್ಧಪಡಿಸಿರುವ ಆರೋಗ್ಯ ವರದಿ ಆ್ಯಪ್ (ಒಸಿಎಚ್‌ಎ)ನಲ್ಲಿ ನೀಡಿದ ತಪ್ಪು ಮಾಹಿತಿಯಿಂದಾಗಿ ಬುಧವಾರ ಗೊಂದಲ ಸೃಷ್ಟಿಯಾಯಿತು.

ತಂಡದ ಕೆಲವು ಆಟಗಾರರಿಗೆ ಕೋವಿಡ್ –19 ಇರುವುದರ ಕುರಿತು ಆ್ಯಪ್‌ನಲ್ಲಿ ಎಚ್ಚರಿಕೆ ಬಂದಿತು.

ಈ ಕುರಿತು ಪ್ರತಿಕ್ರಿಯಿಸಿರುವ ತಂಡದ ಡೆಪ್ಯುಟಿ ಚೆಫ್ ಡಿ ಮಿಷನ್ ಪ್ರೇಮ್ ವರ್ಮಾ, ‘ತಂಡದಲ್ಲಿ ಯಾರಿಗೂ ಕೊರೊನಾ ಸೋಂಕಿನ ಲಕ್ಷಣಗಳಿಲ್ಲ. ಯಾರಿಗೂ ಪಾಸಿಟಿವ್ ವರದಿಯೂ ಬಂದಿಲ್ಲ‘ ಎಂದಿದ್ದಾರೆ.

ಈ ಕುರಿತು ಸ್ಪಷ್ಟ ಚಿತ್ರಣ ನೀಡುವಂತೆ ಐಒಎ ಅಧ್ಯಕ್ಷ ನರಿಂದರ್ ಬಾತ್ರಾ ಸೂಚಿಸಿದ್ದಾರೆ.

‘ಆ್ಯಪ್‌ನಲ್ಲಿ ತಪ್ಪು ಮಾಹಿತಿಗಳನ್ನು ನೀಡಿದರೆ, ತಂತ್ರಾಂಶದಲ್ಲಿ ಕೋವಿಡ್ ಪಾಸಿಟಿವ್ ವರದಿ ತೋರಿಸುತ್ತದೆ. ಎಚ್ಚರಿಕೆಯ ಸಂದೇಶ ರವಾನಿಸುತ್ತದೆ. ಇದನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಲಾಗಿದೆ‘ ಎಂದು ವರ್ಮಾ ತಿಳಿಸಿದರು.